

ಫೆಬ್ರವರಿ 2000 ರೂ. 10

ಬಿಸಿಲ



ಕ್ಲಾಸಿಕ್‌ನಿಂದ
ಕ್ಯಾಬರೆವರೆಗೆ





ಸ್ವಂತ ಮನೆ !



'ಬದುಕು' ಮಾಸಪತ್ರಿಕೆಯಲ್ಲಿ ಹೊಸ ಲೇಖನಮಾಲೆ

ಸ್ವಂತ ಮನೆ

ಸ್ವಂತ ಮನೆ ಹೊಂದಬಯಸುವವರಿಗೆ
ಉಪಯುಕ್ತವಾದ ಸಂಪೂರ್ಣ ಮಾಹಿತಿ

ನಿವೇಶನ ಆಯ್ಕೆ, ಬ್ಯಾಂಕ್ ಸಾಲ ಸೌಲಭ್ಯ, ಮನೆ ಅಂದಕ್ಕಾಗಿ ಸರಳ ಉಪಾಯಗಳು, ನಿವೇಶನ ನೋಂದಾವಣೆ, ಕಾಂಟ್ರ್ಯಾಕ್ಟರ್ ಜೊತೆಗಿನ ವ್ಯವಹಾರ, ಕಟ್ಟಡ ಸಾಮಗ್ರಿಗಳ ಗುಣ ಪರೀಕ್ಷೆ, ಕಡಿಮೆ ವೆಚ್ಚದ ಮನೆ ನಿರ್ಮಾಣ.... ಇತ್ಯಾದಿ ಪ್ರತಿಯೊಬ್ಬರೂ ತಿಳಿದಿರಬೇಕಾದ ಸರಳ ಮಾಹಿತಿಗಳು.

ಶೀಘ್ರದಲ್ಲೇ ಪ್ರಕಟಣೆ ಆರಂಭ.

ಬಿಸಿಲು

ಫೆಬ್ರವರಿ 2000 ಸಂಪುಟ 3 ಸಂಚಿಕೆ 8

- ನಾವು ಬಳಸಲೆಂದೇ ತಯಾರಾದ ವಸ್ತುಗಳಲ್ಲಿ ಅಂತರ್ಗತವಾಗಿಯೇ ಒಂದು ಸೌಂದರ್ಯ ಇರುತ್ತದೆ.

ಜ್ಯೂಲಿಯಾ ಚೈಲ್ಡ್

- ಏನು ಮಾಡಬೇಕೆಂದು ಖಚಿತವಿಲ್ಲದಾಗ ಅಂತರಂಗದ ಪಿಸುಮಾತಿಗೆ ಕಿವಿಗೊಡುವುದೊಂದೇ ಒಳ್ಳೆಯ ಉಪಾಯ.

ಜೊನಾಥಾನ್ ಕೇನರ್

- ಕನಸುಗಳೇ ನಮ್ಮ ವಾಸ್ತವವಾಗಬಹುದು. ನಮ್ಮನ್ನು ಸುಖದ ಹಾದಿಯಲ್ಲಿ ಕೈಹಿಡಿದು ಕರೆದೊಯ್ಯುವ ಸತ್ವವೇ ಇಂಥ ಕನಸುಗಳು.

ಅನಾಮಿಕ

- ನಾವು ದೊಡ್ಡವರಾಗುವುದೇ ಇಲ್ಲ. ಜನರೊಡನೆ ಇರುವಾಗ ಹೇಗೆ ವರ್ತಿಸಬೇಕೆಂಬುದು ಕಲಿಯುತ್ತೇವೆ ಅಷ್ಟೇ.

ಬ್ರಿಯಾನ್ ವೈಟ್

- ರಾತ್ರಿಯಿಡೀ ಎಚ್ಚರಿರುವಂತೆ ಮಾಡಬಲ್ಲದು ಭಯ. ಆದರೆ ಸರಿ ನಂಬಿಕೆ ಇದ್ದವನಿಗೆ ತಲೆಯ ಕೆಳಗೆ ದಿಂಬು ಕೂಡ ಬೇಡ ಸುಖವಾದ ನಿದ್ದೆ ಮಾಡಲು.

ಫಿಲಿಪ್ ಗಲೀ

- ಸಮಗ್ರತೆ ಎಂದರೆ ನಮಗೆ ನಾವೇ ಸತ್ಯ ಹೇಳಿಕೊಳ್ಳುವುದು. ಬೇರೆಯವರಿಗೂ ಸತ್ಯ ಹೇಳುವುದು ಪ್ರಾಮಾಣಿಕತೆ.

ಸ್ಪೆನ್ಸರ್ ಜಾನ್ಸನ್

ಸಂಪಾದಕ
ಚಂದ್ರಕಾಂತ ವಡ್ಡು
ಕಾರ್ಯನಿರ್ವಾಹಕ ಸಂಪಾದಕ
ಎಂ.ಎಲ್. ದೇಶಿಕರ್

ಸಹಕಾರ
ಲಿಂಗರಾಜು

ಕಲೆ
ಇಮಾಮ್ ಹಿರೇಮುಗದೂರು
ವಸಂತ ಹೊಸಬೆಟ್ಟು

ವಿಳಾಸ
ಬಿಸಿಲ ಬದುಕು ಮಾಸ ಪತ್ರಿಕೆ
ಅಂಕುರ ಪ್ರಕಾಶನ, ಅಂಚೆ ಪೆಟ್ಟಿಗೆ : 7951
ಬಸವೇಶ್ವರ ನಗರ, ಬೆಂಗಳೂರು- 560 079
ದೂರವಾಣಿ : 3227810

Printed, Published and Owned by Chandrakanta Vaddu, 473, I Block, III Stage, Near Water Tank Bus Stop, Basaveshwaranagar, Bangalore-560 079. Tel : 080 3227810 Email :Ankura@rediffmail.com Mobile:98440 87433 Editor : Chandrakanta Vaddu

ಬದುಕೆಂಬ ಪುಸ್ತಕ

ಮಾನವ ಜನಾಂಗದ ಕತೆ ನಿಮ್ಮೊಳಗೇ ಇದೆ. ಸಹಸ್ರಾರು ವರ್ಷಗಳಿಂದ ಮನುಷ್ಯ ತನ್ನೊಳಗೆ ಜಮೆ ಮಾಡುತ್ತಲೇ ಬಂದ ಅನುಭವ, ಆಳದಾಳದ ಭಯ, ಆತಂಕ, ದುಃಖ, ಸುಖ ಮತ್ತು ನಂಬಿಕೆ ಎಲ್ಲ ನಿಮ್ಮೊಳಗೇ ಇವೆ. ನೀವೇ ಆ ಬದುಕೆಂಬ ಪುಸ್ತಕ.

ಇದನ್ನು ಯಾವ ಪ್ರಕಾಶಕನೂ ಪ್ರಕಟಿಸುವುದಿಲ್ಲ. ಅದು ಮಾರಾಟಕ್ಕೆ ಇಲ್ಲ. ಒಬ್ಬ ವಿಮರ್ಶಕನ ಬಳಿ ಹೋಗಿ ಆತನ ವಿವರಣೆ ಪಡೆಯುವುದೂ ಸಾಧ್ಯ ಇಲ್ಲ. ಆ ಪುಸ್ತಕ ನೀವೇ. ಎಚ್ಚರ, ತಾಳ್ಮೆ, ಮುಂದೇನೋ ಎಂಬ ಆತಂಕದಿಂದ ಓದದೇ ಹೋದಲ್ಲಿ ನೀವಿರುವ ಸಮಾಜ ಬದಲು ಮಾಡಲಾರಿರಿ. ನೀವಿರುವ ಸಮಾಜ ಭ್ರಷ್ಟವಾಗಿದೆ, ನೀತಿಗೆಟ್ಟಿದೆ. ಇಲ್ಲಿ ಬಡತನವಿದೆ, ಅನ್ಯಾಯವಿದೆ. ಇನ್ನೂ ಏನೇನೋ! ಈಗಿರುವ ಪ್ರಪಂಚದ ಸ್ಥಿತಿಗತಿ; ಅಲ್ಲಿರುವ ಅತೀವ ಗೊಂದಲ, ಭ್ರಷ್ಟತೆ, ಎಲ್ಲಕ್ಕಿಂತ ದೊಡ್ಡ ಅಪರಾಧ ಎನಿಸುವ ಯುದ್ಧ ಇವೆಲ್ಲ ಹೇಗಿದೆಯೋ ಹಾಗೆ ಅರಿಯಬೇಕೆಂಬ ಗಂಭೀರ ಕಾಳಜಿಯ ಮನುಷ್ಯ ಈ ಬದುಕೆಂಬ ಪುಸ್ತಕ ಓದಬೇಕು. ಈ ಜಗತ್ತಿನಲ್ಲಿ ಒಂದಿಷ್ಟು ಆಮೂಲಾಗ್ರ ಬದಲಾವಣೆ, ಒಂದಿಷ್ಟು ವಿನ್ಯಾಸ ತರಲೇಬೇಕೆಂದರೆ ಓದಲೇಬೇಕಾದ ಪುಸ್ತಕ. ಆ ಪುಸ್ತಕ ನೀವೇ.

ನಾವಿರುವ ಸಮಾಜ ಎಂದರೆ ನೀವು, ನಿಮ್ಮ ತಂದೆ, ತಾಯಿ, ಅಜ್ಜ, ಅಜ್ಜಿ ಹೀಗೆ ಎಲ್ಲರಿಂದ ಆದದ್ದು. ಎಲ್ಲ ಸೇರಿ ನಿರ್ಮಿಸಿದ್ದು ಈ ಸಮಾಜ. ಇದು ಬದಲಾಗದೇ ಇದ್ದರೆ ಇನ್ನಷ್ಟು ಭ್ರಷ್ಟತೆ, ಯುದ್ಧ, ವಿನಾಶ ಎಲ್ಲ....

ಆದ್ದರಿಂದಲೇ ಈ ಪುಸ್ತಕ ಓದಲು, ಅದು ಏನು ಹೇಳುತ್ತಿದೆ ಎಂದು ಕಿವಿಗೊಟ್ಟು ಆಲಿಸಲು ನೈಪುಣ್ಯತೆ ಬೇಕು. ಆಲಿಸುವುದು ಎಂದರೆ ಪುಸ್ತಕ ಏನು ಹೇಳುತ್ತಿದೆ ಎಂದು ವಿಶ್ಲೇಷಣೆಗೆ ತೊಡಗುವುದಲ್ಲ. ಅದನ್ನೊಂದು ಮೋಡ ವೀಕ್ಷಿಸುವ ಹಾಗೆ ಸುಮ್ಮನೆ ವೀಕ್ಷಿಸಿ. ತೆಂಗಿನ ಗರಿ ಗಾಳಿಗಲುಗುವುದನ್ನು, ಸುಂದರ ಸೂರ್ಯಾಸ್ತ ನೋಡುವ ಹಾಗೆ ನೋಡಿ. ಅದ್ಯಾವುದನ್ನೂ ನೀವು ಬದಲಿಸಲಾರಿರಿ. ಹಾಗೆಂದೇ ಸುಮ್ಮನೆ ನೋಡುವುದು ಸಾಧ್ಯ.

ಹಾಗೇ ಈ ಪುಸ್ತಕದ ವಿಚಾರ. ಬದುಕೆಂಬ ಈ ಪುಸ್ತಕ ನೀವೇ. ಅದು ನಿಮಗೆ ಎಲ್ಲ ತಿಳಿಸಿಕೊಡುತ್ತದೆ.

■ **ಜಿಡ್ಡು ಕೃಷ್ಣಮೂರ್ತಿ**
'ಬುಕ್ ಆಫ್ ಲೈಫ್' ನಿಂದ

ತಾಳ್ಮೆ

'ಇದೊಂದು ಗುಣ ಇದ್ದರೆ ಏನಾದರೂ ಸಾಧಿಸಬಹುದು. ಬಹಳಷ್ಟು ಸಲ ಅವಸರದಲ್ಲಿಯೇ ಏನಾದರೊಂದು ಮಾಡಲು ಹೋಗಿ ವಿಫಲವಾದಾಗ, ನೂರೆಂಟು ಕಾರಣ ಹುಡುಕುತ್ತೇವೆ. ಯಾರು ಯಾರನ್ನೋ ದೂಷಿಸುತ್ತೇವೆ. ಕೊಂಚ ವಿವೇಚನೆಯಿಂದ ಕಾರಣ ಏನೆಂದು ಯೋಚಿಸಿದರೆ ಎಲ್ಲ ತಿಳಿಯುತ್ತದೆ' ಗುರುಗಳು ಹೇಳುತ್ತಿದ್ದರು.


'ಎಲ್ಲ ಕೆಲಸ ತಾಳ್ಮೆಯಿಂದ ಸಾಧ್ಯ ಅನ್ನುತ್ತೀರಾ?' ಶಿಷ್ಯ ಕೇಳಿದ.

'ಖಂಡಿತ'

'ಹಾಗಿದ್ದರೆ ಜರಡಿಯಲ್ಲಿ ನೀರು ಹೊತ್ತು ತರಲು ಸಾಧ್ಯವೇ?'

'ಖಂಡಿತ ಸಾಧ್ಯ.. ಅದು ಹಿಮಗಡ್ಡೆ ಆಗುವವರೆಗೆ ಕಾಯುವ ತಾಳ್ಮೆ ನಿನ್ನಲ್ಲಿ ಇರಬೇಕು' ಸಹನೆಯಿಂದ, ಶಾಂತವಾಗಿ ಗುರುಗಳು ಹೇಳಿದರು.

■



ಟಪಾಲು

ನಾರಾಯಣ ಮೂರ್ತಿ : ಕೆಲವು ವಿವರ

ತಮ್ಮ ಪತ್ರಿಕೆಯಲ್ಲಿ ನಾರಾಯಣ ಮೂರ್ತಿಯವರ ಬಗ್ಗೆ ಬರೆದ ಲೇಖನ ಚೆನ್ನಾಗಿದೆ. ಆದರೆ ಅವರಲ್ಲಿ ಕೆಲವು ತಪ್ಪುಗಳಾಗಿವೆ ಅವು ಯಾವು ವೆಂದರೆ,

● ನಾರಾಯಣ ಮೂರ್ತಿಯವರು ಮೂಲತಃ ಕೋಲಾರದವರಲ್ಲ ಅವರು ಹುಟ್ಟಿದ್ದು ಮಾತ್ರ ಕೋಲಾರ.

● ಸುಧಾಮೂರ್ತಿಯವರ ತಂದೆ ಅಂದರೆ ನಮ್ಮ ತಂದೆ ಶಿಕ್ಷಕರಾಗಿರಲಿಲ್ಲ. ನಮ್ಮ ತಂದೆ Prof & Head of the department ಅಂತ ಇದ್ದರು. ಅವರು ಹುಬ್ಬಳಿಯ ಕೆಎಮ್‌ಸಿ ಆಸ್ಪತ್ರೆಯಲ್ಲಿ Gynacologist ಆಗಿ ಕೆಲಸ ಮಾಡಿ ನಿವೃತ್ತರಾಗಿದ್ದರು.

● ನಮ್ಮ ತಾಯಿ ನ್ಯೂ ಇಂಗ್ಲಿಷ್ ಸ್ಕೂಲ್‌ದಲ್ಲಿ ಶಿಕ್ಷಕಿಯೆಂದು ಕೆಲಸ ಮಾಡಿದ್ದರು. ಅಲ್ಲಿಯೇ ನಮ್ಮ ಅಜ್ಜ ಸಹ ಕೆಲಸ ಮಾಡಿದ್ದರು. ನ್ಯೂ ಇಂಗ್ಲಿಷ್ ಸ್ಕೂಲ್‌ನ ಒಂದು ಶಾಖೆಯೇ ಗರ್ಲ್ಸ್ ಇಂಗ್ಲಿಷ್ ಸ್ಕೂಲ್.

● ಇದೇ ಶಾಲೆಯ ಕಟ್ಟಡ ಕಟ್ಟಿಸಲು ಹಣ ಕೊಟ್ಟಿದ್ದು ಇನ್‌ಫೋಸಿಸ್ ಅಲ್ಲ, ಅದಕ್ಕೆ ನನ್ನ ತಂಗಿ ಕೈಯಿಂದ ಹಣ ಕೊಟ್ಟದ್ದಾಳೆ.

● ಎಸ್‌ಆರ್‌ಐ ಅಂದರೆ ಶ್ರೀ ಕಂಪನಿ ಅಲ್ಲ. ಸಿಸ್ಟಮ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಅಂತ ಅರ್ಥ. ದಯವಿಟ್ಟು ಈ ಎಲ್ಲ ತಪ್ಪುಗಳನ್ನು ತಿದ್ದುಪಡಿ ಮಾಡಿರಿ.

- ಸುನಂದಾ ಕುಲಕರ್ಣಿ, ಬೆಂಗಳೂರು

ವಾಸ್ತವವಾದಿ

'ದಕ್ಷಿಣಕನ್ನಡ ಜನ ಏಕೆ ಹೀಗೆ? ಏಕೆ ಹೀಗೆ?' ಈ ವಿಶೇಷ ಪ್ರಶ್ನೆಗಳಿಗೆ ಉತ್ತರವನ್ನು ಪಡೆಯಲು ಹಾಗು ಓದುಗರಲ್ಲಿ ಚಿಂತನೆಯನ್ನು ಕೆರಳಿಸಲು 'ಬಿಸಿಲ ಬದುಕು' ಪ್ರಚೋದನೆಯನ್ನು ನೀಡಿರುವುದು ಅಭಿನಂದನೀಯ. ಇದಲ್ಲದೆ ಈ ಸಂಚಿಕೆಯ ಎಲ್ಲ ಪುಟಗಳನ್ನು ಓದಿ ಮುಗಿಸಿದ ಮೇಲೆ, ಒಂದು ಮಾತು ಸತ್ಯ ಎನ್ನಿಸಿತು. ಅದೇನೆಂದರೆ ಈ ಪತ್ರಿಕೆಯು ಸಹಜತೆಯ ತಳಹದಿಯಲ್ಲಿಯೇ ಸತ್ಯ ಚಿಂತನೆಯಲ್ಲಿ ಸ್ಪಷ್ಟ ತಿಳಿವಳಿಕೆಯ ಬೆಳಕು ನೀಡುವತ್ತ ಪ್ರಯತ್ನ ಮಾಡುತ್ತಿರುವುದು, ಇಂದಿನ ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸಿಕೊಳ್ಳುತ್ತಿರುವ ಭವಿಷ್ಯದ ಜನಾಂಗಕ್ಕೆ ಬೇಕಾಗಿರುವ ವಸ್ತುವಾಗಿ ಬೆಳೆಯುತ್ತಿರುವುದು. ಈ ಸಾಹಸಕ್ಕೆ ಅಭಿನಂದನೆಗಳು.

- ಪ್ರೊ. ವಸಂತ ಕುಷ್ಟಗಿ, ಕಲಬುರ್ಗಿ

ಜನಸಾಮಾನ್ಯನಿಗೆ ಪ್ರಾಶಸ್ತ್ಯ

ನಿಮ್ಮ ಪತ್ರಿಕೆ 'ಬಿಸಿಲ ಬದುಕು' ನಾನು ಇಷ್ಟಪಟ್ಟು ಪ್ರತಿ ತಿಂಗಳು ಓದುತ್ತೇನೆ. ಆದರೆ ಅದರಲ್ಲಿ ಕೇವಲ, ರಾಜಕಾರಣಿಗಳು, ಪ್ರಖ್ಯಾತ ಸಾಹಿತಿಗಳು ಚಿತ್ರರಂಗದ ಕಲಾವಿದರು ಇವರ ಪ್ರತಿಭೆಗಳ ಹಾಗೂ ಅವರ ಬಗ್ಗೆ ಟೀಕೆಟಿಪ್ಪಣಿಗಳ ಕುರಿತು ತಮ್ಮ ಪತ್ರಿಕೆಯಲ್ಲಿ ಕಂಡು ಬರುವ ವಿಷಯಗಳಾಗಿವೆ ತಾವು ಏಕೆ ಜನಸಾಮಾನ್ಯರ ಕುರಿತು ಬರೆಯಬಾರದು? ತಾವು ಇದೇ ರೀತಿ ಬರೆಯುತ್ತಾ ಹೋದರೆ ನಿಮ್ಮ ಪತ್ರಿಕೆಗೂ ಬೇರೆ ಪತ್ರಿಕೆಗೂ ಇರುವ ವ್ಯತ್ಯಾಸವಾದರೂ ಏನು? ಇದನ್ನು ಮಾತ್ರ ನಾನು ಓದುಗನಾಗಿ ಖಂಡಿತಾ ಇಷ್ಟಪಡಲಾರೆ. ಪ್ರತಿಯೊಂದು ಪತ್ರಿಕೆಯಲ್ಲಿ ಬರುವ ವಿಷಯಗಳೇ ತಮ್ಮ ಪತ್ರಿಕೆಯಲ್ಲಿ ಬರುವ ವಿಷಯವಾದರೆ ನಿಮ್ಮ ಪತ್ರಿಕೆಗೆ ಇಟ್ಟ ಹೆಸರು ಎಷ್ಟು ಸಾರ್ಥಕವಾದೀತು!

- ಆರ್. ಕೆ. ಸ್ವಾಮಿ, ಹುಬ್ಬಳ್ಳಿ

ನಿನಗಿಂತ ನಾಲಾಯ್ಕ ಯಾರೂ ಇಲ್ಲ?

(ಜಿ.ಪಿ.ಕುಮಾರರ ಪತ್ರಕ್ಕೆ ಪ್ರತಿಕ್ರಿಯೆ)

ನೀವು ಸತ್ಯಸಾಯಿಬಾಬಾನ ನಿಜವಾದ ಭಕ್ತನೇ ಆಗಿದ್ರೆ, ಇಷ್ಟೊಂದು ಕ್ಷುಲ್ಲಕ ಶಬ್ದಗಳನ್ನು ಬಳಸಿದ್ದು ನೋಡಿದ್ರೆ ನೀನೊಬ್ಬ ಶತಮೂರ್ಖ, ಪೂರ್ವಾಗ್ರಹಪೀಡಿತ ವ್ಯಕ್ತಿ ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ, ಆ ಮೋಸಗಾರ ಬಾಬಾನಿಗೆ ದೈವೀ ಶಕ್ತಿ ಇರುವುದೇ ನಿಜವಾದಲ್ಲಿ ವೈಜ್ಞಾನಿಕ ಹಿನ್ನೆಲೆಯಿಂದ, ಸತ್ಯಶೋಧನಾ ಸಮಿತಿಯ ಎದುರಿನಲ್ಲಿ ಸಾಬೀತು ಪಡಿಸಲಿ, ಅದನ್ನು ಬಿಟ್ಟು ಬಾಯಿಗೆ ಬಂದ ಹಾಗೆ ಮಾತನಾಡಿ ತಾನಲ್ಲದೇ ತನ್ನ ಬೆಂಬಲಿಗರ ನೈತಿಕ ಮಟ್ಟವನ್ನು ಅಧೋಗತಿಗೆ ಇಳಿಸುತ್ತಿರುಥವನ ಪರವಾಗಿ, ನೀವು ಇಷ್ಟು ಕೀಳುಮಟ್ಟಕ್ಕೆ ಇಳಿಯಬಾರದಿತ್ತು.

- ರವಿ ಸೋ. ದೇವರಡ್ಡಿ,
ಹೊನ್ನಹಮ್ಮಿಗಿ.

ಚಿತ್ತಾಕರ್ಷಕ

ಈ ತಿಂಗಳ ವರ್ಣರಂಜಿತ ಮುಖಪುಟದೊಂದಿಗೆ ಮೂಡಿ ಬಂದ ಸಂಚಿಕೆಯಲ್ಲಿ ಧೀಮಂತ ನಾಯಕ ವಾಜಪೇಯಿ, ನಾರಾಯಣಮೂರ್ತಿ, ಕಪಿಲ್, ಯುಕ್ತಾ ಮುಖೆ ಅವರ ಸಚಿತ್ರ ಲೇಖನ ಉಪಯುಕ್ತವಾಗಿದ್ದವು.

ಜಗತ್ತಿನ ಶ್ರೀಮಂತ ವ್ಯಕ್ತಿಗಳಲ್ಲೊಬ್ಬರಾದ ನಮ್ಮ ಕನ್ನಡ ನಾಡಿನ ಶ್ರೀ ನಾರಾಯಣ ಮೂರ್ತಿ ಅವರ ಸರಳ ಸಾದಾ ಜೀವನ ನಿಜಕ್ಕೂ ನಮ್ಮನ್ನೆಲ್ಲಾ ಬೆರಗಾಗಿಸಿತು ಮತ್ತು ನಮ್ಮ ಕನ್ನಡದವರು ಈ ಉನ್ನತ ಮಟ್ಟದಲ್ಲಿ ಇದ್ದ ಸಂಗತಿ ನಮಗೆಲ್ಲ ಅತೀವ ಹೆಮ್ಮೆಯ ವಿಷಯ. ಮತ್ತು ನಾವು ಯಾವುದರಲ್ಲೂ ಕಡಿಮೆ ಇಲ್ಲವೆಂದು ಸಾಬೀತು ಪಡಿಸಿತು. ಇಂಥ ಉತ್ತಮ ವ್ಯಕ್ತಿಯನ್ನು ವರ್ಷದ ವ್ಯಕ್ತಿಯಾಗಿ ಆಯ್ಕೆ ಮಾಡಿದ್ದು ಒಳ್ಳೆಯದೇ.

- ಶ್ರೀಪಾದ ವಿ. ಜೋಶಿ ಅನವಾಲ.


ಮಾಹಿತಿಯುಕ್ತ ಲೇಖನ

ಸಹಸ್ರಮಾನದ ಮೊದಲ ಸಂಚಿಕೆ (ಜನವರಿ 2000)ಯಲ್ಲಿ ದಕ್ಷಿಣ ಕನ್ನಡ ಜನತೆಯ ಬದುಕು, ಜೀವನ ಕ್ರಮ ಬಗೆಗಿನ ಲೇಖನವನ್ನು ನಿಮ್ಮ 'ಬದುಕು' ಹೊತ್ತು ತಂದಿದ್ದಕ್ಕೆ ಧನ್ಯವಾದಗಳು. ಮಾಹಿತಿಯುಕ್ತವಾದ ಈ ಲೇಖನ ತುಂಬಾ ಸೊಗಸಾಗಿ ಮೂಡಿಬಂದಿದೆ. ಕರ್ನಾಟಕದಲ್ಲಿಯೇ ವಿಭಿನ್ನವಾಗಿ ಕಾಣುವ ಈ ಜನತೆಯ ಬಗ್ಗೆ ಸಮಗ್ರವಾಗಿ ಚಿತ್ರಿಸಲು ಪ್ರಯತ್ನಿಸುತ್ತಿದ್ದ ನಿಮ್ಮ ಪ್ರಯೋಗ ಯಶಸ್ವಿಯಾಗಿದೆ ಎಂದು ಹೇಳಬಹುದು. ಖ್ಯಾತ ಬರಹಗಾರರ ಅಭಿಪ್ರಾಯಗಳನ್ನು ಒಳಗೊಂಡ ಈ ಲೇಖನ ತಿಳಿದ ಮತ್ತು ತಿಳಿಯದ ವಿಷಯ ವಸ್ತುವನ್ನು ಒದಗಿಸಿದೆ. ಈ ಮೂಲಕ ನಮ್ಮ ನೆಲ-ಜಲಗಳ ಬಗ್ಗೆ ತಿಳಿದುಕೊಳ್ಳಲು ಸಹಾಯಕವಾಗಿದೆ.

- ಉಮಾ ಪಾಂಗಾಳ, ಪಾಂಗಾಳ

ಲಂಕೇಶ್ ಪತ್ರಿಕೆ **Lankesh Patrike**

ಹೀಗಿದ್ದರು ಲಂಕೇಶ್



ಲಂಕೇಶ್ ನಿಜವಾದ ಅರ್ಥದಲ್ಲಿ ದಿಗ್ಗಜ. ಅವರಿಟ್ಟ ಪ್ರತಿ ಹೆಜ್ಜೆಯಲ್ಲೂ ದಿಟ್ಟತನದ ಹಾಗೆ ಸೂಕ್ಷ್ಮ ಸಂವೇದನೆಗಳೂ ಇರುತ್ತಿದ್ದವು. ಬಿಡುವಿಲ್ಲದ ದುಡಿಮೆ, ಒಡನಾಟದ ನಡುವೆ ಎಷ್ಟೋ ಸಲ ಪುಢಾರಿ ಗುಣಗಳ ಜನರಿಗೆ ಸಂದರ್ಶನ ನೀಡಲು ನಿರಾಕರಿಸಿದ್ದುಂಟು. ಆದರೆ ತಮ್ಮ ಆತ್ಮೀಯರಾದ ಎಳೆಯರು ಬಂದು, ತಮ್ಮನ್ನು ಕಾಣದೇ ಹೋದದ್ದು ತಿಳಿದಾಗ ಚಡಪಡಿಸಿ ವಿಚಾರಿಸಿಕೊಳ್ಳುತ್ತಾ ಇದ್ದುದು ಅಪರೂಪದ ಗುಣ. 'ಬದುಕು' ಮಾಸಿಕದ ಸಂಪಾದಕರಿಗೆ ಹತ್ತು ವರ್ಷಗಳ ಹಿಂದೆ ಬರೆದ ಈ ಎರಡು ಪತ್ರಗಳು ಲಂಕೇಶರ ಅಂಥ ಗುಣವನ್ನು ಬಿಂಬಿಸುತ್ತವೆ.

25.8.90

ಪ್ರಿಯ ವಡ್ಡು,

ಮೊನ್ನೆ ಬೆಂಗಳೂರಿಗೆ ಬಂದಿದ್ದಿರೆಂದು, ಅಪತ್ತೇ ನನ್ನನ್ನು ನೀವು ನೋಡುವುದಾಗಿಯೂ ಯಾರೋ ಹೇಳಿದರು. ನೀವು ಬರಲಿಲ್ಲ ಯಾಕೆ? ಬೇರೆ ಏನಾದರೂ ಕೆಲಸವಿತ್ತಾ, ಪರವಾಗಿಲ್ಲ ಬಿಡಿ. ಕಾಗದ ಬರೆದು ನಾನು ನಿಮಗೆ ಸಾಕಷ್ಟು ಸಂಖ್ಯೆಯಲ್ಲಿ ಕಿರಿಕಿರಿ ಮತ್ತು ಕೆಲಸ. ಜಿಲ್ಲೆ ಪ್ರೋತ್ಸಾಹಿಸಲು ಆಗುತ್ತಿಲ್ಲ. ಇಲ್ಲಿ ತುಂಬಾ ಕಿರಿಕಿರಿ ಮತ್ತು ಕೆಲಸ. ಜಿಲ್ಲೆ ಮಟ್ಟದ ವರದಿಗಾರರಿಗೆ ಮಾರ್ಗದರ್ಶನ ನೀಡಲು ಆಗುತ್ತಿಲ್ಲ. ಅಲ್ಲದೆ ಮುಖ್ಯವಾದ ಕೆಲವು ಜಿಲ್ಲೆಗಳಲ್ಲಿ ವರದಿಗಾರರನ್ನು ನೇಮಿಸಲು ಆಗುತ್ತಿಲ್ಲ. ಇದಕ್ಕೆಲ್ಲ ಸಮಯ ಹೊಂದಿಸಿಕೊಳ್ಳಬೇಕಾಗಿದೆ.

ನಿಮ್ಮ ಬಳ್ಳಾರಿ ಸ್ಲಮ್ ಕುರಿತ ವರದಿ ಇವತ್ತೇ ಬಂತು. ಚೆನ್ನಾಗಿದೆ. ಈ ಸಲ ಜಾಗವಿಲ್ಲ; ಇವತ್ತಾಗಲೇ ಶನಿವಾರವಾದ್ದರಿಂದ ತುಂಬಿ ಹೋಗಿದೆ. ಉತ್ಸಾಹ ಕಳೆದುಕೊಳ್ಳದೇ ಕೆಲಸ ಮುಂದುವರಿಸಿ. ಈ ಸಲದ ಅಕ್ಟೋಬರ್ ಎರಡರ ತಿಂಗಳ ಸಭೆ - ಪ್ರಗತಿ ರಂಗದ ಚಟುವಟಿಕೆಯ ಪುನರ್ ಉದ್ಘಾಟನೆಯಂತೆ ಆಗಬೇಕು. ಅಲ್ಲಿಂದ ಜನ ಬರಬೇಕು. ಅಬ್ರಹಾಂಗೂ ಬರೆದಿದ್ದೇನೆ. ನಮ್ಮ **Rally**ಯಂತೆ ಗೊಂದಲವಾಗದೆ ಚೆನ್ನಾಗಿ ಆಗಬೇಕಾಗಿದೆ.

ಇತಿ
ಪಿ. ಲಂಕೇಶ್

7.8.89

ಪ್ರಿಯ ಚಂದ್ರಕಾಂತ ವಡ್ಡು,


ನಿಮ್ಮ ಕಾಗದ, ಆ ಕಾಗದದ ನೋವು ನನ್ನನ್ನು ಚಿಂತೆಗೊಳಪಡಿಸಿತು. ನೀವು ಹೇಳಿರುವ ಆತ್ಮಹತ್ಯೆ, ನಿರುದ್ಯೋಗ, ಏಕಾಂಗಿತನ ಇದೆಲ್ಲ ನನಗೆ ಅರ್ಥವಾಗುತ್ತದೆ. ಆದರೆ ಸಾರ್ವಜನಿಕ ಕೆಲಸ, ರಾಜಕೀಯ ಕ್ರಿಯೆ ಹೇಗೆ ಪಲಾಯನ ಎಂಬುದು ತಿಳಿಯುತ್ತಿಲ್ಲ. ನಿಜ ಜೀವನದಲ್ಲಿ ಮನುಷ್ಯರು **Crude** ಅನ್ನಿಸುವುದು ನಿಜ; ಯೋಚಿಸಿದ್ದೆಲ್ಲಾ ವಾಸ್ತವದಲ್ಲಿ ಅನುಷ್ಠಾನದಲ್ಲಿ ಮುಕ್ಕಾದಂತೆ ಅನ್ನಿಸುವುದು ನಿಜ. ಆದರೆ ಅದು **absolute** ಎನ್ನುವಂಥ ನಿಜವಲ್ಲ; ಯಾಕೆಂದರೆ ಬರೀ ಯೋಚಿಸಿದ್ದು ಕೂಡ ಪರಮ ಸತ್ಯ ಹೇಗಾಗುತ್ತದೆ? ಅದು ಕೇವಲ ಹುಚ್ಚು ಅನಿಸಿಕೆ ಕೂಡ-(ಹುಚ್ಚು ಕ್ರಿಯೆಯಂತೆಯೇ)-ಯಾಕಾಗಿರಬಾರದು? ಆದ್ದರಿಂದ ಪಕ್ವವಾದವರು ಚಿಂತನೆ ಮತ್ತು ಕ್ರಿಯೆ - ಎರಡರ ಮಿತಿಯನ್ನೂ ತಿಳಿದು ವರ್ತಿಸಬೇಕಾಗುತ್ತದೆ. ನಾನೂ ನಿಮ್ಮಷ್ಟೇ ಮುಟ್ಟಿದರೆ ಮುನಿ ಎಂದು ಸೂಚಿಸಬಯಸುತ್ತೇನೆ. ಎಲ್ಲರಲ್ಲಿ ಉತ್ಸಾಹ ತುಂಬಬೇಕಾದ ನೀವು ನಿಷ್ಕ್ರಿಯರಾಗಬಾರದು. ನಿಮ್ಮ ನಿರುದ್ಯೋಗ, ಆತ್ಮಹತ್ಯೆಯ ಚಿಂತೆ ಲಕ್ಷಾಂತರ ಜನರಲ್ಲಿ ಇರುವುದನ್ನು ಮರೆಯಬೇಡಿ.

ಇತಿ ನಿಮ್ಮ
ಪಿ. ಲಂಕೇಶ್

ಮುಖಪುಟ ಲೇಖನ



ಗುಟ್ಕಾ! ನಿಲ್ಲಿ ಸಾಯಬೇಡಿ !!



ಪ್ರಚಲಿತ



ಕತೆ / ಕವನ / ಪ್ರಬಂಧ



ಲೇಖನಗಳು



ವಿಜ್ಞಾನ-ಆರೋಗ್ಯ



ಕ್ರೀಡೆ

ಸ್ಥಿರ ಶೀರ್ಷಿಕೆಗಳು

ಜೊತೆಗೆ

ಹಿಮಾಲಯದ ಮಹಾತ್ಮರು

ಮೂಲ: ಸ್ವಾಮಿ ರಾಮ
ಕನ್ನಡಕ್ಕೆ: ಡಿ.ಕೆ. ಶ್ಯಾಮಸುಂದರ ರಾವ್

ಮುಂದಿನ ಸಂಚಿಕೆಯಲ್ಲಿ

ಸ್ತನಗಳ ಕ್ಯಾನ್ಸರ್

ಇಂದಿರಾ ನೆನಪು



ಇಂದಿರಾ ಗಾಂಧಿಯನ್ನು ಶತಮಾನದ ಮಹಿಳೆ ಎಂದು ಆರಿಸಲಾಗಿದೆ. ಇಂಥ ಸಂದರ್ಭದಲ್ಲಿ ಆಕೆಯನ್ನು ನೆನಪು ಮಾಡಿಕೊಳ್ಳುವುದೇ ವಿಚಿತ್ರವೆನ್ನಿಸುತ್ತದೆ. 'ಕೇಂದ್ರ ಸಂಪುಟದಲ್ಲಿ ಇರುವ ಒಬ್ಬನೇ ಗಂಡಸೆಂದರೆ ಆಕೆ' ಎಂದು ಆಗ ಹೇಳುತ್ತಿದ್ದರು. ಎಮರ್ಜೆನ್ಸಿ ವಿರೋಧಿಸಿ ಆಕೆಯ ವಿರುದ್ಧ ಜೈಲಿಗೆ ಹೋದ ಜನವೇ, ಆಕೆ ಹತ್ಯೆಗೀಡಾದ ಸುದ್ದಿ ತಿಳಿದಾಗ ಬಿಕ್ಕಿ ಬಿಕ್ಕಿ ಅತ್ತದ್ದುಂಟು.

ಆದರೆ ರಾಜ್ಯದ ಪ್ರತಿಷ್ಠಿತ ನಾಟಕ ನಿರ್ದೇಶಕರೊಬ್ಬರು ಹೇಳಿದ್ದೇನು ಗೊತ್ತೇ!

''ಅವತ್ತು ನಾನೂ ದೆಹಲಿಯಲ್ಲಿ ಇದ್ದೆ. ಎಷ್ಟೊಂದು ಖುಷಿ ಆಯಿತು ಸುದ್ದಿ ತಿಳಿಯುತ್ತಿದ್ದಂತೆ I was searching for a bottle of rum to celebrate ' ಎಂದು ಸಂದರ್ಶನ ಒಂದರಲ್ಲಿ ಹೇಳಿಕೊಂಡಿದ್ದರು.

ಇಂದಿರಾ ಎಷ್ಟು ವಿಚಿತ್ರವೋ ಅವರನ್ನು ನೋಡುವ ಮನಸ್ಸುಗಳೂ ಅಷ್ಟೇ ವಿಚಿತ್ರ, ಅಲ್ಲವೇ!

1978ರ ಜೂನ್ ತಿಂಗಳು. ಪಾರ್ಲಿಮೆಂಟು ನಡೆಯುತ್ತಿತ್ತು. ಅಲ್ಲಿಂದಲೇ ಇಂದಿರಾಗಾಂಧಿ ಅವರನ್ನು ಬಂಧಿಸಿ ತಿಹಾರ್‌ಜೈಲಿಗೆ ಒಯ್ಯಲಾಯಿತು. ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ಬೆಂಗಳೂರು ಸಂಜೆಯಾಗುವುದರೊಳಗೆ ಹೊತ್ತಿ ಉರಿಯಿತು. ಎಂ.ಜಿ. ರೋಡು, ಕೆಂಪೇಗೌಡ ರಸ್ತೆಗಳಲ್ಲಿ ಲೂಟಿ, ಬೆಂಕಿ, ಜಯನಗರದಂಚಿನ ಲ್ಯಾಬೋರೇಟರಿ ಒಂದು ಚಿಂದಿಯಾಯಿತು. ವಿಚಿತ್ರ, ಇಂಥ ದಂಗೆ ಬೇರೆ ಎಲ್ಲಿಯೂ ನಡೆಯಲಿಲ್ಲ. ಆಗ ರಾಜ್ಯದಲ್ಲಿ ದೇವರಾಜ ಅರಸ್ ಮುಖ್ಯಮಂತ್ರಿ. ಅವರ ನೆಚ್ಚಿನ ಇಂದಿರಾ ಬ್ರಿಗೇಡ್ ಇಂಥ ದಂಗೆಗೆ ಕಾರಣ. ಅಂದು ತಾನು ಬೆಂಗಳೂರಿನಲ್ಲಿ ಇರಲಿಲ್ಲ. ಇದ್ದಿದ್ದರೆ ಇಂಥದು ನಡೆಯಲು ಅವಕಾಶ ಕೊಡುತ್ತಾ ಇರಲಿಲ್ಲ ಎಂದು ಅರಸು ಹೇಳಿಕೊಂಡರು.

ಹಾಗೆ ನೋಡಿದರೆ ಇದು ಅರಸು ಅವರು ತೋರಿದ ಸ್ವಾಮಿಭಕ್ತಿಯ ಒಂದು ಮಾದರಿ ಮಾತ್ರ. ಇಂದಿರಾ ಅವರಿಗೆ ಇಂಥ ನಿಷ್ಠ ಅನುಯಾಯಿಗಳು ಎಷ್ಟೋ ಜನ! ಇನ್ನೊಂದು ಪ್ರಕರಣ. ಮೇಲಿನ ಪ್ರಕರಣಕ್ಕೆ ಸ್ವಲ್ಪ ಮುಂಚೆ ನಡೆದಿದ್ದು. 1977ರ ಚುನಾವಣೆ ಮುಗಿದಿತ್ತು. ಇಂದಿರಾ ಸೋತಿದ್ದರು. ದಕ್ಷಿಣದಲ್ಲಿ ಇನ್ನೂ ಕಾಂಗ್ರೆಸ್ ಭದ್ರಕೋಟೆ ಹಾಗೇ ಉಳಿದಿತ್ತು. ಮಾಜಿ ಪ್ರಧಾನಿಗಳಿಗೆ ಇಂದಿನ ಹಾಗೆ ಎಸ್.ಪಿ.ಜಿ. ಮುಂತಾದ ವಿಶೇಷ ಸವಲತ್ತುಗಳು ಇರಲಿಲ್ಲ. ಅವರು ಬೆಂಗಳೂರಿಗೆ ಆಗಾಗ ಬರುತ್ತಾ ಇದ್ದರು. ಒಂದು ಕಪ್ಪು ಅಂಬಾಸಡರ್ ಕಾರಲ್ಲಿ ಅವರ ತಿರುಗಾಟ. ಹಾಗೆ ಅವರು ಕಂಟೋನ್ಮೆಂಟ್ ರೈಲ್ವೆ ಸ್ಟೇಷನ್ನಿನ ಎದುರಿನ ಸೇತುವೆ ಬಳಿ ಬಂದಾಗ ಟ್ರಾಫಿಕ್ ಜಾಮ್ ಆಗಿತ್ತು. ಅವರ ಕಾರು ನಿಂತಿತು. ಕೆಲವರಿಗೆ ಕಾರೊಳಗೆ ಇಂದಿರಾಗಾಂಧಿ ಇರುವುದು ಕಂಡಿತು. ಹೇಗೆ ಪ್ರತಿಕ್ರಿಯಿಸಬೇಕೋ ತಿಳಿಯದು. ಆ ಟ್ರಾಫಿಕ್ ಜಾಮ್‌ನಲ್ಲಿಯೇ, ರಿಕ್ಷಾ ಒಂದರಲ್ಲಿ ತಮ್ಮ ಶಾಲೆಗೆಂದು ಹೊರಡುತ್ತಿದ್ದ ಮಧ್ಯ ವಯಸ್ಸಿನ ಶಿಕ್ಷಕಿ ಇದ್ದರು. ಇಂದಿರಾ ಎದುರಿನ ಕಾರಲ್ಲಿ ಇರುವುದು ಕಂಡೇ, ಧಡಕ್ಕನೆ ಕೆಳಗಿಳಿದು ಕೈಮುಗಿದು ನಿಂತುಬಿಟ್ಟರು. ಇದು ಕಂಡು ಸಂಮೋಹಕ್ಕೆ ಒಳಗಾದ ಹಾಗೆ ಉಳಿದ ಜನ ಗೊಂಬೆಗಳಂತೆ ಕೈಮುಗಿದು ನಿಂತರು. ಆಕೆ ಚಂದದ ಮುಗುಳು ನಗೆ ಚೆಲ್ಲಿ, ಕೈಬೀಸಿ ಹೋದರು.

ಇಂದಿರಾ ಜನಗಳ ಹೃದಯದಾಳದಲ್ಲಿ ಸ್ಥಾನ ಪಡೆದುಬಿಟ್ಟಿದ್ದರು. ಆದರೆ ಅವರು ನೆಚ್ಚಿದ್ದು ಸ್ವಾಮಿನಿಷ್ಠೆ ಪ್ರದರ್ಶಿಸುವ ಕೆಲವರನ್ನು ಮಾತ್ರವೇ.

ನಿಮಗೂ ನೆನಪಿರಬಹುದು. ಬೆಂಗಳೂರು ಸಮೀಪದ ದೊಡ್ಡಬಳ್ಳಾಪುರದಲ್ಲಿ ಇಂದಿರಾ ವಿರುದ್ಧ ಒಂದು ಮೊಕದ್ದಮೆ ಹೂಡಲಾಗಿತ್ತು. ಅವರು ಆ ಸಣ್ಣ ಊರಿನ ನ್ಯಾಯಾಲಯಕ್ಕೆ ಬರುವ ಸುದ್ದಿ ತಿಳಿದರೆ ಸುತ್ತಮುತ್ತಲ ಊರಿನ ಜನರೆಲ್ಲ ಅಂದು ಅಲ್ಲಿ ಜಮಾಯಿಸಿಬಿಡುತ್ತಾ ಇದ್ದರು. ಇಂದಿರಾ ನ್ಯಾಯಾಲಯಕ್ಕೆ ನಡೆದು ಬಂದರೆ, ಥಟ್ಟನೆ ಇಡೀ ನ್ಯಾಯಾಲಯದ ಜನ ಎದ್ದು ನಿಂತು ಬಿಡುತ್ತಿತ್ತು.

ಈ ಮೊಕದ್ದಮೆಯಲ್ಲಿ ಇಂದಿರಾ ಪರ ವಾದ ಮಾಡಲು ವಕೀಲನೊಬ್ಬ ಇದ್ದ, ದೆಹಲಿ ಕಾಂಗ್ರೆಸ್ ವಲಯದಲ್ಲಿ ಪ್ರಭಾವಿಯಾಗಿದ್ದ ತಮಿಳುನಾಡಿನ ವ್ಯಕ್ತಿ. ಈತ ಕೇಸಿನ ವಿಷಯಕ್ಕೆ ಬೆಂಗಳೂರಿಗೆ ಬಂದರೆ, ಆತನ ವಾಸ್ತವ್ಯ, ಊಟ, ತಿಂಡಿ, ಓಡಾಟ ಎಲ್ಲ ನೋಡಿಕೊಳ್ಳುವ ಜವಾಬ್ದಾರಿ ಸ್ಥಳೀಯ ಕಾಂಗ್ರೆಸ್‌ನ ಶ್ರೀಮಂತರೊಬ್ಬರದು. ಆತನಿಗೆ ನೆರವಾಗಲೆಂದು ಶ್ರೀಮಂತರು ಒಬ್ಬ ತಿಳುವಳಿಕಸ್ಥರನ್ನು ಕೋರಿಕೊಂಡಿದ್ದರು. ವಕೀಲ ಆಗ ಅತ್ಯಂತ ದುಬಾರಿ ಎನ್ನಬಹುದಾದ ಹೋಟೆಲಲ್ಲಿ ಇರುತ್ತಿದ್ದ. ಬೆಳಗಾಗೆದ್ದು ಸ್ನಾನ ಮುಗಿಸಿದ

ಕೂಡಲೇ ಆತನನ್ನು ಯಾವುದಾದರೂ ಗಣೇಶನ ದೇವಸ್ಥಾನಕ್ಕೆ ಕರೆದೊಯ್ಯಬೇಕಿತ್ತು. ಒಂದು ದಿನ ಹೋದ ದೇವಸ್ಥಾನಕ್ಕೆ ಇನ್ನೊಂದು ದಿನ ಹೋಗುವಂತಿಲ್ಲ. ವಾರ ಕಳೆಯುವುದರೊಳಗೆ ಆ ಸಹಾಯಕ ಸುಸ್ತೆದ್ದು ಹೋಗಿದ್ದರು. ಸಂಜೆಯಾದರೆ ಆ ಸಂಪ್ರದಾಯಸ್ಥ ವಕೀಲ ಇಡೀ ಬಾಟಲು ಸ್ಕಾಚ್ ವಿಸ್ಕಿ ಮುಗಿಸಿ ಹಾಕುತ್ತಿದ್ದ. ಅದನ್ನು ಒದಗಿಸಿಯೇ ಶ್ರೀಮಂತ ಕಾಂಗ್ರೆಸಿಗ ಸುಸ್ತಾದರು.

ಅದೇಕೋ ಇಂದಿರಾ ನಂಬುತ್ತಿದ್ದುದು ಇಂಥ ವಿಚಿತ್ರ ವ್ಯಕ್ತಿಗಳನ್ನು. ಏಕೆಂದರೆ ಅವರೆಲ್ಲ ಇಂದಿರಾ ಎದುರು ಸಾಕಿದ ನಾಯಿಗಳಂತೆ ವರ್ತಿಸುತ್ತಾ ಇದ್ದುದು ಇರಬಹುದೇ!

ಚಿಕ್ಕಮಗಳೂರು ಲೋಕಸಭೆಯ ಉಪಚುನಾವಣೆ. ಬಹುಶಃ ಇನ್ನೆಂದೂ ಅಂಥ ಚುನಾವಣೆ ನಡೆಯಲಾರದು. ಇಂದಿರಾ ಆಗ ಅಭ್ಯರ್ಥಿ. ಅವರ ವಿರುದ್ಧ ವೀರೇಂದ್ರ ಪಾಟೀಲ್. ಕೇಂದ್ರದಲ್ಲಿ ಜನತಾ ಪಕ್ಷದ ಅಧಿಕಾರ. ಕಾಂಗ್ರೆಸ್ಸೇತರ ಪಕ್ಷಗಳ ಸಣ್ಣ ಪುಢಾರಿಯಿಂದ ಹಿಡಿದು, ದೊಡ್ಡ ನಾಯಕರವರೆಗೆ ಎಲ್ಲ ಅಲ್ಲಿ ಬೀಡುಬಿಟ್ಟರು. ಆಗ ಜಾರ್ಜ್ ಫರ್ನಾಂಡೀಸ್ ಕ್ಯಾಂಪೇನ್ ಮ್ಯಾನೇಜರ್. ಕೇಂದ್ರದಲ್ಲಿ ಕೈಗಾರಿಕಾ ಸಚಿವ. ಚುನಾವಣಾ ಪ್ರಚಾರಕ್ಕೆ ದುಡ್ಡು ಸಂಗ್ರಹಿಸಲು ಬಕೆಟ್ ಹಿಡಿದು ಅಡ್ಡಾಡಿದ್ದು ಸ್ಥಳೀಯ ಪತ್ರಿಕೆಗಳಲ್ಲಿ ಇರಲಿ, ಬಿಬಿಸಿಯಲ್ಲಿ ಬಿತ್ತರಗೊಂಡಿತು. ಇಂದಿರಾ ಸೋಲುವುದು ಖಚಿತ ಎಂಬ ವಾತಾವರಣ. ಕಾಂಗ್ರೆಸ್ಸಿನಲ್ಲಿ ಜನರನ್ನು ಸೆಳೆಯಬಹುದಾದ ಏಕೈಕ ವ್ಯಕ್ತಿ ಎಂದರೆ ಇಂದಿರಾ. ಆಕೆ ಅಲ್ಲಿನ ಗುಡ್ಡ ಬೆಟ್ಟ ಹತ್ತಿಳಿದರು. ಮನೆಮನೆಗೆ ಹೋಗಿ ಕೈಮುಗಿದು ಓಟು ಕೇಳಿದರು. ಅಲ್ಲಿಯ ಜನರ ಮನೆಗಳಲ್ಲಿ ಮನೆಯವರ ಜೊತೆ ಕುಳಿತು ಊಟ ಮಾಡಿದರು. ಇತ್ತ ಪತ್ರಿಕೆಗಳು ತೋಚಿದಂತೆ ಬರೆಯುತ್ತಿದ್ದವು. ಖಾದ್ರಿ ಶಾಮಣ್ಣ ಸಂಪಾದಕತ್ವದ 'ಕನ್ನಡ ಪ್ರಭ' ಪತ್ರಿಕೆಯಲ್ಲಿ ಬರುತ್ತಿದ್ದ ವರದಿಗಳನ್ನು ನೋಡಿದರೆ ಇಂದಿರಾ ಗಾಂಧಿ ಠೇವಣಿ ಕೂಡ ಕಳೆದುಕೊಳ್ಳುತ್ತಾರೆ ಎನಿಸುತ್ತಾ ಇತ್ತು. ಆದರೆ ಇಂದಿರಾ ಗೆದ್ದರು. ಅವರ ಛಲ, ಜನರನ್ನು ಸಂಮೋಹಗೊಳಿಸುವ ಶಕ್ತಿ ಅಂಥದ್ದು.

ಇಂದಿರಾ ಬದುಕೇ ಒಂದು ವಿಚಿತ್ರ. ಬಾಲ್ಯದಲ್ಲಿ ತಂದೆ, ತಾಯಿ ಎಲ್ಲಿಯೋ ಚಳವಳಿಯಲ್ಲಿ ಜೈಲಿನಲ್ಲಿ ದೂರ ಇರುತ್ತಾ ಇದ್ದರು. ಆಕೆಯ ಪತಿ ಫಿರೋಝ್ ಗಾಂಧಿ, ಕಟ್ಟಾ ನೆಹರೂ ವಿರೋಧಿ. ಆತ ನೆಹರೂ ಮನೆತನದ ಸಂಪರ್ಕಕ್ಕೆ ಬಂದಿದ್ದೂ ವಿಚಿತ್ರ ರೀತಿಯಲ್ಲಿ. ಆಗ ಫಿರೋಝ್ ಇನ್ನೂ ಕಾಲೇಜು ವಿದ್ಯಾರ್ಥಿ. ಕಾಂಗ್ರೆಸ್ಸಿಗರ ಚಳವಳಿ, ಸತ್ಯಾಗ್ರಹಗಳೆಲ್ಲ ಹುಚ್ಚಾಟ ಬಾಲಿಶವಾಗಿ ಕಾಣುತ್ತಿತ್ತು. ಅದೊಂದು ದಿನ ಕಾಲೇಜು ಕಾಂಪೋಂಡಿನ ಮೇಲೆ ಕುಳಿತು ಫಿರೋಝ್ ಕುಳಿತು ಕಾಂಗ್ರೆಸ್ಸಿಗರ ಫೇರಿ ನೋಡುತ್ತಾ ಇದ್ದರು. ಆ ಮೆರವಣಿಗೆಯಲ್ಲೊಬ್ಬ ತೆಳು ದೇಹದ ನಿಶ್ಯಕ್ತ ಹೆಂಗಸು. ಆಕೆ ಮೆರವಣಿಗೆಗಾರರ ಜೊತೆ ನಡೆಯಲಾಗದೆ ಬವಳಿ ಬಂದು ಬಿದ್ದುಬಿಟ್ಟರು. ಕಾಂಗ್ರೆಸ್ಸಿಗರು ಅದಕ್ಕೆ ಕೇರ್‌ಮಾಡದೇ ತಮ್ಮ ಪಾಡಿಗೆ ತಾವು ಮೆರವಣಿಗೆಯಲ್ಲಿ ತೆರಳಿದರು. ಪ್ರತಿಭಟನೆಕಾರರ ಅಮಾನವೀಯತೆ ಕಂಡು ಫಿರೋಝ್‌ಗೆ ಸಿಟ್ಟು ಬಂತು. ಓಡಿ ಹೋಗಿ ಆ ಮಹಿಳೆಯನ್ನು ಉಪಚರಿಸಿದರು. ಆಕೆ ಬೇರೆ ಯಾರೂ ಅಲ್ಲ ನೆಹರೂ ಅವರ ಪತ್ನಿ ಕಮಲಾ ನೆಹರೂ. ಅಲ್ಲಿ ಚಿಗುರಿದ ಅವರ ಪರಿಚಯ ಗಾಢ ವಾಯಿತು. ಕಮಲಾ ನೆಹರೂ ಅನಾರೋಗ್ಯದಿಂದಾಗಿ ಲಂಡನ್ನಿನ ಆಸ್ಪತ್ರೆ ಸೇರಿದಾಗ, ನೆಹರೂ ಚಳವಳಿಯಲ್ಲಿ ಗಾಢವಾಗಿ ಮುಳುಗಿದ್ದರು. ಆದರೆ ಫಿರೋಝ್ ಅಲ್ಲಿ ಹತ್ತಿರವಿದ್ದು, ಕಮಲಾ ಅವರನ್ನು ಉಪಚರಿಸುತ್ತಾ ಇದ್ದರು. ಅಲ್ಲಿಯೇ ಇಂದಿರಾಗೆ ಫಿರೋಝ್ ಪರಿಚಯವಾದದ್ದು.

ಪಾರ್ಸಿ ಕುಟುಂಬದ ಫಿರೋಝ್ ಗಾಂಧಿಯನ್ನು ಮದುವೆಯಾಗಲು ಇಂದಿರಾ ನಿರ್ಧರಿಸಿದಾಗ ತೀವ್ರ ವಿರೋಧ ಬಂದಿದ್ದು ತಂದೆಯಿಂದ. ನೆಹರೂ ಅವರ ಏಕೈಕ ಪುತ್ರಿ, ಮುದ್ದಿನ ಪ್ರಿಯದರ್ಶಿನಿ ತಂದೆಯನ್ನು ತೊರೆದು ಮುಂಬಯಿಗೆ ಬಂದು ಗಂಡನ ಜೊತೆ ನಿಂತರು. ಅಲ್ಲಿಯೇ ಅವರ ಮೊದಲ ಮಗ ರಾಜೀವ್ ಹುಟ್ಟಿದಾಗ ಹತ್ತಿರ ಇದ್ದ ಆಪ್ತರೆಂದರೆ ಅರುಣಾ ಅಸಫ್‌ಅಲಿ ಅವರಂಥ ಕಾಂಗ್ರೆಸ್ಸಿನ ಹಿರಿಯರು.

ಕಾಂಗ್ರೆಸ್ಸು ದೇಶದ ಇತಿಹಾಸ ತನ್ನದೇ ದಿಕ್ಕು ಪಡೆದು ಲಾಲ್ ಬಹಾದೂರ್ ಶಾಸ್ತ್ರಿ ಅನಿರೀಕ್ಷಿತ ಮರಣದಿಂದ ತೆರವಾದ ಸ್ಥಾನಕ್ಕೆ ಯಾರು ಬರಬೇಕೆಂಬ ಜಿಜ್ಞಾಸೆ. ತಂದೆ ಇರುವವರೆಗೂ ಯಾವುದೇ ಮಹತ್ವದ ಅಧಿಕಾರ ಸ್ಥಾನ ಆಕೆ ಪಡೆದಿರಲಿಲ್ಲ. ಅದಕ್ಕೆ ಕಾರಣ ನೆಹರೂ. 'ಆಕೆ ತುಂಬಾ ಮಹತ್ವಾಕಾಂಕ್ಷಿ' ಎಂದು ತಂದೆಯೇ ಹೇಳುತ್ತಿದ್ದರು. ಅಂಥ ಇಂದಿರಾಗಾಂಧಿಯನ್ನು ಪ್ರಧಾನಿ ಮಾಡಿದ್ದು ನಿಜಲಿಂಗಪ್ಪ. ಆಗ ನಿರ್ಧಾರ ತೆಗೆದುಕೊಳ್ಳುವ ಮಹತ್ವದ ಸ್ಥಾನದಲ್ಲಿ ಇದ್ದವರು ಕಾಮರಾಜ್, ಎಸ್.ಕೆ. ಪಾಟೀಲ್ ಹಾಗೂ ನಿಜಲಿಂಗಪ್ಪ. ಪ್ರಧಾನಿ ಸ್ಥಾನಕ್ಕೆ ಮೊರಾರ್ಜಿ ಹೆಸರು ಪ್ರಸ್ತಾಪವಾದಾಗ ಚೀರಾಡಿದವರು ನಿಜಲಿಂಗಪ್ಪ. ಕೊನೆಗೆ ಇಂದಿರಾ ಹೆಸರು ಇವರ್‍ಯಾರೂ ಒಪ್ಪುವುದಿಲ್ಲ ಎಂದಾಗ ಅತ್ತೇ ಬಿಟ್ಟರು.

ಇದನ್ನು ಸ್ವತಃ ಕಾಮರಾಜರೇ ತುಂಬಾ ದಿನಗಳ ನಂತರ ಬೆಂಗಳೂರಿನ ಕುಮಾರಕೃಪಾ ಗೆಸ್ಟ್ ಹೌಸಿನಲ್ಲಿ ಬಾಯಿಬಿಟ್ಟರು. ಆಗ ಎಮರ್ಜೆನ್ಸಿ ಘೋಷಿತವಾಗಿತ್ತು. ತಮ್ಮನ್ನು ಕಾಣಲು ಬಂದ ಪತ್ರಕರ್ತರ ಎದುರು ಆವೇಶದಿಂದ ಬಾಯಿಬಿಟ್ಟ ಕಾಮರಾಜ್ ಮರುಕ್ಷಣವೇ ಚೇತರಿಸಿಕೊಂಡು ಒಂದು ವಿನಂತಿ ಮಾಡಿದರು. 'ದಯವಿಟ್ಟು ಇದನ್ನು ಯಾರೂ ಬರೆಯಬೇಡಿ'.

ರಾಜಕೀಯ, ಇತಿಹಾಸದ ದಿಕ್ಕು ಬದಲಿಸುವ ಎಷ್ಟೋ ಸಂಗತಿಗಳು ನಡೆಯುತ್ತವೆ. 1984ರ ಅಕ್ಟೋಬರ್‌ನ ಕೊನೆಯ ದಿನದ ಮುಂಜಾನೆ ಎಂದಿನಂತೆ ದೆಹಲಿಯ ಮುಂಜಾನೆ ಅರಳಿಕೊಳ್ಳುತ್ತಾ ಇತ್ತು. ಸಾಕ್ಷ್ಯಚಿತ್ರ ನಿರ್ಮಿಸುವ ಪೀಟರ್ ಉಸ್ತಿನೋವ್ ಪ್ರಧಾನಿಗಳ ಕಚೇರಿಯಲ್ಲಿ ಕಾಯುತ್ತಾ ಕುಳಿತಿದ್ದರು. 9.30ಕ್ಕೆ ಅವರು ಪ್ರಧಾನಿ ಇಂದಿರಾ ಅವರನ್ನು ಭೇಟಿ ಮಾಡುವವರಿದ್ದರು. ಪ್ರಧಾನಿ ಕಚೇರಿಯ ಹಿಂದುಗಡೆಯೇ ಅವರಿದ್ದ ಮನೆ. ಆಕೆ ತಮ್ಮ ಎಂದಿನ ಸರಳ ಸೀರೆಯುಟ್ಟು ಮನೆಯಿಂದ ಹೊರಟಾಗ ಬೆಂಕಿಯುಗುಳಿದ ಬಂದೂಕುಗಳನ್ನು ಅವರನ್ನು ಸದಾ ರಕ್ಷಿಸಬೇಕಾದ ಅಂಗರಕ್ಷಕರೇ ಹಿಡಿದಿದ್ದರು. ಸದಾ ಗುಂಡು ನಿರೋಧಕ ಅಂಗವಸ್ತ್ರ ಧರಿಸುತ್ತಿದ್ದ ಇಂದಿರಾ ಅಂದು ಅದನ್ನು ಧರಿಸಿರಲಿಲ್ಲ.

ನೂರಾರು ಗುಂಡುಗಳು ದೇಹ ಪ್ರವೇಶಿಸಿ, ನೆಲಕ್ಕುರುಳಿದ ಇಂದಿರಾ ಅಂತಿಮವಾಗಿ ಕೊನೆಯುಸಿರೆಳೆದಿದ್ದಾರೆ ಎಂದು ಘೋಷಣೆಯಾಗಿದ್ದು ಮಧ್ಯಾಹ್ನ 1.30ರ ನಂತರ.

ಇಂದಿರಾಗಾಂಧಿ ಎಮರ್ಜೆನ್ಸಿ ಘೋಷಿಸದೇ ಇದ್ದಿದ್ದರೆ!

ಬ್ಲೂ ಸ್ಟಾರ್ ಕಾರ್ಯಾಚರಣೆ ನಡೆಸದೇ ಇದ್ದರೆ ! ಬದುಕಿ ಇರುತ್ತಾ ಇದ್ದರೆ?

ಇತಿಹಾಸಕ್ಕೆ ತನ್ನದೇ ಓಘವಿದೆ. ಅದನ್ನು ನಿಯಂತ್ರಿಸುತ್ತೇನೆ ಎನ್ನುವುದು ಭ್ರಮೆ. ಅದನ್ನು ಇಂದಿರಾ ಅರಿಯಲಿಲ್ಲ.

■ ಸುಹಾಸ

ಸುಳ್ಳು ಶೂರ

ಇವರೊಬ್ಬರು ಮಹಾನ್ ಸಾಹಿತಿಗಳು. ಅವರಿಗೆ ಕುಡಿಯುವ ಚಟ. ಆದರೆ ಗೃಹ ಸಚಿವರ ಆಕ್ಷೇಪಣೆ. ಅಲ್ಲದೇ ಇವರು ಹೆಂಡತಿಯ ಎದುರು ಸತ್ತರೂ ಕುಡಿಯುವುದಿಲ್ಲ ಎಂದು ಪ್ರಮಾಣ ಬೇರೆ ಮಾಡಿದ್ದರು.

ಆದರೆ ಬಾಯಿ ಚಪಲ. ಸೂರ್ಯ ಮುಳುಗುತ್ತಿದ್ದ ಹಾಗೆ ಜೀವ ಎಳೆಯುತ್ತಿತ್ತು. ತಡೆಯಲಾರದೇ ಗಡಂಗಿಗೆ ಹೋಗಿ ಕುಳಿತು ಎಂದಿಗಿಂತ ಸ್ವಲ್ಪ ಹೆಚ್ಚಾಗಿಯೇ ಸೇವಿಸಿ ಮನೆಗೆ ಬಂದರು.

ಹೆಂಡತಿ ರೇಗುವ ಮೊದಲೇ 'ಏನು ಮಾಡೋದು! ಕೆಲಸ ಮುಗಿದು ಮೆಜೆಸ್ಟಿಕ್‌ನಲ್ಲಿ ಬಸ್ ಹತ್ತಬೇಕು. ಯಾರೋ ಭುಜದ ಮೇಲೆ ಕೈ ಇಟ್ಟ ಹಾಗಾಯಿತು. ನೋಡಿದರೆ ಮಾಸ್ತಿ ನಿಂತಿದ್ದಾರೆ. ಪಕ್ಕಕ್ಕೆ ಕರೆದು, ಇವತ್ತು ನಿಮ್ಮ ಜೊತೇಲೇ ಗುಂಡು ಹಾಕಬೇಕು ಅಂತ ಮನಸ್ಸಾಗಿದೆ. ಇಲ್ಲ ಅನ್ನಬೇಡಿ' ಅಂತ ಬೇಡಿಕೊಂಡರು. ಅಂಥ ದೊಡ್ಡ ಸಾಹಿತಿ. ಹ್ಯಾಗೆ ಇಲ್ಲ ಅನ್ನೋದು!' ವಿವರಣೆ ನೀಡಿದರು.

ಸ್ವಲ್ಪ ಸಾಹಿತ್ಯಾಸಕ್ತಿಯೂ ಇದ್ದ ಆ ಮಹಾಪತ್ನಿಗೆ ಹಿರಿಯ ಸಾಹಿತಿಗಳೆಂದರೆ ಮಹಾ ಗೌರವ. ಹೀಗಾಗಿ ನಿತ್ಯವೂ ಈ ಮರಿ ಸಾಹಿತಿ ಮಾಸ್ತಿ, ಕುವೆಂಪು ರಾಜರತ್ನಂ, ರಾಶಿ, ಕೊನೆಗೆ ಪುತಿನ, ಕೆ.ಎಸ್. ನರಸಿಂಹಸ್ವಾಮಿ, ಅಡಿಗ ಎಲ್ಲರ ಜೊತೆಯೂ ಗುಂಡು ಹಾಕಿದ ಬಾಯಿ ಮಾತಿನ ಸಾಧನೆ ಮಾಡಿದರು.


ಪಾಪವೆಂದರೆ! ಈಗವರು ಕುಡಿಯುವ ಸ್ಥಿತಿಯಲ್ಲಿಯೇ ಇಲ್ಲ. ಪರವಾಗಿಲ್ಲ. ಮುಂದಿನ ಜನ್ಮಕ್ಕಾಗುವಷ್ಟು ಅವರು ಈಗಾಗಲೇ ಕುಡಿದು ಮುಗಿಸಿದ್ದಾರೆ.

ಖುರ್ಚಿ ಬಂತು, ಮಾನ ಹೋಯ್ತು, ಖುರ್ಚಿ ಹೋಯ್ತು, ದುಡ್ಡೂ ಹೋಯ್ತು!

ಎಲ್ಲೂ ಸಲ್ಲದವರು ರಾಜಕೀಯಕ್ಕೆ ಬರುತ್ತಾರೆ. ನಿರ್ಗತಿಕರಂತೆ ಬೀದಿ ಅಲೆಯುತ್ತಿದ್ದವರು ದಿಖಾವಾಗಿ ಬದುಕಿ, ಉಳಿದವರ ಹೊಟ್ಟೆ ಉರಿಸುತ್ತಾರೆ. ನಾಲಗೆಗಳು ಮಸೆಯಲು ಆರಂಭಿಸುತ್ತವೆ. 'ಮನೆ ಮಾಡಿದಾನೆ. ಕೋಟಿಗಟ್ಟಲೆ ಬಾಚಿಕೊಂಡಿದಾನೆ' ಎಂದೆಲ್ಲ ಉಡಾಫೆಯ ಮಾತು ಜನ ಆಡಿ ಬಾಯಿ ತೀಟೆ ತೀರಿಸಿಕೊಳ್ಳುತ್ತಾರೆ. ರಾಜಕಾರಣಿಗಳು ನಿಜಕ್ಕೂ ದುಡ್ಡು ಮಾಡುತ್ತಾರೆಯೇ...?

ಈಚೆಗೆ ಶ್ರೀಮಂತ ಉದ್ಯಮಿಯೊಬ್ಬರ ಪತ್ನಿ ಸಿಕ್ಕಿದ್ದರು. ಮಾತಾಡುತ್ತಾ, ತಮ್ಮ ಗಂಡ ಬೆಂಗಳೂರಿನಲ್ಲೊಂದು ವಿಧಾನಸಭಾ ಕ್ಷೇತ್ರದ ಟಿಕೆಟ್‌ಗೆ ಯತ್ನಿಸಿದ್ದು, ವಿಫಲರಾಗಿದ್ದು ಎಲ್ಲ ಹೇಳಿದರು. ಗಂಡನಿಗೆ ಟಿಕೆಟ್ ಸಿಗದೇ ಇದ್ದುದಕ್ಕೆ ಬೇಸರವಿರಲಿಲ್ಲ. ಹಾಗೆ ನೋಡಿದರೆ ಅವರು ತೀರಾ ಖುಷಿಯಾದಂತೆಯೇ ಇತ್ತು.

'ಒಂದು ಕೈ ನೋಡಿಯೇ ಬಿಡೋಣ ಅನ್ನೋ ಕೆಟ್ಟ ಛಲ. ಸದ್ಯ ತಪ್ಪಿತು..' ಎಂದ ಅವರು 'ಟಿಕೆಟ್ ಸಿಕ್ಕಿದ್ದರೆ ಒಂದು ಪ್ರಾಪರ್ಟಿ ಮಾರಬೇಕಿತ್ತು' ಎಂದು ಮಾತು ಮುಗಿಸಿದಾಗ ಅವರ ಸಂತೋಷಕ್ಕೆ ಕಾರಣ ತಿಳಿಯಿತು. ಅದರರ್ಥ ಇಷ್ಟೇ! ಗೆಲ್ಲಲಿ, ಸೋಲಲಿ ಎಂ.ಎಲ್.ಎ. ಸೀಟಿಗೆ ಸ್ಪರ್ಧಿಸಿದ ಅಭ್ಯರ್ಥಿ ಐವತ್ತು ಲಕ್ಷದಿಂದ ಒಂದು ಕೋಟಿ ರೂಪಾಯಿ ಇವತ್ತು ಖರ್ಚು ಮಾಡಬೇಕು.



ಎಲ್ಲೂ ಸಲ್ಲದವರು ರಾಜಕೀಯಕ್ಕಿಳಿದು ಹಣವಂತರಾಗಿ, ಅವರವರ ಮಟ್ಟದ, ರೀತಿಯ ಕೀರ್ತಿ, ಹೆಸರು ಗಳಿಸುತ್ತಾರೆ ಎಂಬುದು ಸಾಮಾನ್ಯವಾಗಿ ಕೇಳಿ ಬರುವ ಮಾತು. ಕೀರ್ತಿ, ಹೆಸರಿನ ವಿಷಯ ಅಷ್ಟಾಗಿ ತಿಳಿಯದು. ಹಣ ಕಳಕೊಂಡವರ ಪಟ್ಟಿ ಮಾತ್ರ ದೊಡ್ಡದೇ ಇದೆ.

ಹಾಗೆಂದು ಮಾಜಿ ರಾಜಕಾರಣಿಗಳು ತೀರಾ ನಿರ್ಗತಿಕರಾಗಿ ಬೀದಿಗೆ ಬಿದ್ದಿದ್ದಾರೆ ಎಂದಲ್ಲ. ಒಂದು ಕಾಲಕ್ಕೆ ಓಡಾಡುತ್ತಿದ್ದ ಲಕ್ಷ, ಲಕ್ಷ ಹಣ, ಕಾರು, ಬಾರು, ಕಾರ್ಬಾರು ಇವು ಯಾವುದೂ ಇರದು. ಸಾಮಾನ್ಯ ಜನ ತಮ್ಮದೇ ಅಜ್ಞಾನ, ಊಹೆ, ಈರ್ಷ್ಯೆಯಿಂದ ಆಡಿಕೊಳ್ಳುವಂತೆ 'ಅವನುಬಿಡಿ ನೂರು ಕೋಟಿ ಮಾಡಿದಾನೆ. ಇವನು ಸಾವಿರ ಕೋಟಿ ನುಂಗಿದಾನೆ' ಎಂಬ ಮಾತು ಕೇವಲ ಮಾತುಗಳಷ್ಟೇ ಆಗಿ ಉಳಿದ ಪ್ರಸಂಗಗಳೂ ಇವೆ.

ಕೆಲವು ಸಂದರ್ಭಗಳಲ್ಲಿ ನೂರಾರು ಕೋಟಿ ಓಡಾಡಿರುತ್ತೆ ನಿಜ. ಆದರೆ ಅದು ಬಂದ ರೀತೀಲೇ ಮಾಯ ಆಗಿರುತ್ತೆ ಅನ್ನೋದೂ ನಿಜ. ಕೆಲವು ಪ್ರಸಂಗಗಳಲ್ಲಿ ತಮ್ಮ ರಾಜಕೀಯ ಭವಿಷ್ಯಕ್ಕೆ ಅಂತ 'ಇನ್‌ವೆಸ್ಟ್' ಮಾಡಿದ್ದು ವೇಸ್ಟ್ ಆದದ್ದು ಇದೆ. ಇನ್ನು ಕೆಲವರ ವಿಚಾರದಲ್ಲಿ ಏನಾಯಿತಪ್ಪ ಅಂದರೆ, ಹಣ ಮಾಡಿದೆ ಎಂಬ ಅಪಖ್ಯಾತಿ. ಅಸಲು ಸಂಗತಿ ಏನೆಂದರೆ ತಮ್ಮ ವಾರಸುದಾರರಿಗೆ ಇವರು ಲಕ್ಷಾಂತರದ ಸಾಲ ಬಿಟ್ಟು ಹೋಗಿದ್ದಾರೆ.

ಈ ವಿಷಯ ನನ್ನ ಗಮನಕ್ಕೆ ಮೊದಲು ಬಂದಿದ್ದು ಶಿವಮೊಗ್ಗದಿಂದ ನಾಲ್ಕೈದು ಬಾರಿ ಅನಾಯಾಸ ಪಾರ್ಲಿಮೆಂಟ್‌ಗೆ ನಿಂತು ಗೆದ್ದ ಕಾಂಗ್ರೆಸ್ ಧುರೀಣರೊಬ್ಬರ ಮಗನಿಂದ. ತುಂಬಾ ರಂಗಿನ ವ್ಯಕ್ತಿಯಾಗಿದ್ದ ಈ ಎಂಪಿ, ಚುನಾವಣೆ ಗೆಲ್ಲುವುದನ್ನೇ ಒಂದು ಕಲೆಯ ಮಟ್ಟಕ್ಕೆ ಏರಿಸಿದ್ದ ಚಾಣಾಕ್ಷ. ಮಿಕ್ಕ ಅಭ್ಯರ್ಥಿಗಳು ಉಳಿದವರನ್ನೆಲ್ಲ ನಿಂದಿಸುತ್ತಾ, ಅಬ್ಬರದ ಪ್ರಚಾರ ಮಾಡುತ್ತಾ ದಾಖಲೆ ಸಂಖ್ಯೆಯ ಬ್ಯಾನರ್ ಕಟ್ಟುವುದರಲ್ಲಿ ಮುಳುಗಿದ್ದರೆ, ಈತ ಸದಾ ಸರ್ಕಾರಿ ಗೆಸ್ಟ್ ಹೌಸಿನಲ್ಲಿ ಬೀಡು ಬಿಟ್ಟಿರುತ್ತಿದ್ದ (ಆಗ ಪುಣ್ಯಕ್ಕೆ ಶೇಷನ್ ಎಫೆಕ್ಟ್ ಇರಲಿಲ್ಲ). ಯಾವ ಬೂತಿಗೆ ತಮ್ಮಲ್ಲಿ ಯಾರು ಏಜೆಂಟರಾಗಬೇಕು, ಯಾರು ರಿಟರ್ನಿಂಗ್ ಆಫೀಸರ್ ಆದರೆ ಒಳ್ಳೆಯದು ಎಂದು ಲೆಕ್ಕಾಚಾರದಲ್ಲಿ ಮುಳುಗಿರುತ್ತಿದ್ದರು. ಹಾಗೇ ಗೆಲ್ಲುತ್ತಾ ಇದ್ದರು.

ಎರಡು ಸಲ, ಎರಡೆರಡು ವರ್ಷ ಎಂಪಿಯಾಗಿ ಆಯ್ಕೆಯಾದ ಕೊಂಡಯ್ಯನಂಥ ಶ್ರೀಮಂತರೇ ಬಳ್ಳಾರಿ ಉಪ ಚುನಾವಣೆಯಲ್ಲಿ ಸ್ಪರ್ಧಿಸಲು ಮೀನಾ ಮೇಷ ಮಾಡಿ, ಕೊನೆಗೆ ಸೇಫಾಗಿ ರಾಜ್ಯಸಭೆಯ ಮೊರೆ ಹೊಕ್ಕಿರುವಾಗ, ನಾಲ್ಕೈದು ಬಾರಿ, ಅದೂ ಐದೈದು ವರ್ಷ ಪೂರ್ತಿ ಟರ್ಮು ಮುಗಿಸಿದ್ದ ಆ ಎಂಪಿ ಸಾಕಷ್ಟು ಕಾಸು ಮಾಡಿರಬಹುದು ಎಂದೇ ನಾನು ತಿಳಿದಿದ್ದೆ. ಆತ ಸತ್ತ ಮೇಲೆ ಮಕ್ಕಳ ಮೇಲೆ ಮೂವತ್ತೈದು ಲಕ್ಷದ ಸಾಲಬಿಟ್ಟು ಹೋಗಿದ್ದರೆಂದು ತಿಳಿದಾಗ ಆಶ್ಚರ್ಯ.

ಒಂದು ವಿವರಣೆ ಏನೆಂದರೆ ಚುನಾವಣಾ ಖರ್ಚು ತುಂಬುವಂತೆ ಅವರು ದೆಹಲಿಯಲ್ಲಿ ರಾಜಕೀಯ ಮಾಡಲಿಲ್ಲ. ಸ್ನೇಹಿತರು, ವ್ಯಾಪಾರಿಗಳು 'ರಿಟರ್ನ್ಸ್' ಇಲ್ಲದ ಕಾರಣ ಪ್ರತಿ ಚುನಾವಣೆಗೂ ಕೊಡುತ್ತಿದ್ದ ಕಾಣಿಕೆ ಕಡಿಮೆಯಾಗುತ್ತಾ ಹೋಯಿತು. ಕಡೆಕಡೆಗೆ ಕೈಯಿಂದಲೇ ಖರ್ಚು ಮಾಡಿದರು. ನಿವೃತ್ತರಾದ ಮೇಲಂತೂ ಆ ಹಣ ರಿಕವರಿ ಆಗಲೇ ಇಲ್ಲ.

ಈಗ ಮಗನ ವರಸೆ. ಹಾಗೂ ಹೀಗೂ ಮಾಡಿ ಬ್ಯಾಂಕೊಂದರ ಜೊತೆ ಸಂಧಾನ ಮಾಡಿ ಹದಿನಾಲ್ಕು ಲಕ್ಷ ತೀರಿಸಿದ. ಉಳಿದ ಹಣದ ವ್ಯವಸ್ಥೆ ಹೀಗಾದರೂ ಆಗಬಹುದೇನೋ ಎಂದು ತಂದೆಯ ಫೇವರಿಟ್ ಆಗಿದ್ದ ರಾಜಕೀಯಕ್ಕೆ ಧುಮುಕಿ ಒಂದು ಕೈ ನೋಡೇ ಬಿಡುವ ಸಾಹಸಕ್ಕಿಳಿದ. ಅದೇಕೋ ಅಪ್ಪನಿಗೆ ಟಿಕೆಟ್ ಕರುಣಿಸುತ್ತಾ ಬಂದಿದ್ದ ಕಾಂಗ್ರೆಸ್ ಇವನಿಗೆ ಟಿಕೆಟ್ ಕೊಡಲಿಲ್ಲ. ಈಗ ಸಾಲ ತೀರಿಸಲು ಬೇರೇನಾದರೂ ವರಸೆಗಳಿವೆಯೋ ಎಂದು ಹುಡುಕುತ್ತಿದ್ದಾನೆ.

ಕೆಲವು ಬಾರಿ ಚುನಾವಣೆ ಸಮಯದಲ್ಲಿನ ರಾಜಕಾರಣಿಗಳ ಪಾಡು ನೋಡಿದರೆ, ನಮ್ಮ ಶತ್ರುಗಳಿಗೂ ಬೇಡ ಎನ್ನುವಂತಿರುತ್ತದೆ ಸ್ಥಿತಿ. ಅದರಲ್ಲೂ ಪಾರ್ಲಿಮೆಂಟ್ ಮತ್ತು ಅಸೆಂಬ್ಲಿ ಚುನಾವಣೆ ಒಟ್ಟಿಗೆ ಬಂದಾಗ ನೋಡಬೇಕು. ಒಂದೊಂದು ಸಲ ಅನುಕೂಲವಾಗಿ ಹಣ ಬರುತ್ತೆ. ಮತ್ತೆ ಕೆಲವು ಸಲ ಎಷ್ಟೇ ಕಾಡಿ ಬೇಡಿದರೂ ಲಕ್ಷ ಬರಬೇಕಾದ ಕಡೆ ಸಾವಿರ ಕೂಡ ಗಿಟ್ಟದ ಸ್ಥಿತಿ.

ಒಮ್ಮೆ ಲಾರಿ ಮಾಲೀಕರ ಸಂಘದ ಪದಾಧಿಕಾರಿಗಳು, ಚುನಾವಣಾ ಸಮಯದಲ್ಲಿ ಏನಾದರೂ ಸಹಾಯಬೇಕೇ? ಎಂದು ಸಿದ್ಧರಾಮಯ್ಯನವರನ್ನು ಕೇಳಿದರಂತೆ. 'ಸಾಕು, ಸಾಕು. ಊಹಿಸಿದ್ದಕ್ಕಿಂತಲೂ, ಬೇಕಾದ್ದಕ್ಕಿಂತಲೂ ಹೆಚ್ಚೇ ಬಂದಿದೆ. ಈಗೇನೂ ಬೇಡ..' ಆ ಕಡೆಯಿಂದ ಬಂತು ಉತ್ತರ. ಇದು ಹಳೇ ಕತೆ.

ಆದರೆ 99ರ ಚುನಾವಣೆ ಹೊತ್ತಿಗೆ ದಳ ಒಡೆದು, ದೇವೇಗೌಡ, ಸಿದ್ಧರಾಮಯ್ಯನವರ ದಳ ಅಧಿಕಾರಕ್ಕೆ ಬರುವುದಿಲ್ಲ ಎಂಬ ವಾಸನೆ ಬಡಿದಿದ್ದರಿಂದಲೋ ಏನೋ, ಜಾತ್ಯತೀತ ಜನತಾದಳದ ನಾಯಕರು ತೀರಾ ಕಷ್ಟದಲ್ಲಿಯೇ ಪ್ರಚಾರ ಮುಗಿಸಬೇಕಾಯಿತು. ದೇವೇಗೌಡರ ಬಳಿ ಎಷ್ಟೇ ಹಣವಿದ್ದರೂ, ಗೆಲ್ಲುವ ಅವಕಾಶ ಕಡಿಮೆ ಎಂದು ಗೊತ್ತಿದ್ದೇ ಗಂಟು ಬಿಚ್ಚಲಿಲ್ಲ. ಆದರೆ ಇದೇ ದೇವೇಗೌಡರು ಸೋನಿಯಾ ಗಾಂಧಿ ಅವರನ್ನು ಮೆಚ್ಚಿಸಲೆಂದೇ ಉತ್ತರ ಭಾರತದ ಹಲವು ಕಾಂಗ್ರೆಸ್ ಅಭ್ಯರ್ಥಿಗಳ ಪರ ಹಣ ಸುರಿದಿದ್ದರು.

ರಾಜ್ಯದಲ್ಲಿ ತಮ್ಮ ಪಕ್ಷದ ಅಭ್ಯರ್ಥಿಗಳ ಖರ್ಚನ್ನು ಸಿದ್ಧರಾಮಯ್ಯ ಭರಿಸುತ್ತಾರೆ ಎಂದೇ ತಿಳಿದಿದ್ದ ದೇವೇಗೌಡ ಆಪ್ತರಲ್ಲಿ 'ಈ ವಯ್ಯ ಐದು ವರ್ಷ ಡೆಪ್ಯುಟಿ ಸಿ.ಎಂ. ಹಣಕಾಸಿನ ಮಂತ್ರಿ ಆಗಿದ್ದ. ಪರವಾಗಿಲ್ಲ, ಏನೋ ಇಟ್ಟಿರ್ತಾನೆ ಅಂತ ತಿಳಕೊಂಡಿದ್ದೆ. ನೋಡಿದ್ರೆ, ದುಡ್ಡೇ ಇಲ್ಲ' ಎಂದು ದೇವೇಗೌಡರು ತಮ್ಮ ಜೋಳು ತಲೆ ಸವರಿಕೊಂಡಿದ್ದು ಕುತೂಹಲಕಾರಿ.

ಎಂ.ಜಿ.ಆರ್ ಸತ್ತಾಗ ಅವರ ಕುಟುಂಬ, ಆಪ್ತರು ಮತ್ತು ಕೆಲವು ಸಚಿವರು ತೀರಾ ಆತಂಕಿತರಾಗಿದ್ದರು. ಹೊರಗೆ ನಡೆಯುತ್ತಿದ್ದ ಗಲಭೆ, ಲೂಟಿ, ಎಂ.ಜಿ.ಆರ್. ಹೆಸರಲ್ಲಿನ ರೋಲ್‌ಕಾಲ್ ಬಗ್ಗೆ ಅಲ್ಲ ಅವರ ಆತಂಕ. ಅವರವರು ಬಾಚಿಕೊಂಡ ಹಣ ರಕ್ಷಿಸಿಕೊಳ್ಳುವುದು ಹೇಗೆಂಬುದೇ ಅವರ ಆತಂಕ.

ಸಿನಿಮಾರಂಗ, ರಾಜಕೀಯಗಳೆರಡರಲ್ಲೂ ಇದ್ದ ಎಂ.ಜಿ.ಆರ್.ಗೆ ಎಷ್ಟೋ ಸಲ ಜಯಲಲಿತಾ ಹಣದ ಸಹಾಯ ಮಾಡಿದ್ದು ಉಂಟು. ಒಮ್ಮೆ ಎಂ.ಜಿ.ಆರ್. ಮುಖ್ಯಮಂತ್ರಿ ಆದದ್ದೇ ಅವರೆಡೆಗೆ ಹಣದ ಹೊಳೆಯೇ ಹರಿದು ಬಂತು. ಅದು ಒಂದು ಕಡೆ ಇಡುವಂಥದ್ದಾಗಿರಲಿಲ್ಲ. ಮಡಿಕೇಲಿಟ್ಟರೆ ಏನು ಬಂತು! ಸ್ವಲ್ಪ ಬಡ್ಡಿಯಾದರೂ ಸಂಪಾದಿಸಲಿ ಎಂದು ಸಿಂಗಪುರ, ಮಲೇಷಿಯಾ, ಹಾಂಕಾಂಗ್ ತಮಿಳರ ಕಡೆಗೆ ರವಾನಿಸಲಾಗಿತ್ತು. ಭೂಗತ ದೊರೆಗಳ ಸ್ಪರ್ಶವೂ ಇದಕ್ಕಿದ್ದುದರಿಂದ ಅದನ್ನು ಮುಟ್ಟಲೂ ಹಲವರು ಹೆದರುತ್ತಿದ್ದರು. Tainted money ಅಥವಾ ರಕ್ತ ಸಿಕ್ತ ಹಣ ಅದು.

ಎಂ.ಜಿ.ಆರ್. ಪತ್ನಿ ಜಾನಕಿಗೆ ಆಗ ಇಂಥ ಹಣದ್ದೇ ಚಿಂತೆ. ಈ ಹಣ ಭದ್ರಪಡಿಸಲು ನೆರವಾದಲ್ಲಿ ಯಾರಿಗಾದರೂ ಸರ್ಕಾರ ರಚಿಸಲು ಅವರು ತಯಾರಾಗಿ ಬಿಟ್ಟರು. ಮೈನಾರಿಟಿ ಪಕ್ಷವಾಗಿದ್ದ ಕಾಂಗ್ರೆಸ್ ಸರ್ಕಾರ ರಚನೆ ಮಾಡುವುದಾದರೆ ತಾವು ಬೆಂಬಲಿಸುವುದಾಗಿಯೂ ಹೇಳಿಬಿಟ್ಟರು. ಆಗ ಕೇಂದ್ರ ಗೃಹ ಸಚಿವರಾಗಿದ್ದ ಬೂಟಾಸಿಂಗ್ ಮೃತ ಎಂ.ಜಿ.ಆರ್‌ಗೆ ಗೌರವ ಸಲ್ಲಿಸಲೆಂದು ಬಂದು, ಎಂ.ಜಿ.ಆರ್. ಮನೆಯಲ್ಲಿಯೇ ಠಿಕಾಣಿ ಹೂಡಿದ್ದರು. ಅವರಿಗೂ, ಕಾಂಗ್ರೆಸ್ಸಿಗರಿಗೂ ಜಾನಕಿ ಅವರ ಮಾತಲ್ಲಿ ನಂಬಿಕೆ. ಹಾಗೆಂದು ಕಾಂಗ್ರೆಸ್ ಸರ್ಕಾರ ರಚಿಸಲು ಮುಂದಾದಾಗ ವಿಧಾನಸಭೆಯಲ್ಲಿ ಎ.ಐ.ಎ.ಡಿ.ಎಂ.ಕೆ ಶಾಸಕರು ಎಬ್ಬಿಸಿದ ಗದ್ದಲ ನಿಯಂತ್ರಣಕ್ಕೆ ಲಾಠಿ ಪ್ರಹಾರ ಮಾಡಬೇಕಾದ ಸ್ಥಿತಿ. ಮುಂದೆ ತಾವೇ ಎಂ.ಜಿ.ಆರ್. ಉತ್ತರಾಧಿಕಾರಿ ಎಂದು ಜಾನಕಿ ಘೋಷಿಸಿಕೊಂಡರು. ಅವರೂ ಹೆಚ್ಚು ಕಾಲ ಜೀವಿಸಲಿಲ್ಲ. ಆ ಹಣ ಏನಾಯಿತು ಎಂಬ ವಿವರ ಇವತ್ತಿಗೂ ನಿಗೂಢ.

ಗುಂಡೂರಾವ್ ಅವರು ಮಲ್ಲೇಶ್ವರದಲ್ಲಿದ್ದಾಗ ನಾನು ಆಗಾಗ ಅವರ ಮನೆಗೆ ಹೋಗುತ್ತಿದ್ದೆ. ಒಮ್ಮೆ ಉದ್ಯಮಿ ಮಿತ್ರ ಜೊತೆ ಬಂದಿದ್ದ. ಮಾತಾಡಿ ಹೊರಡುವಾಗ,

'ಏನ್ರೀ ಹಾಗೇ ಹೋಗ್ತಾ ಇದೀರ, ಪೇಪರ್ ನೋಡ್ತಾ ಇದೀರ ತಾನೇ! ನನ್ನ ಕಾಯಿಲೆ ಟ್ರೀಟ್‌ಮೆಂಟ್‌ಗೆ ಎಷ್ಟೊಂದು ಖರ್ಚು...!' ಎಂದು ಸೂಕ್ಷ್ಮವಾಗಿ ಛೇಡಿಸಿದರು. ಗುಂಡೂರಾವ್ ಅಧಿಕಾರದಲ್ಲಿದ್ದಾಗ ನನ್ನ ಮಿತ್ರ ಒಂದಷ್ಟು ಸಹಾಯ ಪಡೆದವನು. 'ಸಾರಿ ಸರ್. ಗೊತ್ತಾಗಲಿಲ್ಲ ಮತ್ತೆ ಬಂದು ನೋಡ್ತೀನಿ' ಎಂದ.

ವಾರದ ನಂತರ ಭೇಟಿಯಾದ ಮಿತ್ರನನ್ನು ಕುತೂಹಲದಿಂದ ವಿಚಾರಿಸಿದೆ. ತಮ್ಮ ಅಸೋಸಿಯೇಷನ್ ಸದಸ್ಯರನ್ನು ಭೇಟಿಯಾಗಿ, ಸಂಜೆಯೊಳಗೆ ಹೇಗೋ ಒಂದು ಲಕ್ಷ ಸಂಗ್ರಹಿಸಿದನಂತೆ. ಗುಂಡೂರಾವ್‌ಗೆ ಅದನ್ನು ತಲುಪಿಸಿದಾಗ 'ಥ್ಯಾಂಕ್ಸ್' ಅಂದರಂತೆ.

ಗುಂಡೂರಾವ್ ಅಧಿಕಾರದಲ್ಲಿದ್ದಾಗ ಕೋಟಿ ಕೋಟಿ ಲೂಟಿ ಮಾಡಿದರೆಂದೇ ಪ್ರಚಾರವಾಗಿತ್ತು. ಅಂದಮೇಲೆ ಏನಾಯ್ತು ಅದೆಲ್ಲ! ಮಧ್ಯೆ ಒಮ್ಮೆ ಕಾಂಗ್ರೆ ಬಿಟ್ಟು ಪ್ರಣಬ್ ಮುಖರ್ಜಿಯ ಕಾಂಗ್ರೆಸ್ ಸೇರಿ, ಚುನಾವಣೆ ಎದುರಿಸಿ, ನಾಲಾಯಕ್ ಜನರನ್ನೆಲ್ಲ ಅಭ್ಯರ್ಥಿಗಳನ್ನಾಗಿಸಿ ಒಂದಷ್ಟು ಕಳೆದಿರಬಹುದು. ಬಿಸಿನೆಸ್‌ನಲ್ಲಿ ತೊಡಗಿಸಿ ಹಣ ರೊಟೇಷನ್‌ನಲ್ಲಿಡಲು ಫಿರೋಜ್ ಖಾನ್, ಸಂಜಯ ಖಾನ್ ಮುಂತಾದವರ ಮೂಲಕ ಮುಂಬಯಿ ಚಿತ್ರರಂಗದಲ್ಲಿ ಹೂಡಲು ಕೊಟ್ಟ ಹಣ ಕೊನೆಗೂ ವಾಪಸು ಬರಲಿಲ್ಲವಂತೆ.

ಇದರ ಸೂಕ್ಷ್ಮ ಸಿಕ್ಕಿದ್ದು ಲಂಡನ್‌ನಿಂದ ಗುಂಡೂರಾವ್ ಅವರ ಪ್ರಾರ್ಥಿವ ಶರೀರ ಬರುತ್ತದೆಂದು ವಿಮಾನ ನಿಲ್ದಾಣದಲ್ಲಿ ಕಾಯುತ್ತ ನಿಂತಿದ್ದಾಗ, ಲಕ್ಷಾಂತರ ಜನ ಕಾಯುತ್ತಿದ್ದ ಅಲ್ಲಿ ಖಾನ್ ಸಹೋದರರರಲ್ಲಿ ಒಬ್ಬರೂ ಇರಲಿಲ್ಲ. ಬದಲಿಗೆ ಅವರ ದೂರದ ಕಸಿನ್ ಒಬ್ಬ ಕಾಣಿಸಿಕೊಂಡಿದ್ದ. ಗುಂಡೂರಾಯರ ಪ್ರೆಸ್ ಸೆಕ್ರೆಟರಿ ಆಗಿದ್ದ ಜಿ.ಎನ್.ಹೆಗ್ಡೆ (ಮೊದಲು ಅವರು ಯುಎನ್‌ಐ ಸುದ್ದಿ ಸಂಸ್ಥೆಯಲ್ಲಿ ಇದ್ದವರು) ಬಿಕ್ಕಿ ಅಳುತ್ತಾ, ಖಾನ್ ಸಹೋದರರ ಕಸಿನ್ ಕಡೆ ತೋರಿಸುತ್ತಾ ಹೇಳಿದರು.

''ಕಾಯಿಲೆ. ಟ್ರೀಟ್‌ಮೆಂಟ್‌ಗೆ ದುಡ್ಡು ಬೇಕು ಅಂದಾಗ ಕೈ ಕೈ ಹಿಸುಕಿಕೊಳ್ಳುತ್ತಾ ಎಲ್ಲಾ ಪ್ರೊಡಕ್ಷನ್‌ನಲ್ಲಿ ಬ್ಲಾಕ್ ಆಗಿದೆ ಅಂದಿದ್ದರು. ಈಗ ನೋಡಿ. ತೋರಿಸಲು ಮುಖವಿಲ್ಲದೇ ಒಬ್ಬ ಖಾನ್ ಸಹೋದರನೂ ಬಂದಿಲ್ಲ. ಯಾವುದೋ ದೂರದ ಸಂಬಂಧೀನ ಕಳಿಸಿದಾರೆ....''

ಗುಂಡೂರಾಯರ ಮಕ್ಕಳೇನೂ ಹೊಟ್ಟೆಗಿಲ್ಲದೇ ಇಲ್ಲ. ಹಾಗಂತ ಭಾರೀ ಶ್ರೀಮಂತಿಕೇನೂ ಇಲ್ಲ. ಇವರ ಕುಟುಂಬದ ಕೆಲ ಸದಸ್ಯರು ಶ್ರೀಮಂತಿಕೆ, ಆಡಂಬರದ ಆಸೆಗೆ ಪರಾವಲಂಬಿಯಾಗಿದ್ದಾರೆ ಎಂಬ ಮಾತು ಈಗ ಕೇಳಿಬರುತ್ತಾ ಇದೆ.

ರಾಜೀವ್ ಹತ್ಯೆ ನಡೆದ ದಿನ, ಚುನಾವಣಾ ಪ್ರಚಾರದಲ್ಲಿದ್ದ ಬಂಗಾರಪ್ಪ ನಡುರಾತ್ರಿ ಹೊತ್ತಿಗೆ ಬಾದಾಮಿಯ ಗೆಸ್ಟ್ ಹೌಸಿಗೆ ಬಂದರು. ಲೋಕಲ್ ನಾಯಕರು 'ರೊಕ್ಕಾ... ರೀ...'' ಎನ್ನುತ್ತಾ ಕೈಕೈ ಹೊಸಕಿಕೊಂಡು ಕೇಳಿದಾಗ, ಮೊದಲೇ ಬಳಲಿದ್ದರಿಂದಲೋ, ಇನ್ನೇನು ಟೆನ್ಷನ್‌ನಲ್ಲೋ, ಕಿರುಚಾಡಿಬಿಟ್ಟರು.

'ರೊಕ್ಕಾ! ರೊಕ್ಕಾ! ಎಲ್ಲಿಂದ ತರಲಿ ರೊಕ್ಕಾ? ನಿಮ್ಮಿಂದ ಸ್ವಲ್ಪಾನೂ ಅಡ್ಜಸ್ಟ್ ಮಾಡೋಕ್ಕಾಗೋಲ್ವೇನ್ರೀ?'' ಎಂದು ರೇಗುತ್ತಾ ತಂದಿದ್ದ ರೊಕ್ಕದ ಸೂಟ್‌ಕೇಸ್ ಬೀಸಿ ಎಸೆದಿದ್ದರು.

ಇದೇ ರೀತಿ ಡೈಲಾಗು ಅವರು ಆಗಿನ ಪ್ರಧಾನಿ ನರಸಿಂಹರಾವ್ ಸಮ್ಮುಖದಲ್ಲೇ ಹೇಳಲಾಗದಿದ್ದರೂ, ಅವರ ಆಪ್ತವಲಯದ ನವಲ್‌ಕಿಶೋರ್ ಶರ್ಮಾ, ಸೀತಾರಾಂ ಕೇಸರಿ ಮುಂದೆ ಹೇಳಬೇಕಾಯಿತು. ಇದಕ್ಕೆ ಸಾಕ್ಷಿ ಈಗ ಬೆಂಗಳೂರು ಪೋಲೀಸ್ ಕಮಿಷನರ್ ಆಗಿರುವ ಟಿ. ಮಡಿಯಾಳ್. ಆಗ ಅವರು ರಾಜ್ಯದ ಇಂಟೆಲಿಜೆನ್ಸ್ ಚೀಫ್. ಆ ಕಾರಣಕ್ಕೇ ಬಂಗಾರಪ್ಪ ಜೊತೆ ದೆಹಲಿಗೆ ಹೋಗಿದ್ದರು. ಸಾಕ್ಷಿ ಇರಲಿ ಎಂದೋ ಏನೋ, ಬಂಗಾರಪ್ಪ ಮಡಿಯಾಳ್ ಎದುರೇ ಕೂಗಾಡಿದ್ದರು. ಅವತ್ತಿನ ಅವರ ಕಿರುಚಾಟ ಟಾಪ್‌ಕ್ಲಾಸ್ ಎಂದು ಖುದ್ದು ಮಡಿಯಾಳ್ ಅವರೇ ಕೆಲವು ಆಪ್ತ ಪತ್ರಕರ್ತರೆದುರು ಹೇಳುತ್ತಾ

ಕಾಣೆಯಾದವನು

ಮುಂಬಯಿ ಮಂತ್ರಾಲಯದಲ್ಲಿ ಕ್ಯೂ ಬಿಟ್ಟು ಮೊದಲು ಲಿಫ್ಟ್ ಏರಲು ಯತ್ನಿಸಿದ ಮಂತ್ರಿಯೊಬ್ಬರು ಉಗಿಸಿಕೊಂಡು ಸರತಿ ಸಾಲಲ್ಲಿ ಬಂದು ನಿಂತರು. ಮಂತ್ರಿಗಳ ಅಂಗರಕ್ಷಕರನ್ನೂ ಮುಂದೆ ನಿಂತಿದ್ದಾತ ಕೇರ್ ಮಾಡಲಿಲ್ಲ. ಜನಸಾಮಾನ್ಯರಂತೆ ಸಾಲಲ್ಲಿ ನಿಂತು ಲಿಫ್ಟ್ ಏರಿದ ಮಂತ್ರಿಗಳು, ತಮ್ಮನ್ನು ಸಾಲಿಗೆ ಸೇರಿಸಿದವನನ್ನು 'ಎಲ್ಲಿ ಕೆಲಸ ಮಾಡುತ್ತಾ ಇರುವುದು?' ಎಂದು ವಿಚಾರಿಸಿಕೊಂಡರು. 'ಇಲ್ಲಿ. ಇದೇ ಮಂತ್ರಾಲಯದಲ್ಲಿ' ಎಂದು ಮುಖ ಮುರಿದಂತೆ ಆತ ಉತ್ತರಿಸಿದ.

ಆಗಿಂದಲೂ ಆತನನ್ನು ಪತ್ತೆ ಹಚ್ಚಿ, ಪ್ರತೀಕಾರ ತೀರಿಸಿಕೊಳ್ಳಲು ಮಂತ್ರಿ ಯತ್ನಿಸುತ್ತಿದ್ದಾರೆ. ಆದರೆ ಮಂತ್ರಿಗಳನ್ನು ದಬಾಯಿಸಿ ಅಟ್ಟಿದ ವ್ಯಕ್ತಿ ಇನ್ನೂ ಸಿಕ್ಕಿಲ್ಲ.

ಸರ್ಟಿಫಿಕೇಟ್ ನೀಡಿದ್ದರು.

ಕರಪ್ಷನ್ ಆರೋಪದ ಮೇಲೆ ಬಂಗಾರಪ್ಪ ರಾಜೀನಾಮೆ ನೀಡಬೇಕೆಂದು ಹೈಕಮ್ಯಾಂಡ್. ಬೇರೆ ಯಾವ ಕಾರಣದ ಮೇಲಾದರೂ ಸರಿ ರಾಜೀನಾಮೆ ಕೊಡೋಕ್ಕೆ ಸಿದ್ಧ, ಕರಪ್ಷನ್ ಆರೋಪದ ಮೇಲೆ ಅಲ್ಲ ಎಂದು ಬಂಗಾರಪ್ಪ ಹಟ.

'ರಾಜೀನಾಮೆ ನೀಡಿ. ಆಮೇಲೆ ನರಸಿಂಹರಾಯರ ಭೇಟಿ' ಎಂದು ಶರ್ಮಾ, ಕೇಸರಿಗಳ ಸೂಚನೆ. ಹಾಗೇ ಹೇಳಿದಾರೆ ಎಂಬ ವಗ್ಗರಣೆ ಬೇರೆ. ಇದೇ ಕಟ್ಟಕಡೆಯ ಭೇಟಿ ಎಂಬುದು ಬಂಗಾರಪ್ಪನವರಿಗೂ ಗೊತ್ತು. ಹಾಗಾಗೇ ಉರಿದುಬಿದ್ದರಂತೆ.

''ನಿಮ್ಮ ರಾಯರ ಮಕ್ಕಳು ಬೆಂಗಳೂರಿಗೆ ಬಂದಬಂದಾಗೆಲ್ಲ ಬಾಚಿಕೊಂಡು ಹೋದರಲ್ಲ! ಎಲ್ಲಿಂದ ತರಲಿ ಹಣ? ತಮಿಳ್ನಾಡಲ್ಲಿ ಜಯಲಲಿತ ಚುನಾವಣೆ ಎದುರಿಸಿದಾಗ ಇಷ್ಟಷ್ಟು ಕೋಟಿ ಕೊಡಿ ಅಂತ ನಿಮ್ಮ ರಾಯರು ಫೋನಲ್ಲೇ ಹೇಳಿದರಲ್ಲ! ಎಲ್ಲಿಂದ ತರಲಿ ಹಣ! ಆ ಮುದುಕ ಜೈಲ್‌ಸಿಂಗ್ ಬೆಂಗಳೂರಿಗೆ ಬಂದು ಬಾಗಿಲು ತಟ್ಟಿ, ತೀರಾ ಕಷ್ಟದಲ್ಲಿದೀನಿ ಅಂದಾಗ ಸೂಟ್‌ಕೇಸ್‌ಗಟ್ಟಲೆ ಕೊಟ್ಟೆನಲ್ಲ! ಎಲ್ಲಿಂದ ತರಲಿ ಹಣ?''

ರಜನೀಕಾಂತ್ ಶೈಲಿಯಲ್ಲಿ ಎರಡೂ ಕೈ ತಟ್ಟುತ್ತಾ,

''ಭಪಾನಾ ಹೈ ಕ್ಯಾ? ನನ್ನಿಂದ ಇಷ್ಟೊಂದು ತಿಂದು ಇವತ್ತು ಲಂಚದ ಆರೋಪದ ಮೇಲೆ ರಾಜೀನಾಮೆ ಕೊಡಿ ಅಂತೀರಲ್ಲ! ಇದು ನ್ಯಾಯವಾ?'' ಎಂದು ಬಹಳ ಹೊತ್ತು ಚೀರಾಡಿ, ಪ್ರಧಾನಿ ನರಸಿಂಹರಾಯರನ್ನೂ ಭೇಟಿ ಆಗದೇ ಬೆಂಗಳೂರಿಗೆ ಹಿಂತಿರುಗಿ ಬಂದು ಇಲ್ಲಿ ರಾಜೀನಾಮೆ ನೀಡಿದರು.

ಇವರ ಕಾಲ ಚೆನ್ನಾಗಿದ್ದಾಗ ಚೆನ್ನಾಗಿಯೇ ನಡೆಯುತ್ತಿದ್ದ ಆಕಾಶ್ ಆಡಿಯೋ, ಮುಂದೆ ಜನುಮದ ಜೋಡಿ ಚಿತ್ರದ 'ಕೋಲು ಮಂಡೆ ಜಂಗಮ ದೇವ' ಹಾಡಿಂದ ಚೇತರಿಸಿಕೊಳ್ಳಬೇಕಾಯಿತು. ಒಂದು ಕಾಲಕ್ಕೆ ಸಾಲ ಮರುಪಾವತಿ ಸಕಾಲಕ್ಕೆ ಆಗಿರಲಿಲ್ಲ ಎಂದು ಆಕಾಶ್ ಆಡಿಯೋದ ವ್ಯಾನು, ಕಾರುಗಳನ್ನು ಸಿಟಿಬ್ಯಾಂಕ್ ಮುಂತಾದ ಸಾಲ ನೀಡಿದ್ದ ಸಂಸ್ಥೆಗಳು ಎತ್ತಿಕೊಂಡು ಹೋಗಿದ್ದವು.

ಬಂಗಾರಪ್ಪನವರ ಬಳಿ ಆಸ್ತಿ ಇದೆ. ಆದರೆ ಹಣ ಕರಗಿದಂತೆ ಕಾಣುತ್ತಿದೆ. ಕೆಸಿಪಿ ಯಂತಹ ಪಕ್ಷ ಕಟ್ಟಿ ಕೊಂಚ ಹಣ ಕಳೆದರೆ, ಇನ್‌ವೆಸ್ಟ್ ಮಾಡಿದ್ದ ಯಾವ ಪ್ರಾಜೆಕ್ಟೂ ಸರಿಯಾಗಿ ನಡೆಯದೇ ಮಸಕಾಗಿವೆ. ಬಂಗಾರಪ್ಪ ಮತ್ತೆ ಎಂಪಿಯಾಗಿದ್ದಾರೆ ನಿಜ. ಆದರೆ ಆರ್ಥಿಕವಾಗಿ ಸೋತು ಸುಣ್ಣವಾಗಿದ್ದಾರೆ.

ದೇವರಾಜ್ ಅರಸ್ ಪಾಡೂ ಹೀಗೇ ಇತ್ತು. ಮಾಡಿದ್ದ ಹಣವೆಲ್ಲ ಎಲ್ಲೋ ಹೋಯಿತು. ದುಡ್ಡು ಮಾಡಿದ ಹಾಗೇ ಕಳೆದಿದ್ದರೂ ಕೂಡ ಅವರಿಗೆ ಕೀರ್ತಿ ತಂದಿತ್ತ ಭೂಸುಧಾರಣೆ ಕಾಯಿದೆಯಿಂದಾಗಿ ಇದ್ದ ಸ್ವಲ್ಪ ಜಮೀನೂ ಕೈ ಬಿಟ್ಟು ಹೋಗಿತ್ತು. ಹಣದ ಏರುಪೇರಿನ ವಿಚಾರ ಅರಸರಿಗೆ ಗೊತ್ತಿತ್ತು ಅಂತ ಕಾಣುತ್ತೆ. ಹಾಗಾಗಿಯೇ ಲಿಕ್ಕರ್ ಉದ್ಯಮಿ ಒಬ್ಬರ ಬಳಿ ''ಅಧಿಕಾರ ಇದ್ದಾಗ ಯಾರು ಬೇಕಾದರೂ ಕೇಳಿದ್ದು, ಕೇಳಿದಷ್ಟು ಕೊಡುತ್ತಾರೆ. ಆಮೇಲೆ ಹೇಗೋ! ನೀನು ನನಗೊಂದು ಮಾತುಕೊಡು. ನಾನಿಲ್ಲದಾಗ ನನ್ನ ಕುಟುಂಬ ನೋಡಿಕೋ'' ಎಂದಿದ್ದರು.

ಅದಕ್ಕೆ ಆ ಉದ್ಯಮಿ ಒಪ್ಪಿದ್ದರು ಕೂಡ.

ಅರಸು ತೀರಿಕೊಂಡ ಮೇಲೆ ಅವರ ಪತ್ನಿ ಚಿಕ್ಕಮ್ಮಣ್ಣಿ ಬಳಿ ಸ್ವಲ್ಪ ಹಣ ಇತ್ತು. ಇದು ಆಪ್ತರು ಹೇಳುವ ಮಾತು. ಆಮೇಲೆ ಅವರದು ಪಡಬಾರದ ಪಾಡು. ಇದ್ದ ಹಣ ಕಾಯುವ ಕೆಲಸ. ಹಣವಿದ್ದ ರೂಮಿಂದ ಅವರು ಈಚೆಗೇ ಬರುತ್ತಾ ಇರಲಿಲ್ಲ. ಮಗಳು, ದತ್ತು ಅಳಿಯ ಬಹಿರಂಗವಾಗಿಯೇ ಈ ಹಣದ ಮೇಲೆ ಹಕ್ಕು ಸಾಧಿಸಲು ಯತ್ನಿಸುತ್ತಾ ಇದ್ದರು. ಅಡುಗೆಯವರನ್ನು ಕಂಡರೆ, ಆಳುಗಳನ್ನು ಕಂಡರೆ ಆಕೆಗೆ ಸಂಶಯ.

ಯಾರಾದರೂ ಬಂದರೆ ರೂಮಿನ ಬೀಗ ಹಾಕಿಕೊಂಡೇ ಬಂದು ಮಾತಾಡಿ, ಮತ್ತೆ ಬೀಗ ತೆಗೆದು ಕೋಣೆ ಸೇರುತ್ತಾ ಇದ್ದರು. ಕಡೆಗೂ ಆ ಹಣವನ್ನು ಕೊನೆಯ ಮಗಳು ಭಾರತಿ ಅವರ ಮನೆ ಸೇರಿಸಿದ ಮೇಲೆ ಅವರು ನಿರಾಳವಾಗಿದ್ದು ಎಂದು ಕಂಡ ಜನ ಹೇಳುತ್ತಾರೆ.

ಅಂದ ಹಾಗೆ ಭಾರತಿ ಅವರೂ ಲೋಕಶಕ್ತಿ ಅಭ್ಯರ್ಥಿಯಾಗಿ ಸೋಲು ಅನುಭವಿಸಿದ್ದಾರೆ. ಹಣ ಎಷ್ಟು ಖರ್ಚಾಯಿತೋ ತಿಳಿಯದು. ಈಗಲೂ, ಅರಸು ಅವರಿಗೆ ಮಾತು ಕೊಟ್ಟಿದ್ದ ಲಿಕ್ಕರ್ ಉದ್ಯಮಿಯ ಮನೆಗೆ ಪ್ರತಿ ತಿಂಗಳೂ ಹೋಗಿ ಹಣ ಪಡೆದು ಹೋಗುವ ಅರಸು ಕುಟುಂಬದ ಪ್ರತಿನಿಧಿ ಭಾರತಿ ಅವರೇ!

■ ರಾಜು

ಕನಸು-ನನಸಾಗಲಿಲ್ಲ

ಸ್ವತಂತ್ರ ಭಾರತದ ಮಹಾದಂಡನಾಯಕನ ಪದವಿಯನ್ನು ಸ್ವೀಕರಿಸಿದ ನಂತರ ಫೀಲ್ಡ್ ಮಾರ್ಷಲ್ ಜನರಲ್ ಕಾರಿಯಪ್ಪನವರು ಮಹಾತ್ಮಗಾಂಧಿಯವರನ್ನು ಭೇಟಿಯಾಗಿ ಅವರ ಆಶೀರ್ವಾದಕ್ಕಾಗಿ ಪ್ರಣಾಮವನ್ನು ಸಲ್ಲಿಸಿದರು. ಆದರೆ ಜನರಲ್ ಕಾರಿಯಪ್ಪನವರಿಗೆ ಗಾಂಧೀಜಿಯವರ ಅಹಿಂಸಾವಾದದ ಮೇಲೆ ನಂಬಿಕೆ ಇರಲಿಲ್ಲ. ಒಂದು ಸಂದರ್ಭದಲ್ಲಿ ಅವರು ಬಾಪೂಜಿಯವರ ಅಹಿಂಸಾವಾದವನ್ನು ಖಂಡಿಸಿದಾಗ ಅದಕ್ಕೆ ಸಮಾಧಾನಪೂರ್ವಕವಾದ ಉತ್ತರವನ್ನು ಗಾಂಧೀಜಿಯವರು 'ಹರಿಜನ' ಪತ್ರಿಕೆಯಲ್ಲಿ ಬರೆದಿದ್ದರು.

ಜ.ಕಾರಿಯಪ್ಪನವರು ಗಾಂಧೀಜಿಯವರನ್ನು ಭೇಟಿಯಾದ ದಿನದಂದು ಮಹಾತ್ಮರಿಗೆ ಮೌನವ್ರತ ಪಾಲಿಸುವ ದಿನವಾಗಿತ್ತು. ಹೀಗಾಗಿ ಗಾಂಧೀಜಿ ಒಂದು ಕಾಗದದ ಮೇಲೆ ''ಹರಿಜನ''ದಲ್ಲಿ ನಾನು ಬರೆದಿದ್ದುದನ್ನು ನೀವು ಓದಿದಿರಾ?'' ಎಂದು ಬರೆದು ಕೇಳಿದರು.

ಅದನ್ನು ಓದಿಕೊಂಡ ಭಾರತದ ಮಹಾದಂಡನಾಯಕ ಕಾರಿಯಪ್ಪನವರು ನಗುತ್ತಾ ''ನನ್ನಂಥವರು ಆಡಿದ ಮಾತಿಗೆ ನೀವು ಅಷ್ಟೊಂದು ಮಹತ್ವ ನೀಡಿದುದನ್ನು ನೋಡಿದರೆ ನನಗೆ ತುಂಬಾ ಹೆಮ್ಮೆ ಎನಿಸುತ್ತದೆ! ಒಂದು ಮಾತಂತೂ ನಿಜ ಬಾಪೂಜೀ! ಸೈನಿಕನಾದವನು ಯಾವಾಗಲೂ ಯುದ್ಧವನ್ನೇ ಬಯಸುತ್ತಾನೆ. ರಾಜಕೀಯ ಸಮಸ್ಯೆಗಳಿಗೆ ಯುದ್ಧ ಪರಿಹಾರ ಮಾರ್ಗವನ್ನು ನೀಡಲಾರದೆಂದು ನಮಗೂ ಗೊತ್ತು. ಇದು ನಮಗೆ ಚರಿತ್ರೆ ಹೇಳಿಕೊಟ್ಟ ಪಾಠ. ಯುದ್ಧಗಳಿಗೆ ಸಂಬಂಧಿಸಿದ ಬಾಧ್ಯತೆ ಏನಿದ್ದರೂ ಪ್ರಭುತ್ವಗಳಿಗೆ ಸೇರಿದುದು. ನೀವು ಹೇಳುವ ಮಾನವ ಪ್ರೇಮ-ನಿಸ್ವಾರ್ಥಸೇವೆ-ಕ್ರಮಶಿಕ್ಷಣ-ದೇವರಲ್ಲಿ ನಂಬಿಕೆ-ಇವುಗಳನ್ನು ನಮ್ಮ ಸೈನಿಕರು ಕೂಡ ಪಾಲಿಸುತ್ತಾರೆ. ಆದರೆ ನಾನು ನಮ್ಮ ಯೋಧರಿಗೆ ಅಹಿಂಸಾತತ್ವವನ್ನು ಬೋಧಿಸಿದರೆ ಅದರಿಂದ ನನ್ನ ವಿದ್ಯುಕ್ತ ಧರ್ಮಕ್ಕೆ ವಿರೋಧವಾಗಿ ನಡೆದುಕೊಂಡಂತಾಗುತ್ತದೆ. ಆದುದರಿಂದ ಬಾಪೂಜಿ! ನೀವು ನನಗೆ ಒಂದು ಬಾಲ ವಿಜ್ಞಾನ ಮಾರ್ಗದರ್ಶಿ (Child's guide Knowledge) ಯನ್ನು ಅನುಗ್ರಹಿಸಿರಿ. ಸ್ವತಂತ್ರ ಭಾರತದಲ್ಲಿ ನಮ್ಮ ಸೈನಿಕರು ಹೇಗೆ ನಡೆದುಕೊಳ್ಳಬೇಕು-ಎಂಬುದನ್ನು ತಿಳಿಸಲು ತಮ್ಮನ್ನು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇನೆ'' ಎಂದು ವಿನಂತಿಸಿದರು.

ಈ ಭೇಟಿ ನಡೆದ ಕೆಲವು ದಿನಗಳ ನಂತರ ಗಾಂಧೀಜಿ ಜನರಲ್ ಕಾರಿಯಪ್ಪನವರಿಗೆ-ತಮ್ಮನ್ನು ಭೇಟಿಯಾಗಲು ತಿಳಿಸಿದರು. ಆಗ ಕಾರಿಯಪ್ಪನವರು ತುರ್ತಾಗಿ ಕಾಶ್ಮೀರಕ್ಕೆ ಭೇಟಿಕೊಡುವ ಕಾರ್ಯಕ್ರಮವಿತ್ತು. ಆ ಭೇಟಿಯ ನಂತರ ತಮ್ಮನ್ನು ಕಾಣುವಂತೆ ತಿಳಿಸಿದರು ಬಾಪು.

ಗಾಂಧೀಜಿಯವರಿಂದ ತಾನು ಬಯಸಿದ 'ಬಾಲವಿಜ್ಞಾನ ಮಾರ್ಗದರ್ಶಿ ಸೂತ್ರಗಳು' ತಮಗೆ ಲಭ್ಯವಾಗುವುದೆಂಬ ಸಂತೋಷದಿಂದ ಅವರ ಭೇಟಿಗಾಗಿ ತುಂಬಾ ಕಾತುರರಾಗಿದ್ದರು ಕಾರಿಯಪ್ಪ.

ಬಾಪೂಜಿಯವರ ಭೇಟಿಗೆ ಬಂದರು ಭಾರತದ ಮಹಾದಂಡಾನಾಯಕ. ಆದರೆ ದುರ್ದೈವದಿಂದಾಗಿ ಅವರು ಬರುವ ವೇಳೆಗೆ ಗಾಂಧೀಜಿಯವರ ಹತ್ಯೆಯಾಗಿ ಹೋಗಿತ್ತು. ಹೀಗಾಗಿ ಭಾರತದ ಮಹಾದಂಡನಾಯಕರಾದ ಫೀಲ್ಡ್ ಮಾರ್ಷಲ್ ಜನರಲ್ ಕಾರಿಯಪ್ಪನವರು ಬಾಪೂಜಿಯವರ ಪಾರ್ಥೀವ ಶರೀರಕ್ಕೆ ಪುಷ್ಪಗುಚ್ಛವನ್ನರ್ಪಿಸಿ ಶ್ರದ್ಧಾಂಜಲಿ ನಿವೇದಿಸುವಂತಾಯಿತು. ಅವರ ಬಯಕೆ ತೀರದ ಬಯಕೆಯಾಗಿಯೇ ಉಳಿದು ಹೋಯಿತು. ಅವರ ಕನಸು ನನಸಾಗಲೇ ಇಲ್ಲ.

■ ಎಂ.ವಿ. ವೆಂಕಟಸುಬ್ಬರಾವ್

ಟರ್ನಿಂಗ್ ಪಾಯಿಂಟ್

ಸರಸ ಕತೆ

ಗಂಡ-ಮದುವೆ-ನಂತರದ ರಾತ್ರಿಗಳ ಬಗ್ಗೆ ಅದ್ಭುತವಾದ ಲೋಕವನ್ನೇ ಸುಜಿಗೆ ಹೇಳಿಬಿಟ್ಟಿದ್ದರು. ಅನ್ಯಮನಸ್ಕಳಾಗಿ ಕೇಳಿಸಿಕೊಳ್ಳುವಂತೆ ನಟಿಸುತ್ತಿದ್ದ ಸುಜಿ ಆದಿನಗಳಿಗೆ.... ಆ ಥ್ರಿಲ್‌ಗೆ ನಿಜವಾಗಿಯೂ ಆಸೆಯಿಂದ ಕಾಯುತ್ತಿದ್ದಳು. ನೆನಪಿಸಿಕೊಂಡಷ್ಟೂ ಮೈಬಿಸಿ ಏರುತ್ತಿತ್ತು.



■ ಮಣಿಚಂದನ

ಸುಜಿ ಟಿ.ವಿ. ಆಫ್ ಮಾಡಿ ಸೋಫಾದಲ್ಲಿ ಕೂತಳು. ಅಡುಗೆ ಮನೆಯಿಂದ ಕೆಲಸದ ಹುಡುಗಿ ಪಾತ್ರೆ ಉಜ್ಜುವ ಸದ್ದು - ಟೀಪಾಯ್ ಮೇಲಿಂದ ಪೇಪರ್ ಎತ್ತಿಕೊಂಡಳು. ಓದಬೇಕೆಂದುಕೊಂಡರೂ ಒಂದಕ್ಷರ ಕೂಡಾ ಓದಲಾಗಲಿಲ್ಲ. ಸುಮ್ಮನೇ ಪುಟ ತಿರುವತೊಡಗಿದಳು.... ಪೇಪರ್ ಮಡಚಿ ಮತ್ತೇ ಟೀಪಾಯ್ ಮೇಲಿಟ್ಟಳು. ಾಯ್ ಮೇಲೆ ಮೋಹನ್ ಅವಸರದಲ್ಲಿ ಅರ್ಧ ಕುಡಿದು ಬಿಟ್ಟಿದ್ದ ಚಹಾ.ಯಾವಾಗಲೋ ಅದರೊಳಗೆ ಬಿದ್ದು ಸತ್ತು ತೇಲುತ್ತಿದ್ದ ನೊಣ.

ಮೋಹನ್ ಹೊರಟು ಆಗಲೇ ಅರ್ಧಗಂಟೆಯಾಗ್ತಾ ಬಂತು. ಮತ್ತೆ ಮನೆ ಸೇರೋದು ಯಾವಾಗೋ! ನಡುರಾತ್ರಿಯೋ ಆಗಿರುತ್ತದೆ. ಮೋಹನ್ ಬೊಮ್ಮಸಂದ್ರ ಇಂಡಸ್ಟ್ರಿಯಲ್ ಏರಿಯಾದ ಖಾಸಗಿ ಕಂಪೆನಿಯೊಂದರಲ್ಲಿ ಮೆಕ್ಯಾನಿಕಲ್ ವಿಭಾಗದ ಮೆಂಟೆನೆನ್ಸ್ ಇಂಜಿನಿಯರ್ - ಕಂಪೆನಿ ಬಸ್ ಪ್ರತಿದಿನ ಮನೆಗೆ ಪಿಕಪ್‌ಗೆ ಬರುತ್ತದೆ. ಮೂವತ್ತೆರಡರ ಮೋಹನ್ ಯಾವುದೇ ದುಶ್ಚಟಗಳಿಲ್ಲದ 'ಕಾಯಕವೇ ಕೈಲಾಸ'ವೆಂದು ನಂಬಿರುವ ಮನುಷ್ಯ. ಫ್ಯಾಕ್ಟರಿ ಸೇರಿ ಎರಡೇ ವರ್ಷಗಳಲ್ಲಿ ಎಲ್ಲರಿಗೂ ಬೇಕಾದ ವ್ಯಕ್ತಿಯಾಗಿದ್ದಾನೆ. ಮೂಲತಃ ಮಂಗಳೂರಿನ ಹುಡುಗ. ಅಪ್ಪ ಅಮ್ಮ ಇಬ್ಬರೂ ಮಂಗಳೂರಲ್ಲೇ ಇರುತ್ತಾರೆ.

ಮೋಹನ್‌ಗೆ ಫ್ಯಾಕ್ಟರಿಯ ಯಂತ್ರಗಳು, ಅವುಗಳ ಸದ್ದು, ಕಾರ್ಯ, ಅವುಗಳೊಂದಿಗೆ ಒಡನಾಟ ಎಲ್ಲವೂ ತುಂಬಾ ಅಪ್ಯಾಯಮಾನ. ಅವುಗಳನ್ನು ಬಿಟ್ಟು ಒಂದು ಕ್ಷಣವೂ ಇರಲಾಗುತ್ತಿರಲಿಲ್ಲ. ಅವುಗಳ ಪಾಲನೆ, ದುರಸ್ತಿ, ಪ್ರತಿಯೊಂದನ್ನು ಖುದ್ದಾಗೇ ಮೋಹನ್ ನೋಡಿಕೊಳ್ಳುತ್ತಿದ್ದ. ಪ್ರತಿ ಯಂತ್ರವನ್ನೂ ಮೈದಡವುತ್ತಿದ್ದ. ಇಡೀ ಫಾಕ್ಟರಿಯ ಪ್ರತಿ ಯಂತ್ರದ ಬಗ್ಗೆ ಆತನ ಬಳಿ ಖಚಿತವಾದ ಮಾಹಿತಿ ಇತ್ತು. ಅವುಗಳ ತಂತ್ರಜ್ಞಾನವನ್ನೆಲ್ಲಾ ನುಂಗಿ ನೀರು ಕುಡಿದಿದ್ದ.

ಕೇವಲ ಮೂರುತಿಂಗಳ ಹಿಂದೆ ಮದುವೆಯಾಗಿದ್ದ ಮೋಹನ್ ಮನೆಯಲ್ಲಿ ತನ್ನ ಸಾಂಗತ್ಯ, ಪ್ರೀತಿಗಳ ಬಗ್ಗೆ ಹೊಸ ಮದುಮಗಳ ಸಹಜತೆಯಿಂದ ಅಗಾಧ ಕನಸುಗಳನ್ನೂ ಕಾಣುತ್ತಿದ್ದ ಸುಜಿಯನ್ನು ಕೂಡಾ ಮರೆಯುವಷ್ಟು ಫ್ಯಾಕ್ಟರಿಯನ್ನು ಹಚ್ಚಿಕೊಂಡು ಬಿಟ್ಟಿದ್ದ. ಬಹಳಷ್ಟು ಜನ ಫ್ಯಾಕ್ಟರಿ ಗೆಳೆಯರ ಪ್ರಕಾರ ಫ್ಯಾಕ್ಟರಿ ಆತನ ಮೊದಲ ಹೆಂಡತಿ... ಸುಜಿ ಎರಡನೆಯ ಹೆಂಡತಿಯೇ ಆಗಿದ್ದರು.

ಸುಜಿಯ ನಿಶ್ಚಿತಾರ್ಥವಾದ ಮಾರನೆಯ ದಿನದಿಂದಲೇ ಆಕೆಯ ಮದುವೆಯಾದ ಗೆಳತಿಯರಾದ ಗಿರಿಜ, ಲಕ್ಷ್ಮಿ, ಅಂಜು ಮತ್ತು ಶೈನ್‌ರೆಲ್ಲಾ ಸೇರಿ 'ಮದುವೆ-ಫಸ್ಟ್‌ನೈಟ್ ಸಕ್ಸಸ್' - ಗಂಡನ ಮುತ್ತು, ಅಪ್ಪುಗೆ, ಉಸಿರಿನ ಬಿಸಿ - ಸ್ವರ್ಗ ಸುಖದ ಬಗ್ಗೆ.... ರೌಂಡ್ಸ್.... ಇನ್ನಿಂಗ್ಸ್.... ಇನ್ನೂ... ಮರುದಿನ ಬಾತ್‌ರೂಂನಲ್ಲಿ ಅಣಕಿಸುವ ಮೈಮೇಲಿನ ನಖಕ್ಷತಗಳ ಬಗ್ಗೆ.... ಗಲ್ಲ.... ತೊಡೆಗಳ ಮೇಲಿನ ದಂತಕ್ಷತಗಳ ಬಗ್ಗೆ ತಾಸುಗಟ್ಟಲೆ ಸಮಯ ಸಿಕ್ಕಾಗೆಲ್ಲಾ ಕೊರೆದಿದ್ದರು.

ಗಂಡ-ಮದುವೆ-ನಂತರದ ರಾತ್ರಿಗಳ ಬಗ್ಗೆ ಅದ್ಭುತವಾದ ಲೋಕವನ್ನೇ ಸುಜಿಗೆ ಹೇಳಿಬಿಟ್ಟಿದ್ದರು. ಅನ್ಯಮನಸ್ಕಳಾಗಿ ಕೇಳಿಸಿಕೊಳ್ಳದವಳಂತೆ ನಟಿಸುತ್ತಿದ್ದ ಸುಜಿ ಆದಿನಗಳಿಗೆ.... ಆ ಥ್ರಿಲ್‌ಗೆ ನಿಜವಾಗಿಯೂ ಆಸೆಯಿಂದ ಕಾಯುತ್ತಿದ್ದಳು. ನೆನಪಿಸಿಕೊಂಡಷ್ಟೂ ಮೈಬಿಸಿ ಏರುತ್ತಿತ್ತು.

ಆದರೆ ಆದದ್ದು.... ಬೇರೆ

ಸರಿಯಾಗಿ ಮೊದಲರಾತ್ರಿ - ಸುಜಿಯ ಇಡೀ ಕನಸುಗಳು ನನಸಾಗುವ ರಾತ್ರಿ.... ಹನ್ನೊಂದು ಗಂಟೆಗೆ ಫಾಕ್ಟರಿಯಿಂದ ಫೋನ್ ಬಂತು - ಬಾಯಲರ್ ಸ್ಟೀಮ್ ಪೈಪ್ ವಾಲ್ವ್‌ನಲ್ಲಿ ಸಮಸ್ಯೆ. ಅಟೆಂಡ್ ಮಾಡಲೇಬೇಕು. ಇಲ್ಲದಿದ್ದರೆ, ತಾನು ಬರೋವರೆಗೂ ಪ್ಲಾಂಟ್ ಶಟ್‌ಡೌನ್ ಆಗಿರುತ್ತದೆ. ಅರ್ಧಗಂಟೆಯಲ್ಲಿ ಮನೆಗೆ ಕಾರು ಬಂತು - ಅಂಗಿ ಏರಿಸಿಕೊಂಡು ಹೊರಟೇಬಿಟ್ಟ. ಕೇವಲ ಮೋಹನ್ ಮಾತ್ರ ಸರಿಪಡಿಸಬಹುದಾಗಿದ್ದ ಯಂತ್ರದ ದೋಷವದು.

ಅಷ್ಟೇ -

ಸುಜಿಯ ಮೊದಲರಾತ್ರಿಯ ಕನಸು ಈ ರೀತಿ ಮುರಿದುಬಿತ್ತು. ಇವತ್ತಿನವರೆಗೆ ಆಕೆಗೆ ಮೋಹನನೊಂದಿಗೆ ಸಾಂಗತ್ಯ ಲಭಿಸಿಲ್ಲ. ಏನೋ ಒಂದು ಅಡ್ಡಿ ಎದುರಾಗುತ್ತಲೇ ಇತ್ತು. ಎಲ್ಲ ರಾತ್ರಿಗಳು ಆಕೆಯ ಮದುವೆ ಮುಂಚಿನ ರಾತ್ರಿಗಳಂತೆ ಕಳೆದು ಹೋದವು. ನಿದ್ದೆ ಬರೋವರೆಗೂ ಪುಸ್ತಕಗಳಿಗೋ, ಟಿ.ವಿಗೋ, ಟೇಪ್‌ಹಾಡಿಗೋ ಮೊರೆ ಹೋಗಬೇಕಾಗಿ ಬಂದಿತ್ತು.

ಈ ನಡುವೆ ಅಚಾನಕ್ಕಾಗಿ ಹೋಗಲೇಬೇಕಾಗಿ ಬಂದ ಮೋಹನ್‌ನ ಎರಡು ತಿಂಗಳ ಕೊಯಮತ್ತೂರ್ ಟ್ರೈನಿಂಗ್! ಅಷ್ಟೂ ದಿನವೂ ಆಕೆ ತವರಿನಲ್ಲೇ ಕಳೆಯಬೇಕಾಗಿ ಬಂತು.

ಹಾಗೆ ನೋಡಿದರೆ ಮೋಹನ್ ತೀರಾ ಫ್ರಿಜಿಡ್ ಅಲ್ಲ... ಆತನೂ ರಸಿಕ. ಅಭಿರುಚಿ ಇದೆ. ಹೆಂಡತಿಯೆಂದರೆ ಪ್ರೀತಿ ಇದೆ. ಮೂಡಿದ್ದರೆ ಬೆಳಿಗ್ಗೆ ತಿಂಡಿ ತಯಾರಿಸುತ್ತಿರಬೇಕಾದರೆ ಸಹಾಯ ಮಾಡ್ತಾನೆ, ಸದ್ದಾಗದೇ ಹಿಂದಿಂದ ಬಂದು ಅಪ್ಪಿಕೊಳ್ತಾನೆ. ಅದೂ ಎಂಥ ಅಪ್ಪುಗೆ.... ಉಡದ ಹಿಡಿತ! ಲೆಕ್ಕವಿಲ್ಲದಷ್ಟು ಮುತ್ತುಗಳು - ಆತನ ದೃಷ್ಟಿಯಲ್ಲಿ ಮುತ್ತೆಂದರೆ 'ಫ್ರೆಂಚ್‌ಕಿಸ್' ಎಂತಲೇ ಅರ್ಥ!!

ವೀಕೆಂಡ್ಸ್ ಅಂತ ಬಿಡುವಿದ್ದಾಗಲೆಲ್ಲಾ ಎಂ.ಜಿ.ರಸ್ತೆ, ಬ್ರಿಗೇಡ್, ಸ್ಯಾಂಕಿ ಕೆರೆಗೆಲ್ಲಾ ಕರೆದೊಯ್ಯುತ್ತಾನೆ. ರೆಕ್ಸ್‌ನಲ್ಲಿ ಆಗಾಗ ಇಂಗ್ಲೀಷ್ ಚಿತ್ರ ತೋರಿಸ್ತಾನೆ. ಸಿನಿಮಾ ಶುರುವಾಗುತ್ತಲೇ ಆತ ಇಡೀ ಮೈಯನ್ನೆಲ್ಲಾ ಬ್ರೆಯಿಲ್ ಲಿಪಿ ಥರ ಓದುವ ಪರಿ. ಸಿನಿಮಾ ಬಿಟ್ಟ ತಕ್ಷಣ ಸೊಂಟಬಳಸಿ ಹೊರಬಂದು ಥಿಯೇಟರ್ ಹೊರಗೆ ಖಾರ ಜಾಸ್ತಿ ಹಚ್ಚಿಸಿಕೊಂಡು ಇಬ್ಬರೂ ಹಸಿ ಮುಸುಕಿನ ಜೋಳದ ತೆನೆ ತಿನ್ನೋದು.

ತನ್ನ ಬದುಕಲ್ಲೂ ಮೋಹನ್ ಬಗ್ಗೆ ಹೇಳಿಕೊಳ್ಳುವಷ್ಟು ಸ್ವೀಟ್ ಮೊಮೆಂಟ್ಸ್ ಇವೆ - ನೆನೆಸಿಕೊಂಡಷ್ಟು ಮೈ ಜುಂ ಎನ್ನುತ್ತದೆ. ಇಷ್ಟೆಲ್ಲಾ ಇದ್ದರೂ ಆತ ಕೆಲಸದ ವಿಷಯದಲ್ಲಿ ತುಂಬಾ ನಿಯತ್ತು. ನಿಗದಿತ ಸಮಯದಲ್ಲಿ ಕೊಟ್ಟ ಕೆಲಸ ಮುಗಿಸುತ್ತಿದ್ದ. ಕೆಲಸವನ್ನೇ ನಂಬಿದವ - ಮೇಂಟೆನೆನ್ಸ್ ವಿಭಾಗವಾದ್ದರಿಂದ ಅವೇಳೆಯಲ್ಲಿ ಕೂಡಾ ಫ್ಯಾಕ್ಟರಿಯಲ್ಲಿರಬೇಕಾಗುತ್ತಿತ್ತು. ಆದರೂ ಮೋಹನ್‌ಗೆ ತನ್ನ 'ಬಿಜಿ' ಬಗ್ಗೆ ಅಸಮಾಧಾನವಿತ್ತು. ಸುಮಾರು ಒಂದು ಲಕ್ಷ ಸಲವಾದರೂ ಸುಜಿಗೆ ಎಲ್ಲಾದರೂ ಸ್ವಲ್ಪ ದಿನ ದೂರ ಹೋಗಿ ಬರೋಣ ಅಂದಿರಬಹುದು.

ಫ್ಯಾಕ್ಟರಿಯಿಂದ ಹನ್ನೆರಡು ಕಿಲೋಮೀಟರ್ ಆಗುತ್ತದೆ ಮನೆಗೆ - ಒಳ್ಳೆ ಶ್ರೀಮಂತ ಬಡಾವಣೆಯಲ್ಲಿದೆ. ಆದರೆ ಕಳೆದ 15 ದಿನಗಳಿಂದ ಮೋಹನ್ ಮಾತ್ರ ದಿನದ ಮುಕ್ಕಾಲು ಭಾಗವನ್ನು ಫ್ಯಾಕ್ಟರಿಯಲ್ಲಿ ಕಳೆಯಬೇಕಾಗಿ ಬಂದಿತ್ತು. ಫ್ಯಾಕ್ಟರಿ ಎಕ್ಸ್‌ಪಾನ್ಶನ್‌ನಲ್ಲಿ ಹೊಸ ಹೊಸ ಯಂತ್ರಗಳ ಕಮಿಶನಿಂಗ್ ಕೆಲಸ ನಡೆಯುತ್ತಿತ್ತು. ಮನೆಯಲ್ಲಿ ಸರಿಯಾಗಿ ನಾಲ್ಕು ತಾಸು ಕಳೆಯಲಾಗದಂತಹ ಪರಿಸ್ಥಿತಿ. ಸ್ವಲ್ಪ ಬಿಡುವು ಸಿಕ್ಕರೂ ಕಂಪೆನಿಯಿಂದಲೋ, ಸ್ನೇಹಿತರಿಂದಲೋ ಫೋನ್. ಮದುವೆಯಾದ ಮೇಲೆ ತಮ್ಮನ್ನು ಮರೆತು ಬಿಟ್ಟಿದಿಯಾಂತ ನಿಷ್ಠುರ ಮಾತುಗಳು. ಮದುವೆಯಾದಾಗಿಂದ ಸರಿಯಾಗಿ ಮೂರು ದಿವಸ ಒಟ್ಟಿಗೆ ಕೂತು ಊಟ ಮಾಡಲಿಲ್ಲ.... ತಿಂಡಿ ತಿನ್ನಲಿಲ್ಲ.... ಮಲಗಲೂ ಇಲ್ಲ ಸುಜಿ ಮತ್ತೊಮ್ಮೆ ಬಿಕ್ಕಳಿಸಿದಳು - ಕಣ್ಣಲ್ಲಿ ತೆಳ್ಳನೆ ನೀರಿನಪೊರೆ.

"ಹೋಗಿ ಬರ್ತೀನಮ್ಮ...." ಕೆಲಸದವಳ ಕೂಗಿಗೆ ವಾಸ್ತವಕ್ಕೆ ಬಂದಳು. "ನಾಳೆ ಒಂದು ತಾಸು ತಡವಾಗಿ ಬರ್ತೀನಮ್ಮಾ...." ಆಕೆ ಹೋಗುತ್ತಾ.... ಅರ್ಥನಗುತ್ತಾ ಹೇಳಿದಳು - ಕೆಲಸದ ಹುಡುಗಿ ಶಕೀಲಳ 'ನಾಳೆ ಲೇಟ'ಗೆ ಕಾರಣವಿತ್ತು. ಆಕೆ ಪ್ರತಿ ಎರಡನೇ ಸೋಮವಾರ ಬೆಳಿಗ್ಗೆ ಒಂದು ತಾಸು ತಡವಾಗಿ ಬರುವುದು ವಾಡಿಕೆ. ಏಕೆಂದರೆ ಶಕೀಲಳ ಗಂಡ ಈ ದಿನ ರಾತ್ರಿ 'ರೂಟಿಂ'ದ ವಾಪಸ್ ಬರ್ತಾನೆ. ಅವನೊಬ್ಬ ಟ್ರಕ್ ಡ್ರೈವರ್. ಬೆಂಗಳೂರಿನ ಗಾರ್ಮೆಂಟ್ ಕಂಪೆನಿಯಿಂದ ಎಕ್ಸ್‌ಪೋರ್ಟ್ ಲೋಡನ್ನು ಮುಂಬೈ, ಗೋವಾ, ಮದ್ರಾಸುಗಳಿಗೆ ಒಯ್ಯುತ್ತಾನೆ. ತಿಂಗಳಲ್ಲಿ 15 ದಿನ 'ರೂಟ್' ಮೇಲಿರ್ತಾನೆ. ಮಿಕ್ಕ 15 ದಿನ ಮನೇಲಿರ್ತಾನೆ. ಮದುವೆಯಾಗಿ ಒಂದು ತಿಂಗಳಾಗಿತ್ತು. ಊರಲ್ಲಿದ್ದಾಗ ಶಕೀಲಳನ್ನು ಬಿಟ್ಟಿರುವುದೇ ಇಲ್ಲ. ನಿದ್ದೆ ಮಾಡಲು ಸಹಿತ ಬಿಡಲ್ಲ ಅಂತ ಗಂಡನ ಬಗ್ಗೆ ಆಗಾಗ ಸುಜಿಗೆ ಸಾಕಷ್ಟು ಹೇಳಿದ್ದಳು.

ಬಾಗಿಲು ಮುಚ್ಚುತ್ತಾ ಹೋಗುತ್ತಿದ್ದ ಶಕೀಲಳನ್ನು ಒಂದು ಕ್ಷಣ ನೋಡಿದಳು ಸುಜಿ. ಹಿಂದಿಂದ ನೋಡಿದರೆ ಅದ್ಭುತವಾದ ಮೈಕಟ್ಟು. ಸ್ವಲ್ಪ ಸ್ಥೂಲಕಾಯವಿದ್ದರೂ! 36-24-38 ಇರಬಹುದೇನೋ... ಗಂಡ ಬಲವಂತ ಪಡಿಸಿದರೆ ಯಾವಾಗಲಾದರೊಮ್ಮೆ ಬಿಯರ್ ಕೂಡಾ ಕುಡಿತಾಳಂತೆ. ಅಪ್ಪುಗೆಯಲ್ಲಿ ಹಿಡಿಸದ ಎದೆ ಉಬ್ಬುಗಳು.... ಮಟ್ಟಸವಾದ ಸೊಂಟ, ಇಡಿ ಫಿಗರ್‌ಗೆ ಹೈಲೈಟ್ ಅನ್ನಿಸುವಂಥ ಸೊಂಟದ ಹಿಂಬದಿಯ ಕೆಳಗಿನ ಭಾಗ.... ಅದಕ್ಕೇ ಇರಬೇಕು ಶಕೀಲಳ ಗಂಡ ನಿಮಿಷ ಕೂಡಾ ಬಿಟ್ಟಿರುವುದಿಲ್ಲ.... ಒಳ್ಳೇ ರಸಿಕನೇ ಇರಬೇಕು. ನಿಟ್ಟುಸಿರಿಟ್ಟಳು ಸುಜಿ.

ಬೋಲ್ಟ್ ಹಾಕಿ ಒಳ ಬಂದು ತಿಂಡಿತಿಂದ ಶಾಸ್ತ್ರ ಮಾಡಿದಳು. ಟಿ.ವಿ. ಕೂಡಾ ನೋಡಬೇಕೆನಿಸಲಿಲ್ಲ. ಸ್ನಾನ ಮಾಡಲು ಕೂಡಾ ಮನಸ್ಸು ಬರಲಿಲ್ಲ. ಮನಸ್ಸಿನ ತುಂಬಾ ಏನೋ ಅತೃಪ್ತಿ.

ಹಾಗೆಯೇ ಬಂದು ಹಾಸಿಗೆ ಮೇಲುರುಳಿದಳು.

....

★

ಸುಜಿಗೆ ಎಚ್ಚರವಾದಾಗ ಸಂಜೆ ನಾಲ್ಕುವರೆಯಾಗಿದೆ. ಕಿಟಕಿಯಿಂದ ಬಿಸಿಲು ಒಳಬಿದ್ದಿತ್ತು. ಹೊಟ್ಟೆ ಬೇರೆ ಚುರುಗುಡುತ್ತಿತ್ತು. ಬಚ್ಚಲಿಗೆ ಹೋಗಿ ಗೀಸರ್ ಆನ್ ಮಾಡಿ ಬಂದಳು. ಫಿಲ್ಟರ್‌ನಲ್ಲಿ ಬೆಳಿಗ್ಗೆ ಹಾಕಿಟ್ಟಿದ್ದ ಡಿಕಾಕ್ಷನ್ ಇತ್ತು. ಕಾಫಿ ಬೆರೆಸಿಕೊಂಡು ಕುಡಿದಳು. ಕೊಂಚ ಸಮಾಧಾನ ಆಯ್ತು. ಹತ್ತು ನಿಮಿಷ ಸೀರಿಯಸ್ ಆಗಿ ಪೇಪರ್ ಓದಿದಳು. ನೀರು ಕಾದಿದ್ದವು. ಸ್ನಾನ ಮಾಡಿ ಬಂದಳು. ಎಷ್ಟೋ ಹಾಯೆನಿಸಿತು. ವಾರ್ಡ್ ರೋಬ್ ತೆಗೆದು ಮೋಹನ್‌ಗೆ ಇಷ್ಟವಾದ, ಆತನೇ ಒಮ್ಮೆ ಕಮರ್ಷಿಯಲ್ ಸ್ಟ್ರೀಟ್‌ನಲ್ಲಿ ಇಷ್ಟಪಟ್ಟು ಕೊಡಿಸಿದ್ದ ತಿಳಿನೀರಳೆ ಬಣ್ಣದ ಸೀರೆ ಅದರೊಂದಿಗೆ ಅದೇ ಬಣ್ಣದ ಲೇಸ್ ವರ್ಕಿನ ಹಾಫ್‌ಸ್ಲೀವ್ ಬ್ಲೌಸ್ ಧರಿಸಿದಳು.

ಒಮ್ಮೆ ಕನ್ನಡಿಯಲ್ಲಿ ನೋಡಿಕೊಂಡಳು.

ಸೀಥ್ರೂ ರವಿಕೆಯೊಳಗಿಂದ ಅಸ್ಪಷ್ಟವಾಗಿ ಕಾಣುತ್ತಿದ್ದ ಕಪ್ಪನೆ ಬ್ರಾ. ಬ್ರಾದಲ್ಲಿ ಸೊಗಸಾಗಿ ಹೊಂದಿಕೊಂಡು ಕೂತ ಸ್ತನದ್ವಯ.... ಎದ್ದು ಕಾಣುವ ಎದೆಸೀಳು... 34-24-36! ಶಕೀಲಳೊಂದಿಗೆ ಹೋಲಿಸಿದರೆ ನಿಜಕ್ಕೂ ತನ್ನದು ಅದ್ಭುತವಾದ ಫಿಗರ್!

ಒಂದಿಷ್ಟು ತಲೆ ಬಾಚಿ - ಮುಖಕ್ಕೆ ತೆಳುವಾಗಿ ಪೌಡರ್ ಲೇಪಿಸಿಕೊಂಡು ಹೊರಬಂದಳು. ಗೇಟಿನ ಹತ್ತಿರ ಪಾತಿಯಲ್ಲಿ ಕೆಂಪು ಗುಲಾಬಿ ಮನಸೆಳೆಯಿತು. ಬಹುಶಃ ಬೆಳಿಗ್ಗೆ ಅರಳಿರಬೇಕು, ಸ್ವಲ್ಪ ಬಾಡಿತ್ತು. ಹೂ ನೋಡುತ್ತಿದ್ದಂತೆ ತಾನು ಚಿಕ್ಕವಳಿದ್ದಾಗ ಓದಿದ್ದ ಆಸ್ಕರ್ ವೈಲ್ಡ್‌ನ ಗುಲಾಬಿ ಪಾಠ ನೆನಪಿಗೆ ಬಂತು.

ಎರಡು ಹೆಜ್ಜೆ ಮುಂದೆ ಹಾಕಿ 'ಮೋಹನ್ ಇವತ್ತಾದರೂ ಬೇಗ ಬಂದರೆ ಚೆನ್ನಾಗಿರುತ್ತದೆ....' ಅಂತ ಯೋಚಿಸುತ್ತಾ ಬೀದಿಯ ಕೊನೆವರೆಗೂ ಕಣ್ಣಾಡಿಸಿದಳು. ಆದರೂ ಈ ಸಮಯದಲ್ಲಿ ಮೋಹನ್ ಹೇಗೆ ತಾನೆ ಬರಲು ಸಾಧ್ಯ. ಕೇವಲ ತನ್ನ ಭ್ರಮೆ ಅಷ್ಟೆ. ನಗು ಬಂತು ಸುಜಿಗೆ. ಥಟ್ಟನೆ ಏನೋ ನೆನಪಿಗೆ ಬಂದವಳಂತೆ ತಲೆ ತಿರುಗಿಸಿ ಕುತೂಹಲದಿಂದ ಎದುರು ಮನೆ ಮಹಡಿ ಕೋಣೆಯಕಡೆ ದೃಷ್ಟಿ ಹಾಯಿಸಿದಳು.

ಅದೇ ದೃಶ್ಯ.

ಪ್ರತಿದಿನ ಒಂದು ಸಲವಾದರೂ ಕಣ್ಣಿಗೆ ಬೀಳೋ ಸೀನ್.

ಆ ಮಹಡಿ ಕೋಣೆಗೆ ಎರಡುವಾರದ ಕೆಳಗೆ ಇಬ್ಬರು ಕಾಲೇಜು ಹುಡುಗರು ಬಾಡಿಗೆಗೆ ಬಂದಿದ್ದರು. ಇನ್ನೂ ಮೀಸೆ ಕೂಡಾ ಮೊಳೆಯದ ಎಳೆ ಹುಡುಗರು. ಪಿ.ಯು.ಸಿ ಎರಡನೇ ವರ್ಷವೋ ಅಥವಾ ಡಿಗ್ರಿ ಮೊದಲ ವರ್ಷ ಓದುವ ಹುಡುಗರಂತೆ ಕಾಣುತ್ತಿದ್ದರು. ಸರಿಯಾಗಿ ನೋಡಿದರೆ, ತನ್ನ ಎರಡನೇ ತಮ್ಮ ಮಿಲಿಂದ್‌ನ ವಯಸ್ಸಿರಬಹುದೇನೋ.

ಸುಜಿಗೆ ಆ ಹುಡುಗರು ಆ ರೂಮಿಗೆ ಬಂದ ಎರಡನೇ ದಿನವೇ ಗೊತ್ತಾಗಿತ್ತು. ಆಮೇಲೆ ನಿಧಾನವಾಗಿ ಅರಿವಿಗೆ ಬರತೊಡಗಿತು. ಆ ಹುಡುಗರಿಬ್ಬರೂ ತನ್ನನ್ನು ತೀವ್ರವಾಗಿ ಗಮನಸೆಳೆಯಲು ಪ್ರಯತ್ನಿಸುತ್ತಿದ್ದಾರೆಂದು. ತಾನು ಮೋಹನ್‌ನ್ನು ನೆನೆಸಿಕೊಂಡು ತಾಸುಗಟ್ಟಲೆ ಗಾರ್ಡನ್‌ನಲ್ಲಿ ನಿಂತಿರೋದನ್ನು, ಇನ್ನೂ... ಎಲ್ಲ ಗಮನಿಸುತ್ತಿದ್ದಾರೆಂದು.

ಸುಜಿ ಹೊರ ಬರುತ್ತಿದ್ದಂತೆ ಹುಡುಗರಿಬ್ಬರೂ ಟೆರೇಸ್ ಮೇಲಿದ್ದರು. ಅವಳ ಕಣ್ಣಿಗೆ ಬೀಳುವಂತೆ. ಶತಾಯ ಗತಾಯ ಸರ್ಕಸ್ ಮಾಡುತ್ತಿದ್ದರು. ಆಗಾಗ ನೋಟ್ಸ್ ಗಟ್ಟಿಯಾಗಿ ಓದುತ್ತಲೋ, ಟ್ರಾನ್ಸಿಸ್ಟರ್ ಹೊರತಂದು ವಾಲ್ಯುಮ್ ಜಾಸ್ತಿ ಮಾಡುತ್ತಲೋ ಕಿವಿಗೆ ವಾಕ್‌ಮನ್ ಏರಿಸಿ ಸಣ್ಣದಾಗಿ ನರ್ತಿಸುತ್ತಲೋ ಇನ್ನೂ ಏನೇನೋ ಗಿಮ್ಮಿಕ್ಸ್ ಪ್ರತಿದಿನ ಮಾಡುತ್ತಲೇ ಇದ್ದರು.

ತನ್ನ ತಮ್ಮನ ಸ್ನೇಹಿತರ ಮಾತುಗಳನ್ನು ಎಂದೋ ಕದ್ದುಕೇಳಿಸಿಕೊಂಡಿದ್ದು ಆಕೆಗೆ ನೆನಪಿಗೆ ಬಂತು. ಈ ರೀತಿಯ ಸುಖವಂಚಿತ ಹೆಂಗಸರಿಗೆ ಹುಡುಗರು ಮುದ್ದಾಗಿ ಯು.ಎಸ್.ಎ ಅಂತ ಕರೆಯುತ್ತಿದ್ದರು. ಆಕೆಗೆ ನಗು ಬಂತು. ತಾನು ಯು.ಎಸ್.ಎ.ನಾ?

ಮೊದಮೊದಲು ಅಷ್ಟಾಗಿ ಗಮನಕ್ಕೆ ಬಂದಿರಲಿಲ್ಲ. ನಂತರ ಆಗಾಗ

ಟೈಮ್‌ಪಾಸ್‌ಗಂತ ಯಾವಾಗಲಾದರೊಮ್ಮೆ ಮಹಡಿರೂಮ್‌ನೆಡೆ ನೋಡತೊಡಗಿದಳು.

ಅಷ್ಟು ಪ್ರತಿಕ್ರಿಯೆ ಸಾಕಾಗಿತ್ತು ಆ ಹುಡುಗಬ್ಬರಿಗೆ. ಬರುಬರುತ್ತಾ ಕಾಲೇಜ್ ಕೂಡಾ ಬಂಕ್ ಮಾಡಿ ಸರತಿಯಂತೆ ರೂಮ್ ಹೊರಗೆ ತಿಣುಕಾಡಲು ಶುರುಮಾಡಿದ್ದರು. ಬಾವಲಿಗಳ ಥರ ಒದ್ದಾಡತೊಡಗಿದ್ದರು. ಇದೆಲ್ಲಾ ಕಳೆದ ವಾರದ ಬೆಳವಣಿಗೆ.

ಇವತ್ತು ಕೂಡಾ ಎರಡನೇ ಹುಡುಗನದು ಅದೇ ಸ್ಥಿತಿ. ತೀಕ್ಷ್ಣವಾಗಿ ಗಮನಿಸಿದಳು. ಕೈಯಲ್ಲಿ ನೆಪಕ್ಕೊಂದು ಇಂಗ್ಲೀಷ್ ಮ್ಯಾಗಝಿನ್. ಆ ಹುಡುಗನ ಅವಸ್ಥೆ ನೋಡಿ ಸುಜಿಗೆ ನಿಜಕ್ಕೂ ನಗು ಬಂತು. ಫಕ್ಕನೆ ನಕ್ಕುಬಿಟ್ಟಳು.

ಸುಜಿ ಏಕ್‌ದಮ್ ನಕ್ಕಿದ್ದು.... ಅದನ್ನು ಕನಸಲೂ ಊಹಿಸದ ಆ ಹುಡುಗ ಮಂಗನಂತಾದ.... ತಕ್ಷಣವೇ ಮುಗುಳ್ನಕ್ಕ.

ಇದೆಲ್ಲಾ ಆಗಲೇ ಗೇಟ್ ತೆಗೆದು ಒಳಬರುತ್ತಿದ್ದ ಮೋಹನ್ ಕಣ್ಣಿಗೆ ಬಿತ್ತು. ಸುಜಿಗೆ ಒಂಥರಾ ಆಯಿತು. ಗಿಲ್ಟಿಯಿಂದ ತಲೆತಗ್ಗಿಸಿ ಮೆಲ್ಲನೆ ಒಳನಡೆದಳು. ಮೋಹನ್ ನಿಶ್ಯಬ್ದವಾಗಿ ಅವಳನ್ನು ಅನುಸರಿಸಿದ.

ಮದುವೆಯಾಗಿ ಮೂರು ತಿಂಗಳ ನಂತರ ಯಾವ ಥ್ರಿಲ್ಲೂ ಕಂಡಿರದ ತನ್ನ ಬದುಕಿಗೆ ಮಹಡಿ ಮನೆ ಹುಡುಗನ ನಗೆ ಬಹುದೊಡ್ಡ ಟರ್ನಿಂಗ್ ಪಾಯಿಂಟ್ ಆಗುತ್ತೇಂತ ಆ ಕ್ಷಣ ಆಕೆ ಊಹಿಸಿರಲೇ ಇಲ್ಲ.

ಸುಜಿಯನ್ನು ಇಡಿಯಾಗಿ ಅರ್ಥ ಮಾಡಿಕೊಂಡಿದ್ದ ಮೋಹನ್ ಕೂಡಾ ಒಳಬಂದು ಒಂದು ಕ್ಷಣ ನಿಬ್ಬೆರಗಾದ. ಅದೇ ಕ್ಷಣ ಅವನಿಗೆ ಜ್ಞಾನೋದಯವಾದಂತಾಯಿತು. ತನ್ನ ತಪ್ಪಿನ ಅರಿವಾಯ್ತು. ಅವನಿಗೆ ಅಲ್ಲಿ ಸುಜಿಯ ತಪ್ಪು ಕಾಣಲೇ ಇಲ್ಲ. ಶುಭ್ರವಾಗಿ ಶೇವ್ ಮಾಡಿಕೊಂಡು ಸ್ನಾನ ಮಾಡಿದ. ಅಡುಗೆಮನೆಯಲ್ಲಿ ಚಹ ಬೆರೆಸುತ್ತಿದ್ದ ಸುಜಿಯನ್ನು ಮೆತ್ತಗೆ ಹಿಂದಿನಿಂದಲೇ ಗಟ್ಟಿಯಾಗಿ ಅಪ್ಪಿಕೊಂಡ.

ಮೂಳೆ ಮುರಿದು ಹೋದವೇನೋ ಅನಿಸಿತು ಸುಜಿಗೆ. ಹಾಗೆಯೇ ಎತ್ತಿಕೊಂಡು ಕೆಂಪನೆ ತುಟಿಗಳಿಗೆ ಗಾಢವಾಗಿ ಚುಂಬಿಸಿದ. ಒಂದು.... ಎರಡು.... ಮೂರು.... ಎಂಟು ನಿಮಿಷ. ಇನ್ನೂ ಚುಂಬಿಸುತ್ತಲೇ ಇದ್ದ. ತುಟಿ ಎಲ್ಲಾ ಎಂಜಲು ಎಂಜಲು. ಸುಜಿಗೆ ಉಸಿರಾಡಲೂ ಕಷ್ಟವಾಗತೊಡಗಿತು. ಮೈಯಲ್ಲಿ ವಿದ್ಯುತ್ ಸಂಚಾರವಾದಂತೆ ಎಲ್ಲೆಲ್ಲೋ ಏನೇನೋ ಆಗುತ್ತಿದೆ. ಮೈಮೇಲಿನ ಬಟ್ಟೆಗಳನ್ನೇ ಕಿತ್ತೊಗೆಯಬೇಕೆನ್ನುವ ಉದ್ರೇಕ.

ಮೋಹನ್ ಆಕೆಯ ಮೈಯ ಇಂಚಿಂಚು ಚುಂಬಿಸುತ್ತಿದ್ದ. ಚುಂಬಿಸದ ಸ್ಥಳವೇ ಇಲ್ಲವೇನೋ ಎಂಬಂತೆ ಚುಂಬಿಸುತ್ತಿದ್ದ. ಅರ್ಧ ಮುಚ್ಚಿದ ಕಣ್ಣಿಂದ ಬೆಡ್‌ರೂಂ ಟೀಪಾಯ್ ಕಡೆ ನೋಡಿ ಆ ಉನ್ಮಾದದಲ್ಲೂ ಆಶ್ಚರ್ಯ, ಖುಷಿ ಒಮ್ಮೆಲೇ ಆದವು ಸುಜಿಗೆ. ಟೀಪಾಯ್ ಮೇಲಿನ ಫೋನ್ ರಿಸೀವರ್ ಎತ್ತಿಟ್ಟಿದ್ದ ಮೋಹನ್. ನಂತರ ಅವಳನ್ನು ಆತ ಆವರಿಸಿಕೊಳ್ಳತೊಡಗಿದ. ಆ ರಾತ್ರಿಯಿಂದ ಇವತ್ತಿನವರೆಗೂ ಸುಜಿಯ ಮುಡಿಯ ಮಲ್ಲಿಗೆಗಳು ಪ್ರತಿದಿನ ನಲುಗುತ್ತಿವೆ. ಮೋಹನ, ಸುಜಿಯನ್ನು ಒಂದು ಕ್ಷಣ ಬಿಟ್ಟಿರುತ್ತಿರಲಿಲ್ಲ. ಇಬ್ಬರ ಅನ್ಯೋನ್ಯತೆ-ಪ್ರೀತಿ ನೋಡಲಾರದೇ ಮಹಡಿ ಕೋಣೆಯ ಹುಡುಗರಿಬ್ಬರೂ ನಾಲ್ಕು ದಿವಸಗಳಲ್ಲಿಯೇ ರೂಂ ಖಾಲಿ ಮಾಡಿ ಹೊರಟರು. ■

ವಿಮರ್ಶೆಗೇಕೆ ಹೆದರಿಕೆ?

ಮನುಷ್ಯ ಹೊಗಳಿಕೆಯನ್ನು ಸ್ವೀಕರಿಸಿದಷ್ಟು ಸುಲಭವಾಗಿ ಟೀಕೆ ವಿಮರ್ಶೆಯನ್ನು ಸಹಿಸಲಾರ. ಇತರರು ನಮ್ಮಲ್ಲಿನ ಲೋಪದೋಷಗಳತ್ತ ಬೆರಳುಮಾಡುವುದನ್ನು ನಾವು ಸಹಿಸುವುದಿಲ್ಲ. ಆದರೆ ಹೊಗಳಿಕೆಗೆ ದಾಸರಾಗಲು ಸಿದ್ಧರಾಗುತ್ತೇವೆ. ವಿಮರ್ಶೆಗಳು ನಮ್ಮ ತಪ್ಪು ಒಪ್ಪುಗಳನ್ನು ತಿದ್ದಿಕೊಳ್ಳಲು, ಆ ಮೂಲಕ ನಮ್ಮ ಏಳಿಗೆಗೆ ಸಹಕಾರಿಯಾಗಬಲ್ಲವು ಎಂಬುದನ್ನು ನಾವು ಅರಿಯುವುದಿಲ್ಲ.

ನಮ್ಮಲ್ಲಿ ಬಹಳಷ್ಟು ಜನ ತಮ್ಮ ನಂಬಿಕೆ, ಅಭಿಪ್ರಾಯ, ಅನಿಸಿಕೆಗಳೇ ವಾಸ್ತವವೆಂದು ತಿಳಿದಿರುತ್ತಾರೆ. ಇಂತವರ ದೃಷ್ಟಿಯಲ್ಲಿ ಇತರರು ಅಜ್ಞಾನಿಗಳಾಗಿ ಅನುಭವಶೂನ್ಯರಾಗಿ ಚಿತ್ರಿತಗೊಂಡಿರುತ್ತಾರೆ. ವಿಮರ್ಶೆ ಎನ್ನುವುದು ಹುಟ್ಟುವುದೇ ಇಂತಹ ಅಹಂಕಾರ, ಭ್ರಮೆಗಳಿಂದಾಗಿ.

ಹೊಗಳಿಕೆಗಳು ಎರಡು ವಿಧ : ನಿಜವಾಗಿಯೂ ನಮ್ಮಲ್ಲಿನ ಉತ್ತಮ ಅಂಶಗಳನ್ನು ಮೆಚ್ಚಿಕೊಂಡು ನೀಡುವ ಹೊಗಳಿಕೆ ಒಂದು. ನಮ್ಮಿಂದ ಏನನ್ನೋ ಆಶಿಸಿ ನಮ್ಮನ್ನು ಮೆಚ್ಚಿಸುವ ಸಲುವಾಗಿ ನೀಡುವ ಹೊಗಳಿಕೆ ಇನ್ನೊಂದು.

ಹಾಗೆಯೇ ವಿಮರ್ಶೆಗಳು ಎರಡು ವಿಧ: ನಮ್ಮನ್ನು ನಾವು ತಿದ್ದಿಕೊಳ್ಳುವಲ್ಲಿ ನೆರವಾಗುವಂತಹ ವಿಮರ್ಶೆಗಳು ಒಂದೆಡೆಯಾದರೆ ನಮ್ಮ ಮನ ನೋಯಿಸಲೆಂದೇ ಮಾಡುವ ವಿಮರ್ಶೆ ಮತ್ತೊಂದೆಡೆ.

ಜೀವನದಲ್ಲಿ ವೈಫಲ್ಯ ಕಂಡ ಕೆಲವು ವ್ಯಕ್ತಿಗಳು ತಾವೊಬ್ಬರೇ ಪ್ರಾಮಾಣಿಕರೆಂದು, ತಮ್ಮಂತಹ ನೀತಿವಂತರಿಗೆ ಇಲ್ಲಿ ಅವಕಾಶಗಳಿಲ್ಲವೆಂದು, ತಮ್ಮ ವೈಫಲ್ಯಕ್ಕೆ ಸಮಾಜದಲ್ಲಿನ ಭ್ರಷ್ಟ ವ್ಯವಸ್ಥೆಯೇ ಕಾರಣವೆಂದು ದೂಷಿಸುತ್ತಿರುತ್ತಾರೆ. ತಾವು ಪ್ರಾಮಾಣಿಕರೆಂದು ಹೇಳಿಕೊಳ್ಳುತ್ತಲೇ ಪರೋಕ್ಷವಾಗಿ ಇತರರನ್ನು ಟೀಕಿಸುವ ಇಂತಹ ಗುಂಪಿನ ಜನರದ್ದು ಮತ್ತೊಂದು ತೆರನಾದ ವಿಮರ್ಶೆ.


ನಮ್ಮ ಅಹಂಕಾರ, ಭ್ರಮೆಗಳು ಮೊದಲ ತೆರನಾದ ಕ್ರಿಯಾತ್ಮಕ ವಿಮರ್ಶೆ ಸ್ವೀಕರಿಸದಂತೆ ತಡೆಯುತ್ತವೆ. ಇಂದು ಪ್ರತಿ ರಂಗದಲ್ಲಿಯೂ ನಿರ್ಮಾಣಾತ್ಮಕ ವಿಮರ್ಶೆಗಿಂತ ಎರಡನೇ ರೀತಿಯ ದ್ವೇಷಪೂರಿತ ವಿಮರ್ಶೆಯನ್ನೇ ಹೆಚ್ಚು ಕಾಣುತ್ತಿದ್ದೇವೆ.

ಎದುರಾಳಿಗಳ ವಿಮರ್ಶೆ ನಮ್ಮ ಪ್ರತಿಬಿಂಬವಿದ್ದಂತೆ. ನಡೆ, ನುಡಿ, ತಪ್ಪು ಒಪ್ಪುಗಳನ್ನು ನಾವೆಷ್ಟು ಆತ್ಮಾವಲೋಕನ ಮಾಡಿಕೊಳ್ಳುತ್ತಿದ್ದರೂ ವಿಮರ್ಶೆಗಳಿಂದ ನಮ್ಮನ್ನು ನಾವು ಮತ್ತಷ್ಟು ತಿಳಿದುಕೊಳ್ಳಲು ಸಹಕಾರಿಯಾಗುತ್ತದೆ. ಒಟ್ಟಾರೆ ವಿಮರ್ಶೆ ನಮ್ಮ ಒಳಿತಿಗೆ ಪೂರಕವಾಗಿದ್ದಲ್ಲಿ ಅದನ್ನು ಸ್ವೀಕರಿಸುವುದರಿಂದ ನಮಗೆ ಲಾಭವೇ ಹೊರತು ನಷ್ಟವೇನಿಲ್ಲ.

- ನಿಮ್ಮನ್ನು ವಿಮರ್ಶಿಸುವ ವ್ಯಕ್ತಿಯನ್ನು ಮಾರ್ಗದರ್ಶಕನೆಂದು ಭಾವಿಸಿ. ನಿಮ್ಮ ಲೋಪಗಳನ್ನು ತಿದ್ದಿಕೊಳ್ಳುವಲ್ಲಿ ಆ ವ್ಯಕ್ತಿ ಸಹಕರಿಸುತ್ತಿದ್ದಾನೆಂದು ತಿಳಿದುಕೊಳ್ಳಿ. ಇದರಿಂದ ಎದುರಾಳಿಯ ವಿಮರ್ಶೆಯಲ್ಲಿನ ತೀವ್ರತೆ ತಗ್ಗುತ್ತದೆ.
- ವಿಮರ್ಶೆ ಎದುರಾದ ಸಮಯದಲ್ಲಿ ನಿಮ್ಮ ಮನಸ್ಥಿತಿ ವಿಮರ್ಶಿಸುವವನ ಮನಸ್ಥಿತಿ ಹೇಗಿದೆ ಎಂಬುದನ್ನು ವಿಶ್ಲೇಷಿಸಿ. ಒಂದೊಮ್ಮೆ ವಿಮರ್ಶೆ ಎದುರಾಳಿಯ ಬಾಯಿತಪ್ಪಿನಿಂದ ಬಂದಿರಬಹುದು. ಇಲ್ಲದಿದ್ದಲ್ಲಿ ಆ ವ್ಯಕ್ತಿಗೆ ವಿಮರ್ಶಿಸುವುದು ಒಂದು ಅಭ್ಯಾಸವಾಗಿರಬಹುದು. ಹೀಗೆ ವಿಶ್ಲೇಷಿಸುವುದರಿಂದ ವಿಮರ್ಶೆಯನ್ನು ಗಂಭೀರವಾಗಿ ತೆಗೆದುಕೊಳ್ಳುವುದನ್ನು ಬಿಡುವುದನ್ನು ಕುರಿತು ನಿರ್ಧರಿಸುವುದು ಸುಲಭ.
- ಯಾರೂ ದೋಷರಹಿತರಲ್ಲ. ಇದಕ್ಕೆ ನಾವು ಹೊರತಾಗಿಲ್ಲ. 'ನಾನು ದೋಷರಹಿತ'ನೆಂದು ಹೇಳಿಕೊಳ್ಳುವವನನ್ನು ಇತರರು ಮೆಚ್ಚಲಾರರು. ನಮ್ಮ ಗುಣ, ಅವಗುಣಗಳನ್ನು ಅಂಗೀಕರಿಸುವುದು ಹೇಡಿತನವಲ್ಲ. ಅದು ಸಾಹಸವೂ ಹೌದು.
- ವಿಶಾಲ ಮನೋಭಾವನೆ ಉಳ್ಳವರು ಮಾತ್ರವೇ ತಮ್ಮ ತಪ್ಪುಗಳನ್ನು ಅಂಗೀಕರಿಸಬಲ್ಲರು. ಇಂತಹ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡಲ್ಲಿ ಎಂತಹ ವಿಮರ್ಶೆಯನ್ನೂ ಶಾಂತತೆಯಿಂದ ಸ್ವೀಕರಿಸಬಹುದು.
- ವಿಮರ್ಶೆ ಎದುರಾದಕ್ಷಣ ಸಹನೆ ಕಳೆದುಕೊಳ್ಳಬೇಡಿ. ಸತ್ಯ ಅಸತ್ಯಗಳ ಕುರಿತು ಯೋಚಿಸಿ. ಕೋಪೋದ್ರೇಕಗಳು ಪರಿಸ್ಥಿತಿ ಕೈ ಮೀರುವಂತೆ ಮಾಡುತ್ತವೆ.
- ವಿಮರ್ಶೆಯನ್ನು ಸ್ವೀಕರಿಸಿ. ಎಲ್ಲರೂ ನಿಮ್ಮ ಮನೋಭಾವನೆಗೆ ಹೊಂದಿಕೊಳ್ಳುವವರಾಗಿರುವುದಿಲ್ಲ. ಎಲ್ಲರೂ ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ಒಪ್ಪಬೇಕೆಂಬ ನಿಯಮವೇನಿಲ್ಲ. ವಿಮರ್ಶೆಗಳನ್ನು ನಮ್ಮ ಉನ್ನತಿಗೆ ಬಳಸಿಕೊಳ್ಳುವುದು ಜಾಣ್ಮೆಯನ್ನು ಆಧರಿಸಿದೆ.

■ **ಕೆ.ಎಂ.ಚಂದ್ರಮೌಳಿ**

ಜಾರಿಯಾಗದ ಗುಟ್ಕಾ ನಿಷೇಧ



ಶಾಸಕರು ಕೊಟ್ಟರು ಸಾವಿಗೊಂದು ಸುಲಭದ ಪರ್ಮಿಟ್

''ಇಂದು ಒಂದು ದೇಶವನ್ನು ನಾಶಪಡಿಸಬೇಕಿದ್ದಲ್ಲಿ ಪರಮಾಣು ಬಾಂಬ್ ಇಲ್ಲವೇ ಪರಮಾಣು ಅಸ್ತ್ರಗಳ ಅವಶ್ಯಕತೆ ಕಂಡುಬರುವುದಿಲ್ಲ. ಕೇವಲ ಆ ದೇಶದ ಯುವಜನರನ್ನು ಗುಟ್ಕಾ, ಪಾನ್‌ಪರಾಗ್ ಇತ್ಯಾದಿಗಳ ಸೇವನೆ ಚಟಕ್ಕೆ ಗುರಿಮಾಡಿದರೆ ಸಾಕು. ಇದರಿಂದ ಇಡೀ ರಾಷ್ಟ್ರವು ಕಾಲಕ್ರಮೇಣ ನೋವುಗ್ರಸ್ಥವಾಗಿ ಕಾಯಿಲೆಯಿಂದ ನರಳಿ, ಬಳಲುತ್ತಾ ನಿಷ್ಕ್ರಿಯವಾಗಿ ಸರ್ವನಾಶ ಹೊಂದುತ್ತದೆ''

ಇವು ಡಾ.ಎಚ್.ನರಸಿಂಹಯ್ಯ ನೇತೃತ್ವದಲ್ಲಿ ಕರ್ನಾಟಕ ಸರ್ಕಾರ ರಚಿಸಿದ್ದ ಅಂತರ ಇಲಾಖಾ ಸಮಿತಿ ವರದಿಯ ಕೊನೆಯಲ್ಲಿ ಬರುವ ಮಾತು.

ಸ್ವಾತಂತ್ರ್ಯ ಬಂದು ಐವತ್ತು ವರ್ಷವಾಗಿದ್ದ ಸಮಯ ಅದು. ಗುಟ್ಕಾ ಸೇವನೆಯಿಂದ ಯುವಜನರ ಮೇಲೆ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ವರದಿ ಸಲ್ಲಿಸಲು ರಚಿಸಲಾಗಿದ್ದ ಸಮಿತಿ ಅದು. ಮೇಲ್ಮನೆಯಲ್ಲಿ 4.2.97ರಂದು ಎಚ್.ಕೆ.ಪಾಟೀಲ್, ಮರಿಲಿಂಗೇಗೌಡ, ಭೀಮಣ್ಣ ಖಂಡ್ರೆ ಹಾಗೂ ಅಭಯ ಚಂದ್ರ ಮಾಡಿದ ಪ್ರಸ್ತಾಪ ಗಮನಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ನೀಡಿದ್ದ ಭರವಸೆ ಮೇರೆಗೆ 26.2.97ರಂದು ಸಮಿತಿ ರಚನೆಯಾಯಿತು. ಸಮಿತಿ 26.7.97ರಂದು ತನ್ನ ವರದಿ ಹಾಗೂ ಶಿಫಾರಸು ಸಲ್ಲಿಸಿತು. 'ಗುಟ್ಕಾ ನಿಷೇಧಿಸಬೇಕು' ಇದು ಶಿಫಾರಸಿನ ಮುಖ್ಯ ಅಂಶ.

ಇಂಥ ನಿಷೇಧ ಶಾಸನವಾಗಬೇಕು. ಅದನ್ನು ಶಾಸನಸಭೆ ಒಪ್ಪಬೇಕು. ಹಾಗಾಗಿ ಸಮಿತಿಯು ತನ್ನ ವರದಿಯ ಕೊನೆಯಲ್ಲಿ ಒಂದು ಕಳಕಳಿಯ ಮನವಿಯನ್ನು ಶಾಸಕರಲ್ಲಿ ಮಾಡಿಕೊಂಡಿತ್ತು.

''ಸ್ವಾತಂತ್ರ್ಯದ ಸುವರ್ಣ ಮಹೋತ್ಸವನ್ನಾಚರಿಸುತ್ತಿರುವ ಈ ಸಂದರ್ಭದಲ್ಲಿ ಇಂದಿನ ಶಾಸಕರು ಯುವಜನಾಂಗಕ್ಕೆ ಮತ್ತು ಈ ನಾಡಿನ ಭಾವೀ ಜನತೆಗೆ ನೀಡಬೇಕಾಗಿರುವ ಒಂದೇ ಕಾಣಿಕೆಯೆಂದರೆ ಈ ಗುಟ್ಕಾ ಮತ್ತು ಸಂಬಂಧಿತ ವಸ್ತುಗಳ ತಯಾರಿಕೆ ಮತ್ತು ಮಾರಾಟಗಳ ನಿಷೇಧ ಕುರಿತು ಶಾಸನವನ್ನು ಹೊರಡಿಸುವುದಾಗಿದೆ. ಹಾಗೂ ಈ ನಿಟ್ಟಿನಲ್ಲಿ ಶಾಸನವನ್ನು ಜಾರಿಗೊಳಿಸಿದರೆ ಇಂದಿನ ಯುವಜನ ಹಾಗೂ ಸಮಾಜ ಪುರೋಗಮನದ ದಿಕ್ಕಿನಲ್ಲಿ ಪಯಣಿಸಲು ಸಹಕಾರಿಯಾಗುತ್ತದೆ''

ಇದಕ್ಕೆ ವಿಧಾನಸಭೆಯಲ್ಲಿ ಶಾಸಕರ ಉತ್ತರ ಏನು ಗೊತ್ತೇ?

''ಕೂಡದು''

ಹೀಗೆ ಮಾತಾಡಿದವರು ಮಲೆನಾಡು ಮತ್ತು ಕರಾವಳಿಯ ಶಾಸಕರು. ಎಲ್ಲರೂ ಅಡಿಕೆ ಬೆಳೆಗಾರರು. ಅವರು ಮುಂದಿಟ್ಟ ವಾದ ಏನು ಗೊತ್ತೇ?

''ಗುಟ್ಕಾ ನಿಷೇಧ ಮಾತ್ರ ಯಾಕೆ? ಸಿಗರೇಟು, ಮದ್ಯಪಾನ ಆರೋಗ್ಯಕ್ಕೆ ಹಾನಿ ಎಂದು ವಿಶ್ವಮಟ್ಟದ ಆರೋಗ್ಯ ಮತ್ತು ವೈದ್ಯಕೀಯ ಸಂಸ್ಥೆಗಳು ಸಾರುತ್ತಿವೆ. ಅವನ್ನೂ ನಿಷೇಧ ಮಾಡುತ್ತೀರಾ?''


ಸರ್ಕಾರ ಬಾಯಿ ಮುಚ್ಚಿಕೊಂಡಿತು. ಸಿಗರೇಟನ್ನು ಬೇಕಾದರೆ ನಿಷೇಧಿಸಬಹುದು. ಹೆಂಡದ ನಿಷೇಧ ಇಲ್ಲಿ ಸಾಧ್ಯವೇ? ಚುನಾವಣೆಗಳಲ್ಲಿ ಓಟು ತರುವ ಹಣ, ಹೆಂಡದ ಹೊಳೆ ಹರಿಯುವುದೇ ಹೆಂಡದ ಲಾಬಿಯಿಂದ.

ಗುಟ್ಕಾ ನಿಷೇಧ ವಿರೋಧಿಸಿದ ಶಾಸಕರದು ಇನ್ನೂ ಒಂದು ವಾದ.

''ಇವತ್ತು ಗುಟ್ಕಾ ತಯಾರಿಕೆ ಮತ್ತು ಮಾರಾಟ ನಂಬಿಯೇ ಹಲವರು ಜೀವನ ನಡೆಸುತ್ತಿದ್ದಾರೆ. ಗುಟ್ಕಾ ನಿಷೇಧದಿಂದ ಲಕ್ಷಾಂತರ ಜನ ಬೀದಿ ಪಾಲಾಗುತ್ತಾರೆ.... ಅವರ ಗತಿ ಏನು?''

ಹೀಗೆ ಅವತ್ತು, ಬ್ರಿಟಿಷರ ಗುಲಾಮಗಿರಿಯಿಂದ ಮುಕ್ತವಾದ ರಾಷ್ಟ್ರವೊಂದರ ಯುವ ಜನ ಅದರಲ್ಲೂ ಎಳೆಯರು ಮಾರಕ ಚಟಕ್ಕೆ ಐವತ್ತು ವರ್ಷಗಳನಂತರ ದಾಸರಾಗುತ್ತಾ ಬದುಕುಗಳನ್ನೇ ನೀಗಿಕೊಳ್ಳುತ್ತಾ ಇದ್ದ ಹಂತದಲ್ಲಿ, ಅದರಿಂದ ಬಿಡುಗಡೆಗೊಳಿಸುವ ಅವಕಾಶವನ್ನು ಶಾಸಕರು

'ನಾವೇನು ಮಾಡೋಕ್ಕಾಗುತ್ತೆ!'



ಡಾ.ಎ.ಬಿ.ಮಾಲಕರೆಡ್ಡಿ

ಡಾ.ಎ.ಬಿ.ಮಾಲಕರೆಡ್ಡಿ ಈಗ ರಾಜ್ಯದ ಆರೋಗ್ಯ ಸಚಿವರು. ವೃತ್ತಿಯಿಂದ ವೈದ್ಯರು. ಗುಟ್ಕಾ ನಿಷೇಧ ಕುರಿತು ನಡೆಸಿದ ಚುಟುಕು ಸಂದರ್ಶನದಲ್ಲಿ ಅವರು ಹೇಳಿದ್ದು ಇಲ್ಲಿದೆ.

ಬದುಕು : ಗುಟ್ಕಾ ನಿಷೇಧದ ಬಗ್ಗೆ ನಿಮ್ಮ ಸರ್ಕಾರದ ನಿಲುವೇನು?

ಸಚಿವರು : ನಿಲುವು ಏನಂತ ಈಗಾಗಲೇ ನಿರ್ಧಾರ ಆಗಿಬಿಟ್ಟಿದೆಯಲ್ಲ!

ಬದುಕು : ಡಾ.ಎಚ್.ನರಸಿಂಹಯ್ಯ ಸಮಿತಿ ಶಿಫಾರಸು ಪುನರ್‌ಪರಿಶೀಲನೆ ಮಾಡುತ್ತೀರಾ?

ಸಚಿವರು : ಶಾಸನ ಸಭೆಯಲ್ಲಿ ನಿಷೇಧ ಬೇಡವೆಂದು ಒತ್ತಾಯ ಬಂತು. ಇಂಥ ನಿಲುವಿನ ಪರ ವಾದ ಮಾಡಿದ ಶಾಸಕರು ಸ್ವತಃ ಅಡಿಕೆ ಬೆಳೆಗಾರರು. ಸಿಗರೇಟು, ಮದ್ಯಪಾನ ಆರೋಗ್ಯಕ್ಕೆ ಹಾನಿಕರ ಎಂದು ವಿಶ್ವ ಆರೋಗ್ಯ ಸಂಸ್ಥೆಗಳ ವರದಿಯೇ ಇದೆ. ಅದನ್ನು ನಿಷೇಧಿಸುತ್ತೀರಾ? ಎಂದು ಪ್ರಶ್ನಿಸಿದರು. ಗುಟ್ಕಾ ನಿಷೇಧಿಸಿದರೆ, ಅದರ ಉತ್ಪಾದನೆ, ಮಾರಾಟ ನಂಬಿರುವ ಲಕ್ಷಾಂತರ ಕುಟುಂಬಗಳು ಬೀದಿ ಪಾಲಾಗುತ್ತವೆ ಎಂದರು. ಶಾಸನ ಸಭೆಗಿಂತಲೂ ಸರ್ಕಾರ ದೊಡ್ಡದಲ್ಲ.

ಬದುಕು : ಹಾಗಾದರೆ ಮುಂದಿನ ದಾರಿ ಏನು?

ಸಚಿವರು : ನಾವೇನು ಮಾಡೋಕ್ಕಾಗುತ್ತೆ?

ಬದುಕು : ಜಾಗೃತಿ ಮೂಡಿಸುವ ವ್ಯವಸ್ಥೆ ಏನಾದರೂ..?

ಸಚಿವರು : ಮಾಡಬೇಕು. ಏನು ಮಾಡೋದು ನೀವೇ ಹೇಳಿ. ಇದು ಜನತಂತ್ರ ವ್ಯವಸ್ಥೆ. ಸರ್ಕಾರ ಏನು ಮಾಡಬೇಕು ಅಂತ ಜನರಿಂದಲೇ ಸಲಹೆ ಬರಲಿ.

ಇದೊಂದು ದೊಡ್ಡ ಪಿಡುಗು. ಅದರಲ್ಲೂ ಶಾಲೆಗೆ ಹೋಗುವ ಎಳೆ ಮಕ್ಕಳಲ್ಲಿ ಇದು ವ್ಯಾಪಕವಾಗುತ್ತಿದೆ. ತಂದೆ ತಾಯಿಗಳು ಮಕ್ಕಳ ಚಟುವಟಿಕೆ ಮೇಲೆ ನಿಗಾವಹಿಸುವುದರಿಂದ ಇದನ್ನು ನಿಯಂತ್ರಿಸೋದು ಸಾಧ್ಯ.

ಈ ಸರ್ಕಾರಗಳು ಕಾಂದಹಾರ್ ಟೆರರಿಸ್ಟ್‌ಗಳಿಗಿಂತ ಕಡೆ



ಡಾ. ಕೆ.ಎಸ್. ಗೋಪಿನಾಥ್

ಬೆಂಗಳೂರಿನ ಡಾ.ಕೆ.ಎಸ್.ಗೋಪಿನಾಥ್ ಒಬ್ಬ ನಿಪುಣ ಸರ್ಜನ್. ಗಂಟಲು ಕ್ಯಾನ್ಸರ್ ಬಗ್ಗೆ ವಿಶೇಷ ಜ್ಞಾನ ಉಳ್ಳವರು. ಮುಂಬಯಿಯಲ್ಲಿ ಬಹಳ ಕಾಲ ಇದ್ದವರು.

'ಬದುಕು' ಅವರನ್ನು ಸಂದರ್ಶಿಸಿದಾಗ ಉತ್ಸಾಹ, ಚೈತನ್ಯದಿಂದ ಮಾತಾಡಿದ ಡಾ.ಗೋಪಿನಾಥ್ ಗುಂಡು ಸಿಡಿಸಿದಂತೆ 'ಗುಟ್ಕಾ' ಬಗ್ಗೆ ಪ್ರತಿಕ್ರಿಯಿಸಿದ್ದು ಇಲ್ಲಿದೆ.

ಗುಟ್ಕಾ ಬಗ್ಗೆ ಏನು ಹೇಳ್ತೀರ?

ಗುಟ್ಕಾ ಬಗ್ಗೆ ಅತ್ಯುತ್ತಮ ವಿಚಾರ ನಾನು ಹೇಳಬಹುದಾದ್ದು ಅಂದರೆ ಅದನ್ನು ಸಂಪೂರ್ಣ ಬ್ಯಾನ್ ಮಾಡಬೇಕು.

ಸರ್ಕಾರ ಬ್ಯಾನ್‌ಗೆ ಒಪ್ತಾ ಇಲ್ಲವಲ್ಲ!

ಈ ಸರ್ಕಾರಗಳು ಕಾಂದಹಾರ್ ಟೆರರಿಸ್ಟ್‌ಗಳಿಗಿಂತ ಕಡೆ.

ನಿಮ್ಮ ಹೋರಾಟ ಯಾವ ರೀತಿ?

ಏನು ಮಾಡೋದು! ಡಾ.ಗೋಪಿನಾಥ್‌ಗಿಂತ 'ಮಾಣಿಕ್‌ಚಂದ್' ತುಂಬಾ ಪವರ್‌ಫುಲ್. ಬರಿ ಗುಟ್ಕಾ ಅಲ್ಲ, ತಂಬಾಕಿನ ವಿರುದ್ಧವೇ ಒಂದು ಸಾಮೂಹಿಕ ಆಂದೋಲನ ಆಗಬೇಕು.

ಅಷ್ಟೊಂದು ಗಂಭೀರವೇ ಈ ಸಮಸ್ಯೆ?

ಕ್ಯಾನ್ಸರ್ ರೋಗಿಗಳಲ್ಲಿ ಶೇ.45 ತಂಬಾಕು ಬಳಸುವವರು.

ಅದನ್ನು ವಾಸಿ ಮಾಡೋ ತಜ್ಞರು ನೀವು....!

ಕ್ಯಾನ್ಸರ್! ನೋ! ಸಾಧ್ಯವೇ ಇಲ್ಲ. ನಿಯಂತ್ರಿಸಬಹುದು ಅಷ್ಟೇ.

ಹಾಗಾದರೆ ಮುಂದೇನು ಮಾಡಬೇಕು ಅಂತಿದೀರ?

ನಾವು ಇನ್ನು ಶಾಲೆಗಳಿಗೆ ಹೋಗಿ ಮಕ್ಕಳಿಗೆ ತಿಳಿಸ್ತೀವಿ. ಮುಖ್ಯ; ಸಿಗರೇಟು, ಬೀಡಿ, ಗುಟ್ಕಾ ಬಳಸೋ ಹಿರಿಯರು ಮನೇಲಿ ಇದ್ದರೆ ಅದನ್ನ ನೀವೇ ಬಿಡಿಸಬೇಕು ಅಂತ.ಮನವರಿಕೆ ಮಾಡಿಕೊಡ್ತೀವಿ. ಮಕ್ಕಳ ಒತ್ತಾಯಕ್ಕೆ ಹಿರಿಯರು ಮಣೀತಾರೆ ಅನ್ನೋದು ನಮಗೆ ಗೊತ್ತಾಗಿದೆ. ದೊಡ್ಡೋರಿಗೆ ತಿಳಿಸಿ ಹೇಳೋದಕ್ಕಿಂತ ಚಿಕ್ಕವರಿಗೆ ತಿಳಿಸೋದು ಸುಲಭ. ಅವರೇ ಇದರಲ್ಲಿ ಇನಿಷಿಯೇಟೀವ್ ತಗೊಂಡರೆ ಇಡೀ ಕುಟುಂಬ ಇಂಥ ಕ್ಯಾನ್ಸರ್ ತರುವ ಪಿಡುಗುಗಳಿಂದ ಮುಕ್ತವಾಗಬಹುದು.

ಗುಟ್ಕಾ ಮತ್ತು ತಂಬಾಕಿನ ಬಗ್ಗೆ ತುಂಬಾ ಸಿಟ್ಟು ಇದ್ದ ಹಾಗಿದೆ. ಶತಮಾನಗಳಿಂದ ತಂಬಾಕು ಬಳಸ್ತಾನೇ ಇದಾರೆ ಅಲ್ಲವಾ?

ತಂಬಾಕು ಇವತ್ತು ನಂ. ಒನ್ ಕಿಲ್ಲರ್. ಆಗ ಕ್ಯಾನ್ಸರ್ ಅನ್ನೋದು ಗೊತ್ತೂ ಇರಲಿಲ್ಲ. ಅದಕ್ಕೆ ಚಿಕಿತ್ಸೇನೂ ಇರಲಿಲ್ಲ. 400 ವರ್ಷದ ಹಿಂದೆ ಬ್ರಿಟಿಷರು ಭಾರತಕ್ಕೆ ಇದನ್ನು ತಂದರು. ಧೂಮಪಾನಿಗಳು ಸೇದಿಬಿಟ್ಟ ಹೊಗೆ ಸೇವಿಸಿದ ಜನಕ್ಕೆ ಕ್ಯಾನ್ಸರ್ ಬರುತ್ತೆ ಅಂತ ಮೊದಲು ಜಪಾನಿಯರು ಸಾಬೀತುಪಡಿಸಿದರು.

ನಮ್ಮಲ್ಲಿ ಹೈದರಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ನ್ಯೂಟ್ರಿಷನ್ ಮತ್ತು ತಿರುವನಂತಪುರದ ಕ್ಯಾನ್ಸರ್ ರಿಸರ್ಚ್ ಸೆಂಟರ್ ಕಂಡು ಹಿಡಿದಿರೋ ಸಂಗತಿ ತಿಳಿದರೆ ನೀವು ಬೆಚ್ಚಿಬೀಳ್ತೀರ. ಗುಟ್ಕಾದಲ್ಲಿ ಹಲವಾರು ಬಗೆಯ ಕಾರ್ಸಿನೋಜೆನ್ (ಕ್ಯಾನ್ಸರ್‌ಕಾರಕ) ಹಾಗೂ ಅಡಿಕ್ಷನ್ ಉಂಟು ಮಾಡುವ ವಸ್ತುಗಳಿವೆ. ಇದು ಹಾರ್ಡ್ ರಿಯಾಲಿಟಿ.

ಕಳೆದುಕೊಂಡರು.

ಆದರ ಪರಿಣಾಮ ಇವತ್ತು ಏನು ಗೊತ್ತೆ?

ಬೀದರ್‌ನ ಮೂಲೆಯೊಂದರ ತಾಂಡಾದ ಹದಿನೈದರ ಹುಡುಗನೊಬ್ಬನ ಈ ಕತೆ ಕೇಳಿ. ಹುಡುಗನ ಹೆಸರು ವಿಜಯಕುಮಾರ ಪವಾರ್. ಬಸವಕಲ್ಯಾಣ ತಾಲೂಕು ಕೊಂಗೇವಾಡಿ ತಾಂಡಾದವನು.

ಕಳೆದ ನವೆಂಬರ್ 27ರ ಮಧ್ಯಾಹ್ನ, ಈತ ದೊಡ್ಡಪ್ಪನ ಮನೆಗೆ ಬಂದ. ಅಲ್ಲಿ ಯಾರೂ ಇರಲಿಲ್ಲ. ಮನೆಯೊಳಗಿದ್ದ ಸೂಟ್‌ಕೇಸ್ ಒಡೆದು ಹಾಕಿದ. ಅದರಲ್ಲಿದ್ದ ಬಂಗಾರದ ಲಾಕೆಟ್ ಜೇಬಿಗಿಳಿಸಿಕೊಂಡ. ಅದೇ ಸಮಯಕ್ಕೆ ದೊಡ್ಡಪ್ಪನ ಮಕ್ಕಳು ಒಂಬತ್ತು ವರ್ಷದ ಸುಮತಿ ಮತ್ತು ಏಳು ವರ್ಷದ ಪಾರೂಬಾಯಿ ಬಂದವರೇ "'ನೋಡಿ ಬಂಗಾರ ಲಾಕೆಟ್ ತೆಗೆದುಕೊಂಡಿದ್ದೇಕೆ?'' ಎಂದು ಮುಗ್ಧ ಕುತೂಹಲದಿಂದ ವಿಚಾರಿಸಿದ್ದಾರೆ. 'ದೊಡ್ಡಪ್ಪನೇ ತರಲು ಹೇಳಿದ್ದಾರೆ' ಎಂದು ಬುರ್ಗುಡೆ ಬಿಟ್ಟು ಸೈಕಲ್ಲೇರಿ ಹೊರಟುಬಿಟ್ಟ. ದಾರಿಯಲ್ಲಿ ಅನುಮಾನ ಕಾಡಿದೆ. ಹೊರಳಿ ಬಂದವನು 'ನಿಮ್ಮ ತಂದೆ ಕರೆಯುತ್ತಿದ್ದಾರೆ' ಎಂಬ ನೆಪ ಹೇಳಿ ಮೊದಲು ಸುಮತಿಯನ್ನು, ಆ

ನಂತರ ಪಾರೂಬಾಯಿಯನ್ನು ಕರೆದೊಯ್ದು ಒಂದೊಂದು ಬಾವಿಗೆ ತಳ್ಳಿ ಹೋಗಿಬಿಟ್ಟ.

ಮನೆಯವರು ಮೂರು ದಿನ ಕಾಯ್ದು ಪೊಲೀಸರಿಗೆ ದೂರಿತ್ತರು. ಹೆಣಗಳು ಬಾವಿಯಲ್ಲಿ ತೇಲಿದವು. ತಂದೆ ತಾಯಿ 'ಮಕ್ಕಳು ಕಾಲು ಜಾರಿ ಬಾವಿಗೆ ಬಿದ್ದಿರಬಹುದು' ಎಂದೇ ಭಾವಿಸಿದ್ದರು. ವಿಜಯಕುಮಾರ್ ತನ್ನ ತಂಗಿಯರನ್ನು ಒಬ್ಬೊಬ್ಬರನ್ನೇ ಸೈಕಲ್‌ನಲ್ಲಿ ಕರೆದೊಯ್ಯುದ್ದು ನೋಡಿದ್ದ ಚಿಕ್ಕ ಪೋಲಿಯೋಪೀಡಿತ ಹುಡುಗಿ ಒಂದು ಬಾಯಿಬಿಟ್ಟಿತು. ವಿಜಯಕುಮಾರ್‌ನನ್ನು ವಿಚಾರಿಸಿದಾಗ ಅವನು ಹೇಳಿದ್ದೇನು ಗೊತ್ತೇ?

''ಗುಟ್ಕಾ ತಿನ್ನಲು ತುಂಬಾ ಸಾಲ ಮಾಡಿದ್ದೆ. ಅದಕ್ಕಾಗಿ ಲಾಕೆಟ್ ಕದ್ದೆ. ತಂಗಿಯರು ನೋಡಿದ್ದು, ಮನೆಯಲ್ಲಿ ಹೇಳುತ್ತಾರೆಂದು ಭಯವಾಯಿತು ಇಬ್ಬರನ್ನು ಬಾವಿಗೆ ತಳ್ಳಿಬಿಟ್ಟೆ....''

ಹದಿನೈದರ ಹುಡುಗ ಇಬ್ಬರು ತಂಗಿಯರ ಜೀವ ಬತ್ತಿಸಿ ನಿಂತಿದ್ದಾನೆ. ಅವನ

ಸಾವಿನತ್ತ ಸೆಳೆಯುವ ಗುಟ್ಕಾ

ಇಂದು ನಮ್ಮ ಪ್ರತಿ ಹಳ್ಳಿ-ಪಟ್ಟಣಗಳಲ್ಲಿ, ಎಲ್ಲಾ ಪಾನ್ ಅಂಗಡಿಗಳಲ್ಲಿ ಗುಟ್ಕಾ ಸರಗಳು ಮಾವಿನ ತೋರಣಗಳಂತೆ ರಾರಾಜಿಸುತ್ತಿವೆ. ಶಾಲಾ ಮಕ್ಕಳಿಂದ ವೃದ್ಧರವರೆಗೆ ಗುಟ್ಕಾದ ಜಾದೂವಿಗೆ ಒಳಗಾಗಿದ್ದಾರೆ.

ಗುಟ್ಕಾ ನಮ್ಮ ಯುವಶಕ್ತಿಯ ಮೇಲೆ ತೀವ್ರ ಪರಿಣಾಮ ಬೀರಿದೆ. ಆ ಶಾಲೆಯೊಂದರಲ್ಲಿ ವಾರ್ಷಿಕ ಪರೀಕ್ಷೆ ನಡೆದಿದೆ, ಒಂದು ಸೂಜಿ ಬಿದ್ದರೂ ಸಪ್ಪಳವಾಗುವಷ್ಟು ಶಾಂತತೆ. ಕೊಠಡಿಯ ಮೇಲ್ವಿಚಾರಕರು ಎಲ್ಲಾ ವಿದ್ಯಾರ್ಥಿಗಳನ್ನು ಪರೀಕ್ಷಿಸುತ್ತಾ ಬಂದರು. ಓರ್ವ ವಿದ್ಯಾರ್ಥಿಯನ್ನು ಪರೀಕ್ಷಿಸುತ್ತಿರುವಾಗ ಏನೋ ಅನುಮಾನಪಟ್ಟು, ಜೇಬಿನಲ್ಲಿ ಕೈ ಹಾಕಿದರೆ, ಗುಟ್ಕಾ ಚೀಟಿ! ಗುಟ್ಕಾ ಬಾಯೊಳಗೆ ನಲಿದಾಡಿದ್ದರೆ ಎಂಥಹ ಕಠಿಣ ಪ್ರಶ್ನೆಗೂ ಉತ್ತರಿಸಬಲ್ಲೆ ಎಂಬ ಮೂರ್ಖ ಭ್ರಮೆ. ಕೆಲವರಿಗೆ ಗುಟ್ಕಾ ತಿಂದರೇನೇ ಕೆಲಸ ಮಾಡಲು ಹುರುಪು ಬರುವುದು. ಕೆಲವರು ಫ್ಯಾಷನ್ ಸಲುವಾಗಿ ತಿನ್ನುವವರು ಇದ್ದಾರೆ. ಗುಟ್ಕಾ ತಿನ್ನುವುದು ಕೆಲವರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಇನ್ನೂ ಕೆಲವರು ಸ್ನೇಹಿತರ ಮುಂದೆ ಅವಮಾನವಾಗುತ್ತದೆ ಎಂದು ಹೆದರಿ ತಿನ್ನುತ್ತಾರೆ. ಕೆಲವರಿಗೆ ಬೆಳಿಗ್ಗೆ ಎದ್ದ ತಕ್ಷಣವೇ ಅದನ್ನು ಅಗೆಯದಿದ್ದರೆ ಮಲವಿಸರ್ಜನೆ ಆಗುವುದಿಲ್ಲವಂತೆ!



ಜನರ ಆಕರ್ಷಣೆ ತಿಳಿದು ವ್ಯಾಪಾರಿಗಳು ಗುಟ್ಕಾ ತಯಾರಿಕೆಗೆ ಇಳಿದರು. ಗುಟ್ಕಾದಲ್ಲಿ ಅಡಿಕೆ ಹಾಗೂ ತಂಬಾಕಿನ ಮಿಶ್ರಣದ ಜೊತೆ ಕೆಲವು ಉದ್ದೀಪಕ ರಾಸಾಯನಿಕ ಪದಾರ್ಥಗಳನ್ನೂ ಬೆರೆಸುತ್ತಾರೆ. ಪ್ರಸ್ತುತ ನಮ್ಮ ರಾಷ್ಟ್ರದಲ್ಲಿ 200ಕ್ಕೂ ಹೆಚ್ಚು ವಿವಿಧ ಹೆಸರಿನ ಗುಟ್ಕಾಗಳಿವೆ. ಒಂದು ಸಣ್ಣ ಪಾನ್ ಅಂಗಡಿಯಲ್ಲಿ ದಿನಕ್ಕೆ ಸುಮಾರು 100-150 ಗುಟಕಾ ಪ್ಯಾಕುಗಳು ಮಾರಾಟವಾದರೆ, ಮಧ್ಯಮ ದರ್ಜೆಯ ಪಾನ್ ಅಂಗಡಿಗಳಲ್ಲಿ 300-400 ಪ್ಯಾಕುಗಳು ಮಾರಾಟವಾಗುತ್ತವೆ. ಪ್ರಮುಖ ಬೀದಿಗಳಲ್ಲಿ, ಬಸ್ ನಿಲ್ದಾಣದಲ್ಲಿ, ರೇಲ್ವೆ ನಿಲ್ದಾಣಗಳಲ್ಲಿ ಸಹಸ್ರಾರು ಗುಟ್ಕಾ ಪ್ಯಾಕುಗಳು ಮಾರಾಟವಾಗುತ್ತಿವೆ. ಒಂದು ಸಮೀಕ್ಷೆಯ ಪ್ರಕಾರ ಗುಟ್ಕಾ ಅಗಿಯುವವರ ವಯಸ್ಸು 15-30 ಎಂದು ತಿಳಿದು ಬಂದಿದೆ. ಇದನ್ನು ಕೊಳ್ಳುವವರು ಹೆಚ್ಚಾಗಿ ಕಾಲೇಜು ವಿದ್ಯಾರ್ಥಿಗಳು ಎಂಬುದನ್ನು ಬೇರೆ ಹೇಳಬೇಕಿಲ್ಲ. ಒಂದೆರಡು ಪ್ಯಾಕುಗಳನ್ನು ಒತ್ತಾಯದಿಂದ ಸೇವಿಸಿದರೆ ಸಾಕು, ಮುಂದೆ ಇನ್ನೊಬ್ಬರ ಒತ್ತಡದ ಅವಶ್ಯಕತೆಯೇ ಬೀಳುವದಿಲ್ಲ. ಗುಟ್ಕಾ ಒಮ್ಮೆ ತಿಂದವನಿಗೆ ಮತ್ತೆ ಮತ್ತೆ ತಿನ್ನುವ ಚಪಲ. ಹಾಗೇ ಚಟ ಬೆಳೆಯುತ್ತಾ ಹೋಗುತ್ತದೆ. ಗುಟ್ಕಾ ಸೇವನೆಯಿಂದಲೇ ಇಂದು ನಮ್ಮ ರಾಷ್ಟ್ರದಲ್ಲಿ ಯುವಕರ ಭವಿಷ್ಯ ಹಾಳಾಗುತ್ತಿದೆ. ಚಿಕ್ಕ ವಯಸ್ಸಿಗೆ ಮಾರಕ ರೋಗಗಳಿಗೆ ತುತ್ತಾಗುತ್ತಿದ್ದಾರೆ.

ಗುಟ್ಕಾ ಸೇವನೆಯಿಂದ ಆಗುವ ದುಷ್ಪರಿಣಾಮಗಳು ಅನೇಕ. ಗುಟ್ಕಾ ಸೇವಿಸುವವರ ಬಾಯಿ ಲೋಳೆಯಾಗಿ ಪದರಗಟ್ಟಿ ಅರ್ಬುದ ರೋಗಕ್ಕೆ ದಾರಿ ಮಾಡಿಕೊಡುತ್ತದೆ. ಸಿಗರೇಟು ಸೇವನೆಗಿಂತಲೂ ಗುಟ್ಕಾ ಬಹಳ ಅಪಾಯಕಾರಿ ಎಂಬ ವಿಷಯ ಈಗ ಗುಟ್ಟೇನಲ್ಲ. ಕಾಯಂ ಗುಟ್ಕಾ ಸೇವನೆಯಿಂದ ಬಾಯಿ ತನ್ನ ಆಕುಂಚನ ಶಕ್ತಿಯನ್ನು ಕಳೆದುಕೊಳ್ಳುತ್ತದೆ. ಸಾಮಾನ್ಯವಾಗಿ 3.4 ರಿಂದ 3.7 ರಷ್ಟು ಸೆಂ.ಮೀ ತೆರೆದುಕೊಳ್ಳಬಲ್ಲ ಬಾಯಿ, ಸತತ ಗುಟ್ಕಾ ಸೇವನೆ ನಂತರ 1ರಿಂದ 3 ಸೆಂ.ಮೀ ಮಾತ್ರ ತೆರೆಯಲು ಸಾಧ್ಯವಾಗುತ್ತದೆ. ಅದೇ ರೀತಿ 3.4 ರಿಂದ 5 ಸೆಂ.ಮೀ ವರೆಗೆ ಹೊರಚಾಚಬಲ್ಲ ನಾಲಗೆಯ ಚಲನಶಕ್ತಿಯು ಕುಂದಿ ಕೇವಲ 0.5 ಸೆಂ.ಮೀನಿಂದ 1.5 ಸೆಂ.ಮೀನಷ್ಟು ಮಾತ್ರ ಚಾಚುವುದು. ಗುಟ್ಕಾ ತಿಂದ ತಪ್ಪಿಗಾಗಿ, ತುತ್ತು ಅನ್ನಕ್ಕೂ, ಗುಟುಕು ನೀರಿಗೂ ಒದ್ದಾಡಬೇಕಾಗುತ್ತದೆ. ಇದರಿಂದ ದಂತಗಳನ್ನು ಶುದ್ಧಗೊಳಿಸಲು ಆಗುವುದಿಲ್ಲ. ಇದು ಸಾಂಕ್ರಾಮಿಕ ರೋಗಗಳಿಗೆ ದಾರಿ ಮಾಡಿಕೊಡುತ್ತದೆ. ದವಡೆಗಳಿಂದ ರಕ್ತ ಒಸರತೊಡಗುತ್ತದೆ. ಬಾಯಿಯಲ್ಲಿ ಹುಣ್ಣುಗಳು ಉಂಟಾಗುತ್ತವೆ ಸತತ ಗುಟ್ಕಾ ಸೇವನೆಯಿಂದ ಗಂಟಲು, ಶ್ವಾಸಕೋಶ ಕ್ಯಾನ್ಸರ್‌ಗಳು ಕೂಡಾ ಆಗುತ್ತವೆ. ಇದರಿಂದ ಉಸಿರಾಟಕ್ಕೆ ತೊಂದರೆಯುಂಟಾಗಿ ಮೃತ್ಯುವಿಗೆ ಆಹ್ವಾನ ನೀಡಿದಂತಾಗುತ್ತದೆ. ಆ ರಸವು ಹೊಟ್ಟೆ ಸೇರುತ್ತಲೇ ಇರುತ್ತದೆ. ಆ ರಸವು ಜಠರಕ್ಕೆ, ಸಣ್ಣ ಕರುಳಿಗೆ ವ್ಯಾಪಕ ಬಾಧೆಯನ್ನುಂಟು ಮಾಡುತ್ತವೆ. ಇದರಿಂದ ಹೊಟ್ಟೆಯಲ್ಲಿ ಹುಣ್ಣಾಗುತ್ತವೆ. ಹೊಟ್ಟೆ ಜಾಡಿಸುವುದಲ್ಲದೇ ಪಚನಶಕ್ತಿಯು ಗಣನೀಯವಾಗಿ ಕಡಿಮೆಯಾಗುತ್ತದೆ. ಗುಟ್ಕಾದಲ್ಲಿ ಬೆರೆಸಿರುವ ಮೆಂಥೋಲ್ ಪಿತ್ತವನ್ನು ಹೆಚ್ಚು ಮಾಡುತ್ತದೆ.

ವರ್ಜೀನಿಯಾದಲ್ಲಿ ನಡೆದ ಸಮೀಕ್ಷೆಯ ಪ್ರಕಾರ ಧೂಮಪಾನಿಗಳು ಗುಟ್ಕಾದತ್ತ ಹೆಚ್ಚು ಆಕರ್ಷಿತರಾಗುತ್ತಿದ್ದಾರೆ ಎಂದು ತಿಳಿದು ಬಂದಿದೆ. ಗುಟ್ಕಾದಿಂದ ಜನರ ಆರೋಗ್ಯ, ಸ್ವಾಸ್ಥ್ಯ ಕುಸಿಯುತ್ತದೆ. ಜನರಿಗೇನಾದರೂ ಆಗಲಿ. ಸಮಾಜಕ್ಕೇನಾದರೂ ಆಗಲಿ, ನಮಗೆ ಲಾಭವಾಯಿತಲ್ಲ ಎನ್ನುವುದು ಅಮಾನುಷ. ಉತ್ಪಾದಕರು ಎಂದೂ ಹೀಗೆ ಬಯಸಬಾರದು. ನಾವು ನಮ್ಮ ಸ್ನೇಹಿತರಿಗೆ ಯಾವುದು ತಿನ್ನಬೇಡಾ ಕೆಟ್ಟದ್ದು ಎಂದು ಹೇಳುತ್ತೇವೊ, ಆತ ತಿನ್ನದಂತೆ ಜಾಗ್ರತೆ ವಹಿಸುತ್ತೇವೊ ಅದನ್ನು ಬೇರೆಯವರು ತಿನ್ನೋದನ್ನೂ ವಿರೋಧಿಸಬೇಕು. ಇದು ನಮ್ಮ ಕನಿಷ್ಠ ನೈತಿಕ ಪ್ರಜ್ಞೆ.

ದೇಶವನ್ನು ಕಟ್ಟಬೇಕಾಗಿರುವ ಯುವಕರು ಇಂದು ''ಗುಟ್ಕಾದಾಸ''ರಾಗಿರುವುದು ನಿಜಕ್ಕೂ ವಿಷಾದಕರ ಸಂಗತಿ. ಗುಟ್ಕಾ ನಿಷೇಧಕ್ಕಾಗಿ ದೊಡ್ಡ ಕ್ರಾಂತಿ ನಡೆಯಬೇಕೆಂದರೂ ಆಶ್ಚರ್ಯವಿಲ್ಲ.

■ ವಿಜಯಕುಮಾರ್ ಎಸ್. ಅಂಟೀನ

ಗುಟ್ಕಾ ಸೇವನೆಯಿಂದ ಅವನ ಜೀವವೂ ಬತ್ತುತ್ತಾ ಇದೆ ಎಂಬ ಅರಿವು ಕೂಡ ಇಲ್ಲ. ಇದು ಬಯಲಾದ ಕತೆ. ಬಯಲಾಗದ ಇಂಥ ಪ್ರಕರಣಗಳು ಎಷ್ಟಿವೆಯೊ!

ಬೀದರ್‌ನ ದೂರದ ಜಿಲ್ಲೆಯ ಕುಗ್ರಾಮವಾದ ತಾಂಡಾಕ್ಕೂ ಈ ಗುಟ್ಕಾದ ಪಿಡುಗು ಚಾಚಿರುವ ಹಸ್ತದ ವ್ಯಾಪ್ತಿ ಬಹಳ ದೊಡ್ಡದು. ಶಾಲೆಯ ಮಕ್ಕಳು, ಕಾಲೇಜು ಯುವಕರು, ಯುವತಿಯರು ಎಲ್ಲೆಡೆ ಈ ಚಟಕ್ಕೆ ದಾಸರಾಗುತ್ತಿದ್ದಾರೆ.

25 ವರ್ಷದ ಹಿಂದೆ ಪಾನ್‌ಪರಾಗ್ ಕಂಪೆನಿ ಮಾರುಕಟ್ಟೆಗೆ ಪಾನ್‌ಮಸಾಲಾ ಬಿಡುಗಡೆ ಮಾಡಿತು. ಕೆಲವೇ ದಿನಗಳಲ್ಲಿ ಅದೇ ಕಂಪೆನಿಯ ಗುಟ್ಕಾ ಬಂದಿತು. ಈ ಉತ್ಪನ್ನ ಇವತ್ತು ದೇಶ ವ್ಯಾಪಿ ಆಗುವುದೆಂದೂ, ಇಷ್ಟೊಂದು ಜನಪ್ರಿಯ ಆಗುವುದೆಂದೂ ಯಾರೂ ನಂಬಿರಲಿಲ್ಲ.

ಗುಟ್ಕಾದ ಮುಖ್ಯ ವಸ್ತು ಅಡಿಕೆ. 1980ರಲ್ಲಿ ಅಡಿಕೆ ಬೆಲೆ ಕ್ವಿಂಟಾಲಿಗೆ 1500 ರಿಂದ 2000 ರೂಪಾಯಿ. ಇಂದು ಅದರ ಬೆಲೆ ಸರಾಸರಿ ಹನ್ನೆರಡು ಸಾವಿರ ರೂಪಾಯಿ. ನಮ್ಮಲ್ಲಿನ ಅಡಿಕೆ ಬೆಳೆಗಾರರು ಉದ್ಧಾರವಾಗಿ ಹೋದರು. 1970ರಲ್ಲಿ 39 ಸಾವಿರ ಹೆಕ್ಟೇರ್ ಇದ್ದ ಅಡಿಕೆ ಬೆಳೆಯುತ್ತಿದ್ದ ಕ್ಷೇತ್ರ 1997-98ರ ವೇಳೆಗೆ 88.4 ಸಾವಿರ ಹೆಕ್ಟೇರ್‌ಗಳಿಗೆ ವಿಸ್ತರಿಸಿತ್ತು.

ಅಡಿಕೆ ಬೆಲೆ ಏರಿಕೆಯಿಂದ ಬೆಳೆಗಾರ ಅದರತ್ತ ಹೊರಳುತ್ತಿದ್ದಾನೆ. ಮಲೆನಾಡು, ಕರಾವಳಿಗಳಲ್ಲಿ ಬೇರೆ ಬೆಳೆಗಳನ್ನೆಲ್ಲ ತೆಗೆದು ಬರೀ ಅಡಿಕೆ ತೋಟಗಳೇ ಮೇಲೇಳುತ್ತಿವೆ. ಬೆಂಗಳೂರು ಗ್ರಾಮಾಂತರ, ದಾವಣಗೆರೆಯಂಥ ಬಯಲು ಸೀಮೆಗಳಲ್ಲಿ ಕೂಡ ಅಡಿಕೆ ತೋಟಗಳಾಗುತ್ತಿವೆ. ದುಡ್ಡು ಬರುವುದಾದರೆ ಯಾರಿಗೆ ಬೇಡ!

ಆಶ್ಚರ್ಯ ಎನಿಸಬಹುದು. ಕೊಡಗು ಜಿಲ್ಲೆಯಲ್ಲಿ ಇವತ್ತು ದುಬಾರಿ ಬೆಲೆಯ ಕಾಫಿ, ಏಲಕ್ಕಿ, ಮೆಣಸು ಬೆಳೆಯುವುದು ಬಿಟ್ಟು ಅಡಿಕೆ ಸಸಿ ನೆಡಲಾರಂಭಿಸಿದ್ದಾರೆ.

ಐವತ್ತು ಪೈಸೆಯಿಂದ ಐದು ರೂಪಾಯಿಯವರೆಗೆ ನಾನಾ ಬ್ರ್ಯಾಂಡಿನ ಇನ್ನೂರಕ್ಕೂ ಹೆಚ್ಚು ಗುಟ್ಕಾಗಳು ಸ್ಯಾಷೆಯಲ್ಲಿ ಇವತ್ತು ದೊರೆಯುತ್ತವೆ. ಎರಡು ಗ್ರಾಂ ಪ್ಯಾಕೆಟ್ ಅತ್ಯಂತ ಚಿಕ್ಕದು. ಶಾಲೆಗೆ ಹೋಗುವ ಹುಡುಗನ ಜೇಬಿಗೂ ಚಟಕ್ಕೂ ಎಟುಕುವಂಥದ್ದು.

ಹೀಗೆ ಬಹುಮುಖ್ಯ ಪಿಡುಗೊಂದು ದಟ್ಟವಾಗುತ್ತಿದೆ. ಎಳೆಯ ಜೀವಿಗಳು, ಚೇತನಗಳು, ದೂರದ ಬೀದರ್‌ನ ಕುಗ್ರಾಮವಾದ ತಾಂಡಾದಿಂದ ಹಿಡಿದು ಧಾರವಾಡ, ಗುಲ್ಬರ್ಗಾ, ಬೆಳಗಾವಿ, ಬೆಂಗಳೂರಂಥ ಶಹರುಗಳಲ್ಲಿ ಬತ್ತುತ್ತಾ ಹೋಗುತ್ತಿವೆ.

''ಗುಟ್ಕಾ ರೋಗಿಗಳಿಗೆ ಪ್ರವೇಶವಿಲ್ಲ''

ಇದು ಪುಣೆಯ ಸಸೂನ್ ಆಸ್ಪತ್ರೆಯ ಮುಂದಿರುವ ಬೋರ್ಡು. ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾಗಳಲ್ಲಿ ಗುಟ್ಕಾ ನಿಷೇಧಿಸಲಾಗಿದೆ. ಹೀಗಾಗಿ ಪುಣೆಯ ಆಸ್ಪತ್ರೆಗಳು ಗುಟ್ಕಾ ವಿರುದ್ಧ ಸಮರ ಸಾರಿವೆ. ಇಡೀ ಪಶ್ಚಿಮ ಭಾರತದಲ್ಲಿ ವಿಶೇಷ ಚಿಕಿತ್ಸೆಗೆ ಹೆಸರಾದ ಸಸೂನ್ ಆಸ್ಪತ್ರೆಗೆ ಬೇರೆ ಬೇರೆ ಊರುಗಳಿಂದ ವೈದ್ಯರ ಸೂಚನೆ ಮೇರೆಗೆ ರೋಗಿಗಳು ಚಿಕಿತ್ಸೆಗಾಗಿ ಬರುತ್ತಾರೆ. ಆದರೆ ಗುಟ್ಕಾ ತಿಂದು ರೋಗಿಷ್ಠರಾದ ಜನಕ್ಕೆ ಚಿಕಿತ್ಸೆ ನಿರಾಕರಿಸಲು ವೈದ್ಯರುಗಳು ನಿರ್ಧರಿಸಿದ್ದಾರೆ.

ಇದು ಕೇವಲ ಅನಕ್ಷರಸ್ಥರು, ಬಡವರಲ್ಲಿ ಕಾಣಿಸಿಕೊಳ್ಳುವ ಪಿಡುಗಲ್ಲ. ಶ್ರೀಮಂತರು ಶಿಕ್ಷಿತರೂ ಗುಟ್ಕಾ ಸೇವನೆಯ ದಾಸರಾಗಿದ್ದಾರೆ ಎಂದು ಪುಣೆಯ ವೈದ್ಯರ ಅಳಲು. ಅಲ್ಲಿನ ವೈದ್ಯರೊಬ್ಬರು ಶ್ರೀಮಂತ ಕಂಪೆನಿಯೊಂದರ ಮುಖ್ಯಸ್ಥ ದಿನಕ್ಕೆ 25 ಪ್ಯಾಕೆಟ್ ಗುಟ್ಕಾ ತಿನ್ನುವುದು ಕಂಡು ಬುದ್ಧಿ ಹೇಳಿದರು. ಆತ ತಿನ್ನುವ ಪ್ಯಾಕೆಟ್‌ಗಳ ಸಂಖ್ಯೆ ಸ್ವಲ್ಪವಾದರೂ ಕಡಿಮೆ ಆಗಿದ್ದರೆ ಹೇಳಿ. ಇಂಥ ಜನಕ್ಕೆ ಚಿಕಿತ್ಸೆ ಯಾಕೆ ಬೇಕು? ನಾಳೆಯ ದಿನ ವೈದ್ಯರು ಚಿಕಿತ್ಸೆ ಕೂಡ ಕೊಡುವುದಿಲ್ಲ ಎಂಬ ಹೆದರಿಕೆಯಿಂದಲಾರೂ ಚಟ ಬಿಡಲಿ ಎಂದು ಒಂದು ಸಣ್ಣ ಆಸೆ.

■ ಮೋಹನ

ಗಿಳಿ ಸಾಕಿ ಗಿಡುಗನಿಗೆ ಬಲಿ ನೀಡಬೇಕೆ?

ವಿದ್ಯುನ್ಮಾನ ಮಾಧ್ಯಮಗಳ ಅಬ್ಬರದ ನಡುವೆ, ಜಾಗತೀಕರಣ, ಉದಾರೀಕರಣ, ಗಣಕೀಕರಣಗಳ ಗದ್ದಲದ ಮಧ್ಯೆ-ಆಧುನಿಕ ಬದುಕು ಅತಂತ್ರವೆನಿಸಿದ್ದು, ಅಪಾಯ ಗಳನ್ನು ಆಹ್ವಾನಿಸುತ್ತಲೇ ಸಾಗುತ್ತಿದೆ. ಕ್ಯಾಬರೆ, ಕಾರ್ಡ್, ಕ್ಲಬ್, ಸ್ಕಿಲ್ ಗೇಮ್‌ಗಳು, ವಿಡಿಯೋ ಮ್ಯಾಸೇಜ್ ಪಾರ್ಲರ್‌ಗಳು ಯುವ ಜನಾಂಗಕ್ಕೆ ಆಪ್ತವೆನಿಸುತ್ತಿದ್ದು, ಅಶಿಸ್ತನ್ನು ಪೋಷಿಸುತ್ತಿವೆ.

■ ಆರೂರು ಲಕ್ಷ್ಮಣ್‌ಶೇಟ್



ಈ ನಡುವೆ.... ಸಿಗರೇಟ್, ಬೀಡಿ, ತಂಬಾಕು, ಡ್ರಗ್ಸ್, ಗುಟಕಾಗಳಂತಹ ಸಾಮಾಜಿಕ ಪಿಡುಗುಗಳು ಯುವ ಜನತೆಯ ಮೇಲೆ ಸವಾರಿ ಮಾಡುತ್ತಿವೆ.

ಇಂದು 'ಗುಟ್ಕಾ' ಸಾಮಾಜಿಕ ಪಿಡುಗಾಗಿ ಬೆಳೆದು ಬಂದಿದೆ. ಈ ಚಟಕ್ಕೆ ಪ್ರೌಢಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳು ಬಲಿಯಾಗುತ್ತಿರುವುದು ನಮ್ಮ ಕಾಲದ ದುರಂತ. ಗಿಳಿ ಸಾಕಿ, ಬೆಳೆಸಿ, ಗಿಡುಗನಿಗೆ ಬಲಿ ನೀಡಬೇಕೆ?

ಈ ನಡುವೆ ಧಾರವಾಡದಲ್ಲೊಂದು ವಿಧಾಯಕ ಕ್ರಾಂತಿಗೆ ವೈದ್ಯ ವೃಂದ ಸಜ್ಜಾಗಿದೆ. ಇವರ ಬೆಂಬಲಕ್ಕೆ ಸುಶಿಕ್ಷಿತ ಜನ ಸಮುದಾಯ ಹೆಗಲು ಜೋಡಿಸಿದೆ. ಬಿಳಿಕೋಟು ಧರಿಸಿದ ವೈದ್ಯರು 'ಗುಟ್ಕಾ ಬಿಡಿ-ಕ್ಯಾನ್ಸರ್ ದೂರವಿಡಿ' - ಎಂಬ ಘೋಷಣೆ ಕೂಗುತ್ತಾ ರಸ್ತೆಗಿಳಿದಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಮಂಡಳಿಗಳ ಸದಸ್ಯೆಯರು, ಶಿಕ್ಷಕರು, ಗ್ರಾಮೀಣ ಪ್ರದೇಶಗಳ ಆರೋಗ್ಯ ಕಾರ್ಯಕರ್ತರು, ವಿವಿಧ ಯುವಕ ಮಂಡಳಗಳ ಉತ್ಸಾಹಿಗಳು, ಸಮಾಜ ಸೇವಕರು.... ಹೀಗೆ ಸಾಮಾಜಿಕ ಕಳಕಳಿಯುಳ್ಳ ಜನ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜತೆಗೂಡಿ 'ಗುಟ್ಕಾ ಬಿಡಿ' ಚಳವಳಿಯ ಕಾವು ಹೆಚ್ಚಿಸುತ್ತಿದ್ದಾರೆ.

ಅರ್ಥಪೂರ್ಣ ಆಚರಣೆ

'ಭಾರತೀಯ ದಂತ ಪರಿಷತ್' ಇದೀಗ ಸುವರ್ಣ ಮಹೋತ್ಸವ ಆಚರಣೆಯ ಸಂಭ್ರಮದಲ್ಲಿದೆ. (1949-1999). 'ಭಾರತೀಯ ದಂತ

"ತಂಬಾಕು ಉತ್ಪನ್ನಗಳಿಂದ ಕೇಂದ್ರ ಸರಕಾರಕ್ಕೆ ವಾರ್ಷಿಕ 1500 ಕೋಟಿ ರೂಪಾಯಿಗಳ ಆದಾಯ ಬರುವುದೇನೋ ನಿಜವೇ. ಆದರೆ ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗಾಗಿ 2500 ಕೋಟಿ ರೂ. ಖರ್ಚಾಗುತ್ತಿದೆಯಲ್ಲ ? ಈ ಅಪಾಯದ ಅರಿವು ಬೇಡವೆ? ಗುಟಕಾ ಸೇವನೆ ನಿಷೇಧಿಸುವಂತೆ ಕೇಂದ್ರ ಸರಕಾರಕ್ಕೆ ಭಾರತೀಯ ದಂತ ವೈದ್ಯಕೀಯ ಪರಿಷತ್ ಅನೇಕ ಪತ್ರಗಳನ್ನು ಬರೆದರೂ ಪ್ರತಿಕ್ರಿಯೆ ಶೂನ್ಯ. ಹೀಗಾಗಿ ವೈದ್ಯಕೀಯ ಸಮುದಾಯ 'ಕ್ವಿಟ್ ಗುಟಕಾ' ಚಳವಳಿ ಆರಂಭಿಸುವುದು ಅನಿವಾರ್ಯವೆನಿಸಿದೆ."

– ಡಾ.ಆರ್.ಕೆ.ಬಾಲಿ

ವೈದ್ಯಕೀಯ ಮಂಡಳಿ' ತನ್ನ ಧಾರವಾಡ ಜಿಲ್ಲಾ ಶಾಖೆಯ ಮೂಲಕ, ಸತ್ತೂರಿನ 'ಎಸ್.ಡಿ.ಎಂ.ದಂತ ಮಹಾವಿದ್ಯಾಲಯ'ದ ಆಶ್ರಯದಲ್ಲಿ ಸುವರ್ಣ ಮಹೋತ್ಸವ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಿತು. ಅದರ ಫಲಶ್ರುತಿ ಈ 'ಗುಟ್ಕಾ ಬಿಡಿ' ಚಳುವಳಿ.

ಕಳೆದ ಸೆಪ್ಟೆಂಬರ್‌ನಲ್ಲಿ ಮೂರು ದಿನಗಳ ಕಾಲ, ಧಾರವಾಡದ ನೆಲದಲ್ಲಿ ಕ್ರಾಂತಿ ಬೀಜ ಬಿತ್ತಲಾಯಿತು. ಧವಳಗಿರಿಯ ದಂತ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ವೈದ್ಯವೃಂದ ಬೃಹತ್ ಆಂದೋಲನಕ್ಕೆ ನಾಂದಿ ಹಾಡಿತು. ಗುಟ್ಕಾ ಸೇವನೆಯ ದುಷ್ಪರಿಣಾಮಗಳನ್ನು ಇವರೆಲ್ಲ ಸನಿಹದಿಂದ ಬಲ್ಲವರು. ಇಲ್ಲಿರುವ ರೋಗಿಗಳಲ್ಲಿ 'ಕಟಬಾಯಿ' ಬಾಧೆಗೆ ತುತ್ತಾದವರ ಸಂಖ್ಯೆ ವೃದ್ಧಿಸುತ್ತಿರುವುದನ್ನು ಗಮನಿಸುತ್ತಾ ಬಂದವರು. ಕ್ಯಾನ್ಸರ್ ತಜ್ಞ ಡಾ.ಎ.ಸಿ.ಡೇಕಾರ ಅಭಿಮತದಂತೆ - 'ಡಿಸೆಂಬರ್ 98ರ ವೇಳೆಗೆ ಇದ್ದ ನಲವತ್ತೈದು ಸಾವಿರಕ್ಕೂ ಅಧಿಕ ಸಂಖ್ಯೆಯ ಕ್ಯಾನ್ಸರ್ ರೋಗಿಗಳಲ್ಲಿ ಬಹುತೇಕರು ಬಾಯಿ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಗುಟ್ಕಾ ಮತ್ತು ತಂಬಾಕು ಸೇವನೆಯಿಂದ ಈ ರೋಗಕ್ಕೆ ತುತ್ತಾದವರ ಸಂಖ್ಯೆಯೇ ಹೆಚ್ಚು.'



'ಗುಟ್ಕಾ ತ್ಯಜಿಸುವ ಸಂಕಲ್ಪ' ನಾಟಕದ ಒಂದು ದೃಶ್ಯ

ಉತ್ತರ ಕರ್ನಾಟಕ ಭಾಗದಲ್ಲಿ ಪಾನ್ ಚಪ್ಪರಿಸುವ ಚಪಲ ಜಾಸ್ತಿ. ತಂಬಾಕು ಅಗಿಯುತ್ತಾ ರಸ ನುಂಗಿ (ವಿಷ ಹೀರಿ?) ಖುಷಿ ಪಡುವವರೇ ಅಧಿಕ. ಹೀಗಾಗಿ, ಈ ಭಾಗದಲ್ಲಿ ಗಂಟಲು ಕ್ಯಾನ್ಸರ್ ಬಾಧೆ ಹೆಚ್ಚಿದೆ. ತಮಾಷೆಗಾಗಿ, ಕಂಪೆನಿಗಾಗಿ, ಟೈಮ್‌ಪಾಸ್‌ಗಾಗಿ, ಹೊಸ ಹುಮ್ಮಸ್ಸಿಗಾಗಿ ಗುಟಕಾ ಜಗಿಯುವವರಿಗೆ-ತಾವು ಬೆಂಕಿ ಉಂಡೆಯನ್ನು ಬಾಯಲ್ಲಿ ಇರಿಸಿಕೊಂಡಿದ್ದೇವೆಂಬ ಅರಿವಿಲ್ಲ. ನಿಧಾನ ವಿಷವನ್ನು ಗಂಟಲಲ್ಲಿ ಹರಡಿ, 'ಕಟಬಾಯಿ' ರೋಗಕ್ಕೆ ಆಹ್ವಾನ ನೀಡುತ್ತದೆ. ಚಪಲ ಹೆಚ್ಚಿದಂತೆಲ್ಲ, ಬಾಯನ್ನು ಮುಚ್ಚಲಾಗದೆ, ಚಡಪಡಿಸಬೇಕಾಗುತ್ತದೆ. ಇದು 'ಬಾಯಿ ಕ್ಯಾನ್ಸರ್'ನ ಮೊದಲ ಹಂತ. ದುರಂತ ನಾಟಕದ ಪ್ರಥಮ ದೃಶ್ಯ.

ಗುಟಕಾ ಸೇವನೆಯಿಂದ ಬಾಯಲ್ಲಿ ಬಿಳಿ, ಕೆಂಪು ಮಚ್ಚೆಗಳು ಕಾಣಿಸಿಕೊಳ್ಳುತ್ತವೆ. ಬಾಯಿ ಉರಿತ, ಬಿಗಿತ, ನುಂಗಲಾಗದೇ ಒದ್ದಾಟ, ತೊದಲುತ್ತಾ ಮಾತನಾಡುವ ಪೇಚಾಟ.... ಇದೆಲ್ಲಾ ಬಾಯಿ ಕ್ಯಾನ್ಸರ್ ಲಕ್ಷಣಗಳು. 'ಕಟಬಾಯಿ' ರೋಗ ಬಂದವರಲ್ಲಿ ಸಾಮಾನ್ಯವಾಗಿ ಶೇಕಡಾ 30-40ರಷ್ಟು ರೋಗಿಗಳಿಗೆ ಬಾಯಿ ಕ್ಯಾನ್ಸರ್ ಆಗುತ್ತದೆ. ಸಮಸ್ಯೆಯ ಗಂಭೀರತೆ ಅರಿಯದೆ ಮೊದಮೊದಲು ನಿರ್ಲಕ್ಷ್ಯತಾಳಿ, , ಮತ್ತೆ ವೈದ್ಯರತ್ತ ದೌಡಾಯಿಸುವಾಗ ತೀರಾ ತಡವಾಗಿರುತ್ತದೆ. ಪರಿಸ್ಥಿತಿ ಕೈ ಮೀರಿರುತ್ತದೆ. ಇದು ನಿತ್ಯದ ನೋಟ. ವಿಧಿಯ ಕುಟೂಟಾಟ.


'ಕ್ವಿಟ್ ಗುಟಕಾ'

ಕಳೆದ ಸೆಪ್ಟೆಂಬರ್‌ನಲ್ಲಿ ಸತ್ತೂರಿನ ಎಸ್.ಡಿ.ಎಂ. ದಂತ ವಿಜ್ಞಾನ ಕಾಲೇಜಿನಲ್ಲಿ ಜನಜಾಗರಣೆಯ ಕಾರ್ಯಕ್ರಮದ ಶ್ರೀಕಾರ. ವೈದ್ಯ ವೃಂದದಿಂದ ಓಂಕಾರ. ಸಿಬ್ಬಂದಿ ವರ್ಗದವರ ತುಂಬು ಸಹಕಾರ. ಸಮುದಾಯ ಕಾರ್ಯಕರ್ತೆಯರಿಗೆ ಗುಟಕಾದಿಂದಾಗುವ ಬಾಯಿರೋಗಗಳ ಬಗೆಗೆ ತರಬೇತಿ ಶಿಬಿರ. ರೋಗಿಗಳೊಂದಿಗೆ ಸಂದರ್ಶನ, ವಿಚಾರ ವಿನಿಮಯ ನಡೆಯಿತು. ಪ್ರೌಢಶಾಲಾ ಮಕ್ಕಳಿಗೆ ಚಿತ್ರಕಲೆ ಹಾಗೂ ಭಾಷಣ ಕಲೆಗಳಲ್ಲಿ ಸ್ಪರ್ಧೆಗಳು ನಡೆದವು. 'ಗುಟಕಾದಿಂದಾಗುವ ದುಷ್ಪರಿಣಾಮಗಳು'-ಎಂಬ ವಿಷಯದ ಬಗ್ಗೆ ವಾದ ಮಂಡಿಸಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ಎಂಬತ್ತು ಮೀರಿತ್ತು ಎಂಬುದು ಗಮನಾರ್ಹ.

ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದವರ ಒಕ್ಕೊರಲ ಉದ್ಘೋಷ - "ಗುಟ್ಕಾ ಬಿಡಿ ಕ್ಯಾನ್ಸರ್ ದೂರವಿಡಿ."

ಬೃಹತ್ ಸಮಾವೇಶ. ಕಾಲೇಜು ವಿದ್ಯಾರ್ಥಿಗಳ ವಿವಿಧ ಉದ್ಘೋಷ. 'ವಿವೇಕಿಯು ಆರೋಗ್ಯ ಪ್ರಿಯ-ಅವಿವೇಕಿ ಗುಟಕಾ ಪ್ರಿಯ, 'ನಗುತ ನಲಿಯುವ ಮನೆಗೆ ಹೆಣ್ಣೇ ಕಾರಣ - ಅಳುತ ನರಳುವ ಮನೆಗೆ ಗುಟಕಾ ಕಾರಣ', 'ಗುಟಕಾ ಬಿಡಿ - ಆಯುಷ್ಯ ಪಡಿ', 'ಗುಟಕಾ ಬಿಡಿ - ಕ್ಯಾನ್ಸರ್ ತಡಿ'.... ಮುಂತಾದ ಘೋಷಣಾ ಫಲಕಗಳನ್ನು ಕಂಡು ದಂಗಾದವರು ಹಲವಾರು ಮಂದಿ. ಗುಟಕಾ ಜಗಿಯುತ್ತಿದ್ದವರು ಗುಟ್ಟಿನಲ್ಲಿ ಉಗುಳಿದರು. ರೋಗದ ಭೀಕರತೆ ಸಾರುವ ಛಾಯಾ

ಇದು ಗುಟ್ಕಾ ವಿರೋಧಿ ಚಳವಳಿ ಅಲ್ಲ. **'Ban Gutka'** ಎಂಬ ಘೋಷಣೆ ನಮ್ಮದಲ್ಲ. ಇದೊಂದು ಸಾಮೂಹಿಕ ಆಂದೋಲನ. ವೈದ್ಯರ ಮುಂಚೂಣಿಯಲ್ಲಿ ಜನ ಜಾಗರಣ. **Education, Information and Awareness....** ಇದೊಂದು ನಿರಂತರ ಅಭಿಯಾನ. ಪುಟ್ಟ ಹಣತೆಯನ್ನು ನಾವು ಹಚ್ಚಿದ್ದೇವೆ. ಇದನ್ನು ಪ್ರಖರ ಪಂಜನ್ನಾಗಿಸುವ ಹೊಣೆ ಈ ನೆಲದ ಪ್ರಜ್ಞಾವಂತ ನಾಗರಿಕರ ಮೇಲಿದೆ.



■ ಡಾ.ರಮಾಕಾಂತ ಪಟವಾರಿ.

ಚಿತ್ರ ಕಂಡು ನಡುಗಿದರು.

ಕಲಾಭವನದಲ್ಲಿ 'ಸಾಮಾಜಿಕ ಪಿಡುಗುಗಳು - ಒಂದು ಒಳನೋಟ' ಎಂಬ ಕಿರುಹೊತ್ತಗೆಯ ಬಿಡುಗಡೆ ಮಾಡಿದವರು ಡಾ. ಆರ್.ಕೆ.ಬಾಲಿ. ಅವರ ಮಾತು ಬಡಿದೆಬ್ಬಿಸುವಂತಿತ್ತು:

ನಿರಂತರ ಆಂದೋಲನ

ಭಾರತೀಯ ದಂತ ಪರಿಷತ್‌ನ ಉಪಾಧ್ಯಕ್ಷ, ಭಾರತೀಯ ದಂತ ವೈದ್ಯಕೀಯ ಮಂಡಳಿಯ ಧಾರವಾಡ ಜಿಲ್ಲಾ ಶಾಖೆಯ ಅಧ್ಯಕ್ಷ, ಸುವರ್ಣ ಮಹೋತ್ಸವ ಸಮಾರಂಭದ ಅಖಿಲ ಭಾರತ ಮಟ್ಟದ ಸಂಚಾಲಕ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ದಂತ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಸಿ. ಭಾಸ್ಕರರಾವ್ ನೇತೃತ್ವದಲ್ಲಿ 'ಗುಟಕಾ ಬಿಡಿ' ಆಂದೋಲನ ಆರಂಭಗೊಂಡು, ಉತ್ತರ ಕರ್ನಾಟಕದ ಜನತೆಯನ್ನು ಬಡಿದೆಬ್ಬಿಸಿತು.

''ಆಣೀ ಮಾಡಿ ಹೇಳ್ತೀನ್ರಿ.... ಇನ್ ನಾ ಗುಟ್ಕಾ ಮುಟ್ಟಾಂಗಿಲ್ಲರೀ''

ಹುಬ್ಬಳ್ಳಿಯ ಕಿಮ್ಸ್, ನವನಗರದ ಕ್ಯಾನ್ಸರ್ ಆಸ್ಪತ್ರೆ, ಸತ್ತೂರಿನ ಎಸ್.ಡಿ.ಎಂ. ದಂತ ವಿಜ್ಞಾನ ಕಾಲೇಜುಗಳಲ್ಲಿ ದೊರೆತ ಮಾಹಿತಿಯಿಂದ ಈ ವ್ಯಸನದ ವ್ಯಾಪಕತೆಯ ದರ್ಶನವಾಯಿತು. ಕಟಿಬಾಯಿ ರೋಗಿಗಳನ್ನು ಕೆಲವು ಖಾಸಗಿ ದವಾಖಾನೆಗಳಲ್ಲಿ ಕೂಡ ಭೆಟ್ಟಿಯಾಗಿ ಮಾತನಾಡಿಸಿದ್ದು ಇಲ್ಲಿದೆ.

''ಮೊದಮೊದಲು ಪಾನ್‌ಮಸಾಲಾ ತಿನ್ನಾಕ ಹತ್ತಿದ್ದೆ. ಕ್ರಮೇಣ ಗುಟ್ಕಾ ಚಟಕ್ಕೆ ಬಿದ್ದೇರಿ. ಈಗ ನೋಡ್ರಿ.... ಹಿಂಗಾಗ್ಯದ....''

ಬಾಯಿ ಕ್ಯಾನ್ಸರ್‌ಗೆ ಚಿಕಿತ್ಸೆ ಪಡೆಯುತ್ತಿರುವ ಬಸವಣ್ಣೆಪ್ಪನ ಬೇಸರದ ನುಡಿ.

''ನನಗೆ ಸಿನಿಮಾ ಹುಚ್ಚರೀ.... ಸಕತ್ತಾಗಿ ಸಿನಿಮಾ ನೋಡೇನ್ರೀ.... ಗೆಳೆಯರ ಕೂಡ ಸೇರ್ಕೊಂಡು, ಸಿಗರೇಟ್ ಹೊಗೀ ಬಿಡ್ತಾ ಮಜಾ ಮಾಡೇನ್ರಿ.... ಅದ್ಯಾಕೋ ಕೆಮ್ಮು ಬರಾಕ ಶುರು ಆತ್ರಿ....''

ಬೆಳಗಾವಿಯಿಂದ ಬಂದು, ಹುಬ್ಬಳ್ಳಿಯ ಆಸ್ಪತ್ರೆಯೊಂದರಲ್ಲಿ ಕಟಿಬಾಯಿ ರೋಗಕ್ಕೆ ಚಿಕಿತ್ಸೆ ಪಡೆಯುತ್ತಿರುವ ದೊಡ್ಡಮನಿ ಹೇಳತೊಡಗಿದ.

''ಸಿಗರೇಟ್ ಬಿಟ್ಟೇರಿ.... ಆದ್ರ.... ಥೇಟರ್‌ದಾಗ ಖಾಲಿ ಕುಂದ್ರಾಕ ಸಾಧ್ಯ ಆಗಲಿಲ್ರೀ.... ದೋಸ್ತ್ ಮಂದಿ ಒತ್ತಾಯಕ್ಕ ಗುಟಕಾ ತಿನ್ನಾಕ ಚಾಲು ಆತ್ರೀ.... ಮನೇ ಮಂದೀ ಕಣ್ಣು ತಪ್ಪಿಸಿ, ದಿನಕ್ಕ 20-25 ಪ್ಯಾಕೆಟ್ ಗುಟಕಾ ಖಾಲಿ ಮಾಡೇನ್ರೀ.... ಬಾಯಾಗ ಗುಳ್ಳೆ ಎದ್ದು, ಹುಣ್ಣಾಗಿ ಭಾಳ ತ್ರಾಸ್ ಆತ್ರೀ.... ಉಗುಳು ನುಂಗಾಕ ಹರಸಾಹಸ ಮಾಡಬೇಕಾತ್ರಿ.... ನಾಲಗಿ ಮ್ಯಾಗ ಕಂಟ್ರೋಲ್ ಕಮ್ಮಿಯಾಗಾಕ ಹತ್ತಿತ್ರೀ.... ಈಗ ಇಲ್ಲಿ ಬಂದ ಮ್ಯಾಗ ಆರಾಮ ಆಗೇನ್ರೀ.... ಆ ಪರಮಾತ್ಮನ ಮ್ಯಾಗ ಪ್ರಮಾಣ ಮಾಡಿ ಹೇಳ್ತೀನ್ರೀ.... ಇನ್ನ್ ನಾ ಗುಟ್ಕಾ ಮುಟ್ಟಾಂಗಿಲ್ಲರೀ....''

ಇದು ಕೆಟ್ಟಮೇಲೆ ಬುದ್ಧಿ ಕಲಿತ ದೊಡ್ಡಮನಿಯ ಕತೆ.

★

ಇಪ್ಪತ್ತರ ರಮೇಶ ಹಡಗಲಿಯದು ಬೇರೆಯದೇ ಕತೆ. ಅಪ್ಪ ಕೊಡುತ್ತಿದ್ದ 'ಪಾಕೆಟ್ ಮನಿ' ಗುಟ್ಕಾ ಚಟಕ್ಕೆ ಖಾಲಿಯಾಗುತ್ತಿತ್ತು. ಮನೆಗೆ ಬಂದವ ಅಮ್ಮನ ಹತ್ತಿರ 'ಐಸ್‌ಲ್ಯಾಂಡ್‌ಗೆ ಹೋಗಿದ್ದೆ' 'ಚಾಕಲೇಟ್ ತಿಂದೆ' 'ಗ್ರೀಟಿಂಗ್ ಕಾರ್ಡ್‌ಗೆ ಸ್ಪೆಂಡ್ ಮಾಡ್ದೆ', 'ಬರ್ತ್‌ಡೇ ಟ್ರೀಟ್ ಕೊಟ್ಟೆ'.... ಎಂದೆಲ್ಲಾ ಬರುಡೆ ಬಿಡುತ್ತಿದ್ದ. ಪಾಕೆಟ್ ಮನಿ ಸಾಲದೇ ಹೋದಾಗ, ಕ್ರಮೇಣ ಅಪ್ಪನ ಪ್ಯಾಂಟ್ ಜೇಬಿಗೆ ಕೈ ಹಾಕತೊಡಗಿದ. ಅಮ್ಮನ ವ್ಯಾನಿಟಿ ಬ್ಯಾಗ್ 'ಹೈಜಾಕ್' ಮಾಡಿದ. ಇಬ್ಬರೂ ದುಡಿಯುವವರೇ. ಇಂವ ಮಾತ್ರ ಖಾಲಿ ಮಾಡುವವ.

ಈಗ.... ತುಂಬ ತಡವಾಗಿ ದವಾಖಾನೆಗೆ ಸೇರಿಸಲ್ಪಟ್ಟಿರುವ ರಮೇಶ ಕಣ್ಣೀರ್ಗರೆಯುತ್ತಾ ಹೇಳಿದ.

''ಇಷ್ಟೊತ್ತಿಗೆ ನಾನು ಪದವೀಧರನಾಗ್ಬೇಕಾಗಿತ್ತು ಸಾ.... ಆದ್ರೆ, ಇನ್ನೂ ಪಿ.ಯು.ಸಿ ಮುಗಿಸಲಾಗದೇ ಒದ್ದಾಡ್ತಿದ್ದೀನಿ.... ಅವರಿವರ ಮಾತು ಕೇಳಿ ನಾನು ಕೆಟ್ಟೆ ಸಾ.... ಅಮ್ಮ, ಅಪ್ಪಂಗೆ ವಿಶ್ವಾಸ ದ್ರೋಹ ಮಾಡ್ದೆ ಸಾ.... ನಾನು ಗುಣ ಆಗಿ ಮನೆ ಸೇರಿದ್ರೆ, ಖಂಡಿತಾ ಬದಲಾಗ್ತೀನಿ.... ಗುಟ್ಕಾ ವಿರುದ್ಧ ನಡೀತಿರೋ ಚಳವಳಿಯಲ್ಲಿ ಪಾಲ್ಗೊಂಡು, ನನ್ನಂಥಾ ಸಹಸ್ರಾರು ಗುಟ್ಕಾ ವ್ಯಸನಿಗಳ ಪ್ರಾಣ ಉಳಿಸ್ತೀನಿ.... ಈ ಭಾಸ್ಕರ ಡಾಕ್ಟ್ರು, ಪಟವಾರಿ ಡಾಕ್ಟ್ರು ಮನುಷ್ಯರಲ್ಲ.... ದೇವ್ರು!.... ಖಂಡಿತಾ ನನ್ನಂಥಾ ದುರ್ವ್ಯಸನಿಗಳಿಗೆ ಬದುಕು ಕೊಡ್ತಿರೋ ದೇವ್ರು!''

★

ಸಿಗರೇಟ್, ಬೀಡಿ, ತಂಬಾಕು, ಗುಟ್ಕಾ ಸೇವನೆಗೆ ಬಲಿಯಾಗುವವರು ಗಂಡಸರು ಮಾತ್ರ ಎಂಬುದು ಸಾಮಾನ್ಯ ನಂಬಿಕೆ. ಆದರೆ, ಗುಟ್ಕಾ ಸೇವನೆಯಿಂದಾಗಿ ನಾಲಿಗೆ ಹುಣ್ಣಿಗೆ ತುತ್ತಾಗಿ, ಇದೀಗ ಚಿಕಿತ್ಸೆಯ ನಂತರ

'ಕೊನೆಗೂ ಬಿಟ್ಟೆ!'

ನಾವು ಸಂದರ್ಶಿಸಿದ ಸುಶಿಕ್ಷಿತ ಗುಟ್ಕಾ ವ್ಯಸನಿಯೊಬ್ಬ ಹೇಳಿದ:

'ನಾನು ಗುಟಕಾ ಸೇವನೆಯ ದುಷ್ಪರಿಣಾಮಗಳ ಬಗ್ಗೆ ಎಷ್ಟೋ ಪುಸ್ತಕಗಳನ್ನು ಲೇಖನಗಳನ್ನು, ಕರಪತ್ರಗಳನ್ನು ಓದಿ ಓದಿ ಕೊನೆಗೂ ಬಿಟ್ಟೇ ಬಿಟ್ಟೆ.'

'ಹೌದಾ?.... ಗುಡ್! ಬಾಯಿ ಕ್ಯಾನ್ಸರ್ ಬಾಧೆಯ ಭಯ ನಿನಗಿನ್ನು ಇಲ್ಲ.''

''ಹಂ!.... ನಾನು ಬಿಟ್ಟದ್ದು ಗುಟ್ಕಾ ಅಲ್ಲ ಸಾರ್.... ಓದುವುದನ್ನು.'' ಮೆಲ್ಲ ಉಸುರಿದ ಭೂಪ.

ಜಾಹೀರಾತು ನಿಷೇಧ....?

ದೇಶಾದ್ಯಂತ ತಂಬಾಕು ಹಾಗೂ ತಂಬಾಕು ಉತ್ಪನ್ನಗಳ ಜಾಹೀರಾತುಗಳನ್ನು ನಿಷೇಧಿಸಲು ಕೇಂದ್ರ ಆರೋಗ್ಯ ಸಚಿವಾಲಯ ನಿರ್ಧರಿಸಿದೆ. ಎರಡು ವರ್ಷಗಳ ಕಾಲ ಈ ಕುರಿತು ವ್ಯಾಪಕ ಆಂದೋಲನ ನಡೆಸಲು ಕೂಡ ನಿರ್ಧರಿಸಲಾಗಿದೆ.

ಆದರೆ, ಎದೆಗೂಡುಗಳನ್ನು ಹೊಗೆಗೂಡುಗಳಾಗಿಸುವ, ರೋಗಗಳ ಬೀಡಾಗಿಸುವ ಜಾಹೀರಾತುಗಳ ಅಬ್ಬರ, ಉಬ್ಬರ ಸಾಗಿಯೇ ಇದೆ. ನಿಕೋಟಿನ್ ಎಂಬ ನಿಧಾನವಿಷದೊಂದಿಗೆ ನಿಕಟ ಸಂಪರ್ಕ ಇರಿಸಿಕೊಂಡಿದೆ ನಮ್ಮ ಯುವ ಜನಾಂಗ.

ಪಾಶ್ಚಿಮಾತ್ಯ ದೇಶಗಳಲ್ಲಿ ಧೂಮಪಾನಿಗಳ ಸಂಖ್ಯೆ ಕ್ಷೀಣಿಸುತ್ತದೆ. ಪ್ರಪಂಚದಲ್ಲಿ ಪ್ರತಿವರ್ಷ ಹತ್ತುಲಕ್ಷ ಮಂದಿ ಧೂಮಪಾನದಿಂದ ಸಾಯುತ್ತಿದ್ದಾರೆ. ಈ ಚಟವನ್ನು ಪ್ರಚೋದಿಸುತ್ತ, ತರುಣ ಪೀಳಿಗೆಯನ್ನು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಇದಕ್ಕೆ ಬಲಿ ಕೊಡುವುದರ ಹಿಂದೆ ಕಪ್ಪು ಹಣದ ವಹಿವಾಟು, ರಾಜಕೀಯ ಸ್ವಾರ್ಥ ತುಂಬಿದೆ.

ವಿದೇಶೀ ಚಾನೆಲ್ಲುಗಳು ವಿವಿಧ ವ್ಯಸನಗಳ ವರ್ಣರಂಜಿತ ಕನಸಿನ ಲೋಕವನ್ನು ಸೃಷ್ಟಿಸುತ್ತಲೇ ಸಾಗಿವೆ. ಹೀಗಾಗಿ ಚಟಕ್ಕೇರಿಸುವ ಚಟಗಳನ್ನು ಬಿಡಲಾಗದ ತಟವಟ. 'ಬ್ರಹ್ಮಚರ್ಯವನ್ನು ಪಾಲಿಸಬಹುದು... ಕಾಮವನ್ನು ಬೇಕಾದರೆ ನಿಗ್ರಹಿಸಿಬಹುದು. ಆದರೆ... ಗುಟ್ಕಾ ಚಪ್ಪರಿಸುವ ಚಪಲ ಬಿಡುವುದು ಕಷ್ಟ' ಎನ್ನುತ್ತಾರೆ ಗುಟಕಾ ವ್ಯಸನಿಗಳು. ಹೇಗಿದೆ ನೋಡಿ ಗುಟಕಾ ಮೋಡಿ...!?

ಚೇತರಿಸಿಕೊಳ್ಳುತ್ತಿರುವ ದುರ್ಗವ್ವಾ ಮಡಿವಾಳರ್ ಹಾಗೂ ಚೆನ್ನಮ್ಮ ಹಾದಿಮನಿಯವರದ್ದು ಕರುಳು ಕತ್ತರಿಸುವ ಕತೆ.

''ದುಡಿಯಾಕ ಹೊಲಕ್ಕ ಹೋಗೂ ಮಂದೀರಿ ನಾವು. ಗುಟ್ಕಾ ಗಂಟಲಿಗೆ ಬಿತ್ತಂದ್ರ ಹುರುಪು ಹೆಚ್ಚತಿತ್ರೀ.... ಅದೇ ಮಜಾ ಅನಸಾಕ ಹತ್ತಿತ್ರೀ.... ಕೆಟ್ಟ ಬಿಸಿಲ ಝಳ, ಹೊಲದಾಗಿನ ಧೂಳು, ಪಟ್ನದಾಗಿನ ಪುಡಿ.... ಎಲ್ಲಾ ನುಂಗಿ ನುಂಗಿ ಬಾಯಾಗ ಹುಣ್ಣು ಆತ್ ನೋಡ್ರಿ.... ನಾವು ಹಳ್ಳೀ ಮಂದಿ ನೋಡ್ರಿ.... ಬಡ ಪೆಟ್ಟಿಗೆ ಬಗ್ಗೂ ಮಂದಿ ಅಲ್ಲ.... ಅದ್ಕ ಡಾಕ್ಟರ ಸಾಬ್ರಿಗೆ ತೋರಸಾಕ ಹೋಗಿಲ್ರೀ.... ರೊಟ್ಟೀ ಹೊಡ್ಯಾಕ ಆಗದೇ ತ್ರಾಸ್ ಆತ್ ನೋಡ್ರೀ.... ಆಗ ನಮ್ಮ ಹಳ್ಳೀ ದವಾಖಾನೆಗೆ ಹೋಗಬೇಕಾತ್ರೀ.... ಆ ಯಪ್ಪ ಅದೇನೋ ಚೀಟಿ ಕೊಟ್ಟು ಇಲ್ಲಿಗೆ ಕಳಿಸ್ಯಾರ್ರೀ.... ಈಗ ನಾಲಿಗೆಗೆ ತ್ರಾಸ್ ಇಲ್ರೀ..... ದುಡಿಮೆ ಇಲ್ದ ರೊಕ್ಕದ ತ್ರಾಸ್ ಆಗೇತ್ರೀ....''


ಗುಟ್ಕಾ ವಿರುದ್ಧ ಹುಬ್ಬಳ್ಳಿಯಲ್ಲಿ ನಡೆದ ಮೆರವಣಿಗೆಯ ಮುಂಚೂಣಿಯಲ್ಲಿ ಡಾ. ಪಟವಾರಿ, ಡಾ. ಭಾಸ್ಕರರಾವ್, ಡಾ. ಪ್ರಕಾಶ ಟಂಡೂರ್, ಡಾ. ತಿಪ್ಪೇಸ್ವಾಮಿ...

ಇಳಿವಯಸ್ಸಿನ ಶ್ರಮಜೀವಿಗಳ ಬಗ್ಗೆ ''ಅಯ್ಯೋಪಾಪ'' ಎನಿಸಿತು.

''ಇನ್ನಾದ್ರೂ ಹಳ್ಳಿಗೆ ಹೋಗಿ 'ಗುಟ್ಕಾ ಬಿಡಿ' ಅಂತ ಮಂದಿಗೆ ಹೇಳ್ರವ್ವಾ'' ಎಂದೆ ನಾನು.

''ಅಯ್ಯ, ನಾವೆಲ್ಲಾ ದುಡಿಯೂ ಮಂದೀರೀ.... ಭಾಷಣಾ ಮಾಡೋ ಪೈಕಿ ಅಲ್ಲ.... ಮುಂಜಾನೆ ಹೊಲಕ್ಕ ಹೊಂಟ್ರ, ಕತ್ತಲಾದ ಮ್ಯಾಗ ಹಟ್ಟಿ ಸೇರೋ ಮಂದಿರೀ.... ನಮ್ಮ ಹೊಟ್ಟಿ ಪಾಡ ನಮಗ ಹೆಚ್ಚಾಗೈತ್ರೀ.... ಇಷ್ಟ್ ಮಾತ್ರ ಖರೆ ನೋಡ್ರಿ... ಆ ಶಿವನಾಣೆ ನಾನು ತಂಬಾಕ ಗುಟ್ಕಾ ಮುಟ್ಟಾಂಗಿಲ್ರೀ....''

★

ಕೋಮಲ (ಹೆಸರು ಬದಲಿಸಿದ್ದೇನೆ) ಕಿಮ್ಸ್‌ನ ವಾರ್ಡೊಂದರ ಬೆಡ್‌ನಲ್ಲಿ ಉದುರಿ ಬಿದ್ದಿರುವ ಸುಂದರ ಹೂವು. ಇಪ್ಪತ್ತೇಳರ ಚೆಲುವೆ. ಬ್ಯಾಂಕ್ ಉದ್ಯೋಗಿ.

ಸಾಹಿತ್ಯಕ ಭಾಷೆಯಲ್ಲೇ ಆಕೆ ಉಸುರಿದಳು.

''ಬದುಕು, ಬರೆಹ, ಭಾಷಣಗಳ ನಡುವೆ ಸಾಮರಸ್ಯ ಇರಬೇಕು ಅನ್ನೋದು ತುಂಬಾ ತಡವಾಗಿ ಅರ್ಥ ಆಗ್ತಾ ಇದೆ. ಹೈಸ್ಕೂಲು, ಕಾಲೇಜುಗಳಲ್ಲಿ ಓದುತ್ತಿದ್ದಾಗ, ವೇದಿಕೆ ಏರಿ, ಧ್ವನಿವರ್ಧಕದೆದುರು ನಿಂತು, ಭಾಷಣ ಬಿಗಿದದ್ದೇ ಬಿಗಿದದ್ದು.... ಪ್ರಶಸ್ತಿ ಗಿಟ್ಟಿಸಿದ್ದು.... ಸ್ಮಾರ್ಟ್‌ಗರ್ಲ್, ಬೆಸ್ಟ್‌ಗರ್ಲ್, ಛಾಂಪಿಯನ್,' ಬ್ಯೂಟಿಕ್ವೀನ್..... ಎಲ್ಲವೂ ಆಗಿದ್ದೆ..... ಆದರೆ.....''

'ನೋಡಿ.... ಹಿಂದೆಲ್ಲಾ ಆವೇಶದಿಂದ ಚೀರಿದ್ದು ನೆನಪಾಗ್ತಾ ಇದೆ....ನಮ್ಮ 'ತ್ರಿಡಿ'ಗಳ ಪರಿಕಲ್ಪನೆ ಬದಲಾಗಿದೆ. ಮೊದಲೆಲ್ಲಾ ನಾವು ಮೂರು 'ಡಿ'ಗಳನ್ನು ಅರ್ಥೈಸಿಕೊಂಡದ್ದು ಹೇಗೆ? 'ಡೆಡಿಕೇಷನ್', 'ಡಿವೋಷನ್' ಮತ್ತು 'ಡಿಸಿಪ್ಲಿನ್' ಆದರೆ, ಈಗಿನ ಯುವ ಜನಾಂಗಕ್ಕೆ ಬೇರೇಯೇ ಆದ ಮೂರು 'ಡಿ'ಗಳ ಹುಚ್ಚು ಹಿಡಿದಿದೆ. 'ಡಾನ್ಸ್', 'ಡ್ರಿಂಕ್ಸ್' ಮತ್ತು 'ಡ್ರಗ್ಸ್'. ಹೀಗಾಗಿಯೇ ಯುವಜನಾಂಗ ಪಥ ಭ್ರಾಂತವಾಗಿದೆ. ಪಥಭ್ರಷ್ಟವಾಗಿದೆ. ಇನ್ನಾದರೂ ಮೂಲ ಮೂರು 'ಡಿ'ಗಳನ್ನು ನಮ್ಮ ನಿತ್ಯದ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು, ಅನುಷ್ಠಾನಕ್ಕಿಳಿಸಬೇಕು....

''ಹೀಗೆಲ್ಲಾ, ನಿರರ್ಗಳವಾಗಿ ಭಾಷಣ ಮಾಡಿ ಪಾರಿತೋಷಕಗಳ ಕೊಳ್ಳೆ ಹೊಡೆಯುತ್ತಿದ್ದ ನಾನು, ನಿಜ ಬದುಕಿನಲ್ಲಿ ವ್ಯತಿರಿಕ್ತವಾಗಿ ವರ್ತಿಸಿ ಸೋತೆ; ಕೆಟ್ಟೆ; ಸಿಗರೇಟ್ ಸುಟ್ಟೆ; ತಮ್ಮನ ಮೂಲಕ ಗುಟ್ಕಾ ಪ್ಯಾಕೆಟ್‌ಗಳನ್ನು ಗುಟ್ಟಾಗಿ ತರಿಸಿಕೊಂಡು ಚಪ್ಪರಿಸತೊಡಗಿದೆ. ರಾಷ್ಟ್ರೀಕೃತ ಬಾಂಕಿನಲ್ಲಿ ನೌಕರಿಗೆ ಸೇರಿದ ಮೇಲೆ ಕೂಡ ಈ ಚಾಳಿ ಮುಂದುವರಿಯಿತು. ಮದುವೆಯ ನಂತರವೂ ಗುಟ್ಕಾ ಸೇವನೆಗೆ ಮುಜುಗರ ಉಂಟಾಗಲಿಲ್ಲ. ಯಾಕೆಂದರೆ, ನನ್ನ ಮನೆಯವರು ಕುಡಿತದ ದಾಸರು. ಅಂಕೆ ಇಲ್ಲದ ಕಪಿ ಲಂಕೆ ಸುಟ್ಟ ಕತೆ ಗೊತ್ತಲ್ಲಾ!''

ಶಸ್ತ್ರಚಿಕಿತ್ಸೆಯ ವೇಳೆ ಸೆರೆಹಿಡಿದ ಕೋಮಲಳ ಬಾಯಿಯ ಚಿತ್ರವನ್ನು ವೈದ್ಯರು ನೀಡಿದಾಗ ನಾನು ದಂಗಾದೆ!

ಸಕಾಲದಲ್ಲಿ ಯೋಗ್ಯ ಚಿಕಿತ್ಸೆ ಪಡೆಯುತ್ತಿರುವ ಕೋಮಲ ಗುಣಮುಖಳಾಗುತ್ತಿದ್ದಾಳೆ. 'ಗುಟ್ಕಾ ಗುಮ್ಮ' ಇನ್ನೆಷ್ಟು ಮಂದಿ ಸೋದರಿಯರ ಬಳಿ ಬೇಡುತ್ತಿದೆಯೋ ಯಾರಿಗೆ ಗೊತ್ತು? ಆಧುನಿಕತೆಯ ಮುಸುಕಿನ ಮರೆಯಲ್ಲಿ ಅಡಗಿದೆ ಎದೆ ಸುಡುವ ದುರಂತ ಕತೆ!

ಗುಟ್ಕಾ (ಅ)ವ್ಯವಹಾರ

ಉತ್ತರ ಕರ್ನಾಟಕ ಭಾಗದಲ್ಲಿ ಗುಟ್ಕಾ ಪ್ರಿಯರ ಸಂಖ್ಯೆ ಬಲು ದೊಡ್ಡದು. ಹೀಗಾಗಿಯೇ ಗಂಟಲು ಕ್ಯಾನ್ಸರ್ ರೋಗಿಗಳು, ಕಟಿಬಾಯಿ ಬಾಧೆಗೆ ತುತ್ತಾಗುವವರು ಇಲ್ಲಿ ಅಧಿಕ. ಪಾನ್‌ಶಾಪ್‌ಗಳು, ಬೀದಿ ಬದಿಯ ಗೂಡಂಗಡಿಗಳು-ಮಟಕಾ, ಗುಟಕಾ ವ್ಯವಹಾರದ ಕೇಂದ್ರಗಳಾಗಿ ಪರಿವರ್ತಿತವಾಗಿವೆ. ಇಲ್ಲಿನ ಮಟಕಾ ಜಾಲ ಬಲು ವಿಸ್ತಾರ. ವಿಷ ಹೀರುವವರದ್ದು ನಿರಂತರ ವ್ಯವಹಾರ.

ಕೋಟಿಗಟ್ಟಲೆ ರೂಪಾಯಿಗಳ ಗುಟ್ಕಾ ವ್ಯವಹಾರ ನಡೆಯುತ್ತಲೇ ಇರುತ್ತದೆ. ಲೆಕ್ಕ ಇಟ್ಟವರಿಲ್ಲ. ಇಟ್ಟ ಲೆಕ್ಕದ ಗುಟ್ಟು ಬಿಟ್ಟುಕೊಡುವುದಿಲ್ಲ. ತೆರಿಗೆ ಜಾಲ ತಪ್ಪಿಸಿಕೊಂಡು ನಡೆಯುವ (ಅ)ವ್ಯವಹಾರದಲ್ಲಿ ಅನೇಕರ ಜುಟ್ಟು ಕೈಗೆ ಸಿಗುತ್ತಿಲ್ಲ.

ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳಲ್ಲಿನ ಗುಟ್ಕಾಪ್ರಿಯರನ್ನು ಎಣಿಸಲು ಯಾವ ಕಂಡಕ್ಟರನಿಗೂ ಸಾಧ್ಯವಿಲ್ಲ. ಯಾಕೆಂದರೆ ಟಿಕೆಟ್ ರಹಿತ ಪ್ರಯಾಣಿಕರು ಎಲ್ಲೆಂದರಲ್ಲಿ 'ಗುಟ್ಕಾ ಬಸ್' ಹತ್ತುತ್ತಲೇ ಇರುತ್ತಾರೆ, ಇಳಿಯುತ್ತಲೇ ಇರುತ್ತಾರೆ. ಅವಳಿ ನಗರಗಳ ಒಟ್ಟು ಜನಸಂಖ್ಯೆ ಹದಿಮೂರು ಲಕ್ಷ ದಾಟಿದೆ. ಇದರಲ್ಲಿ ಗುಟ್ಕಾ ವ್ಯಸನಿಗಳು ಎಷ್ಟು ಲಕ್ಷ? (ಎಣಿಸಲು ವೈಟುಕೆ ಸಮಸ್ಯೆ?!)



ಗುಟ್ಕಾ ತಯಾರಿಕೆಯಲ್ಲಿ ಮಹಾರಾಷ್ಟ್ರಕ್ಕೆ ಅಗ್ರಸ್ಥಾನ. ಜಯಸಿಂಗಪುರ, ಸಾಂಗಲಿಗಳಿಂದ ಮಾಲು ಸರಬರಾಜಾಗುತ್ತದೆ. ಹೈದರಾಬಾದ್, ಇಂದೋರ್, ಜಾಲನಾಗಳಲ್ಲಿ ಶಾಖಾ ಕಚೇರಿಗಳು, ವಿತರಣಾ ವ್ಯವಸ್ಥೆಗಳಿವೆ. ವಿವಿಧ ಗುಟ್ಕಾ ಕಂಪೆನಿಗಳವರು ಸಿ ಆ್ಯಂಡ್ ಎಫ್ ಏಜೆಂಟ್ಸ್ ಮೂಲಕ ವಿತರಣೆ ನಡೆಸುತ್ತಾರೆ. ಡೀಲರ್ಸ್, ಸಬ್ ಡೀಲರ್ಸ್ ಏಜೆಂಟ್ಸ್ ಎಂದೆಲ್ಲಾ ಬೃಹತ್ ನೆಟ್‌ವರ್ಕ್

ಇಲ್ಲಿದೆ. ಬೇಡಿಕೆಗೆ ಅನುಗುಣವಾಗಿ ಚೀಲಗಳಲ್ಲಿ ಸರಬರಾಜು. 200 ಚೀಲಗಳಲ್ಲಿ ಸುಮಾರು ಐದೂವರೆ ಲಕ್ಷ ರೂ.ಗಳ ಪ್ಯಾಕೆಟ್‌ಗಳು ಇರುತ್ತವೆ. ಒಂದೊಂದು ಪೌಚ್‌ನಲ್ಲಿ 50 ಚೀಟಿಗಳಿದ್ದು, ಇವುಗಳನ್ನು ವಿಕ್ರಯಿಸುವ ಅಂಗಡಿಗಳಲ್ಲಿ, ವಿವಿಧ ವಿನ್ಯಾಸಗಳಲ್ಲಿ ತೂಗು ಹಾಕುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಗ್ರಾಹಕರನ್ನು ಸೆಳೆಯುವ ಕಸರತ್ತು.

ಹಿಂದೆಲ್ಲಾ ಟ್ರಕ್‌ಗಟ್ಟಲೆ ಚೀಲಗಳನ್ನು ಸರಬರಾಜು ಮಾಡುತ್ತಿದ್ದರು. ಕ್ರಮೇಣ ಈ ವ್ಯವಹಾರವನ್ನು ಇಷ್ಟೊಂದು ಸಲೀಸಾಗಿ, ಸರಳವಾಗಿ ಮುನ್ನಡೆಸುವುದು ಲಾಭದ ದೃಷ್ಟಿಯಿಂದ ತೊಡಕಿನ ಸಂಗತಿಯೆನಿಸಿತು. ಈಗ ಯಾವ್ಯಾವುದೋ ಸಾಮಗ್ರಿಗಳೊಂದಿಗೆ ಗುಟ್ಕಾ ಚೀಲಗಳನ್ನೂ ಸೇರಿಸಿ, ಟ್ರಕ್‌ಗಳಲ್ಲಿ ರವಾನಿಸಿ, ಅಲ್ಲಲ್ಲೇ ಇಳಿಸಿ 'ಗುಟ್ಕಾ ಗೋಲ್‌ಮಾಲ್' ನಡೆಸಲಾಗುತ್ತಿದೆ. ಬೆಂಕಿಪೊಟ್ಟಣಗಳಲ್ಲಿ (Match Box) ಎಷ್ಟು ಬಗೆಯೋ-ಗುಟಕಾ ಚೀಟಿಗಳಲ್ಲೂ ಅಷ್ಟೇ ಬಗೆ! ಯಾವುದಾದರೊಂದು ಹೆಸರಿನ ಕಂಪೆನಿಯ ಬೇಡಿಕೆ ಕುಸಿಯಿತೆಂದರೆ - ಅದೇ ಉತ್ಪಾದಕರು ಬೇರೊಂದು ಹೊಸ ಹೆಸರಿನ ಮೊರೆ ಹೋಗುವುದು ನಡೆದೇ ಇದೆ. ಹೀಗಾಗಿ ಇದು ಬಹುರೂಪಿ! ರಕ್ತಬೀಜಾಸುರ ಸಂತಾನವೆಂದರೂ ಸರಿಯೇ!


ಸ್ಟಾರ್ (ರೂ.1.50), ಮಾಣಿಕ್‌ಚಂದ್ (ರೂ.4.50), ಕ್ರೌನ್ (ರೂ.1.00), ಗೋವಾ (ರೂ.1.50), ಮಾರುತಿ (ರೂ.0.50), ಝೀ (ರೂ.1.00), ಫಾಯರ್ (ರೂ.1.00).... ಇವು ಎಲ್ಲೆಂದರಲ್ಲಿ ಬೇಡಿಕೆ ಹೊಂದಿರುವ ಗುಟ್ಕಾ ಚೀಟಿಗಳು. 'ಬಾಂಬೆ-2000', 'ಗೋವಾ-1000', 'ದಂ'.... ಹೀಗೆ ನಾಲಗೆ ಹುಣ್ಣಿಗೆ ನೂರೆಂಟು ದಾರಿ. 21ನೇ ಶತಮಾನದ ಈ ಪಿಡುಗುಗಳಿಗೆ ಶಮನ ಬಲು ದುಬಾರಿ.

'ಉಗುಳಿ ಉಗುಳಿ ರೋಗ, ಬಗುಳಿ ಬಗುಳಿ ರಾಗ' - ಎಂಬೊಂದು ಮಾತಿದೆ. ಗುಟ್ಕಾ ಮೆಲ್ಲುತ್ತಾ, ಎಲ್ಲೆಂದರಲ್ಲಿ ಉಗುಳುತ್ತಾ, ನಮ್ಮ ಹಿರಿ-ಕಿರಿಯರು ಈ ಸಾಮಾಜಿಕ ಪಿಡುಗುಗಳನ್ನು ಪೋಷಿಸಿಕೊಂಡು ಬರುತ್ತಿರುವುದು ಒಂದು ದುರಂತ. ಹೀಗಾಗಿ, 'ಗುಟಕಾ ಬಿಡಿ' ಆಂದೋಲನ ರಾಷ್ಟ್ರವ್ಯಾಪಿಯಾಗಿ, ಜನಜಾಗರಣಕ್ಕೆ ಪ್ರೇರೇಪಿಸಿದರೆ, ಹೊಸ ಸಹಸ್ರಮಾನದ ಸುಂದರ ಕನಸುಗಳು ಅರಳಿಕೊಳ್ಳಲು ಸಾಧ್ಯ ಉಂಟು.

ಈ ಭಾಗದ ಪ್ರಾಜ್ಞರು, ಚಿಂತಕರು, ಸಾಹಿತಿಗಳು, ಪ್ರಾಧ್ಯಾಪಕರು, ವೈದ್ಯರು ಸಂದರ್ಭ ದೊರೆತಾಗೆಲ್ಲಾ ಗುಟಕಾ ಚಪ್ಪರಿಸುತ್ತಾ ಗುಟುಕು ಹಾಕುವವರನ್ನು, ಉಗುಳುಪ್ರಿಯರನ್ನು ಚುಚ್ಚುತ್ತಾ, ಎಚ್ಚರಿಸುತ್ತಾ ಇರುತ್ತಾರೆ. ಶಾಲಾ ಕಾಲೇಜುಗಳಲ್ಲೂ ಉಪದೇಶಕ್ಕೇನೂ ಕೊರತೆ ಇಲ್ಲ. ಆದರೆ.... ಎಲ್ಲವೂ ಗೋರ್ಕಲ್ಲ ಮೇಲೆ ಸುರಿದ ಮಳೆ!

ನಾವು ಇನ್ನಾದರೂ ಎಚ್ಚರಗೊಳ್ಳುವುದು ಬೇಡವೆ?.... ನಮ್ಮ ಮಕ್ಕಳನ್ನು ಗುಟಕಾ ಕಲ್ಕುಡನಿಗೆ ಬಲಿ ನೀಡಬೇಕೆ?... ಗಿಳಿ ಸಾಕಿ ಗಿಡುಗನಿಗೆ ಒಪ್ಪಿಸಬೇಕೆ?.... ಈ ಪ್ರಶ್ನೆಗಳಿಗೆ ಅಂತರಂಗದ ಪಿಸುಮಾತೇ ಉತ್ತರ. ■

ಗುಟ್ಕಾದೊಂದಿಗೆ ಕನಸುಗಳು ಉಚಿತ



ಗ್ರಾಹಕರನ್ನು ವಿಶೇಷವಾಗಿ ಆಕರ್ಷಿಸಲು ಅಂಗಡಿಗಳನ್ನು ಅಂದವಾಗಿ, ಸಾಮಾನುಗಳನ್ನು ಅಚ್ಚುಕಟ್ಟಾಗಿ ಪೇರಿಸಿಡುವುದುಂಟು, ಶಾಂಪೂ, ಸೋಪು, ಪೇಸ್ಟು, ಸ್ನೋ.... ಪೌಡರ್, ಕ್ರೀಮ್... ಹೀಗೆ ವಿವಿಧ ವಸ್ತುಗಳನ್ನು ಆಕರ್ಷಕವಾಗಿ ಜೋಡಿಸಿಡುವುದುಂಟು.

ಈಗ ಗೂಡಂಗಡಿಗಳಲ್ಲಿ, ಪಾನಂಗಡಿಗಳಲ್ಲಿ ಕಾಣಸಿಗುವ ದೃಶ್ಯ ಬೇರೆಯೇ ಆಗಿದೆ. ಗುಟಕಾ ಹಾಗೂ ಪಾನ್ ಮಸಾಲಾ ಚೀಟಿಗಳ ಮಾಲೆಗಳು ಎಲ್ಲೆಂದರಲ್ಲಿ ಕಣ್ಣು ಕುಕ್ಕುತ್ತವೆ. ಸುಪಾರಿ ಚೀಟಿಗಳ ಸುಂದರ ರಂಗವಲ್ಲಿ ಬಣ್ಣಬಣ್ಣದ ಚಿತ್ತಾರ, ಕಿರಿಯರ ಕಣ್ಣುಗಳಲ್ಲಿ ಕೌತುಕದ ಮಹಾಪೂರ.

ಜಾಹೀರಾತುಗಳದ್ದಂತೂ ಭ್ರಾಮಕ ಜಗತ್ತು:

'ಯಾರ್‌ವಾಲಾ ಸ್ಟಾರ್, ಪ್ಯಾರ್‌ವಾಲಾ ಸ್ಟಾರ್?

'ದಿಲ್‌ದೀವಾನಾ ಬಿನ್ ಶಿಮ್ಲಾಕೆ ಮಾನೇನಾ....'

'ಗೋವಾ ಗುಟಕಾ-ಮೋಜು.... ಮಜಾ.... ಮಸ್ತಿ....!'

'ಮಾರಾಟಗಾರರಿಗೆ ಧನ್ಯವಾದಗಳು-ಅಭೂತಪೂರ್ವ ಪ್ರತಿಸ್ಪಾದಕ್ಕೆ.'

'ಕನಸುಗಳು ಗುಟಕಾದೊಂದಿಗೆ ಉಚಿತ.'

.... ಹೀಗೆ, ಪತ್ರಿಕಾ ಪುಟಗಳ ತುಂಬಾ ವರ್ಣಮಯ ಜಾಹೀರಾತುಗಳು. ಮೌಲ್ಯಗಳ ಬೊಗಳೆ ಬಿಡುವ ಭಾರೀ ಪತ್ರಿಕೆಗಳು ಕೂಡ, ಗುಟಕಾ ಕಂಪೆನಿಗಳಿಗೆ ಜಾಹೀರಾತುಗಳಿಗಾಗಿ ಜೋತು ಬೀಳುತ್ತಿರುವುದೊಂದು ವಿಪರ್ಯಾಸ. ಆದರ್ಶ ಬೇರೆ, ವಾಸ್ತವ ಬೇರೆ, ಸುಳ್ಳೇ!?

ಯುವ ಪೀಳಿಗೆಯ ಹಾದಿ ತಪ್ಪಿಸುವ ಭಾರೀ ಜಾಹೀರಾತುಗಳನ್ನು ಭರ್ಜರಿಯಾಗಿ ಪ್ರಕಟಿಸಿ, ಮತ್ತೆ ಮೂಲೆಯಲ್ಲಿ 'ವೈಜ್ಞಾನಿಕ ಎಚ್ಚರಿಕೆ; ತಂಬಾಕು ಅಥವಾ ಸುಪಾರಿ ಜಗಿಯುವುದು ಆರೋಗ್ಯಕ್ಕೆ ಹಾನಿಕಾರಕ' ಎಂದು ಅಪ್ಪಣೆಕೊಡುವುದು ಎಷ್ಟೊಂದು ಆಭಾಸ! (ಇದು ಶಾಸನ ವಿಧಿಸಿದ ನಿರ್ಬಂಧಕ್ಕೆ.

'Statutory Warning : Chewing of Tobacco & Supari is injurious to health' - ಎಂಬ ಎಚ್ಚರಿಕೆ ಎಂಥಾ ವಿಪರ್ಯಾಸ!

ನಮ್ಮ ಸ್ಟಾರ್, ಫೈರ್, ಗೋವಾ, ಮಾಣಿಕ್‌ಚಂದ್, ತುಳಸಿ, ಮಾವ, ಅಳಿಯ, ಕೊಠಾರಿ, ಕಠಾರಿಗಳು ಹೇಳುತ್ತಿರುವುದಾದರೂ ಏನನ್ನು ? 'ಅಗಿಯಿರಿ, ಜಗಿಯಿರಿ, ಮೃತ್ಯುರೂಪಕ್ಕೆ ಜಗಿಯಿರಿ' ಎಂಬುದೇ ಅವರ ಸಂದೇಶವೆ?.... ಭೇಷ್!? ■

ನಿಷೇಧಕ್ಕೆ ಗುಟ್ಕಾ ಮಾತ್ರ ಗುರಿಯಾಗಬೇಕೆ?

ಅಡಿಕೆ ಬೆಳೆಗಾರರ ಪ್ರಶ್ನೆ



ಈಗ್ಗೆ ಎರಡು ವರ್ಷಗಳ ಹಿಂದೆ - ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯ ಸಚಿವಾಲಯ ಅಡಿಕೆಯಿಂದ ತಯಾರಿಸಿದ ಗುಟ್ಕಾ ನಿಷೇಧಿಸುವ ಆತುರಾತುರದ ಕಾನೂನೊಂದನ್ನು ಲೋಕಸಭೆಯಲ್ಲಿ ಮಂಡಿಸಲು ಪ್ರಯತ್ನ ಮಾಡಿತು. ಕೇಂದ್ರ ಸರ್ಕಾರ ಪತ್ರಿಕೆಗಳಿಗೆ ಈ ವಿಚಾರ ಬಿಡುಗಡೆ ಮಾಡಿತು. ಇದನ್ನು ಓದಿದ ಅಡಿಕೆ ಬೆಳೆಗಾರ ದಿಗಿಲುಗೊಂಡ, ಈ ಮಾರಿ ಪುನಃ ನಮ್ಮನ್ನು ಕಾಡುತ್ತಿದೆ ಎಂದು ಸಂಕಟಪಟ್ಟ, ಅಡಿಕೆಬೆಳೆಗಾರ ಮಾತ್ರವಲ್ಲ ಅಡಿಕೆ ವರ್ತಕ ಕೂಡ ಗಾಬರಿಯಾಗಿ ತನ್ನ ವಹಿವಾಟನ್ನೇ ಕೆಲವು ಕಾಲ ನಿಲ್ಲಿಸಿದರು.


ಈ ಹಿಂದೆ, ಕೇಂದ್ರ ಸರ್ಕಾರ ಇಂತಹ ಸುದ್ದಿ ಹೊರ ಹಾಕಿದಾಗ, ಕರ್ನಾಟಕ ಸರ್ಕಾರ ಕೂಡ ತನ್ನ ಒಲವು ಆಕಡೆ ತೋರಿಸಿತ್ತು. ಜನರ ಒತ್ತಡ ಅಡಿಕೆ ಬೆಳೆಗಾರರ ಹಾಗೂ ವರ್ತಕರ ತೀವ್ರ ಪ್ರತಿಭಟನೆ ನಂತರ ಸರ್ಕಾರ, ವಿಧಾನಸಭೆಯ ಒಳಗೂ ಹೊರಗೂ ಗುಟ್ಕಾ ನಿಷೇಧ ಮಾಡುವುದಿಲ್ಲ ಎಂದು ಸಾರಿತು. ಆದರೆ ಕೇಂದ್ರ ಸರ್ಕಾರ ಯಾವುದೇ ನಿರ್ಧಾರ ತೆಗೆದುಕೊಳ್ಳದೆ ಮೌನವಾಗಿ ಅಡ್ಡಗೋಡೆ ಮೇಲಿನ ದೀಪದಂತಿದೆ.

ಅಡಿಕೆ ಬೆಳೆಯ ಶೇಕಡಾ 75ರಿಂದ 80ರಷ್ಟು ಗುಟ್ಕಾ ತಯಾರಿಕೆಗೆ ಬಳಕೆ ಆಗುತ್ತಿದೆ. ಕಳೆದ ಹತ್ತು ವರ್ಷಗಳಿಂದ ಅಡಿಕೆ ಬೆಲೆ ಉತ್ತಮಗೊಂಡು ಬೆಳೆಗಾರ ಸ್ವಲ್ಪಮಟ್ಟಿಗೆ ತನ್ನ ಜೀವನ ನಿರ್ವಹಣೆ ಸುಧಾರಿಸಿಕೊಳ್ಳಲು ಸಾಧ್ಯವಾಯಿತು. ಆದರೆ ಗುಟ್ಕಾ ಸೇವನೆಯಿಂದ ಆರೋಗ್ಯಕ್ಕೆ ಹಾನಿ ಎಂಬ ಕೂಗು ಇತ್ತೀಚೆಗೆ ಕೇಳಿ ಬರುತ್ತಿರುವುದಕ್ಕೆ ಕಾರಣ ಇಲ್ಲವೆ ಇಲ್ಲ. ಸಿಗರೇಟು ತಯಾರಕರು ದೆಹಲಿಯಲ್ಲಿ ಕುಳಿತು ಲಾಬಿ ನಡೆಸುವುದರಿಂದ ಸರ್ಕಾರ ಸಿಗರೇಟು ಕಂಪನಿಗಳಿಗೆ ಮಣಿದು ಗುಟ್ಕಾ ನಿಷೇಧ ನಡೆಸಲು ಹೊರಟಿದೆ ಎಂದು ಅಡಿಕೆ ಬೆಳೆಗಾರ ಹಾಗೂ ವರ್ತಕರು ಆಪಾದಿಸುತ್ತಾರೆ.

ಆರೋಗ್ಯಕ್ಕೆ ಹಾನಿಕಾರಕ ಎಂದು ಸರ್ಕಾರ ಹೇಳುವುದಾದರೆ, ಇಂತಹ ಹಾನಿಕಾರಕ ವಸ್ತುಗಳು ಬೇಕಾದಷ್ಟಿವೆ. ಅದೆಲ್ಲವನ್ನೂ ಸರ್ಕಾರ ನಿಷೇಧಿಸುವುದೇ? ಮದ್ಯಪಾನ, ಸಿಗರೇಟಿನ ಸೇವನೆ ಕೂಡಾ ದೇಹಕ್ಕೆ ಹಾನಿಕಾರಕ ಎಂಬುದು ಸರ್ಕಾರಕ್ಕೆ ಗೊತ್ತಿಲ್ಲವೆ? ಕಳ್ಳಭಟ್ಟಿ, ಹೆಂಡ ಸರಾಯಿ ಕುಡಿದು ಪ್ರತಿವರ್ಷ ಎಷ್ಟು ಜನ ಪ್ರಾಣ ಬಿಡುತ್ತಿಲ್ಲ. ಈ ರೀತಿ ಪ್ರಾಣ ಬಿಟ್ಟವರ ಕುಟುಂಬಕ್ಕೆ ಸರ್ಕಾರ ಪರಿಹಾರ ಧನ ನೀಡಿದ ನಿದರ್ಶನ ಬಹಳಷ್ಟಿದೆ. ಸರ್ಕಾರ, ಹೆಂಡ, ಸರಾಯಿಯನ್ನು, ಕಳ್ಳಬಟ್ಟಿಯನ್ನು ಕಳಪೆ-ಮದ್ಯವನ್ನು ನಿಷೇಧ ಮಾಡುವುದಾಗಿ ಎಲ್ಲಿಯೂ ಹೇಳಿಲ್ಲ. ನಮ್ಮ ಮೇಲೇಕೆ ಸರ್ಕಾರದ ಕಣ್ಣು ಎಂದು ಅಡಿಕೆ ಬೆಳೆಗಾರ ಪ್ರಶ್ನಿಸುತ್ತಾನೆ. ಈತನ ಪ್ರಶ್ನೆಗೆ ಸರ್ಕಾರ ಉತ್ತರಕೊಡುವ ಸ್ಥಿತಿಯಲ್ಲಿಲ್ಲ.

ಗುಟ್ಕಾ ತಯಾರಿಕೆಯಲ್ಲಿ ಆರೋಗ್ಯಕ್ಕೆ ಹಾನಿಕರ ಅಂಶ ಇದ್ದರೆ ಅದನ್ನು ತೆಗೆದು ಹಾಕುವಂತೆ ಗುಟ್ಕಾ ಕಂಪೆನಿಗಳಿಗೆ ಸರ್ಕಾರ ಸೂಚನೆ ನೀಡಲಿ. ಆ ಬಗ್ಗೆ ನಮ್ಮದೂ ಸರ್ಕಾರದೊಡನೆ ಸಹಕಾರ ವಿದೆ. ಅದನ್ನು ಬಿಟ್ಟು ಇಡೀ 'ಗುಟ್ಕಾ' ಉದ್ಯಮವನ್ನೇ ನಿಲ್ಲಿಸುವ ಪ್ರಯತ್ನ ಅಡಿಕೆ ಬೆಳೆಗಾರ ಸಾವಿನ ಕಡೆ ತಳ್ಳುವಂತಹುದು ಎಂದು ಹಿರಿಯ ಅಡಿಕೆ ಬೆಳೆಗಾರ ಶ್ರೀಹರಿಯಪ್ಪನವರು ಹೇಳುತ್ತಾರೆ.

ಪ್ರತಿವರ್ಷ ಅಡಿಕೆ ಬೆಳೆಗಾರ ಒಂದಲ್ಲಾ ಒಂದು ಸಮಸ್ಯೆ ಎದುರಿಸುತ್ತ ಬಂದಿದ್ದಾನೆ. ಅಡಿಕೆ ದರ ಸ್ವಲ್ಪ ಮಟ್ಟಿಗೆ ಚೇತರಿಸಿ ರೈತ ತನ್ನ ಮಾಲನ್ನು ಬಿಕರಿಗೆ ಸಿದ್ಧಪಡಿಸುವ ಸಮಯದಲ್ಲಿ ಇಂತಹ ಆಘಾತ ಆತನನ್ನು ಕಾಡುತ್ತಿದೆ. ಅಡಿಕೆ ದರ ಏರಿದಾಗ ವ್ಯವಹಾರ ಚುರುಕು ಗೊಳ್ಳುತ್ತದೆ. ದರ ಇಳಿದಾಗ ವರ್ತಕರು ವ್ಯಾಪಾರಕ್ಕೆ ಬರಲು ಹೆದರುತ್ತಾರೆ.



ಟಿ.ಮಹಾಬಲೇಶ್ವರ ಭಟ್ಟ

ಅಡಿಕೆಗೆ ಯಾವುದೇ ಒಂದು ಸ್ಥಿರವಾದ ನಿಗದಿತ ಬೆಲೆ ಯಾವತ್ತೂ ಇಲ್ಲ. ಅಡಿಕೆ ಉತ್ಪನ್ನ ದಿನದಿಂದ ದಿನಕ್ಕೆ ಹೆಚ್ಚುತ್ತಾ ಇದೆ. ಇದರಿಂದ ಕೂಡ ಅಡಿಕೆ ಬೆಲೆ ಕುಸಿಯುತ್ತಾ ಇದೆ ಎಂದು ಕೆಲವರು ಹೇಳ ಬಹುದಾದರೂ, ತಿನ್ನುವವರೂ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದಾರೆ. ಭಾರತ ಮಾತ್ರವಲ್ಲದೆ ಬಾಂಗ್ಲಾದೇಶ. ಶ್ರೀಲಂಕಾ, ಇಂಡೋನೇಶಿಯಾ, ಮುಂತಾದ ರಾಷ್ಟ್ರಗಳಲ್ಲೂ ಅಡಿಕೆಯನ್ನು ಬೆಳೆಯಲಾಗುತ್ತಿದೆ. ಅಡಿಕೆ ಬೆಳೆಯುವ ವಿಸ್ತೀರ್ಣ ಕೂಡ ಗಣನೀಯವಾಗಿ ಹೆಚ್ಚಿದೆ. 1995ರಲ್ಲಿ ಇದರ ವಿಸ್ತೀರ್ಣ 45000 ಹೆಕ್ಟೇರು ಇದ್ದರೆ, 1998ರಲ್ಲಿ 60,000 ಹೆಕ್ಟೇರಿಗೆ ಬೆಳೆದಿದೆ ಉತ್ಪಾದನೆ ಕೂಡ 40,000 ಟನ್ನುಗಳಷ್ಟು ಜಾಸ್ತಿಯಾಗಿದೆ.

ಅಡಿಕೆ ಉತ್ಪನ್ನದಿಂದ ಸರ್ಕಾರಕ್ಕೆ, ತೆರಿಗೆ ರೂಪದಲ್ಲಿ ಬಹಳಷ್ಟು ಹಣ ಸಂದಾಯವಾಗುತ್ತದೆ. ಒಂದು ಮೂಲದ ಪ್ರಕಾರ ಪ್ರತಿವರ್ಷವೂ ಸರ್ಕಾರಕ್ಕೆ ರಾಷ್ಟ್ರವ್ಯಾಪಿ ಸಂದಾಯವಾಗುವ ತೆರಿಗೆ 310 ಕೋಟಿ ರೂಪಾಯಿ, ಸರ್ಕಾರ ಈ ಹೆಚ್ಚಿನ ಸಂಪನ್ಮೂಲವನ್ನು ಗುಟ್ಕಾ ನಿಷೇಧ ಮಾಡಿದರೆ ಕಳೆದುಕೊಳ್ಳಬೇಕಾಗುತ್ತದೆ. ಗುಟ್ಕಾ ನಿಷೇದ ಮಾಡುವುದರಿಂದ ಅಡಿಕೆಗೆ ಸರಿಯಾದ ಸ್ಥಿರವಾದ ಮಾರುಕಟ್ಟೆ ಇಲ್ಲದೆ ಅಡಿಕೆ ದರ ಗಣನೀಯ ಪ್ರಮಾಣದಲ್ಲಿ ಕುಸಿದು, ತೊಗರಿ ಬೆಳೆ ಹಾನಿಯಿಂದ ಕರ್ನಾಟಕದಲ್ಲಿ ಈ ಆತ್ಮಹತ್ಯೆ ಪ್ರಕರಣ ನಡೆದಂತೆ ಅಡಿಕೆ ಬೆಳೆಗಾರನೂ ಆತ್ಮಹತ್ಯೆಯ ದಾರಿ ಹಿಡಿಯಬಹುದೆಂದು ಜನ ತಮ್ಮ ತಮ್ಮಲ್ಲೇ ಆಡಿಕೊಂಡ ಮಾತುಗಳು.

ಈ ವರ್ಷ ಅಡಿಕೆ ಉತ್ಪಾದನೆ ಗಣನೀಯವಾಗಿ ಕುಸಿದಿದೆ. ಶೇಕಡಾ 25ರಷ್ಟು ಕಡಿಮೆ ಆಗಿದೆ ಎಂದು ಅಂದಾಜು. ಬೆಲೆ ಕೂಡ ಕ್ವಿಂಟಾಲಿಗೆ ಎರಡರಿಂದ ಮೂರು ಸಾವಿರ ರೂಪಾಯಿಯಷ್ಟು ಇಳಿದಿದೆ. ಅಡಿಗೆ ಬೆಲೆಯ ಏರಿಳಿತದಲ್ಲಿ ನಿರ್ದಿಷ್ಟತೆ ಎಂಬುದಿಲ್ಲ. ಇದು ಎರಡು ಮೂರು ದಶಕಗಳಿಂದ ಕಣ್ಣಾರೆ ಕಾಣುತ್ತಿರುವ ಸಂಗತಿ.

ಬೆಲೆ ಇಳಿದಾಗ ವ್ಯಾಪಾರಸ್ಥರು ಹೊರಗಡೆ ಬೇಡಿಕೆ ಇಲ್ಲ, ಗಿರಾಕಿ ಇಲ್ಲ ಎನ್ನುತ್ತಲೆ ಉಳಿದ ವ್ಯಾಪಾರಸ್ಥರು ಹಾಕುವ ಟೆಂಡರಿನಲ್ಲಿ ಸ್ಪರ್ಧಾತ್ಮಕ ಟೆಂಡರನ್ನು ಹಾಕುತ್ತಿರುವುದು ಕೌತುಕ ಉಂಟುಮಾಡುತ್ತದೆ. ಈಗ ಬೆಳೆಗಾರ ಇಂಥ ಮಾತುಗಳಿಗೆ ಅಷ್ಟಾಗಿ ಮಹತ್ವ ಕೊಡದಿರುವ ಸ್ಥಿತಿ ತಲುಪಿದ್ದಾನೆ.

ಭಾರತದಲ್ಲಿ ಸುಮಾರು ಆರುವರೆ ಲಕ್ಷಕ್ಕೂ ಮಿಕ್ಕಿ ಕುಟುಂಬಗಳು ಅಡಿಕೆ ಬೆಳೆಯನ್ನೇ ನಂಬಿ ಜೀವಿಸುತ್ತವೆ. ಅಡಿಕೆ ಬೆಳೆಯಲ್ಲಿ ಕಾರ್ಮಿಕರಾಗಿ ಕೆಲಸ

ಮಾಡುವ ಮಹಿಳೆಯರು, ಪುರುಷರು ಲೆಕ್ಕವಿಲ್ಲದಷ್ಟು ಜನರಿದ್ದಾರೆ. ಇಂದಿನ ಹಣದುಬ್ಬರದಲ್ಲಿ ಅಡಿಕೆ ಬೆಳೆಗಾರ ತನ್ನ ವಾರ್ಷಿಕ ಉತ್ಪನ್ನದಲ್ಲಿ ಶೇಕಡ 75ರಷ್ಟು ಭಾಗವನ್ನು ಕೃಷಿ ಕಾರ್ಮಿಕರಿಗೆ ಹಾಗೂ ಜಾನುವಾರು ಸಾಕುವಿಕೆಗಾಗಿ ವಿನಿಯೋಗಿಸುತ್ತಾನೆ. ವರ್ಷಕ್ಕೊಮ್ಮೆ ಉತ್ಪನ್ನವಾಗುವ ಅಡಿಕೆ ಬೆಳೆಯನ್ನೇ ನಂಬಿ ಏರುಬ್ಬರಕ್ಕೆ ಒಳಗಾಗಿ ಆತ ಜೀವಿಸಬೇಕಾಗುತ್ತದೆ.

ಕೃಷಿಕ ಬೆಳೆದ ಮಾಲಿಗೆ ಪ್ರತಿವರ್ಷವೂ ಒಂದಲ್ಲ ಒಂದು ಹೊಡೆತ ಬೀಳುತ್ತಲೇ ಇದೆ. ಎಂಬುದನ್ನ ಅರವತ್ತು ವರ್ಷದ ಅಡಿಕೆ ಬೆಳೆಗಾರರ ಕುಟುಂಬದ ಶ್ರೀಮತಿ ಶಾರದಮ್ಮ ಹೇಳುತ್ತಾರೆ.

ಅಡಿಕೆಗೂ ಗುಟ್ಕಾಗೂ ಬಹಳ ಹತ್ತಿರದ ಸಂಬಂಧ ಇರುವುದರಿಂದ ಅಡಿಕೆ ಬೆಳೆಗಾರರೂ, ವರ್ತಕರೂ ಹಾಗೂ ಗುಟ್ಕಾ ಕಂಪೆನಿಗಳು ಸೇರಿ ಕೇಂದ್ರ ಸರ್ಕಾರದ ಧೋರಣೆಯನ್ನು ವ್ಯವಸ್ಥಿತ ರೀತಿಯಲ್ಲಿ ಪ್ರತಿಭಟಿಸುವುದರ ಜೊತೆಗೆ ಕೇಂದ್ರಕ್ಕೆ ಆರೋಗ್ಯಹಾನಿ ಗುಟ್ಕಾ ಒಂದೇ ಅಲ್ಲ, ಬೇರೆ ಬೇರೆ ವಸ್ತುಗಳು ಇವೆ ಎಂಬುಧನ್ನು ಮನವರಿಕೆ ಮಾಡಿಕೊಡುವುದು ಸೂಕ್ತ. ಆಗ ಆರೋಗ್ಯಕ್ಕೆ ಹಾನಿಯಾಗುವ ಎಲ್ಲಾ ವಸ್ತುಗಳನ್ನೂ ನಿಷೇಧಿಸಬೇಕಾಗಿರುವುದರಿಂದ, ಗುಟ್ಕಾ ನಿಷೇಧದ ಮಾತನ್ನು ಕೇಂದ್ರ ಸರ್ಕಾರ ಕೈ ಬಿಟ್ಟರೆ ಬೆಳೆಗಾರ ಶಾಂತಿ, ನೆಮ್ಮದಿಯಿಂದ ಬದುಕಲು ಸಾಧ್ಯ. ■

ಬಜಾಜ್ ಬದಲು ಹೀರೋ ಹೊಂಡಾ



ಬದಲಾದ ಜೀವನ ಶೈಲಿ

ಬದಲಾದ ಬೆಳೆಗಾರನ ಬದುಕು; ಆದರೆ ಒಳಗೆಲ್ಲಾ ಬರೀ ಹುಳುಕು. ಇದೇನೂ ಬಹಳ ಇಂದಿನ ಕತೆಯಲ್ಲ. ಈಗ 10 - 15 ವರ್ಷಗಳ ಹಿಂದೆ ಮಲೆನಾಡಿನ ಅಡಿಕೆ ಬೆಳೆಗಾರರು ತಮಗೆ ಬೇಕಾದಷ್ಟು ಭತ್ತ ಬೆಳೆದುಕೊಳ್ಳುತ್ತಿದ್ದರು. ಮನೆಗೆ ಸಾಕಾಗುವಷ್ಟು ಬೆಲ್ಲಕ್ಕೆ ಬೇಕಾಗುವ ಕಬ್ಬನ್ನು ಬೆಳೆಯುತ್ತಿದ್ದರು. ಬೆಲ್ಲ ಕಾಯಿಸುವ ಆಲೆಮನೆಯ ಕಂಪು ಆಗ ಅಪರೂಪವಾಗಿರಲಿಲ್ಲ. ಕೆಲವರು ತಮ್ಮ ತೋಟದಲ್ಲಿ ಕಾಫಿ ಬೆಳೆಯನ್ನು ಹಾಕಿದ್ದರು. ಮನೆಯಲ್ಲಿಯೇ ಬೀಜವನ್ನು ಕಟ್ಟಿ ಮಾಡಿದ ಕಾಫಿ ಪುಡಿಯ ರುಚಿ ಆಗ ಲಭ್ಯವಿತ್ತು.

ಬೆಳಿಗ್ಗೆ ಒಂದು ಬಾರಿ ಮತ್ತು ಸಂಜೆ ಒಮ್ಮೆ ಬರುವ ಸರ್ಕಾರಿ ಬಸ್ಸಿಗೆ ಬೈದುಕೊಳ್ಳುತ್ತಲಾದರೂ ಎಲ್ಲರೂ ಅದಕ್ಕೇ ಹೋಗುತ್ತಿದ್ದರು. ಪ್ಯಾಟೆಗೆ ಹೋಗಿ ಬರುವುದು ಎಂದರೆ ಒಂದು ದಿನದ ಕೆಲಸವೇ ಆಗಿತ್ತು. ಆದರೆ ಈಗ ನೋಡಿ ಕಾಲ ಸಂಪೂರ್ಣ ಬದಲಾಗಿದೆ. ಬಹುತೇಕ ಎಲ್ಲರ ಮನೆಯಲ್ಲಿ ಒಂದಲ್ಲಾ ಒಂದು ವಾಹನ ಇದ್ದೇ ಇದೆ. ಒಂದು ಎಕರೆ ಅಡಿಕೆ ತೋಟ ಇದ್ದವರ ಬಳಿ ಮಾರುತಿ ಓಮ್ನಿ ವ್ಯಾನ್ ಇದೆ. ಎರಡು ಮೂರು ಎಕರೆ ತೋಟವಿದ್ದವರು ಟಾಟಾಸುಮೊದಲ್ಲಿಯೇ ಓಡಾಡುತ್ತಾರೆ. ಬೈಕುಗಳಂತೂ ಕೇಳುವುದೇ ಬೇಡ. ಎಲ್ಲ ಮಾದರಿಯ ಬೈಕುಗಳೂ ಇಲ್ಲಿ ಲಭ್ಯ. ಆಗೆಲ್ಲಾ ಬಜಾಜ್ ಎಂ-80 ಗಾಡಿಯೇ ಮಲೆನಾಡಿಗೆ ಸೂಕ್ತ ಎಂಬ ಭಾವನೆ ಇತ್ತು. ಅಲ್ಪ ಸ್ವಲ್ಪ ಆರ್ಥಿಕವಾಗಿ ಬಲವಿದ್ದವರು ಇದನ್ನು ಇಟ್ಟುಕೊಂಡಿದ್ದರು. ಆದರೆ ಈಗ ಎಲ್ಲರಿಗೂ ಹೀರೋ ಹೊಂಡವೇ ಬೇಕು.

ಯಕ್ಷಗಾನಕ್ಕೋ, ಸಿನೆಮಾಕ್ಕೋ ಮನೆ ಮಂದಿಯೆಲ್ಲ ಹೋಗಬೇಕೆಂದರೆ ಈಗ ಜೀಪು ಇಲ್ಲದೆ ನಡೆಯುವುದೇ ಇಲ್ಲ. 10 ವರ್ಷದ ಹಿಂದಿನ ಜೀಪಿನ ಸಂಖ್ಯೆಗೂ ಈಗಿನ ಸಂಖ್ಯೆಗೂ ಅಜಗಜಾಂತರ ವ್ಯತ್ಯಾಸ.

ಇದೆಲ್ಲಾ ಅಡಿಕೆಗೆ ಬೆಲೆ ಬಂದದ್ದರ ಪರಿಣಾಮ. 'ಗುಟ್ಕಾ' ಎಂಬ ಕಾಮಧೇನುವಿನಿಂದಾಗಿ ಅಡಿಕೆಗೆ ಇನ್ನಿಲ್ಲದಷ್ಟು ಬೇಡಿಕೆ ಬಂದು ಬೆಳೆಗಾರರು ಸ್ವಲ್ಪ ನೆಮ್ಮದಿ ಕಾಣುವಂತಾಯಿತು. ಆದರೆ ಇದು ಹಲವಾರು ಸಮಸ್ಯೆಗೂ ಕಾರಣವಾಗುವಂತಾಯಿತು.

ಅಡಿಕೆಗೆ ಬೆಲೆ ಬಂದಿದ್ದೇ ತಡ ಉತ್ತರ ಕನ್ನಡ, ಮಂಗಳೂರು, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಅಡಿಕೆ ತೋಟವನ್ನು ವಿಸ್ತರಿಸುವ ಕಾರ್ಯವೂ ಭರದಿಂದ ಸಾಗಿತು. ಸಾಂಪ್ರದಾಯಿಕವಾಗಿ ರಾಜ್ಯದಲ್ಲಿ ಅಡಿಕೆ ಬೆಳೆಯುವ ಪ್ರದೇಶ ಒಂದೂವರೆ ಲಕ್ಷ ಹೆಕ್ಟೇರ್‌ನಷ್ಟಿತ್ತು. ಈಗ ಅದು ದುಪ್ಪಟ್ಟಾಗಿದೆ. ಭತ್ತ ಬಿತ್ತುವ ಗದ್ದೆಗಳೆಲ್ಲಾ ಅಡಿಕೆ ತೋಟಗಳಾಗಿ ಕಂಗೊಳಿಸತೊಡಗಿದವು. ಅಕ್ಕಿಯೇನು ಕಾಸು ಕೊಟ್ಟು ಕೊಂಡರಾಯಿತು ಎಂಬ ಮದವೇ ಹೆಚ್ಚಾಯಿತು. ಬೆಲ್ಲಕ್ಕೇನು ದುಡ್ಡು ಕೊಟ್ಟರೆ ಸಿಗುತ್ತದೆ ಎಂಬ ವಿಶ್ವಾಸದಲ್ಲಿ ಕಬ್ಬು ಬೆಳೆಯುವ ಜಾಗಕ್ಕೂ ಅಡಿಕೆ ಸಸಿ ನೆಟ್ಟಾಯಿತು. ಈಗ ಪರಿಸ್ಥಿತಿ ಹೇಗಿದೆ ಎಂದರೆ ಬಹುತೇಕ ಕಡೆ ತಿನ್ನಲು ಅಕ್ಕಿಯನ್ನು ಕೊಂಡೇ ತರಬೇಕು. ಹೀಗಾಗಿ ಅಕ್ಕಿಯ ಬೆಲೆಯಲ್ಲಿಯೂ ಗಣನೀಯವಾಗಿ ಏರಿಕೆ ಉಂಟಾಯಿತು. ಮೊದಲೆಲ್ಲಾ ಶ್ರೀಮಂತರು ಮಾತ್ರ ಕಾಫಿ, ಚಹಾಕ್ಕೆ ಸಕ್ಕರೆ ಬಳಸುತ್ತಿದ್ದರು. ಬಡವರ ಮನೆಯಲ್ಲಿ ಏನಿದ್ದರೂ ಬೆಲ್ಲದ ಕಾಫಿಯೇ ಆಗಿತ್ತು. ಸಕ್ಕರೆ ಪಾನಕವಂತೂ ಇರಲೇ ಇಲ್ಲ. ಆದರೆ ಈಗ ಬೆಲ್ಲದ ಬೆಲೆ ಸಕ್ಕರೆಯ ಬೆಲೆಗಿಂತ ಹೆಚ್ಚಾಗಿದೆ.

ಬೆಂಗಳೂರು ದುಬಾರಿ ನಗರ ಎಂದು ಎಲ್ಲರು ಭಾವಿಸುತ್ತಾರೆ. ಮನೆ ಬಾಡಿಗೆಯೊಂದನ್ನು ಬಿಟ್ಟರೆ ಇಲ್ಲಿ ಉಳಿದಂತೆ ತರಕಾರಿ, ಅಕ್ಕಿ, ಬೇಳೆ ಎಲ್ಲ ರಾಜ್ಯದ ಉಳಿದೆಡೆಯ ಬೆಲೆಯಲ್ಲಿಯೇ ಸಿಗುತ್ತದೆ. ಆಟೋ ಚಾಲಕರು ಮೋಸ ಮಾಡುತ್ತಾರೆ ಎಂದು ಒಪ್ಪಿಕೊಳ್ಳಬಹುದಾದರೂ ಕನಿಷ್ಠ ಆತ ಮೀಟರ್ ಅಂತೂ ಹಾಕುತ್ತಾನೆ. ಆದರೆ ನೀವು ಅಡಿಕೆ ಜಿಲ್ಲೆಗಳ ಪಟ್ಟಣಗಳಿಗೆ ಹೋದರೆ ಅಲ್ಲಿ ಆಟೋಗಳಿಗೆ ಮೀಟರೇ ಇಲ್ಲ. ಅವರು ಹೇಳಿದ್ದೇ ರೇಟು. 10 - 15 ರೂಪಾಯಿಗಿಂತ ಕಡಿಮೆ ಇಲ್ಲದೆ ಆಟೋ ಹತ್ತಿ ಇಳಿಯಲು ಸಾಧ್ಯವೇ ಇಲ್ಲ.

ಅಕ್ಕಿಗೂ ಕೂಡಾ ಇಲ್ಲಿ ಬೆಂಗಳೂರಿಗಿಂತ ಹೆಚ್ಚು ಬೆಲೆ. ಎಳೆನೀರು ಬೆಂಗಳೂರಿನಲ್ಲಿ 5 ಅಥವಾ 6 ರೂಪಾಯಿಗೆ ಸಿಕ್ಕರೆ ಅಲ್ಲಿ ಕನಿಷ್ಠ 7 ರೂಪಾಯಿ. ತರಕಾರಿಯ ಬೆಲೆಯೂ ಕಡಿಮೆ ಏನೂ ಇಲ್ಲ. ಅಡಿಕೆಗೆ ಬಂದ ಮಾನ ಈಗ ಎಲ್ಲ ವಸ್ತುಗಳ ಮೌಲ್ಯವನ್ನೂ ಹೆಚ್ಚಿಸಿದೆ. ಕೆಲಸಕ್ಕೆ ಆಳುಗಳು ಸಿಗುವುದು ಕಷ್ಟವಾಗಿದೆ. ಕೊನೆ ಕೊಯ್ಯುವುದು ಮತ್ತು ಅಡಿಕೆ ಸುಲಿಸುವುದು ಒಂದು ದುಸ್ಸಾಹದ ಕೆಲಸವಾಗಿದೆ. ಮೊದಲೆಲ್ಲಾ ಆಯಾ ಊರಿನವರೇ ಪಾಳಿಯ ಪ್ರಕಾರ ಪ್ರತಿ ಮನೆಯ ಅಡಿಕೆ ಸುಲಿಯುತ್ತಿದ್ದರು. ಆದರೆ ಈಗ ಅಡಿಕೆ ಸುಲಿಕೆಗೆ ಗುತ್ತಿಗೆ ಪದ್ಧತಿ ಜಾರಿಗೆ ಬಂದಿದೆ. ಮೊದಲು ಹೆಚ್ಚೆಂದರೆ ಫಸಲು ಗುತ್ತಿಗೆ ಮಾತ್ರ ಇತ್ತು. ಈಗ ಸುಲಿಯುವುದು, ಅಡಿಕೆ ಬೇಯಿಸುವುದೂ ಗುತ್ತಿಗೆದಾರರ ಪಾಲಾಗಿದೆ. ಇದರಿಂದಾಗಿ ಅಡಿಕೆಗೆ ಬೆಲೆ ಏರಿದೆಯಾದರೂ ಬೆಳೆಗಾರನ ವೆಚ್ಚದಲ್ಲಿಯೂ ಗಣನೀಯ ಏರಿಕೆ ಉಂಟಾಗಿದ್ದರಿಂದ ಆಗಲೂ ಮಗಳ ಮದುವೆಯನ್ನು ಸೊಸೈಟಿ ಸಾಲದಲ್ಲಿಯೇ ಮಾಡುತ್ತಿದ್ದ ಬೆಳೆಗಾರ ಈಗಲೂ ಅದನ್ನೇ ಮಾಡುತ್ತಾನೆ. ವ್ಯತ್ಯಾಸ ಏನೆಂದರೆ ಈಗ ಸಾಲದ ಪ್ರಮಾಣ ಹೆಚ್ಚಾಗಿದೆಯಷ್ಟೆ.

ಅಡಿಕೆಗೆ ಬೆಲೆ ಬಂದಿದ್ದರಿಂದ ಉತ್ತೇಜಿತರಾದ ಬಯಲು ಸೀಮೆಯ ಜನರೂ ಕೂಡ ಹೊಸ ತಂತ್ರಜ್ಞಾನದಲ್ಲಿ ಅಡಿಕೆ ತೋಟವನ್ನು ಬೆಳೆಯಲು ಸಾಧ್ಯ ಎನ್ನುವುದನ್ನು ಕಂಡುಕೊಂಡು ಬರೀ ಹುಣಸೆ, ಮಾವು, ಮೆಣಸು ಬೆಳೆಯುವ

ಪ್ರದೇಶಗಳಲ್ಲಿಯೂ ಈಗ ಅಡಿಕೆ ಬೆಳೆ ಕಾಣಿಸಿಕೊಳ್ಳತೊಡಗಿದೆ. ತುಮಕೂರು, ಬೆಂಗಳೂರು, ಧಾರವಾಡ ಜಿಲ್ಲೆಗಳಲ್ಲಿಯೂ ಅಡಿಕೆ ತೋಟ ಭಾರೀ ಪ್ರಮಾಣದಲ್ಲಿ ಹೆಚ್ಚಾಗಿದೆ. ಇದರಿಂದ ಮಾರುಕಟ್ಟೆಗೆ ಬರುವ ಅಡಿಕೆ ಪ್ರಮಾಣ ಹೆಚ್ಚುತ್ತಿದೆ. ಸಹಜವಾಗಿಯೇ ಅಡಿಕೆ ಬೆಲೆಯಲ್ಲಿ ಇಳಿಕೆಯೇ ಕಾಣಿಸಿಕೊಂಡಿದೆ. ಇದರಿಂದ ರೈತರು ಆತಂಕಗೊಂಡಿದ್ದಾರೆ.

ಆದರೆ ನಮ್ಮ ರೈತರ ಪರಿ ನೋಡಿ. ಅವರು ಬಹಳ ಸಲ ವಿವೇಚನಾ ರಹಿತರಾಗಿಯೇ ಕೆಲಸ ಮಾಡುತ್ತಾರೆ. ಅಡಿಕೆಗೆ ಬೆಲೆ ಬಂತು ಎಂದರೆ ಎಲ್ಲರೂ ಅದನ್ನೇ ಬೆಳೆಯುತ್ತಾರೆ. ಒಂದು ಹಿಡಿ ಭೂಮಿಯನ್ನೂ ಬಿಡದೇ ಅದನ್ನೇ ತುಂಬಿಸುತ್ತಾರೆ. ರೇಷ್ಮೆ ಕೃಷಿ ಲಾಭದಾಯಕ ಎಂದರೆ ಬೆಟ್ಟದ ತುಂಬೆಲ್ಲಾ ಹಿಪ್ಪನೇರಳೇ ಗಿಡಗಳು ಏಳುತ್ತವೆ. ವೆನಿಲಾ ಬಂಗಾರದ ಬೆಳೆ ಎಂದು ಎಲ್ಲರೂ ಅದನ್ನೇ ಬಿತ್ತುತ್ತಾರೆ. ಮ್ಯಾಂಜಿಯಂ ಭಾರೀ ಆದಾಯ ತರುತ್ತದೆ ಎಂದು ಯಾರೋ ಹೇಳಿದರೆ ಸಾಕು ಎಲ್ಲರೂ ಅದರ ಸಸಿಗೆ ಕಿತ್ತಾಡುತ್ತಾರೆ. ದಕ್ಷಿಣ ಕನ್ನಡದಲ್ಲಿಯಂತೂ ಮ್ಯಾಂಜಿಯಂ ಅಬ್ಬರ ಮಿತಿ ಮೀರಿ ಬಿಟ್ಟಿದೆ.

ಈರುಳ್ಳಿ, ಟೊಮ್ಯಾಟೊ ಮತ್ತು ತೊಗರಿ ಬೆಳೆಗಾರರು ಹೇಗೆ ಸಾಲ ಮಾಡಿ ಬೇಕಾಬಿಟ್ಟಿ ಬೆಳೆದು ತಮ್ಮ ಜೀವವನ್ನೇ ತೆತ್ತರು ಎನ್ನುವುದು ನಮಗೆ ಗೊತ್ತಿದೆ. ಈಗ ಅದೇ ದಾರಿಯತ್ತ ಅಡಿಕೆ ಬೆಳೆಗಾರರೂ ಸಾಗಿದರೆ ಅಚ್ಚರಿಯೇನೂ ಇಲ್ಲ.

ಈರುಳ್ಳಿಯೋ, ತೊಗರಿಯೋ ಅಥವಾ ಟೊಮ್ಯಾಟೊವೋ ವರ್ಷದಲ್ಲಿ ಬೆಳೆಯುವ ಬೆಳೆ. ಆದರೆ ಅಡಿಕೆ ತೋಟ ಹಾಗಲ್ಲ. ಪೈರು ಬರಲು ಕನಿಷ್ಠ 7 ವರ್ಷವಾದರೂ ಬೇಕು. ಈಗ ಇದ್ದ ಗದ್ದೆಯನ್ನು ತೋಟ ಮಾಡಿಕೊಂಡರೆ ಇನ್ನು ಅದು ಪೈರಿಗೆ ಬರುವ ವೇಳೆಗೆ ಅಡಿಕೆಯ ಮಾನ ಹರಾಜಾಗಿದ್ದರೆ ಅಡಿಕೆ ಬೆಳೆಗಾರರ ಮಾನವೂ ಹರಾಜಾಗುವುದು ಖಂಡಿತ.

ಅಡಿಕೆಯನ್ನು ಈಗ ಸರ್ಕಾರ ವಾಣಿಜ್ಯಬೆಳೆಯೆಂದು ಗುರುತಿಸಿದೆ. ಈಗಾಗಲೇ ಅದರ ಮೇಲಿನ ತೆರಿಗೆಯನ್ನು ಶೇ. 4 ರಿಂದ 8ಕ್ಕೆ ಏರಿಸಿದೆ. ಇದು ಇನ್ನೂ ಹೆಚ್ಚಾಗುವ ಸಂಭವವೂ ಇದೆ. ಗುಟ್ಕಾದಂತಹ ಮಾರಕ ಪದಾರ್ಥ ತಯಾರಿಕೆಯಿಂದಾಗಿ ಬಂದ ಅಡಿಕೆಯ ವರಮಾನ ಮುಂದೊಂದು ದಿನ ಬೆಳೆಗಾರನ ಬದುಕಿಗೂ ಕ್ಯಾನ್ಸರ್ ತಂದರೆ ಅದಕ್ಕೆ ಯಾರನ್ನು ದೂರೋಣ.

■ ಆರ್.ಎನ್. ಹೆಗಡೆ

ದ.ಕ.ದಲ್ಲಿ ಭತ್ತದ ಒಡಲು ಬತ್ತಿದ ಕಥೆ

ಬಹಳ ಹಿಂದಿನಿಂದಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭತ್ತ ಪ್ರಮುಖ ಬೆಳೆ. ಆದರೆ ಈಗ ಅಡಿಕೆ ಎಂಬ ಮಾಯಾಂಗನೆಯ ಮೋಹಕ್ಕೆ ಒಳಗಾಗಿ ಭತ್ತದ ಕೃಷಿ ಕಡಿಮೆಯಾಗುತ್ತಾ ಸಾಗಿದೆ. ಜಿಲ್ಲೆಗೆ 2.72 ಲಕ್ಷ ಕ್ವಿಂಟಾಲ್ ಭತ್ತದ ಅಗತ್ಯವಿದ್ದರೆ ಸದ್ಯ ಬೆಳೆಯುತ್ತಿರುವ ಭತ್ತದ ಬೆಳೆ ಅಗತ್ಯದ ಅರ್ಧ ಅಂದರೆ 1.32 ಲಕ್ಷ ಕ್ವಿಂಟಾಲ್‌ಗಿಂತ ಕಡಿಮೆ.


ಜಿಲ್ಲಾ ಅಧಿಕೃತ ದಾಖಲೆಗಳ ಪ್ರಕಾರ ಈ ಹಿಂದೆ ಕೃಷಿ ಪ್ರದೇಶದ ಶೇ.75 ಭಾಗದಲ್ಲಿ ಭತ್ತವನ್ನು ಬೆಳೆಯಲಾಗುತ್ತಿತ್ತು. ಭತ್ತ ಬೆಳೆಯುವಲ್ಲಿ ನಿರ್ದಿಷ್ಟವಾಗಿ ಋತುಮಾನವನ್ನು ಅನುಸರಿಸಲಾಗುತ್ತಿತ್ತು. ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ನಡೆಯುತ್ತಿದ್ದ ಕೃಷಿಯನ್ನು 'ಎಣೆಲ್', ಅಕ್ಟೋಬರ್‌ನಿಂದ ಜನವರಿ ನಡುವೆ ನಡೆಯುವ ಕೃಷಿ 'ಸುಗ್ಗಿ', ಫೆಬ್ರುವರಿಯಿಂದ ಮೇ ತಿಂಗಳವರೆಗೆ ನಡೆಯುವ ಕೃಷಿಯನ್ನು 'ಕೊಳಕೆ' ಎಂದು ಕರೆಯುತ್ತಾರೆ. ಆದರೀಗ ಅಲ್ಲಿ ಭತ್ತದ ಕಾಲವೇ ಇಲ್ಲ.

ಇಪ್ಪತ್ತು ವರ್ಷಗಳ ಹಿಂದೆ ಮೊದಲ ಹಂತದ ಕೃಷಿಯಲ್ಲಿ 1,23,650 ಹೆಕ್ಟೇರ್ ಭತ್ತವನ್ನು ಬೆಳೆದರೆ, ಎರಡನೇ ಮತ್ತು ಮೂರನೇ ಹಂತದಲ್ಲಿ ಕ್ರಮವಾಗಿ 49,307 ಹೆಕ್ಟೇರ್ ಹಾಗೂ 7,440 ಹೆಕ್ಟೇರ್ ಭತ್ತವನ್ನು ಬೆಳೆಯಲಾಗುತ್ತಿತ್ತು. ವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1991-92ರಲ್ಲಿ 70,479 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುತ್ತಿದ್ದರೆ, 1993-94ರಲ್ಲಿ ಭತ್ತ ಬೆಳೆಯುವ ಪ್ರದೇಶ 68,481 ಹೆಕ್ಟೇರ್‌ಗೆ ಇಳಿಯಿತು. 1998-99ರ ವೇಳೆಗೆ ಇದು ಮತ್ತಷ್ಟು ಕುಸಿದು, 62,265 ಹೆಕ್ಟೇರ್‌ಗೆ ಇಳಿದಿದೆ.

ಆದರೆ ಇದಕ್ಕೆ ವಿರುದ್ಧವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1980-81ರಲ್ಲಿ 16,273 ಹೆಕ್ಟೇರ್ ಪ್ರದೇಶದಷ್ಟು ಬೆಳೆಯುತ್ತಿದ್ದ ಅಡಿಕೆ 1997-98ರ ವೇಳೆಗೆ ದ್ವಿಗುಣಗೊಂಡು 31,617 ಹೆಕ್ಟೇರ್‌ಗೆ ಏರಿದೆ. ಎಂಭತ್ತರ ದಶಕದಲ್ಲಿ 15,664 ಹೆಕ್ಟೇರ್ ಪ್ರದೇಶದಷ್ಟು ಬೆಳೆಯುತ್ತಿದ್ದ ತೆಂಗು ಕೂಡ ದ್ವಿಗುಣಗೊಂಡು ತೊಂಬತ್ತರ ದಶಕದ ಅಂತ್ಯದ ವೇಳೆಗೆ 30,798 ಹೆಕ್ಟೇರ್‌ಗಳಿಗೇರಿದೆ.

ಅಡಿಕೆ ಎಂದೂ ಹಾನಿಕಾರಕವಲ್ಲ

ಗುಟ್ಕಾ ತಯಾರಿಕೆಯಿಂದಾಗಿಯೇ ಅಡಿಕೆಗೆ ಬೆಲೆ ಬಂದಿದೆ ಎಂಬುದನ್ನು ಉತ್ತರ ಕನ್ನಡ ಜಿಲ್ಲೆಯ ಬೆಳೆಗಾರರು ಒಪ್ಪುತ್ತಾರೆ. ಗುಟ್ಕಾ ನಿಷೇಧ ಮಾಡುವುದು ಸರಿಯಲ್ಲ. ಗುಟ್ಕಾದಲ್ಲಿ ಇರುವ ತಂಬಾಕು ಇತ್ಯಾದಿ ರಾಸಾಯನಿಕಗಳೇ ಆರೋಗ್ಯಕ್ಕೆ ಹಾನಿಕರ. ಅವನ್ನು ಬಳಸದಂತೆ ತಡೆದರೆ ಸಾಕು, ಗುಟ್ಕಾ ನಿಷೇಧದ ಅಗತ್ಯ ಇರದು ಎಂದೂ ಅವರು ವಾದಿಸುತ್ತಾರೆ.



ಕುಡಿಯಲು ನೀರು ಸಿಗದ ಊರಿರಬಹುದು. ಆದರೆ 'ಗುಟ್ಕಾ' ಇರದ ಊರಿಲ್ಲ! ಇಂದು ಇದು ಸರ್ವವ್ಯಾಪಿ. ಅಬಾಲವೃದ್ಧರಿಗೆ ಈ ಗುಟ್ಕಾ ಪ್ರಿಯವಾದ ವಸ್ತು. ಗುಟ್ಕಾದಿಂದಲೇ ತೊಂಬತ್ತರ ದಶಕದಲ್ಲಿ ಅಡಿಕೆಗೆ ಒಂದು ಒಳ್ಳೆಯ ದರ ಬರಲು ಕಾರಣ ಹೌದು.

ಶಿರಸಿಯ ಪ್ರಸಿದ್ಧ ಸಂಸ್ಥೆಯಾದ ತೋಟಗಾರ ಸೇಲ್ ಸೊಸೈಟಿಯ ಅಧ್ಯಕ್ಷ ಶಾಂತರಾಮ ಹೆಗಡೆ 'ಕೆಂಪಡಿಕೆಗೆ ದರ ಬರಲು ಗುಟ್ಕಾ ಕಾರಣ' ಎನ್ನುತ್ತಾರೆ. ಆದರೆ ಗುಟ್ಕಾಕ್ಕೆ ನಮ್ಮ ಜಿಲ್ಲೆಯ ಕೆಂಪಡಿಕೆ ಉತ್ಪಾದಕರು ಅಷ್ಟು ಖಾಯಸ

ಗುಟ್ಕಾ ಗುಮ್ಮಕ್ಕೆ ಅಡಿಕೆ ಬಲಿ



ಗುಟ್ಕಾ ನಿಷೇಧ ಯಾಕೆ? ಅದಕ್ಕೆ ಸಂಬಂಧಿಸಿದವರ ವಿವರಣೆಯೆಂದರೆ ಗುಟ್ಕಾ ಸೇವನೆಯಿಂದ ಕ್ಯಾನ್ಸರ್ ಮಹಾಮಾರಿ ಆಕ್ರಮಣ, ಅಡಿಕೆಯಿಂದ ಕ್ಯಾನ್ಸರ್ ಉಂಟಾಗುತ್ತದೆ. ತಂಬಾಕು ಜಗಿಯುವುದರಿಂದ ಕ್ಯಾನ್ಸರ್ ಉಂಟಾಗುತ್ತದೆ. ಇದನ್ನು ತಡೆಯಲು ಇರುವ ದಾರಿ ನಿಷೇಧ, ಅಡಿಕೆಯಿಂದ ಕ್ಯಾನ್ಸರ್ ತಗಲುತ್ತದೆಯೆಂಬುದನ್ನು ಒಪ್ಪಲಾಗುವುದಿಲ್ಲ. ಅಡಿಕೆ ಸೇವನೆ ಮಾಡದವರಿಗೂ ಕ್ಯಾನ್ಸರ್ ತಗಲಿರುವುದು ಸಾಕಷ್ಟು ಪ್ರಮಾಣದಲ್ಲಿದೆ. ಅದೇ ರೀತಿ ಅಡಿಕೆ ಸೇವಿಸುತ್ತಿದ್ದವರೂ ಕ್ಯಾನ್ಸರ್ ತಗಲಿರುವುದು ಸಾಕಷ್ಟು ಪ್ರಮಾಣದಲ್ಲಿದೆ. ಅದೇ ರೀತಿ ಅಡಿಕೆ ಸೇವಿಸುತ್ತಿದ್ದವರೂ ಕ್ಯಾನ್ಸರ್ ಇಲ್ಲದೇ ಜೀವನ ಸಾಗಿಸುತ್ತಿರುವುದೂ, ಜೀವನಮುಕ್ತರಾಗಿರುವುದೂ ಹೇರಳ ಸಂಖ್ಯೆಯಲ್ಲಿದೆ. ಕಾರಣ ಅಡಿಕೆಗೂ ಕ್ಯಾನ್ಸರಿಗೂ ಗಂಟುಹಾಕುವುದು ಬಾಲಿಶತನವಾದೀತು.

ಇನ್ನು ಗುಟ್ಕಾ ವಿಚಾರದಲ್ಲಿ ಆಲೋಚಿಸುವಾಗ ತಯಾರಕರು ತಮ್ಮ ಉತ್ಪಾದನೆಯನ್ನು ಜನಪ್ರಿಯಗೊಳಿಸುವಲ್ಲಿ ಬೇಡಿಕೆಯನ್ನು ಬಲಪಡಿಸುವಲ್ಲಿ ಜನರ ಆರೋಗ್ಯದತ್ತ ಗಮನ ಕೊಡುವದನ್ನು ನಿರ್ಲಕ್ಷಿಸಿ ಮತ್ತು ಬರಿಸುವಂತಹ ನಿಶೆ ಹೆಚ್ಚಿಸುವಂತಹ ಹಾನಿಕರ ದ್ರಾವಣಗಳನ್ನು, ಡ್ರಗ್‌ಗಳನ್ನು ಸೇವಿಸುತ್ತಿದ್ದರೆ ಅವುಗಳ ಮೇಲೆ ನಿಯಂತ್ರಣ ಅವಶ್ಯ. ಆದ್ದರಿಂದ ಎಲ್ಲಾ ಗುಟ್ಕಾಗಳನ್ನು, ಪಾನಮಸಾಲಾಗಳನ್ನು ಬಹಿಷ್ಕರಿಸಬೇಕೆಂಬುದೂ ನ್ಯಾಯಸಮ್ಮತವೆನಿಸದು. ಗುಟಕಾ ಗುಣ ನಿಯಂತ್ರಣವನ್ನು ಹೇರಿ ಆಹಾರ ವಿಜ್ಞಾನಿಗಳ ಸಮ್ಮತಿ ಮುದ್ರೆ ಪಡೆಯುವಂತೆ ಆದೇಶಿಸುವುದರ ಜೊತೆಗೆ ಗುಟ್ಕಾ ಪ್ಯಾಕಿನ ಮೇಲೆ ಅವುಗಳೊಳಗಿರುವ ವಸ್ತುಗಳ ಹೆಸರು ಪ್ರಮಾಣಗಳನ್ನೂ ಮುದ್ರಿಸಿ ಸಂದೇಹರಹಿತಗೊಳಿಸಬಹುದು.

ಗುಟ್ಕಾ ಸೇವನೆ ಕೂಡದು ಅದರಲ್ಲಿರುವ ಅಡಿಕೆ ಜಗಿಯುವುದರಿಂದ ಕ್ಯಾನ್ಸರ್ ಬರುವುದು ಎಂಬ ಬೊಬ್ಬೆಯೊಂದಿಗೆ ಗುಟ್ಕಾ ಗುಮ್ಮನನ್ನು ಮಾಡಿ ಹೆದರಿಸುವುದು ಸರ್ವಥಾ ಸಮರ್ಥನೀಯವಲ್ಲ.

– ಶಾಂತಾರಾಮ ವಿ. ಹೆಗಡೆ, ಶೀಗೇಹಳ್ಳಿ

ಮಾಡುವುದಿಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಂಪಡಿಕೆ ಬೆಳೆ ಕಡಿಮೆ. ಈಗ ಸ್ವಲ್ಪ ಜನ ಲಕ್ಷವಹಿಸುತ್ತಿದ್ದಾರೆ. ಕೆಂಪಡಿಕೆಗೆ ದರ ಬರಲು ಗುಟ್ಕಾವೇ ಕಾರಣ ಎನ್ನುತ್ತಾರೆ. ಆದರೆ ಚಾಲಿಯ ಮೇಲೆ ಅಷ್ಟಾಗಿ ಪರಿಣಾಮ ಆಗದು ಎಂದು ಅವರು ಹೇಳುತ್ತಾರೆ.

ಗುಟ್ಕಾ ನಿಷೇಧದ ಬಗೆಗೆ ಪ್ರಸ್ತಾಪಿಸಿದರೆ ಅದರಲ್ಲಿರುವ ಹಾನಿಕಾರಕ ಅಂಶ ತೆಗೆಯಲಿ ಎನ್ನುತ್ತಾರೆ.

ಆದರೆ ಶಿರಸಿಯ ಮತ್ತೋರ್ವ ಪ್ರಗತಿಪರ ಕೃಷಿಕ ವಿದ್ಯಾಧಿರಾಜ ವೈಕುಂಠರಾವ್ ಸೋಂದೆ 'ಕೃಷಿಕರು ಗುಟ್ಕಾ ನೋಡಿ ಅಡಿಕೆ ತೋಟ ಮಾಡಿಲ್ಲ. ಗುಟ್ಕಾ ಇಲ್ಲದಿದ್ದರೂ ಅಡಿಕೆಗೆ ಸಾಮಾನ್ಯ ಬೆಲೆ ಇದ್ದೇ ಇರುತ್ತದೆ. ಅಡಿಕೆ ಕ್ಷೇತ್ರ ಜಾಸ್ತಿಯಾಗುತ್ತಿದ್ದುದು ದರ ದೃಷ್ಟಿಯಲ್ಲಿ ಆತಂಕಕಾರಿ' ಎನ್ನುತ್ತಾರೆ ಅಡಿಕೆ ಕ್ಷೇತ್ರ ದೊಡ್ಡ ಪ್ರಮಾಣದಲ್ಲಿ ಜಾಸ್ತಿಯಾಗದಿದ್ದರೆ ಅಡಿಕೆ ದರದ ಮೇಲೆ ಅಂಥ ಪರಿಣಾಮ ಆಗದು ಎಂಬುದು ಅವರ ಅಭಿಪ್ರಾಯ.

'ಅಡಿಕೆಯ ಜೊತೆಗೆ ಪರ್ಯಾಯ ಬೆಳೆಗಳ ಬಗ್ಗೆ ಚಿಂತನೆ ಮಾಡಬೇಕು ಎಂದು ಸಲಹೆ ಮಾಡುವ ಚಿಂತನಶೀಲ ಕೃಷಿಕ ಕೆ.ಎಂ.ಹೆಗಡೆ ಭೈರುಂಬೆ ಕೆಂಪಡಿಕೆಗೆ ಗುಟ್ಕಾದಿಂದ ದರ ಬಂದಿದೆ. ಚಾಲಿಯ ಮೇಲೆ ಗುಟ್ಕಾ ನಿಷೇಧವಾದರೂ ಅಷ್ಟಾಗಿ ಪರಿಣಾಮ ಬೀರದು. ಉಪ ಬೆಳೆಗಳನ್ನು ಬೆಳೆದರೆ ಅಡಿಕೆ ದರ ಒಮ್ಮೆ ಇಳಿದರೂ ಉಳಿದ ಬೆಲೆಗಳು ಬೆಂಗಾವಲಿಗಿರುತ್ತದೆ. ಎನ್ನುತ್ತ ಹಾನಿಕಾರಕ ಅಂಶವನ್ನು ಗುಟ್ಕಾದಿಂದ ತೆಗೆದರೆ ಈಗಿನ ಪ್ರಮಾಣದಲ್ಲಿ ಸ್ವೀಕರಿಸುವ ಬಗೆಗೆ ಸಂಶಯ ವ್ಯಕ್ತಪಡಿಸುತ್ತಾರೆ.

ಶಿರಸಿಯ ಮತ್ತೊಂದು ಪ್ರಸಿದ್ಧ ಸಂಸ್ಥೆಯಾದ ಟಿ.ಎಂ.ಎಸ್ ಶಿರಸಿ ಇದರ ಅಧ್ಯಕ್ಷ ಜಿ.ಎಂ.ಹೆಗಡೆ ಹುಳಗೋಳ, ಕೆಂಪಡಿಕೆಗೆ ದರ ಬಂದಿದ್ದು ಗುಟ್ಕಾದಿಂದಲೇ ಎಂಬುದನ್ನು ಒಪ್ಪುತ್ತಾರೆ. ಗುಟ್ಕಾ ನಿಷೇಧಿಸಿದರೆ ಕೆಂಪಡಿಕೆಗೆ ಹೊಡೆತ. ಇಷ್ಟಕ್ಕೂ ಗುಟ್ಕಾವನ್ನು ಯಾಕೆ ನಿಷೇಧಿಸಬೇಕು? ಅದರಲ್ಲಿ ಅಡಿಕೆ ಪ್ರಮಾಣ ಜಾಸ್ತಿ ಇರುತ್ತದೆ. ಅಡಿಕೆ ತಿಂದರೆ ಆರೋಗ್ಯಕ್ಕೆ ಹಾನಿ ಇಲ್ಲ ಎನ್ನುತ್ತಾರೆ. ಅಷ್ಟಕ್ಕೂ ಅದರಲ್ಲಿರುವ ಹಾನಿಕಾರಕ ಅಂಶ ತೆಗೆದರೆ ಸಾಕಲ್ಲ. ಹೀಗಾಗಿ ಇದನ್ನು ನಿಷೇಧಿಸಬೇಕೆಂದೇನಿಲ್ಲ ಎನ್ನುತ್ತಾರೆ.

ಶಿರಸಿಯ ವ್ಯಾಪಾರಸ್ಥ ಜಿ.ಜಿ.ಹೆಗಡೆ ದರ ಬರಲು ಗುಟ್ಕಾ ಒಂದು ಕಾರಣ ಅಲ್ಲ. ಪಾನ್ ಹಾಕುವವರ ಸಂಖ್ಯೆಯೂ ಜಾಸ್ತಿ ಆಗಿದೆ. ಎಂದು ಅಭಿಪ್ರಾಯ ಪಡುತ್ತಾರೆ.

'ಕೆಂಪಡಿಕೆಗೆ ದರ ಬರಲು ಗುಟ್ಕಾ ಕಾರಣ' ಎನ್ನುತ್ತಾರೆ ಮತ್ತೋರ್ವ ವ್ಯಾಪಾರಿ ಎನ್.ಜಿ.ಹೆಗಡೆ. 'ನರಸಿಂಹಯ್ಯನವರ ವರದಿ ಜಾರಿಗೆ ಬಂದರೆ ಕೆಂಪಡಿಕೆಯ ಬೆಲೆಯ ಮೇಲೆ ತುಂಬಾ ಪರಿಣಾಮ ಆಗುತ್ತದೆ. ದರ ಇಳಿಯುತ್ತದೆ' ಎನ್ನುತ್ತಾರೆ. ಇದನ್ನೇ ನಾಡಿಗಗಲ್ಲಿಯ ಗಜಾನನ ಹೆಗಡೆ ಕೂಡ ಒಪ್ಪುತ್ತಾರೆ.

'ಅಡಿಕೆ ಹಾಳಲ್ಲ ಗುಟ್ಕಾದಲ್ಲಿರುವ ಹಾನಿಕಾರಕ ಅಂಶ ತೆಗೆದು ಲವಂಗ, ಜಾಯಿಕಾಯಿ, ಪತ್ರೆಗಳನ್ನು ಬಳಸಿಕೊಳ್ಳಲು ಯತ್ನಿಸಲಿ' ಎನ್ನುವ ಕೃಷಿಕ ಗಣೇಶ ಹೆಗಡೆ ಕಲ್ಲಕೈ 'ಗುಟ್ಕಾ ನಿಷೇಧ ಆದರೆ ಅಡಿಕೆಯ ದರಕ್ಕೆ ತೀರಾ ಪೆಟ್ಟು ನಮ್ಮ ಹುಡುಗರೂ ಮತ್ತಾವುದಾದರೂ ಚಟ ಅಂಟಿಸಿಕೊಳ್ಳುತ್ತಾರೆ' ಎಂದು ಆತಂಕಿಸುತ್ತಾರೆ.

ವಿ.ಜಿ.ಭಟ್ ಎನ್ನುವ ಅಡಿಕೆ ವ್ಯಾಪಾರಿ ಹೀಗೆ ಹೇಳುತ್ತಾರೆ 'ಗುಟ್ಕಾದಿಂದ ಅಡಿಕೆಗೆ ದರ ಬಂದಿದೆ. ಗುಟ್ಕಾ ನಿಷೇಧ ಆದರೆ ಬಹಳ ಹೊಡೆತ. ನೇರವಾದ ಪರಿಣಾಮವನ್ನು ಬೆಳೆಗಾರರು ಅನುಭವಿಸಬೇಕು. ವ್ಯಾಪಾರಸ್ಥರಿಗೂ ಇದು ಪೆಟ್ಟು' ಎನ್ನುತ್ತಾರೆ.

■ ರಾಘವೇಂದ್ರ, ಬೆಟ್ಟಕೊಪ್ಪ

ಬೀಡಿ, ಸಿಗರೇಟು ಮೊದಲು ನಿಷೇಧಿಸಲಿ : ಹೆಗಡೆ

'ಶೇ.25ರಷ್ಟು ತಂಬಾಕಿನ ಅಂಶಗಳನ್ನು ಒಳಗೊಂಡ ಗುಟ್ಕಾ ಆರೋಗ್ಯಕ್ಕೆ ಹಾನಿಕರ ಎಂಬ ಕಾರಣಕ್ಕಾಗಿ ನಿಷೇಧಿಸುವುದಾದರೆ, ಅದಕ್ಕಿಂತ ಮುಂಚೆ ಶೇಕಡಾ ನೂರರಷ್ಟು ತಂಬಾಕಿನಿಂದಲೇ ತಯಾರಿಸಿರುವ ಸಿಗರೇಟು, ಬೀಡಿ, ನಶ್ಯ ನಿಷೇಧಿಸಲಿ, ಆಮೇಲೆ ಗುಟ್ಕಾದ ಮಾತು' ಎಂದು ಆಗಿನ ಕೇಂದ್ರ ವಾಣಿಜ್ಯ ಮಂತ್ರಿ ರಾಮಕೃಷ್ಣ ಹೆಗಡೆ ಸವಾಲು ಹಾಕಿದ್ದರು.

ಅವರು 23.4.1999ರಂದು ಗುರುವಾರ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ಮತ್ತು ಯಡಳ್ಳಿಯಲ್ಲಿ ನಡೆದ ಸುವರ್ಣ ಮಹೋತ್ಸವ ಕಾರ್ಯಕ್ರಮ ಎರಡರಲ್ಲಿ ಹೀಗೆ ಪ್ರತಿಕ್ರಿಯಿಸಿದ್ದರು. ಆಗತಾನೆ 'ಗುಟ್ಕಾ' ನಿಷೇಧಿಸುವ ಆತಂಕದಲ್ಲಿ ಅಡಿಕೆ ಬೆಳೆಗಾರರಿದ್ದರು.

ಅವರು 'ಗುಟ್ಕಾ'ದಿಂದ ಅಡಿಕೆಗೆ ಮಾನ ಬಂದಿದ್ದನ್ನು ಪರೋಕ್ಷವಾಗಿ ಅಭಿವ್ಯಕ್ತಪಡಿಸುತ್ತ 'ಗುಟ್ಕಾದಲ್ಲಿ ತಂಬಾಕಿನ ಅಂಶ ಇದೆ ಎಂಬ ಕಾರಣಕ್ಕಾಗಿ ಗುಟ್ಕಾ ನಿಷೇಧಿಸಲು ಸಾಧ್ಯವಿಲ್ಲ. ಗುಟ್ಕಾವನ್ನು ರಾಸಾಯನಿಕ ಕ್ರಿಯೆಗೆ ಒಳಪಡಿಸಿ ಅದರಲ್ಲಿಯ ಆರೋಗ್ಯಕ್ಕೆ ಮಾರಕವಾದ ಪದಾರ್ಥಗಳನ್ನು ಮಾತ್ರ ನಿಷೇಧಿಸುವಂತೆ ಒತ್ತಾಯಿಸುವುದಾಗಿಯೂ ಭರವಸೆ ಇತ್ತಿದ್ದರು.

ಇದೇ ವೇಳೆಯಲ್ಲಿ 'ನೀವು ಆತಂಕಗೊಳ್ಳುವುದು ಬೇಡ, ಅಡಿಕೆ ಆಮದಿಗೆ ನೂರಕ್ಕೆ ಎರಡುನೂರರಷ್ಟು ಅಬಕಾರಿ ಸುಂಕ ಹಾಕುವ ಅಸ್ತ್ರ ಬಳಸುತ್ತೇವೆ' ಎಂದು ಹೆಗಡೆ ಆಶ್ವಾಸನೆ ಇತ್ತಿದ್ದರು.

ತತ್ಪರಿಣಾಮವಾಗಿ ಎಂಟತ್ತು ಸಾವಿರ ರೂ.ಗಳಿದ್ದ ಅಡಿಕೆ ದರ ಹದಿನಾಲ್ಕು ಸಾವಿರ ದಾಟಿಯೂ ಇತ್ತು ಎಂಬುದು ಇಲ್ಲಿ ಗಮನಾರ್ಹ.

ಕ್ಲಾಸಿಕಲ್‌ನಿಂದ ಕ್ಯಾಬರೆವರೆಗೆ

ಹಾಡುಗಳು ಭಾರತೀಯ ಸಿನಿಮಾದ ಅವಿಭಾಜ್ಯ ಅಂಗ. ಇಂಥ ಪ್ರವೃತ್ತಿ ಬೇರೆ ಸಿನಿಮಾಗಳಲ್ಲಿ ಇಲ್ಲ. ಹಾಗೇ ಹಾಡಿನೊಂದಿಗೆ ನೃತ್ಯ ನಮ್ಮದೇ ವಿಶಿಷ್ಟತೆ. ಒಂದು ಕಾಲಕ್ಕೆ ಶುದ್ಧ ಶಾಸ್ತ್ರೀಯ ನೃತ್ಯ ಮಾತ್ರ ಬಳಸುತ್ತಿದ್ದ ಭಾರತೀಯ ಸಿನಿಮಾದಲ್ಲಿ ಇವತ್ತು ನಾನಾ ನೃತ್ಯ ಶೈಲಿಗಳು ವಿಜೃಂಭಿಸುತ್ತಿವೆ. ಅದರ ಪರಿಚಯ ಇಲ್ಲಿದೆ.



ದಿಲ್ ಸೆ : ಹೊಸ ಸ್ಟೆಪ್ಸ್ ಹೊಸ ಬಗೆ



ಹಳೆಯ ಶಾಸ್ತ್ರೀಯ ನೃತ್ಯ

1949ರಲ್ಲಿ 'ಅಲ್‌ಬೇಲಾ' ಚಿತ್ರದಲ್ಲಿ ಹೀರೋ ಭಗವಾನ್ ಒಂದು ಹಾಡಿನಲ್ಲಿ ನಟಿ ಗೀತಾ ಬಾಲಿಯೊಂದಿಗೆ ಡಾನ್ಸ್ ಮಾಡಿದ್ದಾರೆ. ಇದರಿಂದ ಆ ಹಾಡು ಪಾಪುಲರ್ ಆಗಿದ್ದೇ ಅಲ್ಲದೆ ಆ ಸಿನಿಮಾ ಕೂಡಾ ಹಿಟ್ ಆಯಿತು. ಆ ಹಾಡಿನ ಹೆಸರು 'ಮೇರೆ ಪಿಯಾ ಗಯೆ ರಂಗೂನ್' ಎಂದು. ಆಗಿನ ಕಾಲಕ್ಕೆ ನೃತ್ಯಗೀತೆ, ರಿಕಾರ್ಡ್ ಡಾನ್ಸ್ ಒಂದು ಸೆನ್ಸೇಶನ್. ಅಲ್ಲಿಂದ ಸಿನಿಮಾ ರಂಗದಲ್ಲಿ 'ನೃತ್ಯ'ಪ್ರಧಾನ ಭೂಮಿಕೆಯನ್ನು ನಿರ್ವಹಿಸುತ್ತಾ ಬರುತ್ತಿದೆ. ಆದರೆ ಈಗಿನ ಸಿನಿಮಾದಲ್ಲಿನ ಡಾನ್ಸ್‌ನ ಮುಂದೆ ಆಗಿನ ನಾಟ್ಯ ತೀರಾ ಸಪ್ಪೆ! ಆದರೆ ಇದು ಕಾಲಕ್ಕನುಗುಣವಾದ ಬದಲಾವಣೆಯಾಗಿರಬಹುದು. ಆಧುನಿಕ ಸಾಮಾಜಿಕ ದೃಷ್ಟಿಕೋನ ಕೂಡಾ ಕಾರಣವಾಗಿರಬಹುದು! ಕ್ಲಾಸಿಕಲ್ ಡಾನ್ಸ್‌ಗೆ ಪ್ರಾಮುಖ್ಯತೆ ಕಡಿಮೆಯಾಗಿ ಕ್ಯಾಬರೆ, ಡಿಸ್ಕೊ ಡಾನ್ಸ್‌ಗಳಿಗೆ ಕ್ರೇಜೀ ಬೆಳೆದಿದೆ.

ಈ ನಡುವೆ 'ದಿಲ್‌ಸೆ' ಸಿನಿಮಾದಲ್ಲಿನ ನೃತ್ಯಹಾಡು ನೋಡಿದ್ದಾದರೆ, ಇದರಲ್ಲಿ ಷಾರುಖ್‌ಖಾನ್, ಮಲೈಕಾ ಆರೋಡಾಳೊಂದಿಗೆ ನಿಸರ್ಗ ದೃಶ್ಯಗಳ ನಡುವೆ ರೈಲಿನ ಮೇಲೆ ನೃತ್ಯ ಮಾಡುತ್ತಾ 'ಛಯ್ಯಾ ಛಯ್ಯಾ', ಎಂದು ಹಾಡುವ ಗೀತೆ ಪ್ರೇಕ್ಷಕರನ್ನು ತುಂಬಾ ರಂಜಿಸಿದೆ. ಕಳೆದ ೫ ದಶಕಗಳಿಂದ ಚಲನಚಿತ್ರರಂಗದಲ್ಲಿ ನಾಟ್ಯದ, ಅವುಗಳ ದೃಶ್ಯೀಕರಣದಲ್ಲಿ ಬರುವ ಬದಲಾವಣೆಗಳನ್ನು ಗಮನಿಸೋಣ.

ನೃತ್ಯ ಹಾಡು ಇಲ್ಲದಂತೆ ತೆಗೆದ ಸಿನಿಮಾ 'ಬೇಮಾನಿ'; ಸಿನಿಮಾಗಳನ್ನು ಹಾಡುಗಳಿಲ್ಲದಂತೆ ಕೂಡ ತೆಗೆಯಬಹುದು. ಆದರೆ ಅವುಗಳನ್ನು ಎಷ್ಟರಮಟ್ಟಿಗೆ ಪ್ರೇಕ್ಷಕರು ಸ್ವೀಕರಿಸುತ್ತಾರೆ, ಒಪ್ಪಿಕೊಳ್ಳುತ್ತಾರೆನ್ನುವುದೇ ಮುಖ್ಯವಾಗುತ್ತದೆ. ನೃತ್ಯಗೀತೆಗಳಿಲ್ಲದಂತೆ ತೆಗೆದ ಸಿನಿಮಾಗಳನ್ನು ವ್ಯಂಗ್ಯಾತ್ಮಕ ಚಿತ್ರಗಳ ಅಡಿಯಲ್ಲಿ, ಕಲಾತ್ಮಕ ಚಿತ್ರಗಳ ಪಟ್ಟಿಯಲ್ಲಿ ಗುರುತಿಸಲ್ಪಡುತ್ತವೆ. ಸಿನಿಮಾದಲ್ಲಿ ಕಥೆ ಬಿಗಿ ಇಲ್ಲದಾಗ, ನೃತ್ಯಗೀತೆಗಳ ಮೂಲಕವೇ ಕೆಲವು ಸಿನೆಮಾಗಳು ಹಿಟ್ ಆಗುತ್ತಿವೆ. ಸಂಗೀತ, ಹಾಡುಗಳೊಂದಿಗೆ ಯಶಗಳಿಸಿದ ಸಿನಿಮಾಗಳು ಸಾಕಷ್ಟು ಇವೆ ಎಂಬುದು ಮರೆಯುವಂತಿಲ್ಲ.

ಚಲನಚಿತ್ರಕ್ಕೆ ಕಥೆಯೇ ಪ್ರಾಧಾನ್ಯವಲ್ಲ. ಕಥೆಯೊಡನೆ ಹಾಡುಗಳು, ಸಂಗೀತ ಚಲನಚಿತ್ರಕ್ಕೆ ಬಹಳ ಅವಶ್ಯಕ. ಭವಿಷತ್ತಿನಲ್ಲಿ ಕೂಡಾ ಇದು ಹೀಗೇ ಮುಂದುವರಿಯಬಹುದು. ಈ ವಿಷಯವನ್ನು 'ದಿಲ್‌ಸೆ' ಚಿತ್ರ ಸ್ಪಷ್ಟವಾಗಿ ನಿರೂಪಿಸಿದೆ. ವಿಮರ್ಶಕರು ಈ ಚಿತ್ರವನ್ನು ಬಲವಾಗಿ ನಿರಾಕರಿಸಿದ್ದರು. ಆದರೂ ದೊಡ್ಡ ಸಂಖ್ಯೆಯಲ್ಲಿ ಈ ಸಿನಿಮಾಕ್ಕೆ ಪ್ರೇಕ್ಷಕರು ಹಾಜರಾದರು. ಕೇವಲ ಷಾರೂಖ್‌ಖಾನ್‌ರ 'ಛಯ್ಯಾ ಛಯ್ಯಾ' ಹಾಡನ್ನು ನೋಡಿ ಆನಂದಿಸುವುದಕ್ಕೆ ಈ ಸಿನೆಮಾವನ್ನೇ ಹೆಚ್ಚಾಗಿ ಪ್ರೇಕ್ಷಕರು ನೋಡಿದ್ದಾರೆ. ವಾಸ್ತವವಾಗಿ ಈ ಚಿತ್ರದ ಬಗ್ಗೆ ಪ್ರಸ್ತಾಪಿಸುವುದು ಅವಶ್ಯಕವೆ. ಎ.ಆರ್.ರೆಹಮಾನ್ ಸಂಗೀತದಿಂದ ಈ ಚಿತ್ರದಲ್ಲಿನ ಹಾಡುಗಳು ಸೂಪರ್ ಹಿಟ್ ಆದವು. ಅಂದರೆ ಇಲ್ಲಿ ವಿಭಿನ್ನ ರೀತಿಯ ನೃತ್ಯಗೀತೆಗಳು ಚಿತ್ರದಲ್ಲಿ ಸ್ಥಾನ ಪಡೆದವು ಎಂದು ಹೇಳಬಹುದು. ಹಾಡುಗಳ ಚಿತ್ರೀಕರಣಕ್ಕಾಗಿ ಹಣ ಎಷ್ಟು ಖರ್ಚಾದರೂ ನಿರ್ಮಾಪಕರು, ನಿರ್ದೇಶಕರು ಹಿಂದೆ-ಮುಂದೆ ನೋಡುವುದಿಲ್ಲ. ಯಾಕೆಂದರೆ ಪ್ರೇಕ್ಷಕರು ಚಿತ್ರಗಳಲ್ಲಿ

ನೃತ್ಯಗೀತೆಗಳನ್ನು ಸ್ವೀಕರಿಸುತ್ತಿದ್ದಾರೆ! ಬಹಳ ಜನ ಪ್ರೇಕ್ಷಕರು ಸಿನೆಮಾ ನೋಡುವುದು ಕೇವಲ ಮನೋರಂಜನೆಗಾಗಿ. ಅವರು ಸಿನೆಮಾದ ಕಥೆಗೆ ಕೊಡುವ ಮಹತ್ವಕ್ಕಿಂತಲೂ ಸಿನೆಮಾದ ಹೀರೊಯಿನ್ ಮಾಡುವ ಡಾನ್ಸ್‌ಗೆ, ಹಾಡಿಗೆ, ಶೃಂಗಾರ ಭಂಗಿಗೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಾರೆ. ಪ್ರೇಕ್ಷಕರ ಈ ಅಭಿರುಚಿಯ ಮೇಲೆಯೇ ನಿರ್ದೇಶಕರು ಸಿನೆಮಾದಲ್ಲಿ ಅಶ್ಲೀಲ ನೃತ್ಯಹಾಡುಗಳಿಗೆ ಹೆಚ್ಚು ಒತ್ತು ಕೊಡುತ್ತಿದ್ದಾರೆ. ಗೋವಿಂದಾ, ರವೀನಾರ ಸೆಕ್ಸ್ ಡಾನ್ಸ್ ನೋಡುವುದಕ್ಕೆ ಸಿನೆಮಾಕ್ಕೆ ಹೋಗುವವರೇ ಬಹಳ ಜನ. ನಿರ್ದೇಶಕರು ಕೂಡಾ ಪ್ರೇಕ್ಷಕರಿಗೆ ಬೇಕಾದಂತಹ ಬೇಕಾದಷ್ಟು ಮಸಾಲಾ ಒದಗಿಸಿ, ಅರೆಬರೆ ಬಟ್ಟೆಗಳನ್ನು ನಾಯಕಿಗೆ ತೊಡಿಸಿ ಪ್ರೇಕ್ಷಕರ ಕಣ್ಣು ತಣ್ಣಗಾಗಿಸುತ್ತಿದ್ದಾರೆ.


ರಂಭಾ

ಹಾಡಿಗೂ, ಸಂಗೀತಕ್ಕೂ 1960-70ರ ದಶಕ ಸ್ವರ್ಣಯುಗ : 1960-70ರ ದಶಕ ಹಿಂದಿ ಸಿನಿಮಾ ಚರಿತ್ರೆಯಲ್ಲಿ ಸ್ವರ್ಣಯುಗವೆಂದೇ ಹೇಳಬಹುದು. ಹಾಗೇನೆ ಢಾನ್ಸ್‌ನಲ್ಲಿಯೂ ಕೂಡಾ ಹಲವು ಮಾರ್ಪಾಡುಗಳು ಆದವು. ಈ ದಶಕದಲ್ಲಿ ಬಹಳಷ್ಟು ಜನ ಪ್ರಸಿದ್ಧ ಗೀತ ರಚನಾಕಾರರು, ಸಂಗೀತ ನಿರ್ದೇಶಕರು ಬೆಳಕಿಗೆ ಬಂದಿದ್ದಾರೆ. ನೃತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಾಡುಗಳನ್ನು ರಚಿಸುವುದರಲ್ಲಿ ಗೀತಕಾರರು, ಸಂಗೀತ ನಿರ್ದೇಶಕರು ಮಾಡಿದ ಪ್ರಯತ್ನ ಅಷ್ಟಿಷ್ಟಲ್ಲ. ಹಾಡುಗಳನ್ನು ಆಯ್ದುಕೊಳ್ಳುವುದರಲ್ಲಿ ನಿರ್ದೇಶಕನ ಪಾತ್ರಕೂಡಾ ಮಹತ್ವದ್ದೇ. ಗೀತ ರಚನೆಯಲ್ಲಿ ಶೈಲೇಂದ್ರ, ಸಾಹಿರ್, ಮಜ್‌ರೂಹ್ ಸುಲ್ತಾನಪುರಿ, ಶಕೀಲ, ಹಸ್ರತ್, ರಾಜೇಂದ್ರ ಮುಂತಾದವರ ಜೊತೆಗೆ ಸಂಗೀತ ನಿರ್ದೇಶಕರಲ್ಲಿ ಶಂಕರ್ ಜೈಕಿಶನ್, ನೌಷಾದ್, ಆರ್.ಡಿ ಬರ್ಮನ್, ಸಿ.ರಾಮಚಂದ್ರ, ಓ.ಪಿ.ನಯ್ಯರ್, ಹೇ[illegible] ಕುಮಾರ್ ಕಲ್ಯಾಣಜೀ ಆನಂದ್‌ಜೀ, ಲಕ್ಷ್ಮೀಕಾಂತ್ ಪ್ಯಾರೇಲಾಲ್[illegible] ಘ[illegible]ಘಟಿಗಳು ಸಿನಿ ಆಗಸದಲ್ಲಿ ಕಂಗೊಳಿಸುವ ತಾರೆಗಳು.

ನೃತ್ಯದ ಮೇಲೆ ಪಾಶ್ಚಾತ್ಯರ ಪ್ರಭಾವ : ಸಿನಿಮಾ ಹಾಡುಗಳ ಮೇಲೆ ಪಾಶ್ಚಾತ್ಯ ಪ್ರಭಾವ ಎಂದಿನಿಂದ ಪ್ರಾರಂಭವಾಯಿತೋ ಅಂದಿನಿಂದ ಹಾಡಿನಲ್ಲಿ ಎಷ್ಟೋ ಮಾರ್ಪಾಡುಗಳು ಜಾಗೆ ಪಡೆದಿವೆ. ಹಾಡಿನಲ್ಲಿ, ಡಾನ್ಸ್‌ದಲ್ಲಿನ ವೇಗ ಪ್ರೇಕ್ಷಕರನ್ನು ಆಕರ್ಷಣೆಗೊಳಿಸಿದವು ಎಂದು ಹೇಳಬಹುದು. ಪಾಶ್ಚಾತ್ಯ ಪ್ರಭಾವ ಇಲ್ಲದಿದ್ದಾಗ ನೃತ್ಯ ಹಾಡುಗಳಲ್ಲಿ ಈಗಿನ ಥಳಕು-ಬಳಕು ಕಂಡು ಬರುತ್ತಿದ್ದಿಲ್ಲ. ಮೈ ಮುರಿತ, ಹಾರಾಟ ಕಡಿಮೆ ಪ್ರಮಾಣದಲ್ಲಿದ್ದವು. ನೃತ್ಯ ಗೀತೆಗಳಿಗನುಗುಣವಾಗಿ ದೇಹವನ್ನು ಕದಲಿಸುತ್ತಿದ್ದರು. ಆಗಿನ ಸಿನೆಮಾದಲ್ಲಿ ರಿಕಾರ್ಡ್ ಡಾನ್ಸ್‌ಗಳು ಸಾಮಾನ್ಯವಾಗಿ ಪ್ರತ್ಯೇಕವಾಗಿಯೇ ಚಿತ್ರೀಕರಣವಾಗುತ್ತಿತ್ತು. ನಾಯಕಿಯರು ಅಂತಹ ಹಾಡುಗಳಲ್ಲಿ ಕುಣಿಯುತ್ತಿದ್ದಿಲ್ಲ. ಹಿಂದಿಯಲ್ಲಿ ಹೆಲನ್, ಗೋಪಿಕೃಷ್ಣ, ಟಿ.ಶಾಂತಿ ಮೊದಲಾದವರು, ಕನ್ನಡ-ತೆಲುಗುದಲ್ಲಿ ಜ್ಯೋತಿಲಕ್ಷ್ಮಿ, ಜಯಮಾಲಿನಿ, ಇತ್ತೀಚಿನ ಸಿಲ್ಕಸ್ಮಿತಾರಂತಹವರು ಹೆಸರು ಪಡೆದಿದ್ದಾರೆ. ಆದರೆ ಬರುಬರುತ್ತಾ ಕ್ಲಬ್‌ಡಾನ್ಸರ್ ಸ್ಥಾನದಲ್ಲಿ ನಾಯಕ-ನಾಯಕಿಯರೇ ನರ್ತನೆಗೆ ಇಳಿದಿರುವುದರಿಂದ, ವೃತ್ತಿ ನೃತ್ಯಗಾರರು, ಕ್ರಮೇಣ 'ತೆರೆ' ಮರೆಯಾಗಿದ್ದಾರೆ.



ರವೀನಾ ಟಂಡನ್

ಚಲನಚಿತ್ರದಲ್ಲಿ ಶಾಸ್ತ್ರೀಯ ನೃತ್ಯಗಳು ಸಾದಾಸೀದಾ ಇರುತ್ತಿದ್ದವು. ಇದರಲ್ಲಿ ಕಥಕ್ ನರ್ತನಕ್ಕೆ ಪಾಧಾನ್ಯತೆ ಇರುತ್ತಿತ್ತು. ಪ್ರಮುಖ ನಿರ್ದೇಶಕ ಶಾಂತಾರಾಂ 'ಝುನಕ್ ಝುನಕ್ ಫಾಯಲ್ ಭಾಜೆ' ಸಿನಿಮಾ ಶಾಸ್ತ್ರೀಯ ನೃತ್ಯಗೀತೆಯ ರೂಪದಲ್ಲಿ ತೆಗೆದ ಸಿನೆಮಾ ಆಗಿದೆ. ಇದರಲ್ಲಿ ಗೋಪಿಕೃಷ್ಣರ ನೃತ್ಯ ಆಕರ್ಷಣೀಯ.

ಚಲನಚಿತ್ರದಲ್ಲಿ ನೃತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ತೆಗೆದ ಎಷ್ಟೋ ಹಾಡುಗಳು ಜನರಂಜಕವಾಗಿವೆ. "ಆವಾರಾ ಹೂ...., ಯೆ ಜಿಂದಗೀ ಉಸಿಕೀ ಹೈ, ಬಾಬೂಜೀ ಧೀರೆ ಚಲ್‌ನಾ.... ಫಂಛೀ ಬನೂ ಉಡ್‌ತೀ ಫಿರೂ.... ಇಕ್‌ಲಡಕಿ ಭಗಿಬಾಗಿಸೀ...., ಜಬ್ ಪ್ಯಾರ್ ಕಿಯಾತೋ ಢರ್‌ನಾಕ್ಯಾ...., ಹರ್ ದಿಲ್ ಜೋ ಪ್ಯಾರ್ ಕರೇಗಾ...., ಮೇರಿ ಸಪ್‌ನೋಂಕೀ ರಾಣಿ.... ಬಿಂದಿಯಾ ಚಮಕೇಗಿ....' ಗಳಂತಹ ಹಾಡುಗಳು ಈಗಲೂ ಜನಪ್ರಿಯ ಗೀತೆಗಳೇ.

ಗೋಪಿಕೃಷ್ಣ, ಹೆಲನ್ನರು ಬಾಲಿವುಡ್ ಡಾನ್ಸರೆಂದೇ ಪ್ರಸಿದ್ಧಿ ಪಡೆದಿದ್ದಾರೆ. ಗೋಪಿಕೃಷ್ಣ ಕೆಲವು ಸಿನೆಮಾಗಳಿಗೆ ಪರಿಮಿತವಾಗಿಯೂ, ಹೆಲನ್ ಆಧಿಪತ್ಯ ಬಹಳ ಕಾಲದವರೆಗೆ ಮುಂದುವರೆಯಿತು. ಹೆಲನ್‌ಳ ಏಕಚಕ್ರಾಧಿಪತ್ಯವನ್ನು ವಿಮರ್ಶಕರು ಈಗಲೂ ಜ್ಞಾಪಿಸುತ್ತಾರೆ. ಹಿಂದಿನ ಚಿತ್ರಗಳಲ್ಲಿ ಹೆಲನ್‌ರಂತಹ ನೃತ್ಯಗಾತಿ 'ನಭೂತೋ ನಭವಿಷ್ಯತಿ' ಎನ್ನುವಂತೆ, ಆಕೆ ಬಾಲಿವುಡ್ಡಿಗೆ ಲಭಿಸಿದ ಅದ್ಭುತ ವರವೆಂದೇ ಹೇಳಬಹುದು. ನೃತ್ಯದಲ್ಲಿ, ನಾಟ್ಯದಲ್ಲಿ ಚಾಲಾಕಿತನ, ಒಯ್ಯಾರ, ಹೊಸತನ, ಕುಲುಕಾಟದಲ್ಲಿ ತನ್ನ ವೈಶಿಷ್ಟ್ಯವನ್ನು ಪ್ರದರ್ಶಿಸಿ ಹೆಲನ್ ಪ್ರೇಕ್ಷಕರನ್ನು ಸಮ್ಮೋಹನಗೊಳಿಸಿದ್ದರು. ಅವರು ನರ್ತಿಸಿದ ಜನಪ್ರಿಯ ಗೀತೆಯಲ್ಲಿ 'ಪಿಯಾ ತೂ ಅಬ್‌ತೋ ಆಜಾ...., ಆ ಜಾನೇ ಜಾ...., ಮಹಬೂಬಾ ಮಹಬೂಬಾ....,ಗಳಂತಹ ಗೀತೆಗಳು ಪ್ರೇಕ್ಷಕರ ಹೃದಯದಲ್ಲಿ ಅಳಿಸದ ಮುದ್ರೆ ಮೂಡಿಸಿವೆ. ಈಗಲೂ ಆ ಹಾಡಿಗೆ ಬೇಡಿಕೆ ಇದೆ. ಆ ಹಾಡು ಕೇಳುತ್ತಿದ್ದರೆ ಸಾಕು ಹೆಲನ್ನಳು ಕಣ್ಣುಗಳ ಮುಂದೆ ಬಂದಂತಾಗುತ್ತದೆ.

ಕ್ಯಾಬರೆ, ಡಿಸ್ಕೋಗಳ ಯುಗ : 80ರ ದಶಕದಲ್ಲಿ ಹಿಂದಿನ ಕಲಾತ್ಮಕ ನೃತ್ಯ ರೀತಿ ಇನ್ನೂ ಜಾರಿಯಲ್ಲಿದ್ದಾಗ್ಯೂ ಇದಕ್ಕೆ ಸಮಾನಾಂತರವಾಗಿ ಕ್ಯಾಬರೆ, ಪಾಶ್ಚಾತ್ಯ ಡಿಸ್ಕೋ, ಸಂಗೀತ ಕೂಡಾ ಸಿನೆಮಾದಲ್ಲಿ ಜಾಗ ಪಡೆದವು. ಡಿಸ್ಕೊ ಹಾಡುಗಳ ಜೋರು ಹೆಚ್ಚಾಗತೊಡಗಿತು. 'ಆಪ್ ಜೈಸಾ ಕೋಯಿ ಮೇರಿ ಜಿಂದಗಿ ಮೆ ಆಯೇ...., ದರ್ದೆ ದಿಲ್ ದರ್ದೆಜಗರ್, ಲೈಲಾ ಮೈ ಲೈಲಾ.... ಮಹಬೂಬಾ ಮಹಬೂಬಾ, ಯಮ್ಮಾ... ಯಮ್ಮಾ...' ಗಳಂತಹ ಗೀತೆಗಳು ಪ್ರೇಕ್ಷಕರ ಹೃದಯದಲ್ಲಿ ದೊಡ್ಡ ಅಲೆಗಳನ್ನು ಎಬ್ಬಿಸಿದವು, ಯುವಕರನ್ನು ಹುಚ್ಚೆಬ್ಬಿಸಿ ಕುಣಿಸಿದವು. ಇದರೊಂದಿಗೆ ನೃತ್ಯಗಳಲ್ಲಿ ಅಶ್ಲೀಲತೆ ಕೂಡಾ ಬಿಟ್ಟಿತ್ತು. ಕ್ಯಾಬರೆ, ಡಿಸ್ಕೋ ಡಾನ್ಸ್‌ಗಳಿಗೆ ಕ್ರೇಜ್ ಬೆಳೆಯಿತು. ರಾಜೇಶ್ ಖನ್ನಾನಂತರ ಎತ್ತರದ ಕಾಲಿನ ಅಮಿತಾಬ್ ಬಚ್ಚನ್ ಬಾಲಿವುಡ್ಡಿಗೆ ನಂಬರ್ ಒನ್ ಸ್ಥಾಯಿಗೆ ಮುಟ್ಟಿದ.


ಅಮೀಷಾ

ತೆರೆಯ ಮೇಲೆ 'ಕೈ ಕೆ ಪಾನ್ ಬನಾರಸ್ ವಾಲಾ....' ಹಾಡು ಬರುತ್ತಲೇ ಪ್ರೇಕ್ಷಕರು ಸಹಿತ ಮೈಮರೆತು ಕುಣಿಯುತ್ತಿದ್ದರು. ಹೀರೋಯಿನ್‌ರಲ್ಲಿ ರೇಖಾಳದ್ದು ಅಗ್ರಸ್ಥಾನ. 'ಉಮ್ ರಾವ್ ಜಾನ್'ದಲ್ಲಿ ದಿಲ್ ಚೀಜ್ ಕ್ಯಾ ಹೈ..'ದಲ್ಲಿ ರೇಖಳ ನೃತ್ಯ ಮರೆಯಲಾಗದ್ದು.

ಇನ್ನು ರಿಕಾರ್ಡ್ ಡಾನ್ಸ್‌ಗಳಲ್ಲಿ ಮೈ ತೇರಿದುಶ್ಮನ್ ತೂಮೇರಾ.... 'ಧೂಪ್‌ಮೆ ನಿಕಲ್‌ನಾ ಕರೋ ರೂಪ್‌ಕಿ ರಾಣಿ', ಏಕ್...ದೋ....ತೀನ್..., ಏಜೀ.... ಓಜೀ...., ಯಾದ್ ಆ ರಹಾ ಹೈ.... ಮೇರಿ ದಿಲ್ ಗಾಯೇಜಾ ಹರ್‌ಕಿಸಿಕೋ ನಹೀ ಮಿಲ್‌ತಾ....' ಇಂತಹವು ಹೃದಯಸ್ಪರ್ಶಿ ಹಾಡುಗಳೇ.



ಅರವಿಂದ ಸ್ವಾಮಿ, ಮಾಧುರಿ ದೀಕ್ಷಿತ್

ಅಲೆ ಸೃಷ್ಟಿಸಿದ ಮಾಧುರಿ : ಮಾಧುರಿ ದೀಕ್ಷಿತ್ ಕೋರಿಯೋ ಗ್ರಾಫರ್ ಸರೋಜ್ ಖಾನ್‌ರ ಜೋಡಿಯಲ್ಲಿ ಎಷ್ಟೋ ನೃತ್ಯ ಹಾಡುಗಳು ಸೂಪರ್‌ಹಿಟ್ ಆದವು. ಅವುಗಳಲ್ಲಿ 'ಧಕ್‌ಧಕ್ ಕರ್‌ನೆ ಲಗಾ....., ಚೋಲಿಕೀ ಪೀಛೆ ಕ್ಯಾಹೈ....' ಹಾಡುಗಳು ಮುಖ್ಯವಾದವು. ಈ ಹಾಡುಗಳು ಹಿಟ್ ಆಗುವುದರೊಂದಿಗೆ ಕೋರಿಯೋ ಗ್ರಾಫರ್ಸ್ ಬೇಡಿಕೆ ಹೆಚ್ಚಾಯಿತು. ಇವರು ಸನ್ನಿಡಿಯೋಲ್‌ನಂತಹ ನಟರನ್ನು ಕೂಡಾ ಕುಣಿಸಬಲ್ಲರು. ಅಮೀರ್‌ಖಾನ್, ಊರ್ಮಿಳಾಳ 'ರಂಗೀಲಾ'ಗಳಂತ ಪರಫಾರ್ಮನ್ಸ್‌ದಲ್ಲಿ ಕೋರಿಯೋ ಗ್ರಾಫರ್ಸರ ಪರಿಶ್ರಮ ಎದ್ದು ಕಾಣುವಂಥಾದ್ದು. ಫರಾಹಖಾನ್, ರೇಖಾ, ಅಹ್ಮದ್‌ಖಾನ್, ಗಣೇಶ್‌ಗಳಂತಹವರು ಇಂದು ಕೋರಿಯೋ ಗ್ರಾಫರ್ಸ್‌ಗಳಾಗಿ ಹೆಸರು ಪಡೆದಿದ್ದಾರೆ. ಈಗಿನ ನೃತ್ಯಗಳ ಮೇಲೆ ಎಂ.ಟಿ.ವ್ಹಿ. ಚಾನಲ್ ಪ್ರಭಾವ ಕೂಡಾ ದಟ್ಟವಾಗಿ ಕಂಡುಬರುತ್ತದೆ. ಇಂದು ಭಾಂಗ್‌ಡಾ ನೃತ್ಯ ಶೈಲಿ ಕೂಡಾ ಸಿನೆಮಾದಲ್ಲಿ ಜಾಗೆ ಪಡೆದಿದೆ. ಮುಂಬರುವ ಕಾಲದಲ್ಲಿ ಡಾನ್ಸ್‌ದಲ್ಲಿ ಎಷ್ಟೋ ಹೊಸರೀತಿಗಳು ಜೊತೆಗೂಡಬಹುದೆಂದು ನೃತ್ಯ ನಿರ್ದೇಶಕರು ಅನ್ನುತ್ತಿದ್ದಾರೆ. ಮಿಕ್ಸಡ್ ಡಾನ್ಸ್‌ಗಳ ಪ್ರಾಧಾನ್ಯತೆ ಬೆಳೆಯುತ್ತಿದೆಯೆಂದು ಅವರು ಹೇಳುತ್ತಿದ್ದಾರೆ.

ಬೆಸ್ಟ್ ಡಾನ್ಸರ್ ಇವರೇ : ಇಲ್ಲಿಯವರೆಗೂ ಉತ್ತಮ ಡಾನ್ಸರ್ ಎಂದು ಗೋವಿಂದಾ, ಅಕ್ಷಯ ಕುಮಾರರಿಗೆ ಹೆಸರಿದೆ. ಇವರು ಎಂಥ ಡಾನ್ಸಗಳನ್ನಾದರೂ ಲೀಲಾಜಾಲವಾಗಿ ಮಾಡಬಲ್ಲರು. ಹೀರೋಯಿನ್‌ರಲ್ಲಿ ರೇಖಾಳ ಹೆಸರಿನೊಂದಿಗೆ ನೃತ್ಯದಲ್ಲಿ ಶ್ರೀದೇವಿ, ಮಾಧುರಿ ದೀಕ್ಷಿತ್‌ರದ್ದೇ ಅಗ್ರಸ್ಥಾನ. ಆದರೆ ಇಂದು ರವೀನಾಟಂಡನ್ ನೃತ್ಯದಲ್ಲಿ ತನ್ನ ಗ್ಲಾಮರ್‌ದೊಂದಿಗೆ ಒಂದು ಅಲೆಯನ್ನೇ ಎಬ್ಬಿಸಿದ್ದಾಳೆ. ಈಗಂತೂ ಗ್ಲಾಮರಸ್ ನಾಯಕಿಯರದೇ ರಾಜ್ಯ! ರವೀನಾ ನಂತರದ ಸ್ಥಾನ ಮಾಧುರಿ, ಕರೀಷ್ಮಾರದ್ದು.

'ಝುನಕ್ ಝುನಕ್ ಮೇರಿ ಪಾಯಲ್ ಬಾಜೆ'ದಿಂದ 'ಆಂಖಿಯೋಸೆ ಗೋಲಿ ಮಾರೆ'ವರೆಗೂ ನೃತ್ಯಹಾಡುಗಳಲ್ಲಿ ಹಲವು ಬದಲಾವಣೆಗಳಾಗಿವೆ. ಮುಂಬರುವ ಕಾಲದಲ್ಲಿ ನೃತ್ಯ ಹಾಡುಗಳಿಗೆ ಪ್ರಾಧಾನ್ಯತೆ ಇನ್ನೂ ಬೆಳೆಯಲಿದೆ. ಈಗ ವಿವಾಹ ಸಮಾರಂಭಗಳಲ್ಲಿ ಸಿನೆಮಾ ಹಾಡುಗಳ ಮೇಲೆ ನೃತ್ಯ ಮಾಡುವವರ ಸಂಖ್ಯೆ ಹೆಚ್ಚಾಗತೊಡಗಿದೆ. ಸಣ್ಣ ಮಕ್ಕಳು ಕೂಡ ಡಾನ್ಸ್ ಮೇಲೆ ಆಸಕ್ತಿ ತೋರುತ್ತಿದ್ದಾರೆ. ಸಿನೆಮಾದಲ್ಲಿ ಬದಲಾವಣೆಗಳು ಹೇಗೆ ರೂಪುಗೊಳ್ಳುತ್ತವೆಯೋ ಯಾರೂ ಹೇಳಲಾರರು. ಚಿತ್ರದ ಹಿಟ್ಸ್, ಫ್ಲಾಪ್‌ಗಳ ಮೇಲೆ ನೃತ್ಯ ಹಾಡುಗಳ ಪ್ರಭಾವ ಬಹಳಷ್ಟು ಇರುತ್ತದೆ ಎಂದು ಹೇಳಬಹುದು. 'ಗೀತ ಸಂಗೀತ' ಪ್ರೇಕ್ಷಕರ ಹೃದಯಗಳಲ್ಲಿ ಎಂದಿಗೂ ಭದ್ರವಾಗಿಯೇ ಇರುತ್ತದೆ.

■ ಕೆ.ಬಿ.ಬೊಮ್ಮನಾಳ



ಪ್ರೇಮಿಗಳ ದಿನಾಚರಣೆ

ಪ್ರೇಮಕ್ಕೆ, ಪ್ರೇಮಿಗಳಿಗೆ ಬಹಳ ಮಹತ್ವ. ಜೀವ ಜಗತ್ತಿನ ಸಂಚಲನಕ್ಕೆ ಈ ಪ್ರೇಮವೇ ಕಾರಣ. ಇಂಥ ಪ್ರೇಮದ ಔನ್ನತ್ಯವನ್ನು ನಾನಾ ರೀತಿಯಲ್ಲಿ ಭಾರತೀಯರು ಆಚರಿಸುತ್ತಾ ಬಂದಿದ್ದಾದರೂ, ಈಚಿನ ದಿನಗಳಲ್ಲಿ 'ವ್ಯಾಲೆಂಟೈನ್ಸ್ ಡೇ' ನಮ್ಮಲ್ಲಿ, ಅದರಲ್ಲೂ ಯುವಕ ಯುವತಿಯರಲ್ಲಿ ಹೆಚ್ಚು ಹೆಚ್ಚು ಜನಪ್ರಿಯ.....

ನಾನು ಬಡವಿ ಆತ ಬಡವ
ಒಲವೆ ನಮ್ಮ ಬದುಕು
ಬಳಸಿ ಕೊಂಡೆವದನೆ ನಾವು
ಅದುಕು-ಇದಕು-ಎದಕು....

ಎಂದು ಬೇಂದ್ರೆಯವರ ಕವಿತೆಯಲ್ಲಿ ಹೆಣ್ಣುಮಗಳೊಬ್ಬಳು ಹೇಳಿಕೊಳ್ಳುತ್ತಾಳೆ. ಪ್ರೀತಿ ಸಮೃದ್ಧವಾಗಿರುವ ಬದುಕಿನಲ್ಲಿ ಮತ್ತೇನು ಬೇಕಿಲ್ಲವೆಂಬ ಭಾವ ಇಲ್ಲಿಯದು.

ಇದೇ ಫೆಬ್ರವರಿ 14ರಂದು ಇಡೀ ಜಗತ್ತಿನ ಪ್ರೇಮಿಗಳೆಲ್ಲಾ ಪ್ರೀತಿಯಿಂದ 'ವ್ಯಾಲೆಂಟೈನ್ಸ್ ಡೇ' - ಹಬ್ಬವನ್ನು ಆಚರಿಸುತ್ತಾರೆ. ಅದು ಪ್ರೇಮಿಗಳ ದಿನ. ಪ್ರೇಮಿಕುಲ ರೋಜು.... ಕಾದಲರ್ ದಿನಂ! - ಸ್ವಲ್ಪ ಫ್ಲಾಶ್‌ಬ್ಯಾಕ್‌ಗೆ ಹೋದರೆ ಕ್ರಿಶ 270 ಫೆಬ್ರವರಿ 14ರಂದು ಕ್ರಿಶ್ಚಿಯನ್ ಮತ ಪ್ರವರ್ತಕನಾದ 'ವ್ಯಾಲೆಂಟೈನ್'ನನ್ನು ಮರಣಶಿಕ್ಷೆಗೆ ಒಳಪಡಿಸಲಾಯಿತು. ಹೂವಿನಂಥ ಹೃದಯದ ಸರಳ-ಸಂಭಾವಿತನಾಗಿದ್ದ ಈತ ಕೇವಲ ಎರಡಕ್ಷರದ 'ಪ್ರೀತಿ'ಯಿಂದ ಮಾತ್ರ ಜನರನ್ನು ಒಗ್ಗೂಡಿಸಬಹುದೆಂದು, ಏನೆಲ್ಲಾ ಸಾಧಿಸಬಹುದೆಂದು ಕೊನೆವರೆಗೂ ಹೋರಾಡಿದ.

ವ್ಯಾಲೆಂಟೈನ್ ಇತ್ತ 'ಪ್ರೀತಿ'ಗಾಗಿ ಹೋರಾಡುತ್ತಿರುವಾಗಲೇ ಇಟಲಿಯಲ್ಲಿ ಎರಡು ವರ್ಗಗಳ ನಡುವೆ ವಿಪರೀತ ದ್ವೇಷದ ಹೊಗೆಯಾಡುತ್ತಿತ್ತು. ಪ್ರತಿದಿನ ಯುದ್ಧ, ಹೊಡೆದಾಟ, ರಕ್ತಪಾತ ಸರ್ವೇಸಾಮಾನ್ಯವಾಗಿತ್ತು. ಆಗಿನ ದೊರೆ ಎರಡನೆ ಕ್ಲಾಡಿಯಸ್ ದೇಶದ ಯುವಕ-ಯುವತಿಯರನ್ನು ಬಲವಂತದಿಂದ ಯುದ್ಧಕ್ಕೆ ಸೇರಲು ಒತ್ತಡ ತಂದ. ಆದರೆ ಆ ಚರ್ಚೊಂದರಲ್ಲಿ ಮತ ಪ್ರವರ್ತಕನಾಗಿದ್ದ 'ಸೆಂಟ್ ವ್ಯಾಲೆಂಟೈನ್' ಇದನ್ನು ವಿರೋಧಿಸಿದ-ಭುಗಿಲೆದ್ದ! ಕುದಿಯುತ್ತಿರುವ ತನ್ನ ದೇಶದ ಎರಡೂ ವರ್ಗಗಳಲ್ಲಿ ಇಷ್ಟಪಟ್ಟ ಯುವಕ-ಯುವತಿಯರಿಗೆ 'ಮದುವೆ' ಮಾಡಿಸಿದರೆ ಮಾತ್ರ ದ್ವೇಷ ಸಂಹರಿಸಬಹುದೆಂದು ಅಲ್ಲಿ ಮಾತ್ರ ಪ್ರೀತಿ ಅಂಕುರಿಸಲು ಸಾಧ್ಯವೆಂದು ಭಾವಿಸಿದ್ದ.

ಆ ದಿನದಿಂದ ಚರ್ಚಿನ ನೆಲಮಾಳಿಗೆಯಲ್ಲಿ ಪ್ರತಿದಿನ ಬಯಸಿಬಂದ ಯುವಕ-ಯುವತಿಯರಿಗೆ ಮದುವೆ ಮಾಡಿಸಲು ಶುರು ಮಾಡಿದ. ಎಲ್ಲಾ ಪ್ರೇಮಿಗಳ ಆರಾಧ್ಯ ದೈವವಾದ ಆದರೆ 'ವ್ಯಾಲೆಂಟೈನ್'ಗೆ ದೊರೆ ಮರಣ ಶಿಕ್ಷೆ ವಿಧಿಸಿದ. 'ಯುದ್ಧದಿಂದ ಏನೂ ಮಾಡಲು ಸಾಧ್ಯವಿಲ್ಲ. ಕೇವಲ ಪ್ರೀತಿಯಿಂದ ಮಾತ್ರ ಸಾಮರಸ್ಯ ಸಾಧಿಸಲು ಸಾಧ್ಯ' ಎಂದು ಮರಣಶಿಕ್ಷೆಗೆ ಮುನ್ನ ಜೈಲರ್‌ನ ಪುತ್ರಿಗೆ ಬರೆದ ಫೇರ್‌ವೆಲ್ ಪತ್ರದಲ್ಲಿ ವ್ಯಾಲೆಂಟೈನ್ ಉಲ್ಲೇಖಿಸಿದ್ದ. ಲಕೋಟೆಯ ಮೇಲೆ From Your Valentine ಎಂದು ಬರೆದಿದ್ದ. ಅದೇ ದಿನ ಅವನಿಗೆ ಗಲ್ಲು ಶಿಕ್ಷೆ ಜಾರಿಮಾಡಿದರು. ಆ ದಿನ ಫೆಬ್ರವರಿ 14! ಅಂದಿನಿಂದಲೇ ವಾಲೆಂಟೈನ್ಸ್ ಡೇ ಶುರುವಾಯಿತು.

ರೋಮ್ ನಗರದಿಂದ ನೂರುಮೈಲಿ ದೂರದ 'ಟೆರ್ನಿ' ಪಟ್ಟಣದಲ್ಲಿ ಜನಿಸಿದ್ದ ವ್ಯಾಲೆಂಟೈನ್! ಟೆರ್ನಿಯಲ್ಲಿ ಇಂದಿಗೂ ವ್ಯಾಲೆಂಟೈನ್-ಡೇ ಹಬ್ಬವನ್ನೂ ಅತ್ಯಂತ ಸಂಭ್ರಮದಿಂದ ಸೊಬಗಿನಿಂದ ಸಾರ್ವಜನಿಕ ಉತ್ಸವದಂತೆ ಆಚರಿಸುವ ಪರಿಪಾಠವಿದೆ.

ಯೂರೋಪ್‌ನಿಂದ ಶುರುವಾದ 'ವ್ಯಾಲೆಂಟೈನ್ಸ್ ಡೇ' ಸಂಭ್ರಮ ಅಮೆರಿಕಾಕ್ಕೆ ತಲುಪಿ, ಅಲ್ಲಿಂದ ಜಗತ್ತಿನ ಎಲ್ಲೆಡೆ ವ್ಯಾಪಿಸಿದೆ. ಇವತ್ತಿಗೂ ಅಮೆರಿಕಾದಲ್ಲಿ ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಕಾರ್ಡುಗಳ ಮಾರಾಟಕ್ಕಿಂತ 'V-ಕಾರ್ಡುಗಳ' ಮಾರಾಟ ದಾಖಲೆ. ಪ್ರೀತಿಯನ್ನು ಬೇಡವೆನ್ನುವ ಮನುಷ್ಯನಾರು ಹೇಳಿ?

ನಿಜ ಹೇಳಬೇಕೆಂದರೆ ಪ್ರೀತಿಯೆಂಬ ಭಾವನಾತ್ಮಕ ತೀವ್ರತೆಯೊಂದೇ ಬದುಕನ್ನೂ ಸಹ್ಯವಾಗಿಸಬಲ್ಲದು-ಎಷ್ಟೆಲ್ಲಾ ಉಲ್ಲಸಿಸತೆಯನ್ನೂ ತಂದುಕೊಡುವ ಪ್ರೀತಿ ನೀಲಿಯಾಕಾಶದಲ್ಲಿ ತೇಲಾಡುವ ಹಕ್ಕಿಯಂತಾಗಿಸಬಲ್ಲುದು. ವಾಸ್ತವದ ನೋವುಗಳ, ಗೊಂದಲಗಳ, ಬೆಂಕಿ ತೆಕ್ಕೆಯಿಂದ ಕೆಲವು ಕ್ಷಣಗಳ ಮಟ್ಟಿಗಾದರೂ ಬಿಡಿಸಿ ನಮ್ಮೊಳಗೆ ಆಹ್ಲಾದ ತುಂಬುವ ಶಕ್ತಿ ಇದೆ ಪ್ರೀತಿಗೆ! ಆದ್ದರಿಂದಲೇ ಪ್ರೀತಿ ಎಲ್ಲವನ್ನೂ ಮೀರಿ ನಿಲ್ಲುವಂಥದ್ದು!

ಕಾಲಕ್ಷೇಪದ 'ಪಾಪ್‌ಕಾರ್ನ್ ಪ್ರೇಮವಾಗಲೀ, ಅರಿವಿಲ್ಲದಂತೆಯೇ ಶುರುವಾಗುವ ನೆರೆಮನೆ ಹುಡುಗಿ ಪ್ರೇಮವಾಗಲೀ, ಅನುಕಂಪದ ಪ್ರೇಮ, ಪಡ್ಡೆ ಹುಡುಗರ ಹಸಿಪ್ರೇಮ,ಇನ್ನೂ ವನ್ ವೇ ಪ್ರೇಮ-ಟೂವೇ ಪ್ರೇಮ-ಹೈವೇ ಪ್ರೇಮ.. ಟ್ರಯಾಂಗಲ್ ಪ್ರೇಮ, ಪತ್ರ-ಪ್ರೇಮ, ಟೆಲಿಫೋನ್ ಪ್ರೇಮ, ಹೈಟೆಕ್ ಪ್ರೇಮ, ಇಂಟರ್‌ನೆಟ್ ಪ್ರೇಮಗಳಂತಹ ನೂರಾರು ಪ್ರೇಮಗಳಲ್ಲಿ ಸಿನ್ಸಿಯರ್ ಪ್ರೇಮಿಗಳು ಅಪರೂಪಕ್ಕಿದ್ದರೂ ಸೀರಿಯಸ್ ದೇವದಾಸನ ಥರದವರು ಇನ್ನೂ ಕಡಿಮೆ! ಗಡಿಯಾರದ ಮುಳ್ಳಿನೊಂದಿಗೆ ಓಡುತ್ತಿರುವ ವೇಗದ ಬಿಜಿ-ಬದುಕಲ್ಲಿ 'Career First Love Next'ದಂತಹ ಬಿಜಿನೆಸ್ ಮೈಂಡ್ ಕಾರಣವೆನ್ನಬಹುದೇನೋ?

ಆದರೆ ಒಂದು, ಈ ಎಲ್ಲಾ ಪ್ರೀತಿಗೆ ಸಮಯ, ಅವಕಾಶ, 'ಒಂದು ಭಾವನಾತ್ಮಕ ಹಿನ್ನೆಲೆ ಅಥವಾ ಹೊಸ ಪ್ರೇಮಿಗಳಿಗೆ ಒಂದಿಷ್ಟು 'ಖಾಸಾ' ತನಕ್ಕೆ 'ವೇದಿಕೆ'ಯಂಥದ್ದು ಬೇಕೇ ಬೇಕು. ಅದೇ-ವ್ಯಾಲೆಂಟೈನ್ಸ್ ಡೇ.

ಜೀವನದ ಕಡಲೊಳಗೆ ಪ್ರೀತಿಯಲೆಗಳು ಎದ್ದೆದ್ದು ಒಂದು ಎದೆ ತೀರ ತಟ್ಟುವಾಗ ಭಾವಗಳು ಆರ್ದ್ರವಾಗುತ್ತವೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬ ಮನುಷ್ಯನೂ ಮೂಲಭೂತವಾಗಿ ಕವಿಯೇ ಆಗಿರುತ್ತಾನೆಂಬುದು ಎಷ್ಟು ಸತ್ಯ ನೋಡಿ! ಹಾಗೆ ನೋಡಿದರೆ ಪ್ರೀತಿಯನ್ನು ಹೊದ್ದ ಮತ್ತೊಂದು ಜೀವ ಜೊತೆಗಿರುವಾಗ ಬದುಕಿನ ಗತಿಯೇ ಬೇರೆ-ಪ್ರೀತಿಯ ನೇವರಿಕೆಯಲ್ಲಿ ನದಿಯಾಗಬಲ್ಲ ಮನುಷ್ಯ.

ಇಡೀ ಜಗತ್ತನ್ನೇ ಬೆರಗುಗೊಳಿಸುತ್ತಿರುವುದು ದಿನೇ-ದಿನೇ ಹೆಚ್ಚುತ್ತಿರುವ ವ್ಯಾಲೆಂಟೈನ್ಸ್-ಡೇ-ದ ಕ್ರೇಜ್! VDay ದಿನದಂದು ನೀವು ಯಾವುದಾದರೊಂದು ಗಿಫ್ಟ್ ಕಾರ್ನರ್‌ನಲ್ಲೋ, ಗ್ರೀಟಿಂಗ್ ಶಾಪ್‌ನಲ್ಲೋ ಹೊಕ್ಕರೆಂದರೆ ಒಂದು ಹೊಸ ಅದ್ಭುತ ಲೋಕ ಹೊಕ್ಕಂತೆ ಭಾಸವಾಗುತ್ತದೆ. ಹೃದಯದ ಚಿತ್ರದ, ಕೆಂಪುಗುಲಾಬಿಯ, ಲಿಪ್‌ಸ್ಟಿಕ್ ಮುದ್ರೆಗಳ, ಪ್ರೀತಿಯನ್ನು ನೆನಪಿಸುವ ಪ್ರತಿಯೊಂದು ಬಣ್ಣ, ವಸ್ತು ಇಲ್ಲಿ ಕಲಾತ್ಮಕವಾಗಿ ರೂಪುಗೊಂಡಿರುತ್ತದೆ.

ಕಳೆದ ವರ್ಷ ಭಾರತದಲ್ಲಿ V-Day ಕಾರ್ಡ್ ರಾಜಕುಮಾರಿ 'ಡಯಾನಾ' ಚಿತ್ರದ್ದು ಬಿಸಿದೋಸೆಯಂತೆ ಖರ್ಚಾದದ್ದು ದಾಖಲೆಯ ಸಂಗತಿ!

'Love is an ocean of emotions' ಅನ್ನಬಹುದಾದರೆ ಈ Emotions ಎಂಥವರನ್ನಾದರೂ ಮೋಡಿ ಮಾಡುತ್ತವೆ. ಈ ಮೋಡಿಯಲ್ಲಿ ಯುದ್ಧಗಳು ನಡೆದಿವೆ. ಕೊಲೆಗಳಾಗಿವೆ. ಆಸ್ತಿ, ಅಂತಸ್ತು, ಅಧಿಕಾರ, ಸಾಮ್ರಾಜ್ಯಗಳನ್ನೂ ಕಳೆದುಕೊಂಡ ಉದಾಹರಣೆಗಳು ಸಾವಿರಾರು. ಅನಾರ್ಕಲಿ-ಸಲೀಂ ಕತೆ ನಮಗೆ ಗೊತ್ತು. ಕ್ಲಿಯೋಪಾತ್ರಳ ಸೌಂದರ್ಯಕ್ಕೆ ಮನಸೋತವರ ಬಗ್ಗೆ ನಮಗೆ ಗೊತ್ತು. ಇನ್ನೂ ಎಂಟನೆ ಎಡ್ವರ್ಡ್ ತನ್ನ ಪ್ರೀತಿಯ ಹುಡುಗಿಗಾಗಿ ಬ್ರಿಟಿಷ್ ಸಾಮ್ರಾಜ್ಯವನ್ನೇ ಕಳೆದುಕೊಂಡ. ಸರ್ವಾಧಿಕಾರಿ ಹಿಟ್ಲರ್ ತನ್ನ ಮೊದಲ ಪ್ರೇಯಸಿ ರಾಬೆಲ್ ಮೇಲಿನ ಪ್ರೀತಿ ಅತಿಯಾಗಿ ಅದೊಂದಿಷ್ಟು ಅನುಮಾನವಾಗಿ ಮಾರ್ಪಟ್ಟು ಆಕೆಯನ್ನು ಕಾಯಲು ನೌಕರರನ್ನಿಟ್ಟು, ನಂತರ ಜರ್ಮನ್ ತಾರೆ ಮುಲ್ಲರ್‌ಳೊಂದಿಗೆ ಕಾಲಕಳೆದ. ತನಗಿಂತ 22 ವರ್ಷ ಕಿರಿಯಳಾದ ಈವಾಬ್ರನ್‌ಳೊಂದಿಗಿನ ನೆಪೋಲಿಯನ್ ಪ್ರೀತಿ. ಇನ್ನೂ ಪೆಟ್ರಾರ್ಕ್-ಲಾರಾ, ಸಿಗ್ಮಂಡ್ ಫ್ರಾಯ್ಡ್, ರೂಸ್‌ವೆಲ್ಟ್, ಟಾಲ್‌ಸ್ಟಾಯ್‌ರಂತಹ ಖ್ಯಾತರೆಲ್ಲರೂ ಹುಡುಗಿಯ ಓರೆನೋಟಕ್ಕೆ ಮುಗಳ್ನಗೆಯ ಮೋಡಿಗೊಳಗಾದವರೇ.

ಪ್ರೀತಿ ಸೃಜನಶೀಲವಾಗಿರುವಂಥದ್ದು.

ಪ್ರತಿಕ್ಷಣವೂ ಜೀವನದೊಂದಿಗೆ ಸ್ಪಂದಿಸುವ ಸಂವೇದನೆ ಅದು.

ಆಸ್ಥೆ, ಹೊಣೆಗಾರಿಕೆ, ತಿಳುವಳಿಕೆಗಳನ್ನೂ ಸಮಾವೇಶಗೊಳಿಸಿಕೊಂಡು ಬಾನಲ್ಲಿ ಹೂಚಿಮ್ಮಿಸುವಂಥಾದ್ದು.

ಭೂಮಿ, ಆಕಾಶಗಳನ್ನೂ ಗೌರವಿಸದಂತಹ 'ಮನುಷ್ಯನನ್ನೂ ಈ ರೂಪಪ್ರಪಂಚದ, ನಾದ ಪ್ರಪಂಚದ ಲಯಕ್ಕೆ ಸ್ಪಂದಿಸಬಲ್ಲಂಥ ಮನುಷ್ಯನನ್ನು ತಯಾರು ಮಾಡುವುದೇ ಪ್ರೀತಿಯೆಂಬ ದಿವ್ಯ!

■ ಸೃಜನ್

ಜರ್ಮನಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಮಾಜಿ ಛಾನ್ಸಲರ್ ಒಬ್ಬರ ವಿರುದ್ಧ ಕ್ರಿಮಿನಲ್ ತನಿಖೆ ಆರಂಭಗೊಂಡಿದೆ. ಹದಿನಾರು ವರ್ಷ ಜರ್ಮನಿಯ ಛಾನ್ಸಲರ್ ಆಗಿದ್ದ ಹೆಲ್ಮೆಟ್ ಕೋಲ್ ಆರೋಪ ಎದುರಿಸುತ್ತಿರುವ ವ್ಯಕ್ತಿ. 1998ರ ಸಾರ್ವತ್ರಿಕ ಚುನಾವಣೆಯಲ್ಲಿ ಸೋತಿದ್ದ ಈತನನ್ನು, ಎರಡೂ ಜರ್ಮನಿಗಳ ಐಕ್ಯತೆಯ ರೂವಾರಿ ಎಂದೇ ಬಣ್ಣಿಸಲಾಗುತ್ತಿತ್ತು. ತಾವು ಅಧಿಕಾರದಲ್ಲಿ ಇದ್ದಾಗ ತಮ್ಮ ಪಕ್ಷಕ್ಕೆ ಪಡೆದ ಹಣ ಯಾರ್ಯಾರಿಂದ ಬಂದಿದೆ ಎಂದು ತಿಳಿಸಲು ನಿರಾಕರಿಸಿದ್ದೇ ಇವರ ವಿರುದ್ಧ ತನಿಖೆಗೆ ಕಾರಣ.

ಜರ್ಮನಿಯಲ್ಲಿ ರಾಜಕೀಯ ಪಕ್ಷಗಳಿಗೆ ಹತ್ತು ಸಾವಿರ ಡಾಲರ್‌ಗಿಂತ ಹೆಚ್ಚು ಹಣ ಪಾವತಿಸಿದವರ ಹೆಸರು ಬಹಿರಂಗಪಡಿಸಬೇಕು ಕೋಲ್ ಅವರ ಕ್ರಿಶ್ಚಿಯನ್ ಡೆಮಾಕ್ರಟಿಕ್‌ಯೂನಿಯನ್ ಪಕ್ಷಕ್ಕಾಗಿ ಒಂದು ದಶಲಕ್ಷ ಡಾಲರ್ ಮೊತ್ತದ ಮೂಲ ತಿಳಿಸಲು ನಿರಾಕರಿಸಿದ್ದೇ ಅವರ ವಿರುದ್ಧ ತನಿಖೆಗೆ ಕಾರಣ. ಬೇನಾಮಿ ಮೂಲದಿಂದ ಹಣ ಪಡೆದಿರುವ ಕೋಲ್, ಅಂಥವರಿಗೆ ನಾನಾ ರಿಯಾಯಿತಿ ತೋರಿಸಿರುವ ಸಾಧ್ಯತೆ ಇದೆ ಎಂಬುದು ಪ್ರಮುಖ ವಾದ. ತಾವು ಹಾಗೇನೂ ಮಾಡಿಲ್ಲ ಎಂದು ಕೋಲ್ ಇತ್ತೀಚಿನ ಟಿವಿ ಸಂದರ್ಶನ ಒಂದರಲ್ಲಿ ಹೇಳಿಕೊಂಡಿದ್ದಾರೆ. ಭಾರತದಲ್ಲಿ ಈ ನಿಯಮ ಜಾರಿಗೆ ಬಂದರೆ ದಿನವೂ ಹತ್ತಾರು ಜನ ನಾಯಕರು ತನಿಖೆಗೆ ಗುರಿಯಾಗಬಹುದು ಅನ್ನುತ್ತೀರಾ!

★

ಸೈನ್ಯ ತನ್ನ ಹೊಟ್ಟೆಯ ಮೇಲೆ ನಡೆಯುತ್ತದೆ ಎನ್ನುತ್ತಿದ್ದ ನೆಪೋಲಿಯನ್. ಸೈನಿಕರಿಗೆ ಆಹಾರ ಕೆಡದಂತೆ ಕಾಯ್ದಿಡಲು ಯೋಚಿಸಿದ. ಅಂಥ ಉಪಾಯ ಸೂಚಿಸಿದವರಿಗೆ ಬಹುಮಾನ ನೀಡುವುದಾಗಿ ಘೋಷಿಸಿದ್ದ 1975ರಲ್ಲಿ. ಬಹುಮಾನ ಫ್ರೆಂಚ್ ಸಂಶೋಧಕನ ಪಾಲಾಯಿತು. ಡಬ್ಬಿಯೊಳಗೆ ಗಾಳಿಯಾಡದಂತೆ ಆಹಾರ ಸಂಗ್ರಹಿಸಿ ಇಟ್ಟರೆ ಬಹು ಕಾಲ ಕೆಡುವುದಿಲ್ಲ ಎಂದು ಅವನು ಸೂಚಿಸಿದ್ದ. ಅಂದಿನಿಂದಲೇ ಡಬ್ಬಿಯಲ್ಲಿ ಆಹಾರ ಸಂಗ್ರಹಿಸಿಡುವ ಪರಿಪಾಠ ಆರಂಭವಾಯಿತು. ಅದೇ ಈಗ ಜಗತ್ತಿನಾದ್ಯಂತ ಬಹು ದೊಡ್ಡ ಉದ್ಯಮ ಆಗಿದೆ.

★

'ಪಂಚ್' ದುಬಾರಿ ಬೆಲೆಯ ಜನಪ್ರಿಯ ಮದ್ಯ. ಪಂಚ್ ಎಂಬ ಹೆಸರು ಹಿಂದಿಯ 'ಪಾಂಚ್' ಶಬ್ದದಿಂದ ಬಂದಿದೆ. ಅದಕ್ಕೆ ಐದು ಪರಿಕರ ಬಳಸುತ್ತಾರೆ. ಹಾಗೆಂದೇ ಪಾಂಚ್ ಎಂದರೆ ಐದು ವಸ್ತುಗಳಿಂದ ತಯಾರಾದದ್ದು ಎಂದೇ 1678ರಲ್ಲಿ ಹೆಸರಿಡಲಾಯಿತು. ಈ ಮದ್ಯ ತಯಾರಿಕೆಗೆ ಭಾರತೀಯರೇ ಸ್ಫೂರ್ತಿ. ಸಾರಾಯಿ,ಏಲಕ್ಕಿ, ಸಕ್ಕರೆ, ನಿಂಬೆರಸ ಮತ್ತು ನೀರು ಬೆರೆಸಿ ತಯಾರಿಸುತ್ತಿದ್ದ ವಿಶೇಷ ಮದ್ಯ ಕಂಡೇ ಬ್ರಿಟಿಷರು ತಮ್ಮ 'ಪಂಚ್' ತಯಾರಿಸಿಧರು.

ಸಾಹಿತ್ಯ ಪ್ರಶಸ್ತಿ


ಬನ್ನಿಹಟ್ಟಿಯ ಸಾರಂಗಮಠ ಹಾಗೂ ಪಾಟೀಲ ಸಾಹಿತ್ಯ ಪ್ರತಿಷ್ಠಾನವು ಪ್ರತಿವರ್ಷದಂತೆ ಈ ವರ್ಷವೂ ಸಣ್ಣಕತೆ ಹಾಗೂ ಕಾವ್ಯಗಳಿಗೆ 'ಶಿವಾನಂದ ಪಾಟೀಲ ಸಾಹಿತ್ಯ ಪ್ರಶಸ್ತಿ' ನೀಡಲಿದೆ. ಪ್ರಶಸ್ತಿಯು ರೂ. 1000 ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಆಸಕ್ತ ಲೇಖಕರು 1999ರಲ್ಲಿ ಪ್ರಕಟಗೊಂಡ ತಮ್ಮ ಕೃತಿಯ ಮೂರು ಪ್ರತಿಗಳನ್ನು ಈ ಕೆಳಗಿನ ವಿಳಾಸಕ್ಕೆ ಫೆಬ್ರುವರಿ 20, 2000ದ ಒಳಗೆ ಕಳಿಸಲು ಕೋರಲಾಗಿದೆ. ವಿಳಾಸ : ಎಸ್ಕೆ. ಕೊನೆಸಾಗರ, ನ್ಯಾಯಾಲಯ ರಸ್ತೆ, ಬಸವನಗರ, ಹುನಗುಂದ-587118, ಜಿಲ್ಲಾ: ಬಾಗಲಕೋಟೆ.

■

ನನ್ನ ಕನಸಿನ ಹುಡುಗ....

ಎಲ್ಲೋ ಹಿಂದೆ
ತನ್ನಿಂತಾನೆ
ಮೊಳೆತು
ಕಾದುಕೊಂಡಿದ್ದ
ಸ್ನೇಹ ಬೀಜ
ಸುಪ್ತವಾಗೇ ಟಿಸಿಲೊಡೆದು
ಪ್ರೀತಿಯ ಹೆಮ್ಮರವಾಗಿ
ಹೂತಳೆದು ಸಂಭ್ರಮಿಸಿ
ಧುತ್ತೆಂದು ಗೋಚರಿಸು
ತ್ತಿರುವಂತೆಯೇ,
ನಿನ್ನನ್ನೇ ಧರಿಸಿ
ಫಲಿಸುವ ಕನಸು
ಈಗ, ಆಗುವುದೇ
ಇದು
ನನಸು....?

■ ಕೆ.ವಿ.ರಾಜಲಕ್ಷ್ಮಿ



ಹಳೆಯ ಹೆಂಡತಿ ಕೊಟ್ಟು....!

ಹಳೆಯ ಹೆಂಡತಿಯನ್ನು ಕೊಟ್ಟು ಹೊಸ ಹೆಂಡತಿ ಪಡೆಯಬಹುದಾದರೆ ಎಂಥ ಸುಸಂಧಿ ಎಂದು ಹಲವು ಗಂಡಂದಿರಾದರೂ ಭಾವಿಸುವುದುಂಟು. ಆದರೆ ಇಂಥ ಗಂಡಂದಿರ ಸಂಖ್ಯೆ ಭಾರಿಯಾಗಿಯೇ ಇದೆ., 'ಗೊತ್ತಿದ್ದ ದೆವ್ವ, ಗೊತ್ತಿಲ್ಲದ ದೇವರಿಗಿಂತ ವಾಸಿ' ಎಂದು ಗಾದೆ ಇದೆಯಾದರೂ, ಆ ಗೊತ್ತಿಲ್ಲದ ದೇವತೆಗಾಗಿ ತಹತಹಿಸುವ ರಸಿಕರ ಕತೆ ಇದು.

ಕನಿಷ್ಠ ಪಕ್ಷ ಈ ಶತಮಾನ ಮುಗಿಯುವವರೆಗಾದರೂ ಇಂಥ 'ವಿನಿಮಯ ಕೊಡುಗೆ' ಬರುವದಿಲ್ಲವೆಂದುಕೊಂಡಿದ್ದೆ. ದರಿದ್ರ ದುರುಳರು ಅಲ್ಲಿಯವರೆಗೆ ಕಾಯಲಿಲ್ಲ. ಇಡೀ ಶತಮಾನಕ್ಕೇ ಕೆಟ್ಟ ಹೆಸರು ತಂದರು. ನಮ್ಮಂಥವರಿಗೆ ತಲೆನೋವು ತಂದರು.

ಹಳೆಯ ಮಿಕ್ಸಿ, ಹಳೆಯ ಸ್ಕೂಟರ್, ಹಳೆಯ ಟೀವಿಗಳನ್ನು ಕೊಟ್ಟು ಹೊಸ ಹೊಸವನ್ನು ಪಡೆದು ತರುವಾಗ ಮುಂದೊಂದು ಕಾಲದಲ್ಲಿ 'ಹಳೆಯ ಹೆಂಡತಿಯನ್ನು ಕೊಟ್ಟು ಹೊಸ ಹೆಂಡತಿಯನ್ನು ಪಡೆಯಿರಿ' ಎನ್ನುವ ಯೋಜನೆಗಳೂ ಬರಬಹುದು ಎಂದು ಕೆಲವರು ತಮಾಷೆಗಾಗಿ ಹೇಳುತ್ತಿದ್ದರು. ಆದರೆ ಆ ಕಾಲ ಇಷ್ಟು ಬೇಗ ಬರುತ್ತದೆಯೆಂದು ತಮಾಷೆ ಮಾಡಿದವರಿಗೂ ಅನ್ನಿಸಿರಲಿಲ್ಲ.

ರಾತ್ರಿ ಕಂಡಿದ್ದೆ ಆ ಬಾವಿಯನ್ನು ಕ್ಷಮಿಸಿ ಆ ಬೋರ್ಡನ್ನು. ದಪ್ಪ ದಪ್ಪ ಅಕ್ಷರಗಳಲ್ಲಿ ದೂರದಿಂದಲೂ ಬೇಗನೆ ಓದಲು ಬರುವಂತೆ 'ಹಳೆಯ ಹೆಂಡತಿ ಕೊಟ್ಟು....!' ಅಂತಷ್ಟೇ ಬರೆಸಿದ್ದರು. ವಿನಿಮಯ ಕೊಡುಗೆಗಳ ಈ ಕಾಲದಲ್ಲಿ ಮುಂದಿನದನ್ನು ಯಾರೇ ಆಗಲಿ ಸುಲಭವಾಗಿ ಊಹಿಸಿಕೊಳ್ಳಬಹುದಾಗಿತ್ತು. ಬೋರ್ಡನ್ನು ನೋಡಿದ ತಕ್ಷಣ ಇದೇನು ಕನಸೋ ನನಸೋ ಅಂತ ಕಣ್ಣು ತಿಕ್ಕಿತಿಕ್ಕಿಕೊಂಡು ನೋಡಿದೆ. ನನ್ನಂತೆಯೇ ಅನೇಕರು ಆಶ್ಚರ್ಯಚಕಿತರಾಗಿ ಅದನ್ನು ನೋಡುತ್ತ ನಿಲ್ಲುತ್ತಿದ್ದರು. ಗುಸುಗುಸು ಮಾತಾಡಿಕೊಳ್ಳುತ್ತಿದ್ದರು, ಕಿಸಿ ಕಿಸಿ ಹಲ್ಲು ಕಿಸಿಯುತ್ತಿದ್ದರು. ಕೌಟುಂಬಿಕ ಜೀವನದಲ್ಲಿ ಬಿರುಗಾಳಿಯನ್ನೇ ಎಬ್ಬಿಸಬಹುದಾದ ಇದೊಂದು ದುಷ್ಕೃತ್ಯ. ಸಾಮಾಜಿಕ ಸಮಸ್ಯೆಯಾಗಿ ಎಲ್ಲರನ್ನೂ ಕಾಡುವ ಇದೊಂದು ಅಕ್ಷಮ್ಯ ಅಪರಾಧ. ಇಂಥದಕ್ಕೆ ಕೈ ಹಾಕಿದವರಾರು? ಇವರಿಗೆ ಅನುಮತಿ ಕೊಟ್ಟವರಾರು?

ರಂಗ ಈ ವಿಷಯದಲ್ಲಿ ಬೆಳಕು ಚೆಲ್ಲಬಹುದು ಅನ್ನಿಸಿತು. ಮನೆಗೆ ಬಂದ ತಕ್ಷಣ ಫೋನ್ ಎತ್ತಿದೆ. ಟರ್‌ರ್.... ಅನ್ನುವ ಬದಲು ಕುಂಯ್.... ಅನ್ನತೊಡಗಿತು. ಪುನಃ ಪುನಃ ಪ್ರಯತ್ನಿಸಿದೆ. ಮತ್ತದೇ ಧ್ವನಿ. ಇಂಥದರಲ್ಲೇ ಈ ಫೋನು ಕೈ ಕೊಟ್ಟಿತಲ್ಲಾ ಎಂದು ಹಳಹಳಿಸುತ್ತಲೇ ಮಲಗಿದೆ. ಮರುದಿವಸ ಮುಂಜಾನೆ ಮತ್ತೊಮ್ಮೆ ಪ್ರಯತ್ನಿಸಿದಾಗ ಟರ್‌ರ್...' ಧ್ವನಿ ಹೊರಡಿಸಿತು. ಅಂತೂ ಸರಿಯಾಗಿದೆಯೆಂದು ರಂಗನ ನಂಬರಿನ ಬಟನ್‌ಗಳನ್ನು ಒತ್ತಿದೆ. ಟರ್ ಟರ್.... ಟರ್ ಟರ್ ಸಪ್ಪಳ ಬರತೊಡಗಿತು. ಆದರೆ ಎಷ್ಟು ಹೊತ್ತಾದರೂ ಯಾರೂ ಫೋನು ಎತ್ತಲಿಲ್ಲ. ಅವನ ಫೋನು ಕೆಟ್ಟು ಆ ರೀತಿ ಸಪ್ಪಳ ಬರುತ್ತಿದೆಯೋ ಅಥವಾ ಫೋನ್ ಎತ್ತಲು ಮನೆಯಲ್ಲಿ ಯಾರೂ ಇಲ್ಲವೋ ಗೊತ್ತಾಗಲಿಲ್ಲ. ಇಷ್ಟು ಬೇಗ ಮನೆ ಬಿಟ್ಟು ಎಲ್ಲಿಗೆ ಹೋಗಿರಬಹುದು?

ಗೋಪಿಗೆ ಫೋನ್ ಮಾಡಿ ಕೇಳೋಣ ಅನ್ನಿಸಿತು. ಎಲ್ಲರ ಮನೆಗೆ ಫೋನು ಬಂದು ಎಷ್ಟೊಂದು ಅನುಕೂಲ ಆಗಿಬಿಟ್ಟಿದೆ. ಕುಳಿತಲ್ಲಿಂದಲೇ ಎಲ್ಲರೊಡನೆ

ಮಾತಾಡಬಹುದು. ಗೋಪಿಯ ಫೋನ್ ನಂಬರನ್ನು ಹುಡುಕಿ ಬಟನ್ ಒತ್ತಿದೆ. ಅರೆ! ಅಲ್ಲೂ ಎಷ್ಟೋ ಹೊತ್ತು ಟರ್‌ಟರ್.... ಟರ್ ಟರ್.... ಸಪ್ಪಳ! ಎಲ್ಲರ ಫೋನುಗಳಿಗೆ ಒಮ್ಮಿಂದೊಮ್ಮೆಲೆ ಯಾವ ರೋಗ ಬಡಕೊಂಡಿತು? ಅಥವಾ ಇವನೂ ಈಗಾಗಲೇ ಹೆಂಡತಿ ಕರೆದುಕೊಂಡು ಎಲ್ಲಿಗಾದರೂ ಹೋಗಿರಬಹುದೇ?

ರಾತ್ರಿ ಕಂಡ ಬಾವಿ ಅಲ್ಲ ಬೋರ್ಡು ನೆನಪಿಗೆ ಬಂದು ಒಂದು ತರಹ ಸಂಕಟವಾಗತೊಡಗಿತು. ವೆಂಕಟರಮಣ ನೆನಪಾದ. ಸಂಕಟ ಹರಣ ಮಾಡಲು ಅವನೇ ಯೋಗ್ಯವ್ಯಕ್ತಿ. ಆದರೆ ಮಹಾರಾಯ ಇದುವರೆಗೂ ಮನೆಗೆ ಫೋನ್ ಹಾಕಿಸಿಕೊಂಡಿಲ್ಲ. ಸ್ವತಃ ತಾನೇ ವೆಂಕಟರಮಣನಾಗಿರುವುದರಿಂದ ಸಂಕಟವೆಲ್ಲಿಯದು? ಸಂಕಟವೇ ಇಲ್ಲವೆಂದ ಮೇಲೆ ಫೋನ್ ಯಾಕೆ ಬೇಕೆಂದು ಬಿಟ್ಟಿರಬಹುದು. ಆದರೆ ಅದರಿಂದ ನಮ್ಮಂಥವರಿಗೆ ಸಂಕಟ. ನಗರದ ಪೂರ್ವಕ್ಕೆ ಅವನು ಪಶ್ಚಿಮದ ತುದಿಗೆ ನಾನು. ಅಷ್ಟು ದೂರ ಹೋಗಿ ಬರುವದು ಅಸಾಧ್ಯದ ಮಾತು. ಈ ವಿಷಯದಲ್ಲಿ ಅವನಾದರೂ ಏನು ಹೇಳಬಲ್ಲ?

ಅವನು ಹೇಳುವುದನ್ನು ನಾನೇ ಊಹಿಸಿಕೊಳ್ಳತೊಡಗಿದೆ.

'ಇನ್ನೊಮ್ಮೆ ಸರಿಯಾಗಿ ನೋಡಿ ಬಂದು ಹೇಳು. ಹಗಲಿನಲ್ಲಿ ನೋಡು, ರಾತ್ರಿ ಬೇಡ' ಅನ್ನಬಹುದು. ಅಕಸ್ಮಾತ್ ಸರಿಯಾಗಿ ಹಗಲಿನಲ್ಲಿಯೇ ನೋಡಿ ಖಾತ್ರಿ ಮಾಡಿಕೊಂಡು ಹೋಗಿ ಹೇಳಿದರೆ 'ಇದ್ದರೂ ಇರಬಹುದು. ಆದರೆ ಅವರ ವ್ಯವಹಾರ ಹೇಗೆ ನಡೆಯುತ್ತದೆ? 'ಅಂಗ್ಲಗಾದೆಯೊಂದಿದೆ ಗೊತ್ತಿರಬಹುದು ನಿನಗೂ. ಗೊತ್ತಿದ್ದ ದೆವ್ವೇ ಗೊತ್ತಿರದ ದೇವರಿಗಿಂತ ಶ್ರೇಷ್ಠವಂತೆ. ಇದ್ದ ಹಳೇ ಹೆಂಡತಿಯೊಂದಿಗೇ ಹಾಗೂ ಹೀಗೂ ಹೊಂದಾಣಿಕೆ ಮಾಡಿಕೊಂಡು ದಿನ ನೂಕುತ್ತಾರೆ ವಿನಃ ಹೊಸ ಹೆಂಡತಿಗಾಗಿ ಹಾತೊರೆಯುವುದಿಲ್ಲ, ಇದ್ದವಳನ್ನು ತೊರೆದು. ಊದುವದನ್ನು ಕೊಟ್ಟು ಒದರುವದನ್ನು ತಗೊಳ್ಳುತ್ತಾರೆಯೇ?' ಎಂದು ನನಗೇ ತಿಳಿ ಹೇಳಿ ತಿರುಗಿ ಕಳಿಸಬಹುದು. ನಾನು ತಿರುಗಿ ಬರುವಾಗ ಮತ್ತೆ ಕರೆದು 'ಅಂದ ಹಾಗೆ ಅವರು ಬೋರ್ಡಿನಲ್ಲಿ 'ಹಳೆಯ ಹೆಂಡತಿ ಕೊಟ್ಟು....!' ಅಂತಷ್ಟೇ ಬರೆದಿದ್ದಾರೆ. 'ಹೊಸ ಹೆಂಡತಿ ಪಡೆಯಿರಿ' ಅನ್ನುವದನ್ನು ನೀನು ಸೇರಿಸಿದ್ದು. ಅವರು ಬರೆದಷ್ಟೇ ಇರಬಹುದಲ್ಲ? ಒಬ್ಬರಿಗೆ ಬೇಡವಾದ ಹೆಂಡತಿ ಇನ್ನೊಬ್ಬರಿಗೆ ಬೇಕಾಗುತ್ತಾಳೆ ಅಂತೇನು ಗ್ಯಾರಂಟಿ? ಹಳೆಯದೊಂದು ಇದೇ ಬಗೆಯ ಜೋಕಿದೆ. 'ಮಡದಿ ಮುನಿದರೆ ಮಾರಿ' ಎಂಬುದನ್ನು ಇನ್ನೊಂದು ಅರ್ಥ ಹಚ್ಚಿ ನೋಡುತ್ತಾರೆ. ಮಾರಿ ಅಂದರೆ ಮಾರಾಟ ಮಾಡಿ ಅನ್ನೋದೇ ಈ ಅಪಾರ್ಥ. ಮಾರಲು ತಯಾರಿರುವಷ್ಟು ಜನ ಕೊಳ್ಳಲು ತಯಾರಿರುತ್ತಾರೆಯೇ? ಮುಂತಾಗಿ ಕೇಳಿ 'ಹೆಂಡತಿ' ಅನ್ನುವ ಶಬ್ದವನ್ನೇ ಅಪಭ್ರಂಶ ಮಾಡಿ ಬಿಡಬಹುದು!

ವೆಂಕಟರಮಣನ ಮನೆಗೆ ಹೋಗುವುದೇ ಬೇಡವೆನ್ನಿಸಿತು. ಆದರೆ ಕೆಟ್ಟ ಕುತೂಹಲ ತಡೆಯಬೇಕಲ್ಲ, ತಡೆಯಲಾಗಲಿಲ್ಲ. ನನ್ನನ್ನು ಎಬ್ಬಿಸಿಕೊಂಡು ಹೋಗಿ ಮತ್ತೆ ಆ ಬಾವಿಯ ಕ್ಷಮಿಸಿ ಬೋರ್ಡಿನ ಸಮೀಪ ಒಯ್ದು ನಿಲ್ಲಿಸಿತು.

ಈಗ ಅದರ ಮುಂದೆ ದೊಡ್ಡದೊಂದು ಶಾಮಿಯಾನ ಹಾಕಿದ್ದರು. ತಳಿರು ತೋರಣಗಳಿಂದ ಅಲಂಕರಿಸಿದ್ದರು. ನಕ್ಷತ್ರಗಳ ಹಾಗೆ ಕಾಣುವ ಚಿಕ್ಕ ಚಿಕ್ಕ ವಿದ್ಯುದ್ದೀಪಗಳು ಅಲ್ಲಲ್ಲಿ ಮಿನುಗುತ್ತಿದ್ದವು. ಬಣ್ಣ ಬಣ್ಣದ ಪ್ಲಾಸ್ಟಿಕ್ ಕುರ್ಚಿಗಳನ್ನು ಹಾಕಿದ್ದರು. ಅವುಗಳ ಮೇಲೆ ಗಂಡ-ಹೆಂಡತಿ ಜೋಡಿಗಳು ಕುಳಿತಿದ್ದರು. ಸುಮಾರು ಐವತ್ತು ಅರವತ್ತು ಜೋಡಿಗಳು ಈಗಾಗಲೇ ಅಲ್ಲಿದ್ದರು. ಇನ್ನೂ ಬರತೊಡಗಿದ್ದರು. ರಾತ್ರಿ ಕಂಡ ಬಾವಿಯಲ್ಲಿ ಹಗಲಿನಲ್ಲಿ ಬೀಳಲು!

ಇಷ್ಟೊಂದು ಜನಕ್ಕೆ ತಮ್ಮ ಹೆಂಡಂದಿರು ಬೇಡವಾಗಿದ್ದಾರೆಯೇ? ಅಷ್ಟೊಂದು ಹಿಂಸೆಯನ್ನು ಈ ಹೆಂಡಂದಿರು ತಮ್ಮ ತಮ್ಮ ಗಂಡಂದಿರಿಗೆ ಕೊಟ್ಟಿದ್ದಾರೆಯೇ? ಏನಿದೆಲ್ಲ?!

ಬೆನ್ನ ಮೇಲೊಂದು ಕೈ ಬಿತ್ತು. ತಿರುಗಿ ನೋಡಿದೆ. ರಂಗ! ತನ್ನ ಹೆಂಡತಿ ರಾಜಮ್ಮನೊಂದಿಗೆ ನಿಂತಿದ್ದಾನೆ!

''ಫೋನು ಕೆಟ್ಟಿದೆಯೇನೋ ನಿನ್ನದು? ಮುಂಜಾನೆ ಎಂಟುಗಂಟೆಗೆ ಫೋನ್ ಮಾಡಿದ್ದೆ'' ಎಂದೆ. ''ಕೆಟ್ಟಿಲ್ಲ ಸಾರ್. ಏಳೂವರೆಗೇ ನಾವು ಮನೆಯನ್ನು ಬಿಟ್ಟು ಇಲ್ಲಿಗೆ ಬಂದಿವಿ'' ಎಂದ. ರಾಜಮ್ಮನನ್ನು ನೋಡಿದೆ. ಅವಳ ಮುಖ ಎಂದಿನಂತೆ ಉಲ್ಲಾಸಮಯವಾಗಿಯೇ ಇತ್ತು. ಇಂಥಲ್ಲಿಗೆ ಬರಬೇಕಾದರೆ ಸ್ವಲ್ಪವಾದರೂ ಬಾಡಿರಬೇಕಲ್ಲ? ಊಂ ಹೂಂ. ಸ್ವಲ್ಪವೂ ಬಾಡಿಲ್ಲ. ಸಂತೋಷಕೂಟಗಳಿಗೆ ಬರುವಂತೆ ಅಲಂಕಾರ ಮಾಡಿಕೊಂಡು ಬಂದಿದ್ದಾಳೆ!

''ಒಂಬತ್ತು ಘಂಟೆಗೇ ಉದ್ಘಾಟಕರು ಬರಬೇಕಾಗಿತ್ತು ಸಾರ್, ಇನ್ನೂ ಬರಲಿಲ್ಲ ನೋಡಿ, ಒಂಬತ್ತೂವರೆಯಾಯಿತು. ಬೇಜಾರು ಬಂದು ಸ್ವಲ್ಪ ಕಾಫೀನಾದರೂ ಕುಡಿದುಕೊಂಡು ಬರೋಣಾಂತ ಹೋಗಿ ಬಂದ್ವಿ'' ಎಂದು ಹೇಳಿದ. ಅವನ ಮಾತಿಗೆ ''ಹಾಂ, ಹೂಂ'' ಅಂದೆ ಅಷ್ಟೇ, ಅದೂ ರಾಜಮ್ಮನನ್ನು ನೋಡಿ! ಅವನು ಏನು ಅರ್ಥ ಮಾಡಿಕೊಂಡನೋ ಏನೋ ''ಅಲ್ಲಿ ಪ್ರೇಮಾ ಒಬ್ಬಳೇ ಆಗ್ತಾಳೆ ನೀನು ನಡೆ. ನಾವು ಸ್ವಲ್ಪ ಮಾತಾಡಿ ಆಮೇಲೆ ಬರ್ತೇವೆ'' ಎಂದು ರಾಜಮ್ಮನಿಗೆ ಹೇಳಿದ. ನನಗೂ ಅಷ್ಟೇ ಬೇಕಾಗಿತ್ತು.

ಅವಳು ಹೋದ ಮೇಲೆ ''ಪ್ರೇಮಾನೂ ಬಂದಿದ್ದಾಳೆಯೇ?'' ಎಂದು ಕೇಳಿದೆ. ಪ್ರೇಮಾ ಗೋಪಿಯ ಹೆಂಡತಿ. ಅವಳು ಬಂದಿದ್ದಾಳೆಂದರೆ ಗೋಪಿ ಅವಳನ್ನು ಕರೆದುಕೊಂಡು ಬಂದಿದ್ದಾನೆ ಎಂದರ್ಥ. ನನ್ನ ಧ್ವನಿಯಲ್ಲಿಯ ಆಶ್ಚರ್ಯವನ್ನು ಗಮನಿಸಿದ ರಂಗ ''ಬರಲೇಬೇಕಲ್ಲ ಸಾರ್. ನಾವೆಲ್ಲರೂ ಬರೋದು ಅಂತ ನಿನ್ನೆಯೇ ತೀರ್ಮಾನಿಸಿಯಾಗಿದೆಯಲ್ಲಾ. ಗೋಪಿ ನಿಮಗೆ ಹೇಳಲಿಲ್ಲವೆ?'' ಎಂದು ನನ್ನನ್ನೇ ಕೇಳಿದ.

''ಗ್ಗೋಪಿ ಏನೂ ಹೇಳಿಲ್ಲ. ಅಂದಹಾಗೆ ನಿನ್ನೆ ನನ್ನ ಫೋನು ಸರಿಯಾಗಿರಲಿಲ್ಲ.''

''ಓ.... ಅದಕ್ಕೇ ನಿಮಗೆ ಗೊತ್ತಾಗಿಲ್ಲ ಸಾರ್. ಇದನ್ನೆಲ್ಲಾ ಪ್ರಾಯೋಜಿಸಿದವ ಗೋಪಿಯ ಗೆಳೆಯ ಸಾರ್. ಪ್ರಭಾಕರ ಅಂತ ಅವರ ಹೆಸರು. ಅವನಿಗೆ ಸಲಹೆ ಸೂಚನೆ ಕೊಟ್ಟವನು ಗೋಪಿಯೇ ಸಾರ್.''

''ಅದನ್ನೂ ಕೂಡ ಗೋಪಿ ಹೇಳಿಲ್ಲವಲ್ಲ''

''ಅವನು ಗೋಪಿಯ ಹೊಸ ಗೆಳೆಯ ಸಾರ್'' ಎಂದು ಕೆಮ್ಮಿದ.

ಹೊಸ ಗೆಳೆಯನಂತೆ ಹೊಸ ಗೆಳೆಯ. ಇವರಿಗೆಲ್ಲ ಏನಾಗಿದೆಯೋ ಏನೋ. ಎಲ್ಲದರಲ್ಲೂ ಹೊಸದೇ ಬೇಕಿವರಿಗೆ. ಹೊಸ ಶತಮಾನ ಬರುವ ಸಂದರ್ಭದಲ್ಲಿ ಇವರಿಗೆಲ್ಲಾ ಈ 'ಹೊಸ' ರೋಗ ತಗಲಿದೆಯೇ ಏನೋ!

''ಗೋಪಿ ಈವತ್ತು ಮುಂಜಾನೆ ಏಳು ಗಂಟೆಗೇ ಮನೆ ಬಿಟ್ಟಿದ್ದಾನೆ ಸಾರ್ ತನ್ನ ಹೆಂಡತಿಯೊಂದಿಗೆ. ನಾವೂ ಅಲ್ಲೇ ಹೋಗೋಣ ಬನ್ನಿ ಸಾರ್'' ಎಂದ.

ಇಂಥ ಗೋಪಿಯನ್ನು ಕಾಣಲು ಹೋಗುವದೇ?

ಅಂಗಾಲಿಗೆ ಹೇಸಿಗೆಯಿಲ್ಲ, ಕರುಳಿಗೆ ನಾಚಿಕೆಯಿಲ್ಲ ಅನ್ನೋದಷ್ಟೇ ಕೇಳಿದ್ದೆ. ಈ ಗೆಳೆತನ ಅನ್ನೋದಕ್ಕೆ ಎರಡೂ ಇರೋದಿಲ್ಲ. ರಂಗನ ಜೊತೆಗೆ ಹೆಜ್ಜೆ ಹಾಕಿದೆ.

ನನ್ನನ್ನು ಕಂಡ ಗೋಪಿ ಮುಖ ಅಗಲ ಮಾಡಿ ''ಬಾರೋ.... ಬಾ.....'' ಎಂದು ಸ್ವಾಗತಿಸುತ್ತ ''ಒಬ್ಬನೇ ಬಂದಿದೀಯಲ್ಲ?'' ಎನ್ನಬೇಕೇ?!

ಅಲ್ಲಿಯೇ ಅವನನ್ನು ಜಜ್ಜುವಷ್ಟು ಸಿಟ್ಟು

ಈಗ ಈರುಳ್ಳಿಯದು ನಿತ್ಯ ಸಮಸ್ಯೆ. ಅತ್ತರೆ ಅತಿರೇಕ, ನಕ್ಕರೆ ವಿಪರೀತ ಅನ್ನುವ ಹಾಗೆ. ಕೆಲವೊಮ್ಮೆ ಇಪ್ಪತ್ತು ರೂಪಾಯಿ ಕೊಟ್ಟರೂ ಮಾರುಕಟ್ಟೆಯಲ್ಲಿ ಈರುಳ್ಳಿ ದೊರೆಯುವುದಿಲ್ಲ. ಈರುಳ್ಳಿ ಬೆಲೆ ಐವತ್ತು ರೂಪಾಯಿಗೆ ಕೆ.ಜಿ. ಏರಿದ ಕಾರಣ ದೆಹಲಿ, ರಾಜಸ್ಥಾನದಲ್ಲಿ ಸರ್ಕಾರಗಳೇ ಉರುಳಿ ಬಿದ್ದವು.

ಇಂಥ ಈರುಳ್ಳಿಯನ್ನು ಭಾರತದಲ್ಲಿ ಒಮ್ಮೆ ನಿಷೇಧಿಸಲಾಗಿತ್ತು. ಈರುಳ್ಳಿ ತಿನ್ನುವುದರಿಂದ ತಾಮಸ ಪ್ರವೃತ್ತಿ ಬೆಳೆಯುತ್ತದೆಂದು ನಂಬಿಕೆ. ಹಾಗೆ ಯಾರಾದರೂ ಈರುಳ್ಳಿ ಬಳಸಿದ್ದು ಕಂಡರೆ ಅವರನ್ನೂ ಊರಿಂದಲೇ ಹೊರ ಹಾಕಲಾಗುತ್ತಿತ್ತು.

ಇದು ಬಡವರ ಆಹಾರ. ಈರುಳ್ಳಿ ಇಂಥ ಜನರ ಆಹಾರವೆಂದೇ ಮೇಲು ವರ್ಗದವರು ಅದನ್ನು ಬಹಿಷ್ಕರಿಸಿದ್ದಾರೆ ಎಂದೇ ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಈರುಳ್ಳಿ, ಬೆಳ್ಳುಳ್ಳಿ ಮೆರವಣಿಗೆಯನ್ನೇ ಏರ್ಪಡಿಸಿದ್ದರು.

ಈರುಳ್ಳಿಯನ್ನು ಬಹಳ ಹಿಂದೆ ಇಂಗ್ಲೆಂಡಿನಲ್ಲಿ ಮದುವೆಯ ಉಡುಗೊರೆಯಾಗಿ ನೀಡುತ್ತಾ ಇದ್ದರಂತೆ.

ಬಂದಿತು. ಅತೀ ಪ್ರಯಾಸಪಟ್ಟು ತಡೆದುಕೊಂಡೆ.

''ತವರಿಗೆ ಹೋಗಿದ್ದಾಳೆ'' ಎಂದೆ.

''ಅಷ್ಟಾದರೂ ನಿನಗೆ ಬಿಟ್ಟಿರುವ ಭಾಗ್ಯ ಇದೆ ಮಹಾರಾಯಾ. ಇವರು ನೋಡು'' ಎನ್ನುತ್ತ ಪ್ರೇಮಾ, ರಾಜಮ್ಮರನ್ನು ತೋರಿಸುತ್ತ ''ಜಿಗಳೆ ತರಹ ಅಂಟಿಕೊಂಡೇ ಇರುತ್ತಾರೆ. ಮುಂಜಾನೆ ಎಲ್ಲಿಯೋ ಹೋದರು ಹೋದರು ಎನ್ನುವಾಗಲೇ ಸಂಜೆಗೆ ಮತ್ತೆ ಹಾಜರ್'' ಎಂದ. ರಂಗ ಥದಕ್ಕೂ ಹಲ್ಲು ಕಿಸಿಯುತ್ತ ನಿಂತಿದ್ದ.

''ಏನಾಗಿದೆ ನಿನ್ನ ಫೋನಿಗೆ? ನಿನ್ನೆ ಸಾಯಂಕಾಲ ಎರಡು ಮೂರು ಸಲ ಪ್ರಯತ್ನಿಸಿದೆ, ನಿನಗೆ ಈ ವಿಷಯ ಹೇಳಲು. ಒಳ್ಳೇ ಪಿಟೀಲು ನುಡಿಸಿದ ಹಾಗೆ 'ಕುಂಯ್....' ಅಂತ ಧ್ವನಿ ಬರುತ್ತಿತ್ತು. ನಂಬರು ಗಿಂಬರು ಬದಲಾಗಿದೆಯೇ?'' ಎಂದು ಕೇಳಿದ.

ಇದು ಇನ್ನೊಂದು. ನಂಬರು ಬದಲಾಗಿದ್ದರೆ ನಾನು ಇವನಿಗೆ ಹೇಳದೆ ಇರುತ್ತಿದ್ದೆನೆ? ಇಂಥವನ ಕೂಡ ಅದೂ ಈ ಗದ್ದಲದಲ್ಲಿ ವಾದ ಮಾಡಿ ಪ್ರಯೋಜನವಿಲ್ಲ ಅನ್ನಿಸಿ, ''ಹೌದು ನಿನ್ನೆ ಇಡೀ ದಿನ ನನ್ನ ಫೋನು ಸರಿ ಇರಲಿಲ್ಲ. ನಂಬರು ಅದೇ ಇದೆ'' ಎಂದು ಉತ್ತರಿಸಿದೆ.

''ಇಲ್ಲಿ ಬಾ, ನನ್ನ ಹೊಸ ಗೆಳೆಯನನ್ನು ಪರಿಚಯ ಮಾಡಿಸುತ್ತೇನೆ' ಎನ್ನುತ್ತ ಕೈ ಹಿಡಿದುಕೊಂಡೇ ಹೊರಟು 'ದೂರದಲ್ಲಿ ಅಲ್ಲಿ ಸೂಟು ಬೂಟು ಹಾಕಿಕೊಂಡು ನಗುತ್ತ ನಿಂತಿದ್ದಾರಲ್ಲಾ ಅವರೇ ಪ್ರಭಾಕರ ಅಂತ. ಅವರ ಪಕ್ಕದಲ್ಲಿರೋರೇ ಅವರ ಹೆಂಡತಿ.....' ಎನ್ನುತ್ತಿದ್ದಂತೆ ದಂಪತಿಗಳ ಜೋಡಿಗಳು ಎದ್ದು ನಿಲ್ಲುತ್ತಿರುವುದು ಕಾಣಿಸಿತು. 'ಉದ್ಘಾಟಕರು ಬಂದರೂಂತ ಕಾಣ್ತದೆ' ಎಂದ ಗೋಪಿ. ಗೋಪಿಯ ಹೊಸ ಗೆಳೆಯ ಪ್ರಭಾಕರ ಮತ್ತು ಅವನ ಹೆಂಡತಿ ಉದ್ಘಾಟಕರನ್ನು ಸ್ವಾಗತಿಸಲು ಆ ಕಡೆ ಹೋದರು.

ಉದ್ಘಾಟಕರು ಯಾರೆಂದಿರಿ ? ಸಾಕ್ಷಾತ್ ವೆಂಕಟರಮಣ!

ಮೂರ್ಛೆ ಹೋಗುವುದೊಂದೇ ಬಾಕಿ ನನಗೆ!

ಧಾವಿಸಿ ಬಂದ ವೆಂಕಟರಮಣ 'ಈಗಾಗಲೇ ಸಾಕಷ್ಟು ತಡ ಆಗಿದೆ, ಇನ್ನು ಹೆಚ್ಚಿಗೆ ತಡ ಮಾಡೋದು ಬೇಡ. ಎಂದಾಗ 'ಆಯ್ತು ಸರ್' ಎನ್ನುತ್ತ ಪ್ರಭಾಕರ ಅವರನ್ನು ವೇದಿಕೆಗೆ ಕರೆ ತಂದ.

ವೆಂಕಟರಮಣ ದೀಪ ಹಚ್ಚಿದ. ಎಲ್ಲರೂ ಚಪ್ಪಾಳೆ ತಟ್ಟಿದರು. ಎಲ್ಲರಿಗೂ ಪೇಡೆ ಹಂಚಲಾಯಿತು.

ಪ್ರಥಮ ಬಾರಿಗೆ ನನಗೆ ಪೇಡೆ ಕಹಿ ಅನ್ನಿಸಿತು.

ಆದರೆ ಅಲ್ಲಿರುವ ಯಾರಿಗೂ ಹಾಗನ್ನಿಸಿರಲಿಲ್ಲ!

ಕಣ್ಮುಚ್ಚಿ ಕಣ್ತೆರೆದೆ. ನನ್ನಲ್ಲೇ ಏನಾದರೂ ಲೋಪ ದೋಷ ಇರಬಾರದೇಕೆ? ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ನಾನೇ ಎಲ್ಲೋ ಎಡವಿರಬಾರದೇಕೆ? 'ಹೊಸ ಹೆಂಡತಿ' ಹಳೆಯ ಹೆಂಡತಿಗಳನ್ನು ಕಲ್ಪಿಸುವುದಕ್ಕೆ ನನ್ನಿಂದ ಮಾತ್ರ ಯಾಕೆ ಸಾಧ್ಯ ಆಗುತ್ತಿಲ್ಲ ? ಪೇಡೆ ತಿಂದು ನೀರು ಕುಡಿಯುವವರೆಗೂ ಯೋಚಿಸಿದೆ.

''ಉದ್ಘಾಟಕರಿಂದ ಎರಡು ಮಾತು'' ಎಂದ ಪ್ರಭಾಕರ.

ವೆಂಕಟರಮಣ ಎದ್ದು ಮೈಕಿನ ಮುಂದೆ ನಿಂತ.

''ಕೇವಲ ಫೋನ್ ಕರೆಗಳ ಮುಖಾಂತರವೇ ನೀವೆಲ್ಲ ದಂಪತಿಗಳು ಹೊಸ ಹೊಸ ಹೆಂಡತಿಯರನ್ನು ಪಡೆಯುವ ಅತ್ಯುತ್ಸಾಹದಿಂದ ಇಲ್ಲಿಗೆ ಆಗಮಿಸಿದ್ದೀರಿ ಎಂಬುದನ್ನು ಗಮನಿಸಿ ಸಂತೋಷದಿಂದಲೇ ಈ ಕಾರ್ಯಕ್ರಮವನ್ನು ಉದ್ಘಾಟಿಸುತ್ತಿದ್ದೇನೆ'' ಎಂದು ಆರಂಭಿಸಿದ. ನನ್ನ ಸಮತೋಲ ತಪ್ಪತೊಡಗಿತು.

''ದೂರದ ಜಪಾನಕ್ಕೆ ಹೋಗಿ 'ಹೈಟೆಕ್' ತಂತ್ರಜ್ಞಾನದಲ್ಲಿ ವಿಶೇಷ ತರಬೇತಿ ಪಡೆದು ಬಂದ ಶ್ರೀಯುತ ಪ್ರಭಾಕರ ಅವರ ಹೆಂಡತಿ ಶ್ರೀಮತಿ ರೂಪಾ ಅವರು ಈ ಪ್ರಸಾಧನ ಮಳಿಗೆ ತೆರೆದಿದ್ದಾರೆ. ಬೇಗ ಬೇಗನೆ ನೀವು ಹೊಸ ಹೆಂಡತಿಯರಾಗಿ ಬರಲಿರುವ ಹೊಸ ಶತಮಾನವನ್ನು ಬರಮಾಡಿ ಕೊಳ್ಳಬೇಕು....' ಎಂದ.

ನನಗೆ ಜ್ಞಾನೋದಯವಾಯಿತು !

■ ಹ.ಶಿ.ಬೈರನಟ್ಟಿ

ಸಿಗರೇಟಿಗೂ ಬಂದ ಕುತ್ತು

ಪಾಶ್ಚಿಮಾತ್ಯ ದೇಶಗಳಲ್ಲಿ ಆರೋಗ್ಯದ ಕಾಳಜಿ ಹೆಚ್ಚು. ಸಿಗರೇಟು ಸೇದುವುದು ಇರಲಿ, ಸಿಗರೇಟು ಸೇದುವವರ ಹತ್ತಿರ ಇದ್ದರೇ ಆರೋಗ್ಯಕ್ಕೆ ಹಾನಿ ಎಂದು ಅಲ್ಲಿನ ಜನ ಭಾವಿಸುತ್ತಾರೆ. ಭಾರತದಲ್ಲಿ ಬೇರೆಯದೇ ಕತೆ. ಸಿಗರೇಟು ಚಟದ ಜನ ಕೂಡ ಈಗ ಸಿಗರೇಟು ಬಿಟ್ಟು 'ಗುಟ್ಕಾ' ವ್ಯಸನಿಗಳಾಗಿದ್ದಾರೆ. ಅಂತೂ ಇಂತೂ ಸಿಗರೇಟಿಗೆ ಉಳಿಗಾಲವಿಲ್ಲ. ಅವುಗಳ ಬೇಡಿಕೆ ದಿನದಿಂದ ದಿನಕ್ಕೆ ಕುಗ್ಗುತ್ತಾ ಇದೆ.

1995-96ಕ್ಕೆ ಹೋಲಿಸಿದರೆ ಸಿಗರೇಟು ಸೇದುವವರ ಪ್ರಮಾಣ ತೀರಾ ಕುಗ್ಗಿದೆ. 96-97ರಲ್ಲಿ ಏರಿಕೆ ಕುಸಿಯಲಾರಂಭಿಸಿತು. 98-99ರ ಸಾಲಿನಲ್ಲಿ -2.67ಕ್ಕೆ ಇಳಿದಿದ್ದು ಈ ವರ್ಷ -7.20ಗೆ ಕುಗ್ಗಿದೆ.

ಈ ಕಾರಣಕ್ಕೇ 'ಗುಟ್ಕಾ' ನಿಷೇಧಕ್ಕೆ ಸಿಗರೇಟು ತಯಾರಕರ ಲಾಬಿ ಆಗಾಗ ಕೈ ಹಾಕುತ್ತಿದೆ ಎಂಬ ಆಪಾದನೆಯೂ ಇದೆ. ಗುಟ್ಕಾದಲ್ಲಿ ತಂಬಾಕು, ಅಡಿಕೆಗಿಂತ ಹೆಚ್ಚಾಗಿ ಹಾನಿಕಾರಕ ರಾಸಾಯನಿಕಗಳು ಅದರ ನಿಷೇಧಕ್ಕೆ ಕಾರಣ. ಈಗಾಗಲೇ ಗೋವಾ, ಕೇರಳ ಮತ್ತು ಉತ್ತರ ಪ್ರದೇಶ ರಾಜ್ಯಗಳು ಗುಟ್ಕಾ ನಿಷೇಧಿಸಿವೆ.

ಗುಟ್ಕಾ ನಿಷೇಧಿಸಬೇಕೆಂದು ರಾಜ್ಯ ಸರ್ಕಾರವೇ ನೇಮಿಸಿದ್ದ ಡಾ. ಎಚ್. ನರಸಿಂಹಯ್ಯ ಸಮಿತಿಯ ವರದಿ ಕರ್ನಾಟಕದಲ್ಲಿ ಧೂಳು ತಿನ್ನುತ್ತಾ ಬಿದ್ದಿದೆ.

ದೇಶದಲ್ಲಿ ಮೂರು ಲಕ್ಷ ಟನ್ ಅಡಿಕೆ ಬೆಳೆಯುತ್ತದೆ. ಇದರಲ್ಲಿ ಅರ್ಧದಷ್ಟು ಗುಟ್ಕಾ ಮತ್ತು ಪಾನ್‌ಮಸಾಲಾ ತಯಾರಿಕೆಗೇ ಹೋಗುತ್ತದೆ. ಗುಟ್ಕಾ ಮತ್ತು ಅಡಿಕೆ ವಹಿವಾಟಿನಲ್ಲಿ 30 ಸಾವಿರ ಕೋಟಿ ರೂಪಾಯಿ ತೊಡಗಿಕೊಂಡಿದೆ.

ಹೊಗೆಸೊಪ್ಪು ಬಳಕೆಯಲ್ಲೂ ಸಿಗರೇಟನ್ನು ಹಿಂದೆ ಹಾಕಿ ಗುಟ್ಕಾ ಮುನ್ನುಗ್ಗುತ್ತಿದೆ. ಎರಡು ದಶಕಗಳ ಹಿಂದೆ ಶೇಕಡಾ 23 ರಷ್ಟು ತಂಬಾಕು ಸಿಗರೇಟು ಪಾಲಾಗುತ್ತಿತ್ತು. ಈಗ ಅದರ ಪಾಲು ಶೇಕಡಾ 19ಕ್ಕೆ ಇಳಿದಿದೆ. ಈಗ ಗುಟ್ಕಾ, ಪಾನ್ ಮಸಾಲಾ, ಖೈನೀ, ಜರ್ದಾ ತಯಾರಕರು ಶೇಕಡಾ 27ರಷ್ಟು ತಂಬಾಕು ಬಳಸುತ್ತಾ ಇದ್ದಾರೆ.

ಇದರಿಂದ ಸರ್ಕಾರಕ್ಕೂ ಲಾಭವಿಲ್ಲ. ಸಿಗರೇಟು ಒಂದು ಕೇಜಿ ಹೊಗೆಸೊಪ್ಪು ಬಳಸಿದರೆ 659 ರೂಪಾಯಿ ಎಕ್ಸೈಸ್ ಸುಂಕ ನೀಡುತ್ತದೆ. ಬೀಡಿ ತಯಾರಕರು ಕೇವಲ 13 ರೂಪಾಯಿ ತೆತ್ತರೆ, ಗುಟ್ಕಾ ತಯಾರಕರು ಬರೀ 37 ರೂಪಾಯಿ ಎಕ್ಸೈಸ್ ಸುಂಕ ನೀಡುತ್ತಾರೆ.

ಆ ಕಾರಣಕ್ಕೆ ಸಿಗರೇಟು ದುಬಾರಿ. ದಂ ಕಡಿಮೆ. ಒಂದೂವರೆ ರೂಪಾಯಿಯಿಂದ ಎರಡು ರೂಪಾಯಿ ಗುಟ್ಕಾ ಪ್ಯಾಕೆಟ್, ಅತ್ಯುತ್ತಮ ಸಿಗರೇಟಿಗಿಂತ ಹೆಚ್ಚಿನ ಕಿಕ್ ನೀಡುತ್ತದೆ. ಹಾಗೆಯೇ ಅದರ ಮಾರಕ ಪರಿಣಾಮಗಳೂ ಹೆಚ್ಚು. ಅದನ್ನರಿಯದೇ ಜನ, ಅದರಲ್ಲೂ ಹೆಚ್ಚಾಗಿ ಯುವಕರು, ಎಳೆಯರು ಗುಟ್ಕಾ ಪಾಲಾಗುತ್ತಿದ್ದಾರೆ.

ಸಿಗರೇಟು ಸೇವನೆಯನ್ನು ನಿಯಂತ್ರಿಸುವುದು, ಬಿಟ್ಟು ಬಿಡುವುದು ಅಷ್ಟು ಕಷ್ಟವೇನಲ್ಲ. ಆದರೆ ಒಮ್ಮೆ ಗುಟ್ಕಾ ಸೇವನೆ ಆರಂಭವಾಯಿತೆಂದರೆ, ಅದರ ಬಳಕೆಯ ಪ್ರಮಾಣ ಹೆಚ್ಚುತ್ತಲೇ ಹೋಗುತ್ತದೆ. ಹಾಗಾಗಿ ಗುಟ್ಕಾ ಮಾರುಕಟ್ಟೆ ಬೆಳೆದಂತೆ ಸಿಗರೇಟು ಬೇಡಿಕೆಯೂ ಕುಗ್ಗುತ್ತಾ ಹೋಗಿರುವುದರಲ್ಲಿ ಆಶ್ಚರ್ಯವಿಲ್ಲ.

■


ಹೊಸ ಪುಸ್ತಕ



ಪ್ರೇಮಾಭಟ್ 108 ಕತೆಗಳು

ಲೇ: ಪ್ರೇಮಾಭಟ್
ಪ್ರ: ಶ್ರೀ ಪ್ರೇಮಸಾಯಿ ಪ್ರಕಾಶನ
ಶ್ರೀ ಗುರುಪ್ರಸಾದ, 845, 4ನೇ ಮುಖ್ಯರಸ್ತೆ,
ವಿಜಯನಗರ, ಬೆಂಗಳೂರು - 560 040.
ಪುಟ: 640, ಬೆಲೆ: 180/-

English Language Games
(ಇಂಗ್ಲಿಷ್ ಭಾಷಾ ಆಟಗಳು)




ಲೇ: ಬೇದ್ರೆ ಎನ್. ಮಂಜುನಾಥ ಎಂ.ಎ.
ಪ್ರ: ಬೇದ್ರೆ ಪ್ರಕಾಶನ, C/o ತುಳಸಿ
ಎಲೆಕ್ಟ್ರಿಕಲ್ಸ್, ವಿನೋಬ ನಗರ ಮೇನ್
ರೋಡ್, 4ನೇ ಕ್ರಾಸ್ ಹತ್ತಿರ, ವಿನೋಬ
ನಗರ, ಶಿವಮೊಗ್ಗ - 577 201.
ಪುಟ: 68, ಬೆಲೆ: 50/-




ಚಿನ್ನುಡಿ

ಲೇ: ಚನ್ನವೀರ ಮ.ಸಗರನಾಳ
ಪ್ರ: ಕೊರಡ್ಡಿ ಪ್ರಕಾಶನ,
ಬಸವನ ಬಾಗೇವಾಡಿ- 586 203
ಬಿಜಾಪುರ ಜಿಲ್ಲೆ.
ಪುಟ: 120, ಬೆಲೆ: 60/-

1998 ಪ್ರಬಂಧ




ಸಂ : ಶ್ರೀಕಾಂತ ಪಾಟೀಲ
ಪ್ರ: ಟಿ.ಎಸ್. ದಕ್ಷಿಣಾಮೂರ್ತಿ, ರಿಜಿಸ್ಟ್ರಾರ್,
ಕರ್ನಾಟಕ ಸಾಹಿತ್ಯ ಅಕಾಡೆಮಿ
ಬೆಂಗಳೂರು- 560 002.
ಪುಟ: 200, ಬೆಲೆ: 40/-




A Practical Handbook of Audio- Visual Aids for English teaching

ಲೇ: ಬೇದ್ರೆ ಎನ್. ಮಂಜುನಾಥ ಎಂ.ಎ.
ಪ್ರ: ಬೇದ್ರೆ ಪ್ರಕಾಶನ, C/o ತುಳಸಿ ಎಲೆಕ್ಟ್ರಿಕಲ್ಸ್
ವಿನೋಬ ನಗರ ಮೇನ್ ರೋಡ್, 4ನೇ
ಕ್ರಾಸ್ ಹತ್ತಿರ, ವಿನೋಬ ನಗರ,
ಶಿವಮೊಗ್ಗ - 577 201.
ಪುಟ: 140, ಬೆಲೆ: 80/-

ಮೂಡಣದ ಹನಿಗಳು



ಲೇ: ನಾಗವೇಂದ್ರ ಸ್ವಾಮಿ ಚಿದರವಳ್ಳಿ
ಪ್ರ: ಮೂಡಣ ಪ್ರಕಾಶನ, 190ಎ,
55ನೆಯ ಅಡ್ಡರಸ್ತೆ, ನಾಲ್ಕನೆ ಬ್ಲಾಕ್,
ರಾಜಾಜಿನಗರ, ಬೆಂಗಳೂರು - 10
ಪುಟ: 68, ಬೆಲೆ: 25/-



ಆಗೊಮ್ಮೆ ಈಗೊಮ್ಮೆ

ಲೇ: ಮೈಸಿ
ಪ್ರ: ಕಾರ್ತಿಕ ಪ್ರಕಾಶನ
1, ಸಿದ್ಧರಾಮ, 4ನೆಯ ಅಡ್ಡ ರಸ್ತೆ,
ಹೊಸಹಳ್ಳಿ, ವಿಜಯನಗರ,
ಬೆಂಗಳೂರು - 560 040.
ಪುಟ: 68, ಬೆಲೆ: 50/-

ಜನಪದ ವಿನೋದ ಗಣಿತ



ಸಂ: ಜೀನಹಳ್ಳಿ ಸಿದ್ದಲಿಂಗಪ್ಪ
ಪ್ರ: ಪ್ರೇಮ ಪ್ರಕಾಶನ,
ಜೀನಹಳ್ಳಿ ಅಂಚೆ, ನ್ಯಾಮತಿ ಮಾರ್ಗ,
ಶಿವಮೊಗ್ಗ ಜಿಲ್ಲೆ - 577 223.
ಪುಟ: 56, ಬೆಲೆ: 18/-

ಇದು ಇಂಡಿಯಾ.



ಸುಂಕ ಸಲ್ಲಿಸದೇ ಇಲ್ಲಿ ಯಾವ ಕೆಲಸವೂ ಆಗುವುದಿಲ್ಲ. ಈಚೆಗೆ ದೆಹಲಿ ಏರ್‌ಪೋರ್ಟಿನಲ್ಲಿ ಎಸ್ಕಲೇಟರ್‌ಗೆ ಸಿಕ್ಕಿ ಜೋತ್ಸ್ನಾ ಎಂಬ ಪುಟಾಣಿ ಹುಡುಗಿ ಭಯಾನಕವಾಗಿ ಸತ್ತಳು. ನೂರಾರು ಜನ ಮೂಕರಾಗಿ ನಿಂತು ನೋಡುತ್ತಿದ್ದಾಗಲೇ ಅವಳ ದೇಹ ಚಿಂದಿ ಚಿಂದಿ ಆಗಿತ್ತು. ಅದನ್ನು ಕಣ್ಣಾರೆ ಕಂಡ ಅಸಹಾಯಕ ತಂದೆ ತಾಯಿಗಳ ಸ್ಥಿತಿ ಹೇಗಿರಬೇಡ! ಅವರು ಈ ದುಃಖದಲ್ಲಿಯೇ ಮಗಳ ಸಾವಿಗೆ ಸಂಬಂಧಿಸಿದ ದಾಖಲೆ ಕೇಳಲು ಹೋದರೆ 'ಮೊದಲು ದುಡ್ಡು ಇಡಿ, ಆಮೇಲೆ ದಾಖಲೆ ಮಾತು' ಅಂದರಂತೆ ಅಧಿಕಾರಿಗಳು.

ಯಾರು, ಹೇಗೆ ಸತ್ತರೇನು! ಅವರಿಗೆ ಬರಬೇಕಾದ ದುಡ್ಡು ಬಂದರಾಯಿತು.

★

ಕ್ರೀಡೆಗಳಲ್ಲಿ ಭಾರತ ಯಾವತ್ತೂ ಹಿಂದೆ. ರಾಜಕೀಯ ಕ್ರೀಡೆಯಲ್ಲಿ! ಅದು ಬಿಡಿ. ಇಂಥ ರಾಜಕೀಯ ಕ್ರೀಡೆಗಳಿಂದಾಗಿಯೇ ಭಾರತದ ಕ್ರೀಡೆ ಹಿಂದೆ ಬಿದ್ದಿದ್ದು ಎಲ್ಲರಿಗೂ ಗೊತ್ತು. ಅದಕ್ಕೆ ಇಲ್ಲಿದೆ ತಾಜಾ ಉದಾಹರಣೆ.

ದೆಹಲಿಯ ಹತ್ತೊಂಬತ್ತರ ಕೆಳಗಿನವರ ಕ್ರಿಕೆಟ್ ಟೀಮಿಗೆ ಸಿದ್ಧಾರ್ಥ ವರ್ಮಾ ಆಯ್ಕೆ ಆಗಿದ್ದಾನೆ. ಈತ ಎಂಟು ಇನ್ನಿಂಗ್ಸ್‌ಗಳಿಂದ ಇತ್ತೀಚೆಗೆ ಗಳಿಸಿರುವುದು 59 ರನ್. ಈತನಿಗೆ ಜಾಗ ಮಾಡಿಕೊಡಲು ಸರಾಸರಿ ಪ್ರತಿ ಇನ್ನಿಂಗ್ಸ್‌ನಲ್ಲಿ 150ರನ್ ಮಾಡಿದ ಹುಡುಗನನ್ನು ಕೈಬಿಡಲಾಗಿದೆ.

ಹಾಗಾದರೆ ಸಿದ್ಧಾರ್ಥ ವರ್ಮಾ ಆಯ್ಕೆಗೆ ಅರ್ಹತೆ ಏನು ಅನ್ನುತ್ತೀರಾ? ಇದೆ. ಆತ ದೆಹಲಿಯ ಮಾಜಿ ಮುಖ್ಯಮಂತ್ರಿ ಸಾಹಿಬ್‌ಸಿಂಗ್ ವರ್ಮಾ ಅವರ ಮುದ್ದಿನ ಮಗ. ಇಷ್ಟು ಸಾಲದೇ?

★

'ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ' ಎನ್ನುವುದು ಹಳೇ ಗಾದೆ. ಇಟಾಲಿಯನ್ ಗಂಡನೊಬ್ಬನ ಪಾಲಿಗೆ ಇದು ಇತ್ತೀಚೆಗೆ ನಿಜ ಆಯಿತು. ಐವತ್ತು ದಾಟಿರುವ ಆತ 'ಹಾಟ್‌ಲೈನ್'ನಲ್ಲಿ ಒಂದಿಷ್ಟು ಪೋಲಿ ಮಾತಾಡಿ ಖುಷಿ ಪಡೆಯಲು ಹೋದ. ಆದರೆ ಆ ತುದಿಯಲ್ಲಿ ಇವನ ಹೆಂಡತಿಯೇ ಸಿಗಬೇಕೇ! ಅವಳಿಗೂ ಸಂಸಾರ ಬೋರ್ ಆಗಿತ್ತಂತೆ. ಹೀಗಾಗಿ ಒಂದಿಷ್ಟು ಖುಷಿ ಪಡೆಯಲೆಂದೇ ಪೋಲಿ ಪಟಾಲಂ ಸೇರಿದ್ದಳು.

★

ಹೃದಯ ರೋಗಗಳ ತಜ್ಞನೊಬ್ಬ ಹೃದಯಬೇನೆಗೆ ಒಳಗಾದ ಕತೆ ಇದು. ಆಕೆ ಸುಂದರಿ. ಕಲ್ಕತ್ತಾದ ಆಸ್ಪತ್ರೆ ಒಂದಕ್ಕೆ ತನ್ನ ಬಂಧುವನ್ನು ನೋಡಲು ಹೋದಳು. ಅಲ್ಲಿಂದ ಅಂಟಿಕೊಂಡಿತು ಗ್ರಹಚಾರ. ಆಸ್ಪತ್ರೆಯ ಹೃದಯರೋಗಗಳ ತಜ್ಞವೈದ್ಯ ಅವಳಿಗೆ ಗಂಟುಬಿದ್ದ. ನಿತ್ಯ ಅವಳ ಮನೆಗೆ ಫೋನ್ ಅಸಹ್ಯ ಮಾತು. ಆಹ್ವಾನ. ತಲೆಕೆಟ್ಟು ಆಕೆ ಪೊಲೀಸರಿಗೆ ದೂರಿತ್ತಳು.

ಅವರು ಸಲಹೆ ನೀಡಿದಂತೆ ಮತ್ತೆ ವೈದ್ಯನಿಂದ ಮಾಮೂಲು ಕರೆ ಬಂದಾಗ, ಮನೆಗೆ ಬರುವಂತೆ ಆಹ್ವಾನಿಸಿದಳು. ಖುಷಿಯಿಂದ ಹೊರಟ ಈ ರೋಮಿಯೋಗೆ ಬಾಗಿಲಲ್ಲಿ ಕಾದಿದ್ದ ಪೊಲೀಸರು ಬೇಡಿ ತೊಡಿಸಿ ಕರೆದೊಯ್ದರು. ಅವನ ಹೃದಯ ಬೇನೆಗೆ ಅವರು ಸರಿಯಾಗಿಯೇ ಇಲಾಜು ಮಾಡಿರಬೇಕು. ಯಾಕೆಂದರೆ ಮತ್ತೆ ಆ ಮಹಿಳೆಗೆ ಫೋನ್ ಕರೆ ಬಂದಿಲ್ಲ.

★

'ರಿಚರ್ಡ್ ಆಟೆನ್‌ಬರೋ ನಿರ್ದೇಶನದ, ಬೆನ್‌ಕಿಂಗ್ಸ್‌ಲೀ ಅಭಿನಯದ ಗಾಂಧೀ ಚಿತ್ರವನ್ನು ನೋಡಿ ಒಂದು ಪ್ರಬಂಧ' ಬರೆಯಿರಿ' ಇದು ಶಾಲೆಯಲ್ಲೋ, ಕಾಲೇಜಲ್ಲೋ ಮೇಷ್ಟ್ರು ವಿದ್ಯಾರ್ಥಿಗಳಿಗೆ ಹೇಳಿದ್ದು ಅಲ್ಲ. ಹಲವಾರು ವರ್ಷಗಳಿಂದ ಕರಿಯರನ್ನು, ಏಷಿಯನರನ್ನು ಕಾಡುತ್ತಾ ಭಯ ಹುಟ್ಟಿಸುತ್ತಿದ್ದ ಮೂವರು ಬಿಳಿ ಜನಾಂಗದ ನಾಯಕರಿಗೆ ನ್ಯೂಜೆರ್ಸಿಯ ನ್ಯಾಯಾಧೀಶರು ವಿಧಿಸಿದ ಶಿಕ್ಷೆ.

ಜೊತೆಗೇ ಸ್ಪೀಲ್ ಬರ್ಗ್ ನಿರ್ದೇಶನದ 'ಶಿಂಡ್ಲರ್ಸ್ ಲಿಸ್ಟ್' ನೋಡಲು, ಆರ್ಥರ್ ಹ್ಯಾಲಿ ಬರೆದ 'ರೂಟ್ಸ್' ಮತ್ತು 'ನೇಟಿವ್ ಸನ್' ಎಂಬ ಪುಸ್ತಕಗಳನ್ನೋದಿ ಪ್ರಬಂಧ ಬರೆಯಲೂ ಈ ನ್ಯಾಯಾಧೀಶರು ತಿಳಿಸಿದ್ದಾರೆ. ಇದರಿಂದಾದರೂ ಸ್ವಲ್ಪ ಬುದ್ಧಿ ಬಂದೀತೆಂಬುದು ಅವರ ಆಸೆ.


★


ಮುದ್ದು ಮುದ್ದು ಮೊನಿಕಾ ಲೆವಿನ್‌ಸ್ಕಿ ಈಗ ಮೈಭಾರ ಕಳೆದುಕೊಂಡು ತೆಳ್ಳಗಾಗಿದ್ದಾಳೆ. ಕೆಲವೇ ತಿಂಗಳಲ್ಲಿ ಹದಿನಾಲ್ಕು ಕೆಜಿ ಮೈ ತೂಕ ಇಳಿಸಿಕೊಂಡ ಆಕೆ ಈಗ, ಇಂಥ ಸಾಧನೆಗೆ ಕಾರಣವಾದ ಜೆನ್ನಿ ಕ್ರೇಗ್ ಸಂಸ್ಥೆಯ ವಕ್ತಾರಳಾಗಿದ್ದಾಳೆ.



ಅದಕ್ಕಾಗಿಯೇ ಸಿಎನ್‌ಎನ್ ಆಕೆಯ, 'ಟಾಕ್ ಶೋ' ಇತ್ತೀಚೆಗೆ ಏರ್ಪಡಿಸಿತ್ತು. ■

ವಿಚಿತ್ರ ಜಗತ್ತು





ಮಿಲೇನಿಯಂ ಹುಚ್ಚಾಟದ ಇನ್ನೊಂದು ಭಂಗಿ ಇದು. ಈ ಗಂಡು ಹೆಣ್ಣು ನರ್ತಕಿಯರು ಹುಟ್ಟುಡುಗೆಯಲ್ಲೇ ಮಿಲೇನಿಯಂ ಸ್ವಾಗತಕ್ಕಾಗಿ ಉದ್ರೇಕಕಾರಿ ನರ್ತನಕ್ಕೆ ಸಜ್ಜಾದ ಚಿತ್ರ ಇದು. ಅದೂ ಲಂಡನ್‌ನಲ್ಲಿ ಹೊಸ ಸಹಸ್ರಮಾನದ ಸ್ವಾಗತಕ್ಕಾಗಿ ನಿರ್ಮಿಸಿದ್ದ ಗುಮ್ಮಟದಲ್ಲಿಯೇ ಈ ನರ್ತನ. ರಾಣಿ ಎಲಿಜಬೆತ್ ಎದುರಿಗೇ.

ಮಿಲೇನಿಯಂ ಉತ್ಸವದ ಮುಂಚೆ ಇಂಥ ನಾನಾ ಭಂಗಿಯ ಚಿತ್ರಗಳನ್ನು ಹಂಚಲಾಗಿತ್ತಾದರೂ, ಉತ್ಸವದಲ್ಲಿ ಅವರು ನರ್ತಿಸಿದ್ದು ಮಾತ್ರ ಎಲ್ಲಿಯೂ ವರದಿಯಾಗಲಿಲ್ಲ.

ಅವನನ್ನು ಕಾಡಿದ ಕಣ್ಣುಗಳು

ತೆಲುಗು ಮೂಲ : ಟಿ.ಶ್ಯಾಮಲಾ
ಕನ್ನಡಕ್ಕೆ : ಶಾರದಾತನಯ

ತನಗಾಗಿ ಪೋಲೀಸರು ಹುಡುಕುತ್ತಿರುವರೆಂಬ ಸುದ್ದಿ ತಿಳಿದು ಅವನಿಗೆ ಅದೇಕೋ ಸಂತೋಷವಾಯಿತು. ತನ್ನ ತಪ್ಪಿಗೆ ತನ್ನ ಅಂತರಾತ್ಮ ವಿಧಿಸುತ್ತಿರುವ ಶಿಕ್ಷೆ ತುಂಬ ಕಡಿಮೆ ಎನಿಸಿತು.



ಬೆಳಿಗ್ಗೆ ಎಂಟು ಗಂಟೆ

ಕಪ್ಪನೆಯ ಕಾರು ನುಣುಪಾದ ಟಾರ್ ರಸ್ತೆಯ ಮೇಲೆ ಓಡುತ್ತಿತ್ತು. ಕೃಷ್ಣ ಮೋಹನ್ ತುಂಬ ಎಚ್ಚರಿಕೆಯಿಂದ ಡ್ರೈವ್ ಮಾಡುತ್ತಿದ್ದ.

ಅವನಿಗೇನೋ ಆನಂದ.... ಅವ್ಯಕ್ತ ಆನಂದ!

ವಿಷಲ್ ಹಾಕುತ್ತಾ ಸಿನೀ ಪ್ರೇಮಗೀತೆಯನ್ನು ಆಲಾಪಿಸುತ್ತಿದ್ದ. ಡ್ರೈವಿಂಗ್ ವ್ಹೀಲ್ ಕೈಯಲ್ಲಿದ್ದರೂ ಕಣ್ಣುಗಳು ರಸ್ತೆಯನ್ನೇ ದಿಟ್ಟಿಸುತ್ತಿದ್ದರೂ ಮನಸ್ಸು ಮಾತ್ರ ಗತಜೀವನದ ನೆನಪಿನಲ್ಲಿ ವಿಹರಿಸುತ್ತಿತ್ತು.

ಅವನಿಗೀಗ ಇಪ್ಪತ್ತೇಳು ವರ್ಷಗಳು. ಎರಡು ವರ್ಷಗಳಾಗಿತ್ತು ತಾನು ಎಮ್‌ಎಸ್ಸೀಲಿ ಫಸ್ಟ್ ರ್‍ಯಾಂಕ್ ಪಡೆದು. ಅವನಿಗೆ ತಂದೆ-ತಾಯಿ-ಸಮೀಪದ ಬಂಧುಗಳು ಯಾರೂ ಇರಲಿಲ್ಲ. ಆಸ್ತಿಪಾಸ್ತಿಯೂ ಇರಲಿಲ್ಲ. ಯಾರೋ ಪುಣ್ಯಾತ್ಮರ ದಯೆಯಿಂದ ಓದಿ ದೊಡ್ಡವನಾದ, ಪದವೀಧರನಾದ.

ಎಮ್‌ಎಸ್ಸಿ ಮುಗಿಯುತ್ತಿದ್ದಂತೆ ಇಂಡೋ ಅಮೆರಿಕನ್ ಸಂಸ್ಥೆಯೊಂದರಲ್ಲಿ ಕೆಲಸವೂ ಸಿಕ್ಕಿತು. ಕೈತುಂಬ ಸಂಬಳ ಬರುವ ಕೆಲಸ. ಕೆಲಸ ಮಾಡುತ್ತಲೇ ರಿಸರ್ಚ್ ಮುಗಿಸಿದ. ಯೂನಿವರ್ಸಿಟಿ ಆತನನ್ನು ಪಿ.ಹೆಚ್.ಡಿ ಡಿಗ್ರಿಗೆ ಅರ್ಹನೆಂದು ನಿರ್ಧರಿಸಿತ್ತು. ಮುಂದಿನವಾರ ಇದೇ ದಿನ ತಾನು ಕರೀ ಕೋಟನ್ನು ಧರಿಸಿ ಸ್ಟೇಜ್ ಹತ್ತಿ ಕಾನ್ವೋಕೇಷನ್‌ನಲ್ಲಿ ಡಿಗ್ರಿ ತೆಗೆದುಕೊಳ್ಳುವ ದೃಶ್ಯವನ್ನು ಊಹಿಸಿಕೊಳ್ಳುತ್ತ ಆನಂದ ಪರವಶನಾಗಿ ಡ್ರೈವ್ ಮಾಡುತ್ತಿದ್ದ.

ಮುಂದೆ ಒಂದು ಕಾರು ನಿಧಾನವಾಗಿ ಹೋಗುತ್ತಿತ್ತು. ಕೃಷ್ಣ ಮೋಹನ್ ಕಾರಿನ ಸ್ಪೀಡ್ ಹೆಚ್ಚಿಸಿ ಅದನ್ನು ಓವರ್ ಟೇಕ್ ಮಾಡಿದ. ಮನಸ್ಸು ತುಂಬ ಉಲ್ಲಾಸದಿಂದಿರುವಾಗ ಕಾರು ವೇಗವಾಗಿ ಹೋಗುತ್ತಿದ್ದರೆ ಅದೊಂದು ವಿಶಿಷ್ಟವಾದ ಹಿತವಾದ ಅನುಭವ.

ಕಷ್ಟಗಳು ಎಂದೂ ಒಂದೊಂದಾಗಿ ಬರುವುದಿಲ್ಲ. ಅವು ಒಮ್ಮೆಲೆ ಒಟ್ಟಿಗೆ ನುಗ್ಗಿ ಮನುಷ್ಯನ ಮೇಲೆ ದಾಳಿ ಮಾಡಿ ಅವನ ಬಾಳನ್ನು ನುಚ್ಚು ನೂರಾಗಿಸುತ್ತವೆ ಎನ್ನುತ್ತಾನೆ ಷೇಕ್ಸ್‌ಪಿಯರ್ ಮಹಾಕವಿ.

ಕಷ್ಟಗಳ ವಿಷಯ ಒತ್ತಟ್ಟಿಗಿರಲಿ. ತನ್ನ ಮಟ್ಟಿಗೆ ತನ್ನ ಬಾಳು ಸುಖ ಸಂತೋಷಗಳ ಸಮ್ಮಿಲನವಾಗಿದೆ. ಪಿ.ಹೆಚ್.ಡಿ ಮುಗಿಸುತ್ತಿದ್ದಂತೆ ಕೆಲಸ ಸಿಕ್ಕಿತು. ಕೆಲಸಕ್ಕೆ ಸೇರಿದ ಅಲ್ಪಾವಧಿಯಲ್ಲೇ ತನ್ನ ಸಾಮರ್ಥ್ಯವನ್ನು ಗುರ್ತಿಸಿದ ಮೇನೇಜ್‌ಮೆಂಟ್ ತನಗೆ ಪ್ರಮೋಷನ್ ಕೊಟ್ಟಿದೆ. ಅಲ್ಲದೆ ಹೊಸ ಹುದ್ದೆಯನ್ನು ಯಶಸ್ವಿಯಾಗಿ ನಿರ್ವಹಿಸಲು ಅಮೆರಿಕಾಗೆ ಆರು ತಿಂಗಳ ಕಾಲ ಟ್ರೈನಿಂಗ್ ಪಡೆಯುವುದರ ನೆಪದಲ್ಲಿ ವಿದೇಶಿ ಪ್ರವಾಸ. ಹೀಗಾಗಿ ಮುಂದಿನ ತಿಂಗಳು ಕಳೆದರೆ ತನ್ನ ಅಮೆರಿಕಾ ಪ್ರಯಾಣ. ಸೌಭಾಗ್ಯ ಅನಾಯಾಸವಾಗಿ ಒದಗಿ ಬಂದಿದೆ.

ಬಡತನದಲ್ಲಿ ಹುಟ್ಟಿ ಬೆಳೆದ ತನಗೆ ಇಂಥ ಉನ್ನತ ಹುದ್ದೆ ಲಭಿಸಿದುದು ಯಾರೂ ಕನಸಿನಲ್ಲೂ ಊಹಿಸಲಾರದ ಸಂಗತಿ, ದೂರದಲ್ಲಿರುವ ಕಾಲೇಜಿಗೆ ಬಸ್‌ನಲ್ಲಿ ಹೋಗಲಾರದ ತನಗೆ ವಿದೇಶಕ್ಕೆ ವಿಮಾನದಲ್ಲಿ ಹೋಗುವ ಯೋಗ! ಹೇಗಿದೆ ಅದೃಷ್ಟ! ಸುಪ್ರಿಯ ತುಂಬ ಚಲುವೆ. ಶ್ರೀಮಂತರ ಮನೆಯ ಹೆಣ್ಣು! ಒಡವೆ ವಸ್ತ್ರಗಳಿಗೆ ಕೊರತೆಯಿರಲಿಲ್ಲವೆಂದು ಬೇರೆ ಹೇಳಬೇಕಿಲ್ಲ. ದಿನಕ್ಕೊಂದು ಬೆಲೆ ಬಾಳುವ ಸೀರೆಯುಟ್ಟು ಚಿನ್ನದ ಆಭರಣಗಳನ್ನು ಧರಿಸಿ ಗಂಧರ್ವಕನ್ಯೆಯಂತೆ ಬರುತ್ತಿದ್ದಳು ಕಾಲೇಜಿಗೆ.

ಕೃಷ್ಣ ಮೋಹನ್ ಅವಳನ್ನು ದೂರದಿಂದಲೇ ನೋಡಿ ಅವಳ ಚೆಲುವನ್ನು ನಿಲುವನ್ನು ಮೆಚ್ಚಿಕೊಂಡಿದ್ದನಾಗಲೀ ಒಂದು ದಿನವಾದರೂ ಅವಳೊಡನೆ ಮಾತನಾಡಿರಲಿಲ್ಲ.

ಆದರೆ ಒಂದು ದಿನ ಅವಳ ತಂದೆ ತನ್ನ ಮನೆಗೆ ಬಂದು ತನ್ನ ಪರಿಚಯ ಮಾಡಿಕೊಂಡು ತಮ್ಮ ಮನೆಗೆ ಆಹ್ವಾನಿಸಿದ. ಸುಪ್ರಿಯಳನ್ನು ಅವನಿಗೆ ಕೊಟ್ಟು ಮದುವೆ ಮಾಡಬೇಕೆಂಬ ತನ್ನ ಆಶಯವನ್ನು ತಿಳಿಸಿದ.

ಆ ಮಾತನ್ನು ಕೇಳಿ ಆನಂದದಿಂದ-ಆಶ್ಚರ್ಯದಿಂದ ಅವನ ಬಾಯಿಂದ ಮಾತೇ ಹೊರಡದಂತಾಯಿತು ಕೃಷ್ಣ ಮೋಹನ್‌ಗೆ.

ಮದುವೆಯಾಗುತ್ತಲೇ ಸುಪ್ರಿಯಳೊಡನೆ ಫಾರಿನ್‌ಗೆ ಹೋಗುವ

ಏರ್ಪಾಟುಗಳಾಗುತ್ತಿದ್ದವು. ಮದುವೆಗೆ ಹದಿನೈದು ದಿನಗಳು ಮಾತ್ರ ಉಳಿದಿದ್ದವು. ಅಷ್ಟರಲ್ಲಿ ಸುಪ್ರಿಯ-ಕೃಷ್ಣಮೋಹನ್‌ನರು ಸಿನಿಮಾಗೆ-ಪಿಕ್‌ನಿಕ್‌ಗೆ ಹೋಗಿ ಖುಷಿಯಾಗಿ ಕಾಲ ಕಳೆದರು.

ಇದಕ್ಕಿನ್ನ ಸಂತೋಷಪರವಾದ ಸಂದರ್ಭ ಯಾವುದಿದೆ ಮನುಷ್ಯನ ಜೀವನದಲ್ಲಿ! ಮೋಹನ್‌ಗೆ ಪ್ರಪಂಚ ಅತ್ಯಂತ ಸುಂದರವಾಗಿ ಕಾಣಿಸಿದರಲ್ಲಿ ಆಶ್ಚರ್ಯವೇನಿಲ್ಲ!

ಕಾರು ಅವನ ಕಂಪೆನಿಯ ಕಟ್ಟಡದತ್ತ ಧಾವಿಸುತ್ತಿತ್ತು.

ತಾನು ಸಂತೋಷ ಸಾಗರದಲ್ಲಿ ಮುಳುಗಿ ತೇಲುತ್ತಿದ್ದಾನೆ. ಎದುರಿಗೆ ರಸ್ತೆ ಮೇಲೆ ಐದು ಆರು ವರ್ಷದ ಹುಡುಗಿ ಏನೋ ಹಾಡುಗಳನ್ನು ಗುಂಯ್‌ಗುಟ್ಟುತ್ತಾ ಬೊಂಬೆಗಳೊಡನೆ ಆಡಿಕೊಳ್ಳುತ್ತಿದ್ದಳು ರಸ್ತೆ ಮಧ್ಯದಲ್ಲಿ ಇವನ ಆನಂದ ಇವನಿಗೆ! ಆಡಿಕೊಳ್ಳುತ್ತಿದ್ದ ಆ ಮಗುವಿನ ಆನಂದ ಆ ಮಗುವಿಗೆ!

ಬೋಂಯ್-ಬೋಂಯ್- ಎಂದು ಸತತವಾಗಿ ಮೊಳಗಿತು ಕಾರಿನ ಹಾರನ್ನಿನ ಶಬ್ದ

''ಅಮ್ಮಾ! ಅಮ್ಮಾ!....' ಎಂದು ಕಿರುಚಿತು ಮಗು.

ಅಷ್ಟೇ ಕೀಚ್-ಚ್-ಚ್-ಎಂದು ಶಬ್ದ ಮಾಡುತ್ತಾ ವಿಶ್ರಾಂತಿ ಸ್ಥಿತಿಗೆ ಬಂತು ಕಾರು. ರಕ್ತದ ಮಡುವಿನಲ್ಲಿ ಆ ಮಗುವಿನ ಪುಟ್ಟ ಶರೀರ ನೆನೆದು ಮುದ್ದೆಯಾಗಿತ್ತು!

ಕೃಷ್ಣಮೋಹನ್‌ಗೆ ಹಣೆಯಲ್ಲಿ ಬೆವರಿಟ್ಟಿತು, ಕಾಲು ಕೈಗಳು ನಡುಗುತ್ತಿತ್ತು. ತುಂಬ ಪ್ರಯಾಸ ಪಟ್ಟು ಕಾರಿನ ಬಾಗಿಲು ತೆರೆದು ಕೆಳಗಿಳಿದ.

ಮಗು ನಿಶ್ಚೇಷ್ಟಿತವಾಗಿ ಬಿದ್ದಿತ್ತು, ಪ್ರಾಣವಿದೆಯೋ ಇಲ್ಲವೋ? ಮೆಲ್ಲನೆ ಬಾಗಿ ಮಗುವಿನ ನಾಡಿ ನೋಡುವ ಪ್ರಯತ್ನ ಮಾಡಿದ ನಡುಗುವ ಕೈಗಳಿಂದ ಸಾಧ್ಯವಾಗದೆ ಹೋಯಿತು.

ರಸ್ತೆಯ ಎರಡು ಬದಿಗೂ ದೃಷ್ಟಿ ಹಾಯಿಸಿದ. ನಿರ್ಮಾನುಷ್ಯವಾಗಿತ್ತು. ಆದರೆ ಕೆಲವು ನಿಮಿಷಗಳು ಉರುಳುತ್ತಲೇ ಯಾರಾದರೂ ಆ ಕಡೆ ಬರದೆ ಇರುವುದಿಲ್ಲ. ಸಾರಿಗೆ ರಸ್ತೆಯಾದುದರಿಂದ ವಾಹನಗಳು ಓಡಾಡುವ ಸಾಧ್ಯತೆ ಇದೆ ಎಂದುಕೊಂಡ ಕೃಷ್ಣಮೋಹನ್.

ಈಗೇನು ಮಾಡಬೇಕು? ಎಂಬ ಪ್ರಶ್ನೆ ಬೃಹದಾಕಾರವಾಗಿ ಮನಸ್ಸನ್ನು ಕಾಡತೊಡಗಿತು. ಮೊದಲು ಮಗೂನ್ನ ಕಾರಿನಲ್ಲಿ ಆಸ್ಪತ್ರೆಗೆ ಸಾಗಿಸಬೇಕು. ನಂತರ ಉಳಿದ ವಿಷಯಗಳನ್ನು ಆಲೋಚಿಸಿದರಾಯಿತು ಎಂದುಕೊಂಡ.

ರಕ್ತಸಿಕ್ತವಾಗಿದ್ದ ಆ ಮಗುವಿನ ಶರೀರವನ್ನು ಮೇಲೆತ್ತಲು ಸಿದ್ಧನಾದ, ಅಷ್ಟರಲ್ಲಿ ಮಿಂಚಿನಂತೆ ಮತ್ತೊಂದು ಆಲೋಚನೆ ಅವನನ್ನು ಭಯಭೀತನನ್ನಾಗಿಸಿತು.

ಪೋಲೀಸರು ಬರುತ್ತಾರೆ ತನ್ನನ್ನು ಅರೆಸ್ಟ್ ಮಾಡುತ್ತಾರೆ. ''ಮಕ್ಕಳಿಗೇನು ತಿಳಿಯುತ್ತೆ. ರೋಡ್‌ಕ್ರಾಸ್ ಮಾಡುವಾಗ ಹುಷಾರಾಗಿ ಡ್ರೈವ್ ಮಾಡಬೇಕೂಂತ ನಿನಗೆ ಜ್ಞಾನ ಇಲ್ಲವೇನಯ್ಯ' ಅಂತಾರೆ.

ನಿಜವೆ - ತಾನು ಸ್ವರ್ಗಲೋಕದಲ್ಲಿ ವಿಹರಿಸುತ್ತಾ ಕಾರು ಮಗು ಹತ್ತಿರ ಬರೋವರೆಗೂ ಸುಮ್ಮನಿದ್ದು ಕಾರಿನ ಸ್ಪೀಡನ್ನು ಕಡಿಮೆ ಮಾಡದೆ ಹೋದೆ.

ಮತ್ತೊಮ್ಮೆ ಮಗುವಿನತ್ತ ನೋಡಿದ. ಅದರ ಮೈಯ್ಯೆಲ್ಲ ಕೆಂಪಗೆ ರಕ್ತಮಯವಾಗಿತ್ತು. ಕಣ್ಣುಗಳು ತೆರದೇ ಇದ್ದುವು. ಗಾಜಿನ ಕಣ್ಣುಗಳಂತೆ ನಿರ್ಜೀವವಾಗಿದ್ದುವು.

ರೋಡಿನ ಎರಡು ಬದಿಗೂ ಇನ್ನೊಮ್ಮೆ ನೋಡಿದ ಕೃಷ್ಣಮೋಹನ್. ಯಾರೂ ಇರಲಿಲ್ಲ. ಅದೂ ಊರಾಚೆಯ ಪ್ರದೇಶ. ಮನೆಗಳು ಅಲ್ಲೊಂದು ಇಲ್ಲೊಂದು ದೂರ-ದೂರದಲ್ಲಿದ್ದುವು.

ಆ ಮಗು ಪ್ರಾಣ ಪಂಚಭೂತಗಳಲ್ಲಿ ಲೀನವಾಗಿತ್ತು. ಈಗ ತಾನು ಏನೂ ಮಾಡುವಂತಿರಲಿಲ್ಲ. ಈಗ ತಾನಾಗಿ ತನ್ನ ತಪ್ಪನ್ನು ಹೊರಗೆಡಹಿ ತನ್ನ ಭವಿಷ್ಯವನ್ನು ಹಾಳುಮಾಡಿಕೊಳ್ಳುವುದು ಬುದ್ಧಿವಂತರ ಲಕ್ಷಣವಲ್ಲ ದೂರದಲ್ಲಿ. ಲಾರಿ ಬರುತ್ತಿದ್ದ ಶಬ್ದ ಕೇಳಿಸಿದುದೇ ತಡ ತಟ್ಟನೆ ಕಾರು ಹತ್ತಿ ಸ್ಟಾರ್ಟ್ ಮಾಡಿದ.

ಸತ್ತ ಮಗುವಿನ ಶರೀರ - ಆಡುತ್ತಿದ್ದ ಮಗುವಿನ ಕೈಯಲ್ಲಿದ್ದ ಮಣ್ಣಿನ ಬೊಂಬೆಗಳು ಅವಳ ಮೇಲೆ ಕಾರು ಹಾಯುತ್ತಲೇ ರಭಸವಾಗಿ ಚಿಮ್ಮಿ ದೂರ ಹೋಗಿ ಬಿದ್ದಿದ್ದ ಒಡೆದು ಹೋಗಿದ್ದ ಮಣ್ಣಿನ ಬೊಂಬೆಗಳ ಅವಶೇಷಗಳು ಅವನನ್ನು ಅಣಕಿಸುತ್ತಿದ್ದುವು. ಅವನು ಕಾರು ಹತ್ತಿ ಸ್ಟಾರ್ಟ್ ಮಾಡಿದ. ಕೃಷ್ಣ ಮೋಹನ್‌ನನ್ನು ಹೊತ್ತ ಕಾರು ಕೆಲವೇ ಕ್ಷಣಗಳಲ್ಲಿ ಮರೆಯಾಯಿತು.

★

ತಾನು ಅಂದು ಆಫೀಸಿಗೆ ಹೋಗಲಿಲ್ಲ. ಈಗ ತಾನು ಸ್ವಲ್ಪ ಹೊತ್ತು ಏಕಾಂತವಾಗಿರಬೇಕು. ಉದ್ವಿಗ್ನವಾಗಿರುವ ಮನಸ್ಸನ್ನು ಶಾಂತಗೊಳಿಸಬೇಕು ಎಂದು ಕೊಂಡು ಕಾರನ್ನು ನೇರವಾಗಿ ಮನೆಗೆ ಡ್ರೈವ್ ಮಾಡಿಕೊಂಡು ಬಂದ, ಮನೆ ನಿಶ್ಯಬ್ದವಾಗಿತ್ತು.

ಆ ಮನೆಯ ಕೆಳಭಾಗದಲ್ಲಿ ಮನೆಯ ಮಾಲೀಕರು, ಅಪ್‌ಸ್ಟೇರ್‌ನಲ್ಲಿ ತಾನೂ ಇದ್ದದ್ದು. ನಾಲ್ಕು ದಿನಗಳಿಂದ ಮನೆಯವರೂ ಊರಲ್ಲಿರಲಿಲ್ಲ. ಅದು ಒಂದು ರೀತಿಯಲ್ಲಿ ಒಳ್ಳೆಯದೇ ಆಗಿತ್ತು.

ಕಾರನ್ನು ಗ್ಯಾರೇಜ್‌ನಲ್ಲಿ ಬಿಟ್ಟು ಬರುತ್ತಿದ್ದಾಗ ಗಮನಿಸಿದ ಕಾರಿನ ಟೈರ್ ರಕ್ತವಾಗಿದ್ದುದ್ದನ್ನು. ತನ್ನ ಬಿಳೀ ಪ್ಯಾಂಟ್ ಮೇಲೂ ರಕ್ತದ ಕಲೆಗಳು!

ತೂರಾಡುತ್ತಿದ್ದ ದೇಹವನ್ನು ನಿಯಂತ್ರಿಸಲು ಪ್ರಯತ್ನಿಸುತ್ತ ಒದ್ದೆ ಬಟ್ಟೆಯಿಂದ ಟೈರ್ ಮೇಲಿನ ರಕ್ತದ ಕಲೆಗಳನ್ನು ಒರೆಸಿದ. ನಂತರ ನಲ್ಲಿ ಕೆಳಗೆ ಕಾಲಿಟ್ಟು ಪ್ಯಾಂಟಿನ ಕೆಳಭಾಗವನ್ನು ನೀರಲ್ಲಿ ತೊಳೆದ.

ಬಟ್ಟೆ ಬದಲಿಸಿ ಹಾಸಿಗೆಯ ಮೇಲೆ ಮೈಚೆಲ್ಲಿದ, ಎಲ್ಲೋ ನಿದ್ದೆಯಲ್ಲಿ ನಡೆಯುತ್ತಿರುವಂತಿತ್ತು. ಅವನ ಮನಸ್ಸು ಅವನ ಸ್ವಾಧೀನದಲ್ಲಿರಲಿಲ್ಲ.

ನಿರ್ಜೀವವಾದ ಒಂದು ಜೊತೆ ಕಣ್ಣುಗಳು ಅವನನ್ನೇ ದಿಟ್ಟಿಸುತ್ತಿದ್ದವು. ಅದೇ ಆ ಮಗುವಿನ ಕಣ್ಣುಗಳು! ತನ್ನ ಕಾರಿಗೆ ಸಿಕ್ಕಿ ಸತ್ತ ಮಗು, ಅವಳ ಪಕ್ಕದಲ್ಲಿ ಮುರಿದ ಮಣ್ಣಿನ ಬೊಂಬೆಗಳ ಅವಶೇಷಗಳು ಅವನ ಕಣ್ಣು ಮುಂದೆ ಸುಳಿದವು.

''ಅಮ್ಮಾ!....'' ಎಂದ ಆ ಮಗುವಿನ ಆರ್ತನಾದ ಕಿವಿಗಳಲ್ಲಿ ಗುಂಯ್‌ಗುಡುತ್ತಿತ್ತು.

ಮಗುವನ್ನು ಯಾರಾದರೂ ಆಸ್ಪತ್ರೆಗೆ ಒಯ್ದಿರಬಹುದೆ? ಮಗು ಜೀವದಿಂದಿದೆಯಾ? ಅಥವಾ ಸತ್ತು ಹೋಯಿತೇ?

ಸದ್ಯ ಮಗು ಬದುಕಿಬಿಟ್ಟರೆ ಸಾಕು-ದೇವರೇ! ಎಂದು ಕಾಣದ ದೇವರಲ್ಲಿ ಮೊರೆಯಿಟ್ಟ.

ನಮ್ಮ ಬೇಡಿಕೆಗಳೆಲ್ಲ ಫಲಿಸಿಬಿಟ್ಟರೆ ನಮ್ಮನ್ನು ಹಿಡಿಯುವವರಾರು? ಎಂದುಕೊಂಡ.

ಆದರೆ ನಾನು ಮಾಡಿದ್ದು ಸರಿಯೇ? ಅಮಾನುಷವಾಗಿ ಆ ಮಗುವನ್ನು ಅಲ್ಲೇ ಬಿಟ್ಟು ಓಡಿಹೋದದ್ದು -ತನ್ನ ವರ್ತನೆಗೆ ತನಗೇ ಅಸಹ್ಯವಾಯಿತು. ಮಗು ಪ್ರಾಣದಿಂದಿದೆಯೋ ಇಲ್ಲವೋ?

ಸಾಹಿತ್ಯ ಪ್ರೇಮಿಯ ಪುಣ್ಯ

ಪಾರ್ಟಿ ಜೋರಾಗಿತ್ತು. ಪ್ರಸಿದ್ಧ ಸಾಹಿತಿಗಳು ಚಿತ್ತಾಗಿದ್ದರು. ಅವರನ್ನು ಮನೆ ಮುಟ್ಟಿಸುವ ಕೆಲಸ ಸಾಹಿತ್ಯ ಸೇವಕನೊಬ್ಬನಿಗೆ ವಹಿಸಲಾಯಿತು. ಆತ ನಡು ರಾತ್ರಿಯಲ್ಲೂ ರಿಕ್ಷಾ ಹುಡುಕಿ ತಂದ. ಊರಾಚೆಯ ಪ್ರಸಿದ್ಧ ಸಾಹಿತಿಗಳ ಮನೆ ಮುಂದೆ ರಿಕ್ಷಾ ನಿಂತು ಬಾಗಿಲು ತೆಗೆಸಿ, ಮೂಟೆಯಂತೆ ಬಿದ್ದಿದ್ದವರನ್ನು ಎತ್ತಿ ಒಳಗೆ ಸಾಗಿಸಲಾಯಿತು. ಈ ಕಾರ್ಯದಲ್ಲಿ ಪಾಪ ರಿಕ್ಷಾದವನು ನೆರವಾಗಿದ್ದ. ಬರುತ್ತಾ ಸಾಹಿತಿಗಳ ಮನೆ ಮುಂದಿದ್ದ ಅವರ ಹೆಸರು ನೋಡಿಕೊಂಡಿದ್ದ ಆತ 'ಏನ್ಸಾರ್ ಅವರು ಪ್ರಸಿದ್ಧ ಸಾಹಿತಿಗಳು. ಅಂಥವರ ಮನೆಗೆ ಇಂಥ ಕುಡಿದು ಚಿತ್ತಾಗಿದ್ದ ಮನುಷ್ಯನ್ನ ಹಾಕ ಬಂದಿರಲ್ಲ! ಇದು ಸ್ವಲ್ಪಾನೂ ಸರಿ ಇಲ್ಲ. ಛೀ! ಅವರು ಎಂಥ ದೊಡ್ಡ ಸಾಹಿತಿಗಳು! ಏನು ಕಥೆ!'' ಎಂದೆಲ್ಲ ಲೊಚಗುಟ್ಟಿದ.

ಸಾಹಿತ್ಯ ಪರಿಚಾರಕನಿಗೆ ''ಕುಡಿದು ಚಿತ್ತಾಗಿ ಮೂಟೆಯಂತೆ ಬಿದ್ದಿದ್ದವರೇ ನಿನ್ನ ಪ್ರಸಿದ್ಧ ಸಾಹಿತಿ ಕಣಪ್ಪ'' ಎಂದು ಬಾಯಿ ಬಿಟ್ಟು ಹೇಳಲಾಗದ ಸಂಕಟ. ಹೆಸರು ಮಾತ್ರ ಕೇಳಿ ತಿಳಿದಿದ್ದ ಆ ರಿಕ್ಷಾ ಚಾಲಕ, ಸಾಹಿತಿಗಳ ಮುಖ ನೋಡಿರಲಿಲ್ಲ. ಅದೇ ಪುಣ್ಯ.

ಮತ್ತೆ ಅದೇ ಪ್ರಶ್ನೆ. ತನ್ನ ಕಣ್ಣು ಮುಂದೆ ಅದೇ ನಿರ್ಜೀವವಾದ ಕಣ್ಣುಗಳು ಎದುರು ಬಂದಂತೆ ಭಾಸವಾಯಿತು.

''ಅಮ್ಮಾ'' ಎನ್ನುವ ಪುಟ್ಟ ಜೀವದ ಆಕ್ರಂದನ.

ತಾನು ಹಂತಕ!

ತಾನು ಹಂತಕ! ಎಂದು ಅವನ ಅಂತರಾತ್ಮ ಚೀರಿಟ್ಟಿತು.

ಸಾವು ಬದುಕಿನ ಮಧ್ಯೆ ತೂಗಾಡುತ್ತಿದ್ದ ಆ ಮಗುವನ್ನು ನಿರ್ದಾಕ್ಷಿಣ್ಯವಾಗಿ ಸಾಯಲು ಬಿಟ್ಟ ತನ್ನನ್ನು ಗಿಲ್ಟಿ ಕಾನ್‌ಷನ್ಸ್ ಸುಮ್ಮನೆ ಬಿಡುತ್ತದೆಯೇ? ಪೋಲೀಸ್ ಸ್ಟೇಷನ್‌ಗೆ ಹೋಗಿ ತಾನೇ ಅವರೆಗೆ ಶರಣಾದರೆ..... ಉಹುಂ ಸಾಧ್ಯವಿಲ್ಲ. ತಾನು ಆ ಕೆಲಸ ಮಾಡಲಾರ.

ಪ್ರತಿ ಮನುಷ್ಯನಲ್ಲೂ ದೇವರ-ದಾನವನ ಅಂಶವಿರುತ್ತದೆ. ಕೃಷ್ಣಮೋಹನನ ಮನಸ್ಸಿನಲ್ಲಿ ನಡೆಯುತ್ತಿದ್ದ ಅಂತರ್ ಯುದ್ಧವೂ ಅದೇ ದೈವ ದಾನವ-ಸಂಘರ್ಷಣೆ. ಮಾನಸಿಕ ತೊಳಲಾಟಕ್ಕೆ ಸಿಕ್ಕಿ ಅರೆಜೀವವಾಗಿದ್ದ.

ಮೈಗೆ ಹುಷಾರಿಲ್ಲವೆಂದು ತಾನು ಆಫೀಸಿಗೆ ಬರುವುದಿಲ್ಲವೆಂದು ಫೋನ್ ಮಾಡಿದ.

ನಿತ್ರಾಣನಾಗಿ ಕುರ್ಚಿಯಲ್ಲಿ ಕೂತ. ಅವನಿಗೆ ಕಾಲದ ಪರಿವೆಯೇ ಗೊತ್ತಾಗಲಿಲ್ಲ.

ಸಂಜೆ ಸುಪ್ರಿಯ ಬಂದು ಬಾಗಿಲು ತಟ್ಟಿದಳು. ಅವನು ಬಂದು ಬಾಗಿಲು ತೆರೆಯಲಿಲ್ಲ. ಚಿಲಕ ಹಾಕೇ ಇರಲಿಲ್ಲ. ಬಾಗಿಲನ್ನು ತಳ್ಳಿಕೊಂಡು ಒಳಗೆ ಬಂದಳು ಸುಪ್ರಿಯ.

ನಿಶ್ಚೇಷ್ಟಿತನಾಗಿ ಕೂತಿದ್ದ ಕೃಷ್ಣಮೋಹನ್.

ಒಳಗೆ ಬಂದು ''ಕೃಷ್ಣಾ!'' ಎಂದಳು.

ಕೃಷ್ಣಮೋಹನ್ ಗಾಬರಿಯಿಂದ ಕಣ್‌ತೆರೆದ. ತನ್ನ ಹಣೆಯ ಮೇಲಿದ್ದ ಸುಪ್ರಿಯಳ ಕೈಗಳನ್ನು ಗಟ್ಟಿಯಾಗಿ ಹಿಡಿದುಕೊಂಡ. ಪ್ರವಾಹದಲ್ಲಿ ಕೊಚ್ಚಿ ಹೋಗುತ್ತಿದ್ದವನಿಗೆ ಒಂದು ಆಸರೆ ಸಿಕ್ಕಿದಂತಾಯಿತು.

''ಸುಪ್ರಿಯ! ನನ್ನನ್ನು ಬಿಟ್ಟು ಎಲ್ಲೂ ಹೋಗಬೇಡ ಪ್ಲೀಸ್! ನನ್ನ ಜೊತೇಲೇ ಇರ್ತೀನೀಂತ ನನಗೆ ಪ್ರಾಮಿಸ್ ಮಾಡ್ತೀಯಾ?''

''ಏನಾಯ್ತು? ಏಕೆ ಹೀಗಿದೀರ ಮೋಹನ್?''

ನಡೆದುದನ್ನೆಲ್ಲ ಹೇಳಿ ಬಿಡಬೇಕೆಂಬ ತನ್ನ ಬಯಕೆಯನ್ನು ಆತುರವನ್ನು ನಿಗ್ರಹಿಸಿಕೊಂಡ.

''ಏನಿಲ್ಲ - ಏನಿಲ್ಲ ಸುಪ್ರಿಯ'' ಎಂದು ತಡಬಡಿಸಿದ.

''ಮೋಹನ್ ನಿಮಗೆ ಜ್ವರ ಬಂದಿದೆ ಅಷ್ಟೆ. ಅದಕ್ಕೆ ಇಷ್ಟೊಂದು ತಲೆಕೆಡಿಸಿಕೋತಿದೀರಲ್ಲ. ನನಗೇನೋ ಆಗಿದೇಂತ ಗಾಬರಿಪಡುತ್ತಿದೀರಿ. ಜ್ವರಕ್ಕೆ ಹೀಗಾಗಿದೆ ಅಷ್ಟೆ ಡಾರ್ಲಿಂಗ್! ನಿಮಗೆ ಸ್ವಲ್ಪವೂ ಧೈರ್ಯವಿಲ್ಲ'' ಎಂದು ನಗುತ್ತಾ ಅವನನ್ನು ರಮಿಸಿದಳು.

ಅವನನ್ನು ಬಲಾತ್ಕಾರವಾಗಿ ತನ್ನ ಮನೆಗೆ ಕರೆದುಕೊಂಡು ಹೋದಳು ಸುಪ್ರಿಯ. ಸುಪ್ರಿಯಳ ಮನೆಗೆ ಬಂದರೂ ಪಾಪುವಿನ ಕಣ್ಣುಗಳು ಮಣ್ಣಿನ ಬೊಂಬೆಗಳ ಅವಶೇಷಗಳು ಅವನನ್ನು ಮತ್ತೆ ಕಾಡತೊಡಗಿದವು.

ಅವನ ಪ್ರವರ್ತನೆ ಅವರಿಗೆ ಅರ್ಥವಾಗದೆ ಜ್ವರದ ಪ್ರಭಾವದಿಂದ ಹಾಗಾಗಿದೆ ಎಂದುಕೊಂಡರು ಸುಪ್ರಿಯಳ ತಂದೆ-ತಾಯಿ. ಡಾಕ್ಟರ್ ಬಂದು ಔಷಧಿ ಕೊಟ್ಟು ಹೋದರು.

ಆ ರಾತ್ರಿಯೆಲ್ಲಾ ಕಣ್ಣು ಮುಚ್ಚಲಿಲ್ಲ ಕೃಷ್ಣ ಮೋಹನ್.

ಬೆಳಿಗ್ಗೆ ಎಲ್ಲರೂ ಏಳುವ ಮೊದಲೇ ಎದ್ದು ವರಾಂಡದಲ್ಲಿ ಬಂದು ಕೂತ. ಆ ದಿನದ ಪತ್ರಿಕೆಗಾಗಿ ಕಾಯುತ್ತಾ.

ಒಡ್ಡೋಲಗ ಮತ್ತು ಲಾಸ್

ಅವರೊಬ್ಬರು ಪ್ರಭಾವೀ ಸಾಹಿತಿ. ದಿನಾ ಸಂಜೆ ಒಡ್ಡೋಲಗ. ಬೇರೆ ಸಾಹಿತಿಗಳನ್ನು ಆಡಿಕೊಂಡು ನಗುವುದು. ತಮ್ಮ ಬಗ್ಗೆ ಇತರರ ಮೆಚ್ಚುಗೆ ಆಲಿಸುವುದು ಅಲ್ಲಿ ನಡೆಯುತ್ತಿತ್ತು. ಮರಿ, ಕಿರಿ ಸಾಹಿತಿಗಳಿಗೆ, ಅದರಲ್ಲೂ ಚಮಚಾಗಳಿಗೆ ಭಾರೀ ಸ್ಕೋಪ್.

ಪ್ರಭಾವಿ ನಾಯಕ ಹೇಳಿದ್ದಕ್ಕೆ ತಲೆಯಲ್ಲಾಡಿಸಿ ಒಗ್ಗರಣೆ ಹಾಕುವುದು ಇವರ ಕೆಲಸ. ಇದು ಲಾಭವಿಲ್ಲದೆ ನಡೆಯುತ್ತಾ ಇರಲಿಲ್ಲ. ಅಲ್ಲಿ ಪಾನಕ ಸೇವೆ ಇರುತ್ತಿತ್ತು. ಆ ಸಿನಿಕ ಸಾಹಿತಿಗಳು ಒಂದಿಷ್ಟು ತಮಗಾಗದ ವಿಷಯ ಪ್ರಸ್ತಾಪವಾದರೂ ರೇಗಿಬಿಡುತ್ತಾ ಇದ್ದರು. ಅಂಥ ವಿಷಯ ಪ್ರಸ್ತಾಪಿಸಿದವರನ್ನು ಬಾಯಿಗೆ ಬಂದಂತೆ ಬೈದು ಅವಮಾನಿಸುತ್ತಿದ್ದರು. ತೀರಾ ಸಿಟ್ಟಾಗಿದ್ದರೆ 'ಫೂಲ್..... ಯೂ ಗೆಟ್ ಔಟ್' ಅಂದು ಬಿಡುತ್ತಿದ್ದರು. ಕೆಲವು ಸಲ ತಮ್ಮ ಸಹಾಯಕರನ್ನು ಕರೆದು 'ಅವನ್ನ ಹೊರಗೆ ಕಳಿಸು' ಅನ್ನುವುದೂ ಇತ್ತು.

ಈಗ ಒಡ್ಡೋಲಗ ಬಂದಾಗಿದೆ. ಅನಾರೋಗ್ಯವೇ ಇದಕ್ಕೆ ಕಾರಣ. ತಾವು ಪಾನಕ ಸೇವೆ ನಿಲ್ಲಿಸಿರುವುದಾಗಿ ಬಹಿರಂಗ ಘೋಷಣೆ ಮಾಡಿಕೊಂಡಿರುವ ಅವರೀಗ ಗುಟ್ಟಾಗಿ ಆಗಾಗ ಪಾನ ನಿರತರಾಗಿದ್ದು ಉಂಟು. ಈಗಂತೂ ಅದೂ ಸಾಧ್ಯವಿಲ್ಲ.

ಒಡ್ಡೋಲಗದಲ್ಲಿ ಹಾಜರಿರುತ್ತಿದ್ದ ಮರಿ, ಕಿರಿ ಸಾಹಿತಿಗಳಿಗೆ ಮಾತ್ರ ಇದು ಭಾರೀ ಲಾಸ್.

ಪೇಪರಿನ ಮೊದಲ ಪುಟದಲ್ಲೇ ಪ್ರಕಟವಾಗಿತ್ತು. ತನಗೆ ಬೇಕಾಗಿದ್ದ ಸುದ್ದಿ. ಅದರ ವಿವರ ಹೀಗಿತ್ತು.

''ನೆನ್ನೆ ಬೆಳಿಗ್ಗೆ ರಸ್ತೆಯಲ್ಲಿ ಕಾರಿನ ಕೆಳಗೆ ಬಿದ್ದು ಹೋದ ಐದು ವರ್ಷದ ಹೆಣ್ಣು ಮಗು ರಾತ್ರಿ ಆಸ್ಪತ್ರೆಯಲ್ಲಿ ಸತ್ತು ಹೋಯಿತು. ವಿಪರೀತವಾಗಿ ರಕ್ತಸ್ರಾವವಾದುದರಿಂದ ಮಗು ಸತ್ತಿತು ಎಂದು ಅಧಿಕೃತವಾಗಿ ತಿಳಿದು ಬಂದಿದೆ. ಪ್ರಜ್ಞಾಶೂನ್ಯವಾಗಿ ಬಿದ್ದಿದ್ದ ಮಗುವನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾನೆ ಡ್ರೈವರ್ ಕಾರಿನ ಸಮೇತ. ಪಾಪ! ಆ ಮಗುವಿನ ತಾಯಿ ವಿಧವೆ. ತನ್ನ ಮಗುವಿನ ಮರಣದ ದುಃಖವನ್ನು ಸಹಿಸಲಾರದೆ ಹೃದಯಸ್ತಂಭನದಿಂದ ಸತ್ತು ಹೋದಳು. ಇಂತಹ ಘೋರಕೃತ್ಯವೆಸಗಿ ಪರಾರಿಯಾದ ಆ ವ್ಯಕ್ತಿಗಾಗಿ ಅವನ ಕಾರಿಗಾಗಿ ಪೋಲೀಸ್ ಸಿಬ್ಬಂದಿಯಿಂದ ತೀವ್ರವಾದ ಶೋಧನೆಗಳು ನಡೆಯುತ್ತಿವೆ ಎಂದು ನಮಗೆ ಅಧಿಕೃತವಾಗಿ ತಿಳಿದುಬಂದಿದೆ'' ಎಂದು ಪ್ರಕಟವಾಗಿತ್ತು.

ಕೃಷ್ಣಮೋಹನನ ಕೈಲಿದ್ದ ಪೇಪರ್ ಜಾರಿ ಕೆಳಗೆ ಬಿತ್ತು. ಭೀಕರ ಪ್ರವಾಹದಲ್ಲಿ ತಾನು ಕೊಚ್ಚಿಹೋದಂತಾಯಿತು.

ಪಾಪೂ! ನಾನು ಹಂತಕ! ನಿನ್ನನ್ನೆ ಅಲ್ಲದೆ ನಿನ್ನ ತಾಯಿಯನ್ನೂ ಕೊಂದ ಪಾಪಿ! ಎಂದು ಅವನ ಆತ್ಮ ಚೀರಿಟ್ಟಿತು.

ತನಗಾಗಿ ಪೋಲೀಸರು ಹುಡುಕುತ್ತಿರುವ ರೆಂಬ ಸುದ್ದಿ ತಿಳಿದು ಅವನಿಗೆ ಅದೇಕೋ ಸಂತೋಷವಾಯಿತು. ತನ್ನ ತಪ್ಪಿಗೆ ತನ್ನ ಅಂತರಾತ್ಮ ವಿಧಿಸುತ್ತಿರುವ ಶಿಕ್ಷೆ ತುಂಬ ಕಡಿಮೆ ಎನಿಸಿತು.

ತಪ್ಪು ಮಾಡುವುದು ಮಾನವ ಸಹಜ. ಅದಕ್ಕೆ ಶಿಕ್ಷೆ ವಿಧಿಸಬೇಕಾದುದು ಕಾನೂನಿನ ಧರ್ಮ. ಆದರೆ ಮನುಷ್ಯ ತಾನು ಮಾಡಿದ ತಪ್ಪಿಗೆ ಕಾನೂನಿನಿಂದ ತಪ್ಪಿಸಿಕೊಳ್ಳಬಹುದು. ಆದರೆ... ಮನೋಘರ್ಷಣೆಯಿಂದ ತಪ್ಪಿಸಿಕೊಳ್ಳುವುದು ಹೇಗೆ ಸಾಧ್ಯ?

''ಪಾಪೂ! ನಿನ್ನನ್ನು ತಕ್ಷಣ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರೆ ನಿನ್ನ ಪ್ರಾಣ ಉಳೀತಿತ್ತೋ ಏನೋ!! ಯಾರು ಬಲ್ಲರು?''

ಯಾರೂ ಉತ್ತರಿಸಲಾರದ ಪ್ರಶ್ನೆ ಅದು. ತಾನು ಬದುಕಿರುವಷ್ಟು ಕಾಲ ತನ್ನ ಜೀವ ಹಿಂಡುವ ಪ್ರಶ್ನೆ ಅದು. ತಾನೇ ಪೋಲೀಸ್ ಸ್ಟೇಷನ್‌ಗೆ ಹೋಗಿ ನಡೆದುದನ್ನು ತಿಳಿಸಿ ಶಿಕ್ಷೆಗೆ ಗುರಿಯಾದರೆ ತನಗೆ ಸ್ವಲ್ಪವಾದರೂ ಮನಶ್ಶಾಂತಿ ಸಿಗಬಹುದೇನೊ!

ಆದರೆ.... ಆದರೆ....

ತಾನು ತನ್ನ ಬಾಳಿನುದ್ದಕ್ಕೂ ಜೈಲಿನ ಗೋಡೆಗಳ ಮಧ್ಯೆ ಕೊಳೆತರೂ ಆ ಮಗು ಮತ್ತೆ ಜೀವ ತಾಳಿ ಬರಲಾರದು. ಆ ಮಗುವಿನ ತಾಯಿ ಈ ಪ್ರಪಂಚಕ್ಕೆ ಮತ್ತೆ ಹಿಂತಿರುಗಿ ಬರಲಾರಳು.

ತನ್ನ ಬಾಳ ಪುಷ್ಪವನ್ನು ತಾನೇ ಹೊಸಕಿ ಹಾಕುವುದು ಬುದ್ಧಿ ಇರುವವರು ಮಾಡುವ ಕೆಲಸವಲ್ಲ. ನಡೆದುದನ್ನು ಮರೆತು ಹೋಗುವುದಕ್ಕೆ ಪ್ರಯತ್ನಿಸುವುದು ಒಳ್ಳೆಯದು.

ಆದರೆ -

ಮಗು!

ಕೆಲವೇ ಕ್ಷಣಗಳಲ್ಲಿ ತಾನು ಆ ಪುಟ್ಟ ಜೀವವನ್ನು ಆಹುತಿ ತೆಗೆದುಕೊಂಡ ಆಕ್ಸಿಡೆಂಟ್ ಸಂಭವಿಸಿತು. ಅದನ್ನು ತಪ್ಪಿಸುವುದು ಯಾರಿಂದಲೂ ಸಾಧ್ಯವಿರಲಿಲ್ಲ ನಿಜ. ಆದರೆ ತಾನು ಸಾಯುತ್ತಾ ಕೊನೆಯುಸಿರೆಳೆಯುತ್ತಿದ್ದ

ಮಗುವನ್ನು ನೋಡಿಯೂ ಅದನ್ನು ಆ ಸ್ಥಿತಿಯಲ್ಲಿ ಬಿಟ್ಟು ಬಂದದ್ದು ತನ್ನ ಸ್ವಯಂಕೃತ ಅಪರಾಧವಲ್ಲದೆ ಮತ್ತೇನು?

ಎಲ್ಲ ಪ್ರಶ್ನೆಗಳು!

ಉತ್ತರಿಸಲಾರದ ಪ್ರಶ್ನೆಗಳು! ಪ್ರಶ್ನೆಗಳ ಶರಪಂಜರದಲ್ಲಿ ತಾನು ಸಿಕ್ಕಿಹಾಕಿಕೊಂಡಿದ್ದಾನೆ-ಹೊರಗೆ ಬರಲಾರದೆ. ಆ ಮಗುವಿನ ಬೊಂಬೆಗಳು ಆ ದೃಶ್ಯವೇ ತನ್ನ ಕಣ್ಣುಗಳ ಮುಂದೆ ಸುಳಿದು ತನ್ನನ್ನು ಕಾಡುತ್ತಿದೆ.

ಅವನ ಮಾನಸಿಕ ಘರ್ಷಣೆಯನ್ನು ಅರ್ಥಮಾಡಿಕೊಳ್ಳಲಾರದೆ ದುಃಖ ತಪ್ತರಾಗಿದ್ದಾರೆ - ಸುಪ್ರಿಯ ಅವಳ ತಂದೆ ತಾಯಿಗಳು.

ಕೃಷ್ಣಮೋಹನ್ ಆಫೀಸಿಗೆ ಹೋಗುವುದನ್ನೂ ಬಿಟ್ಟು ಬಿಟ್ಟಿದ್ದ. ಒಂದು ವಾರ ಉರುಳಿತು.

ಪಿ.ಹೆಚ್.ಡಿ. ಡಿಗ್ರಿ ತೆಗೆದುಕೊಳ್ಳುವ ದಿನ ಬಂತು. ಆ ಸಂಜೆ ಯೂನಿವರ್ಸಿಟಿ ಕಲಾಭವನದಲ್ಲಿ ವಿಶೇಷ ಘಟಿಕೋತ್ಸವವಿತ್ತು.

ಬೆಳಿಗ್ಗೆಯೇ ಬಂದರು ಅವನ ಗೆಳೆಯರು. ಮತ್ತೆ ಕೆಲವರು ಕಾನ್ವೋಕೇಷನ್ ಕಾರ್ಯಕ್ರಮ ಮುಗಿದ ಮೇಲೆ ಕೃಷ್ಣಮೋಹನ್‌ಗೆ ಡಿನ್ನರ್ ಪಾರ್ಟಿ ಏರ್ಪಡಿಸಿದ್ದರು.

ನಿರಾಸಕ್ತಿಯಿಂದ ಕೂಡಿದ್ದ ಅವನ ವರ್ತನೆ ಅವರ ಪಾಲಿಗೆ ಒಗಟಾಗಿತ್ತು. ತನಗೆ ಮೈಯಲ್ಲಿ ಹುಷಾರಿಲ್ಲವೆಂದು ತಾನು ಘಟಿಕೋತ್ಸವಕ್ಕೆ ಬರಲಾರೆನೆಂದು ಹೇಳುತ್ತಲೇ ಬಂದಿದ್ದ ಗೆಳೆಯರು ಹೊರಟು ಹೋದರು. ನಿಜಸಂಗತಿ ಏನೆಂದು ತಿಳಿಸಲು ಒತ್ತಾಯ ಮಾಡಿದಳು ಸುಪ್ರಿಯ.

ಅವನೇನೂ ಹೇಳಲಿಲ್ಲ. ಅವನ ನೋಟ ಬಾಣ ತಗುಲಿದ ಪಕ್ಷಿಯನ್ನು ನೆನಪಿಸುತ್ತಿತ್ತು. ಮತ್ತೆ ಅವನನ್ನು ಏನೂ ಪ್ರಶ್ನಿಸಲಿಲ್ಲ ಸುಪ್ರಿಯ ಆ ಸಂಜೆ ಬಲಾತ್ಕಾರ ಮಾಡಿ ಅವನನ್ನು ಕಾರಿನಲ್ಲಿ ಯೂನಿವರ್ಸಿಟಿ ಕಲಾಭವನಕ್ಕೆ ಕರೆದೊಯ್ದಳು.

ಡಿಗ್ರಿ ತೆಗೆದುಕೊಳ್ಳುವ ಪದವೀಧರರೆಲ್ಲಾ ಕಪ್ಪುಕೋಟು-ಕ್ಯಾಪು ಧರಿಸಿ-ಮುಂದಿನ ಸಾಲಲ್ಲಿ ಕೂತಿದ್ದರು. ಎಲ್ಲರಲ್ಲೂ ಉತ್ಸಾಹ ತುಂಬಿ ತುಳುಕಾಡುತ್ತಿತ್ತು. ಕೃಷ್ಣ ಮೋಹನನ ವಿನಹ.

ಸ್ಟೇಜ್ ಮೇಲೆ ಅನೇಕ ಹಿರಿಯರ ವಿದ್ವತ್‌ಪೂರ್ಣ ಭಾಷಣಗಳು ನಡೆದವು. ಕೃಷ್ಣಮೋಹನ್‌ಗೆ ಅಲ್ಲಿ ಕೂಡುವುದು ತುಂಬ ಕಷ್ಟವಾಯಿತು. ಅವನು ತಟ್ಟನೆ ಹೊರಗೆ ಎದ್ದು ಬಂದುದನ್ನು ಯಾರೂ ಗಮನಿಸಲಿಲ್ಲ.

ಹೊರಗೆ ಬಂದವನು ಸುತ್ತಲೂ ನೋಡಿದ. ತನ್ನನ್ನು ಸುಪ್ರಿಯ ಅಥವಾ ತನ್ನ ಮಿತ್ರರು ನೋಡುವರೇನೊ ಎಂದು ಅನುಮಾನಿಸುತ್ತಲೇ ಹಿಂತಿರುಗಿ ನೋಡದೆ ಬಹಳ ದೂರ ನಡೆದುಬಿಟ್ಟ.

ಎಲ್ಲಿಗೆ ಹೋಗುತ್ತಿರುವನೆಂಬುದು-ಏಕೆ ಹಾಗೆ ಹೋಗುತ್ತಿರುವನೆಂಬುದು ಅವನಿಗೇ ತಿಳಿಯದು.

ಅವನಿಗೆ ತಿಳಿದಿದ್ದುದು ಇಷ್ಟೆ, ತಾನು ಸ್ಟೇಜ್ ಹತ್ತಿ ಡಾಕ್ಟರೇಟು ಡಿಗ್ರಿ ತೆಗೆದುಕೊಳ್ಳುವ ಗೌರವಕ್ಕೆ ಅನರ್ಹ ಎಂದು - ಅಲ್ಲದೆ ಸುಪ್ರಿಯಳ ಗಂಡನಾಗುವ ಅರ್ಹತೆಯೂ ತನಗೆ ಇಲ್ಲವೆಂದು.

ಎಲ್ಲೋ ಒಂದು ಭಾವಗೀತೆ ಕೇಳಿ ಬರುತ್ತಿತ್ತು. ಮೈಕಿನಲ್ಲಿ ಅದರ ಭಾವಾರ್ಥ ಹೀಗಿತ್ತು.

''ಸುಂದರವಾದ ಬಾಳು - ಗಾಜಿನ ಅರಮನೆ ಇದ್ದಂತೆ. ಅದಕ್ಕೆ ಒಂದೇ ಒಂದು ಸಣ್ಣ ಕಲ್ಲು ಬಲವಾಗಿ ತಾಕಿದರೆ ಸಾಕು ಗಾಜಿನ ಅರಮನೆ ನುಚ್ಚು ನೂರಾಗಲು''

ಯಾವುದೊ ಬಸ್ಸು ಬಂತು. ಹತ್ತಿದ. ತನಗಿಷ್ಟ ಬಂದ ಕಡೆ ಇಳಿದ. ಸುತ್ತಲೂ ನೋಡಿದ. ಟ್ಯಾಂಕ್ ಬಂಡ್ ಮೇಲಿದ್ದ ಪೋಲೀಸ್ ಸ್ಟೇಷನ್ ಮುಂದೆಯೇ ಇಳಿದಿದ್ದ.

ಪೋಲೀಸ್ ಸ್ಟೇಷನ್?

ಹೌದು ತಾನು ಹೋಗಬೇಕಾದದ್ದು ಅಲ್ಲಿಗೆ! ತಾನು ಮಾಡಿದ ತಪ್ಪನ್ನು ಒಪ್ಪಿಕೊಂಡು ಶಿಕ್ಷೆಯನ್ನು ಅನುಭವಿಸಬೇಕು. ಅದು ತಪ್ಪಿದುದಲ್ಲ. ಹಿಂದಿನಂತೆ ಏನೂ ನಡೆಯಲಿಲ್ಲ ಎಂದು ಬಾಳುವುದು ಮಾತ್ರ ತನ್ನಿಂದ ಸಾಧ್ಯವಿಲ್ಲ.

''ನಾನು ಯಾವ ಶಿಕ್ಷೆ ಅನುಭವಿಸಿದರೂ ನೀನು ಮಾತ್ರ ಸಮಾಧಿಯಿಂದ ಎದ್ದು ಬರುವುದಿಲ್ಲ ಪಾಪೂ!'' ಎಂದು ಚೀರಿಟ್ಟಿತು ಅವನ ಹೃದಯ. ನಿಮ್ಮ ತಾಯಿಯನ್ನ ಕೊಂದವನೂ ನಾನೇ ಪಾಪೂ! ಸಮಾಜದಲ್ಲಿ ನನಗಿರುವ ಉನ್ನತ ಸ್ಥಾನವನ್ನು ಎಲ್ಲಿ ಕಳೆದುಕೊಳ್ಳುವೆನೋ ಎಂದು ಭಯದಿಂದ ನಿನ್ನನ್ನು ಅಲ್ಲೇ ಬಿಟ್ಟು ಬಂದೆ'' ಎಂದುಕೊಂಡ.

ಆದರೆ ಪೋಲೀಸ್ ಸ್ಟೇಷನ್‌ನೊಳಗೆ ಹೆಜ್ಜೆ ಇಡಲಾರದೆ ಹೋದ, ಪ್ರಶ್ನೆಗಳು-ಉತ್ತರಗಳು, ಕೋರ್ಟ್, ಹಿಯರಿಂಗ್ಸ್, ಆರ್ಡರ್ಸ್ ಸಾರ್ವಜನಿಕವಾಗಿ ಹತ್ತು ಜನರ ಮುಂದೆ ತಾನು ಅಪರಾಧಿಯಾಗಿ ತಲೆ ತಗ್ಗಿಸಿಕೊಂಡು ಕಟಕಟೆಯಲ್ಲಿ ನಿಲ್ಲುವುದು ಇದನ್ನೆಲ್ಲ ಅನುಭವಿಸಲು ಅವನು ಸಿದ್ಧನಿರಲಿಲ್ಲ. ತನ್ನ ಹೃದಯಕ್ಕಾಗುತ್ತಿದ್ದ ಆವೇದನೆಯನ್ನು ತಡೆದುಕೊಳ್ಳಲಾರದೆ ಹೋದ.

ಪಾಪೂ! ನಾನು ಈ ಸಮಾಜದ ಜನರ ಮಧ್ಯೆ ಇರಲಾರೆ ಪಾಪೂ! ನಾ.... ನೂ..... ನಿನ್ನ.... ಬ..... ಳಿ.... ಗೆ.... ನಿನ್ನ ತಾಯಿಯ ಬಳಿಗೆ.... ಬರ್ತೀನಿ ಪಾಪೂ! ಎಂದು ಗಟ್ಟಿಯಾಗಿ ಕಿರುಚುತ್ತ ರೆಯಿಲಿಂಗ್ ಆಚೆ ತನ್ನ ಕಾಲುಗಳನ್ನಿಟ್ಟು ಧುಮುಕಿದ.

ಅಷ್ಟೆ ಹುಸೇನ್‌ಸಾಗರದ ನೀರಲ್ಲಿ ಬಿದ್ದ ಅವನ ದೇಹ ಹಲವು ಬಾರಿ ಮುಳುಗಿ ತೇಲಿತು. ಅವನು ನೀರಿನ ಪಾಲಾಗಿ ಸಾವನ್ನಪ್ಪುವ ಕೊನೆಯ ಕ್ಷಣದಲ್ಲಿ ಅವನ ಕಣ್ಣುಗಳ ಮುಂದೆ ಸುಳಿದ ದೃಶ್ಯವೆಂದರೆ ರಕ್ತದ ಮಡುವಿನಲ್ಲಿ ಬಿದ್ದಿದ್ದ ಮಗು, ರಸ್ತೆಯ ಮೇಲೆ ಚಲ್ಲಾಪಿಲ್ಲಿಯಾಗಿ ಬಿದ್ದಿದ್ದ ಒಡೆದು ಹೋದ ಮಣ್ಣಿನ ಬೊಂಬೆಯ ಅವಶೇಷಗಳು!! ■

ಈಶಾನ್ಯದ ವಿಮಾನ ನಿಲ್ದಾಣಗಳಿಗೆ ಆನೆ ಕಾಟ. ಸೈನ್ಯದ ವಶದಲ್ಲಿರುವ ತೇಜಪುರ ವಿಮಾನ ನಿಲ್ದಾಣ ಹಾಗೂ ಗುವಹಾತಿಯ ನಾಗರಿಕ ಬಳಕೆಯ ವಿಮಾನ ನಿಲ್ದಾಣಕ್ಕೆ ರಾತ್ರಿಯಾದರೆ ಈ ಕಾಡಾನೆಗಳು ಬಂದು ಇಳಿಯುತ್ತವೆ. ಆಗ ವಿಮಾನ ಹೊರಡಿಸುವುದು, ವಿಮಾನ ಇಳಿಸುವುದು ಸಾಧ್ಯವೇ ಆಗದ ಸ್ಥಿತಿ. ಕೆಲವು ಸಲ ನಾಗರಿಕರು ವಿಮಾನ ಏರಿ ಕುಳಿತು ತಾಸುಗಳು ಕಳೆದರೂ ಈ ಆನೆಗಳಿಂದಾಗಿ ವಿಮಾನ ಮೇಲೇರುವುದೇ ಇಲ್ಲ. ಆನೆ ಕಾಟದಿಂದ ಬೇಸತ್ತ ಅವರೀಗ, ಗ್ಯಾರೋ ಬೆಟ್ಟದಿಂದ ಇಳಿದು ಬರುವ ಆನೆಗಳ ಹಿಂಡು ಹಿಡಿದು ಹಾಕಲು ನಿರ್ಧರಿಸಿದ್ದಾರೆ. ಅದಕ್ಕೆ ಕೇಂದ್ರ ಸರ್ಕಾರದ ಅನುಮತಿಗಾಗಿ ಕಾಯುತ್ತಾ ರಾಜ್ಯ ಸರ್ಕಾರ ಕುಳಿತಿದೆ.

★

ಒಂಟೆಗಳ ಸೈನ್ಯವೂ ಉಂಟು. ರಾಜಾಸ್ಥಾನ ಗಡಿ ಸೈನಿಕರಿಗೆ ಇವು ಬೇಕೇ ಬೇಕು. ಆಹಾರ, ನೀರು ಹೊರಲು ಒಂಟೆಗಳಿಂದ ಮಾತ್ರ ಅಲ್ಲಿ ಸಾಧ್ಯ. 1965ರಲ್ಲಿ ಮೊದಲು ಒಂಟೆಗಳನ್ನು ಸೈನ್ಯಕ್ಕೆ ಸೇರಿಸಿಕೊಳ್ಳಲಾಯಿತು. ಅವಕ್ಕೆ ಅಗತ್ಯ ತರಬೇತಿ ಕೂಡ ನೀಡಲಾಗುತ್ತದೆ.

ಬೇರೆ ಕಡೆಗಳಿಂದ ಇಲ್ಲಿಗೆ ವರ್ಗವಾಗಿ ಬರುವ ಸೈನಿಕರಿಗೆ ಮೊದಲು ಒಂಟೆಗಳ ನಿರ್ವಹಣೆಗೆ ತರಬೇತಿ ನೀಡಲಾಗುತ್ತದೆ.

ಏನೇ ಆದರೂ ಚಳಿಗಾಲದಲ್ಲಿ ಒಂಟೆಗಳು ಮೊಂಡು ಬೀಳುತ್ತವೆ.ಯಮ ಸಾಹಸ ಮಾಡಿದರೂ ಕೆಲಸ ಮಾಡುವುದಿಲ್ಲ. ಜಾಸ್ತಿ ರೋಫ್ ಹಾಕಿದರೆ, ಎಬ್ಬಿಸಲು ಬಂದವರನ್ನೇ ಹಿಡಿದು ಕಚ್ಚುತ್ತವೆ. ಕೆಲವು ಸಲ ಒಂಟೆ ಕಡಿತದಿಂದ ಸತ್ತ ಉದಾಹರಣೆಗಳೂ ಉಂಟು.

★

ಲಖನೌದಲ್ಲಿ ಪ್ರಧಾನಿ ವಾಜಪೇಯಿ ಮನೆ ಇದೆ. ಅಲ್ಲಿದ್ದ ಟೆಲಿಫೋನ್ ಬಿಲ್ ಪಾವತಿ ಆಗಿರಲಿಲ್ಲ.ಇಲಾಖೆಯವರು ನೇರವಾಗಿ ಸಂಪರ್ಕ ಕತ್ತರಿಸಿ ಹಾಕಿದರು. ಯಾಕೆಂದರೆ ಕಲ್ಯಾಣ್‌ಸಿಂಗ್ ಆಗ ಉತ್ತರ ಪ್ರದೇಶದ ಮುಖ್ಯಮಂತ್ರಿ. ತಮ್ಮ ಆಳ್ವಿಕೆಯ ಕೊನೇ ದಿನಗಳಲ್ಲಿ, ಪ್ರಧಾನಿ ಬಗ್ಗೆ ಕೆಂಡ ಕಾರುತ್ತಾ, ಇಂಥದೊಂದು ಪ್ರಯೋಗಕ್ಕೂ ಮುಂದಾದರು. ಆದರೆ ಅವರು ಕೆಳಗಿಳಿದು ರಾಂ ಪ್ರಕಾಶ್ ಗುಪ್ತಾ ಗದ್ದುಗೆ ಏರಿದರು. ಇಲಾಖೆ ನೌಕರರು ಸದ್ದಿಲ್ಲದೇ ಹೋಗಿ ಸಂಪರ್ಕ ಮತ್ತೆ ಕೂಡಿಸಿದರು. ರಾಜನ ಮರ್ಜಿಯಂತೆ ವರ್ತಿಸುವುದು ಪ್ರಜೆಗಳಿಗೇ ಕ್ಷೇಮ ಅಲ್ಲವೇ? ■

ಐವರು ಅಪಹರಣಕಾರರು





ಇಬ್ರಾಹಿಂ ಅಥರ್



ಶಾಹಿದ್ ಅಖ್ತರ್ ಸೈಯದ್



ಸನ್ನಿ ಅಹ್ಮದ್ ಖಾಜಾ



ಮಿಸ್ತ್ರಿ ಝುಹರ್ ಇಬ್ರಾಹಿಂ



ಶಕೀರ್

ಹೈಜಾಕ್

ಪಾಕ್ ಉಗ್ರಗಾಮಿಗಳ ವಿಮಾನ ಅಪಹರಣ ಪ್ರಕರಣ ಈಗ ಹಳೆಯ ವಿಷಯ. ಆದರೆ ಈ ಹೈಜಾಕ್ ನಾಟಕ ಕುರಿತಂತೆ ಅನೇಕರಿಗೆ ಗೊತ್ತಿಲ್ಲದ ಹಲವು ಸತ್ಯಗಳು ಇಲ್ಲಿವೆ.

ಹೈಜಾಕ್ ಪ್ರಕರಣ ಹೊಸದೇನಲ್ಲ. 1971ರಿಂದ ಹದಿನಾರು ಇಂಥ ಪ್ರಕರಣ ನಡೆದಿವೆ. . ಕಾಲೇಜಿನ ವ್ಯವಸ್ಥೆ ಸುಧಾರಿಸಬೇಕೆಂದು ಒತ್ತಾಯಿಸಿದ್ದು, ತಕ್ಷಣ ರಾಮ ಮಂದಿರ ನಿರ್ಮಾಣ ಕೈಗೆತ್ತಿಕೊಳ್ಳಲು, ಅಮೃತ್ ಸರದ ಸುವರ್ಣ ದೇಗುಲದಿಂದ ಸೈನ್ಯ ವಾಪಸು ಕರೆಸಲು,.. ಹೀಗೆ ನಾನಾ ಕಾರಣಗಳಿಗಾಗಿ ವಿಮಾನ ಅಪಹರಣಗಳು ನಡೆದಿವೆ.

ಇವು ಕೇವಲ ಮಾಹಿತಿಯಾಗಿ ನಮಗೆ ಕಾಣುತ್ತವೆ. ಅನುಭವಿಸಿದ ಪ್ರಯಾಣಿಕರಿಗೆ? ಸ್ವರಾಜ್ ಕೌಶಲ್ ಒಬ್ಬ ವಕೀಲರು. ಹದಿನಾರು ವರ್ಷದ ಹಿಂದೆ ಸಿಖ್ ಉಗ್ರಗಾಮಿಗಳು ದುಬೈಗೆ ಅಪಹರಿಸಿ ಕೊಂಡೊಯ್ದ ವಿಮಾನದಲ್ಲಿ ಆತ ಇದ್ದರು. ಇಪ್ಪತ್ನಾಲ್ಕು ತಾಸುಗಳಲ್ಲಿ ಅವರು ಬಿಡುಗಡೆ ಆಗಿದ್ದರು. ಅಷ್ಟು ಕಾಲ ವಿಮಾನದ ಸಿಂಥೆಟಿಕ್ ಸೀಟಿನಲ್ಲಿ ಕುಳಿತೇ, ಅಂಡಿನ ಮೇಲೆ ಗುಳ್ಳೆಗಳು ಎದ್ದಿದ್ದವು. ಅವು ವಾಸಿ ಆಗಲು ಆರು ತಿಂಗಳು ಬೇಕಾಯಿತು. ಈಗಲೂ ಅವರಿಗೆ ಒಂದೇ ಸ್ಥಿತಿಯಲ್ಲಿ ಬಹಳ ಕಾಲ ಕೂರುವುದು ಸಾಧ್ಯವಾಗುವುದಿಲ್ಲ.


ಇನ್ನು ಎಂಟು ದಿನ ವಿಮಾನದ ಕಕ್ಕಸು ವಾಸನೆ, ಮುಗ್ಗಿದ ಗಾಳಿಯಲ್ಲಿ ಕುಳಿತು ಕಳೆದ ಪ್ರಯಾಣಿಕರ ಸ್ಥಿತಿ ಏನಾಗಿರಬಹುದು ಯೋಚಿಸಿ.

ಕೌಶಲ್ ಜೊತೆ ಅಂದು ಇದ್ದ ಬಹಳಷ್ಟು ಪ್ರಯಾಣಿಕರು ಮತ್ತೆ ವಿಮಾನ ಏರಿಲ್ಲ. ಇವರಿಗೂ ಅಂಥದ್ದೇ ಭಯ. ಅವನ್ನು ನಿವಾರಿಸಿಕೊಳ್ಳಲೆಂದೇ ಅವರು ಅಪಹರಣದಿಂದ ಬಿಡುಗಡೆಯಾದ ನಂತರ ಗಟ್ಟಿ ಮನಸ್ಸು ಮಾಡಿ ವಿಮಾನದಲ್ಲಿ ಚಂಡೀಗಢಕ್ಕೆ ಪ್ರಯಾಣಿಸಿದರು. ಆಗಿಂದ ಕೊಂಚ ಪರವಾಗಿಲ್ಲ.

ಹೀಗೆ ಪಾರಾಗಿ ಬಂದವರ ಕತೆ ಈ ರೀತಿಯಾದರೆ, ಬದುಕಿ ಬಂದೂ ಜೀವಂತ ಶವದಂತಾದವರ ಕತೆ ಬೇರೆಯೇ ರೀತಿಯದು. ಮದುವೆಯಾದ ತಿಂಗಳೊಳಗೇ ವಿಧವೆಯಾದ ಇಪ್ಪತ್ತರ ಹುಡುಗಿ ರಚನಾ ಕಟ್ಯಾಲ್‌ಳ ಬದುಕು ಹೇಗಿರಬಹುದು!

ತಪ್ಪು ಯಾರದು ?

ಕಠ್ಮಂಡು ಪಾಕಿಸ್ತಾನದ ಅನೈತಿಕ ಚಟುವಟಿಕೆಯ ಕೇಂದ್ರ. ಇದರ ಮೇಲೆ ನಿಗಾ ಇಡಲೆಂದೇ ನಮ್ಮ ಪ್ರತಿಷ್ಠಿತ ಬೇಹುಗಾರಿಕೆ ಸಂಸ್ಥೆ 'ರಾ' (RAW) ಅಲ್ಲೊಂದು ಶಾಖೆ ತೆರೆದಿದೆ. ಅದರ ಹಿರಿಯ ಅಧಿಕಾರಿಯೊಬ್ಬ ಅಪಹೃತ ವಿಮಾನದ ಪ್ರಯಾಣಿಕನಾಗಿದ್ದ. ಆಪಹರಣಕ್ಕೆ ಹಲವು ದಿನ ಮುಂಚೆಯೇ ಅದರ ಸಂಚು ಕಠ್ಮಂಡುವಿನಲ್ಲಿ ನಡೆದಿದೆ. ನಮ್ಮ ಬೇಹುಗಾರಿಕೆ ಸಂಸ್ಥೆಗೆ ಇದರ ಅರಿವಿರಲಿಲ್ಲ. ಅಷ್ಟೇಕೆ, ವಿಮಾನ ಹಲವು ತಾಸು ತಡವಾಗಿ ಹೊರಟಿತು. ಹಲವು ತಾಸು ವಿಮಾನ ನಿಲ್ದಾಣದ ಲಾಂಜಿನಲ್ಲಿ ಈ ಅಧಿಕಾರಿ ಕಾಯುತ್ತಾ ಕುಳಿತಿದ್ದ. ಈತನ ಕಣ್ಣೆದುರೇ ಟ್ರಾನ್ಸಿಟ್ ಲಾಂಜಿಗೆ ಬಂದ ಪಾಕ್ ಹೈಕಮೀಷನ್‌ನ ಹಿರಿಯ ಅಧಿಕಾರಿ ಒಬ್ಬ ಆಯುಧ, ಸ್ಫೋಟಕ ತುಂಬಿದ್ದ ಬ್ಯಾಗನ್ನು ಅಪಹರಣಕಾರರಿಗೆ ಒಪ್ಪಿಸಿದ. ಇದೆಲ್ಲ ನೋಡುತ್ತಿದ್ದ ಬೇಹುಗಾರಿಕೆ ಅಧಿಕಾರಿ ತುಟಿಪಿಟಕ್ಕೆನ್ನದೇ ಹೋಗಿ ದೆಹಲಿಯತ್ತ ಹೊರಟ ವಿಮಾನ ಏರಿ ಕುಳಿತ.


159 A KHURANA
160 S. SHARMA
161 S. BRARA
162 UB BHAT
163-166 SA GAZI x4
167 P. GARG
168 MR. S GARG
169 JAMES

ವಿಮಾನ ಪ್ರಯಾಣಿಕರ ವಿಚಿತ್ರ ಪಟ್ಟಿ

ಇನ್ನೊಂದು ಸಂಗತಿ ಗಮನಿಸಿ. ಸಂಜೆ 4.40ಕ್ಕೆ ವಿಮಾನ ಅಪಹರಣವಾಯಿತು. ಗುಪ್ತ ಭಾಷೆಯಲ್ಲಿ ವಿಮಾನದ ಚಾಲಕ ಶರಣ್ ಈ ವಿಚಾರ ದೆಹಲಿಯ ನಿಯಂತ್ರಣ ಕೇಂದ್ರಕ್ಕೆ ತಲುಪಿಸಿದ. ದೊಡ್ಡ ಜನರ ಮೀಟಿಂಗ್ ಶುರುವಾಯಿತು. ಅಮೃತ್‌ಸರದಲ್ಲಿ ವಿಮಾನ ಇಳಿಯುವುದು ಖಚಿತವಾಯಿತು. ಈ ದೊಡ್ಡ ಜನ ಅಲ್ಲಿನ ಹಿರಿಯ ಸ್ಥಳೀಯ ಅಧಿಕಾರಿಗಳಿಗೆ ಕೆಲವು ಸೂಚನೆ ನೀಡಬೇಕಿತ್ತು. ತಡಕಾಡಿದರೂ ಈ ದೊಡ್ಡ ಜನಗಳ ಹತ್ತಿರ ಅಮೃತ್‌ಸರದ ಏರ್ ಕಂಟ್ರೋಲ್, ಜಿಲ್ಲಾಧಿಕಾರಿ ಮುಂತಾದ ಯಾವೊಬ್ಬರ ಫೋನ್ ನಂಬರ್ ಕೂಡ ಇರಲಿಲ್ಲ.

ಅಮೃತ್‌ಸರದಲ್ಲಿ ಅಪಹೃತ ವಿಮಾನ 105 ನಿಮಿಷ ನಿಂತಿತ್ತು. ಅಲ್ಲಿ ವಿಮಾನದ ಟೈರ್ ಪಂಕ್ಚರ್ ಮಾಡಬೇಕೆಂಬ ಅತ್ಯಂತ ಪ್ರಾಥಮಿಕ ಕ್ರಮಕ್ಕೆ ಕೂಡ ಯಾರೂ ಮುಂದಾಗಲಿಲ್ಲ. ಕಮ್ಯಾಂಡೋಗಳು, ಸಂಧಾನಕಾರರನ್ನು ತುಂಬಿಕೊಂಡ ವಿಮಾನ ಬಂದಾಗ, ಅಪಹೃತ ವಿಮಾನ ಅಲ್ಲಿಂದ ಹಾರಿ ಹೋಗಿ ಕೇವಲ ಒಂದು ಗಂಟೆಯಾಗಿತ್ತು.

ಅಮೃತ್‌ಸರದಿಂದ, ಆನಂತರ ದುಬಾಯಿಯಿಂದ ವಿಮಾನ ಅವಸರವಸರದಿಂದ ಬಿಟ್ಟಿತು. ಇದಕ್ಕೆ ಕಾರಣ ಭಾರತದಲ್ಲೇ ಯಾರೋ ಕುಳಿತು ಅಪಹರಣಕಾರರಿಗೆ ಸರ್ಕಾರದ ಪ್ರತಿ ಚಲನವಲನದ ಮಾಹಿತಿ ನೀಡುತ್ತಾ ಇದ್ದುದು ಕಾರಣ. ಹಾಗೆ ಸೂಚನೆ, ವಿವರಗಳು ಎಲ್ಲಿಂದ ಬರುತ್ತಿದೆ ಎಂದು ನಿರ್ದಿಷ್ಟವಾಗಿ ಸೂಚಿಸಿದ್ದು ಅಮೆರಿಕಾದ ಫೆಡರಲ್ ಬ್ಯುರೋ ಆಫ್ ಇನ್‌ವೆಸ್ಟಿಗೇಷನ್. ಆಫಘಾನಿಸ್ಥಾನದಲ್ಲಿ ನೆಲೆಯಾಗಿರುವ ಭಯೋತ್ಪಾದಕ ಒಸಮಾ ಬಿನ್ ಲಾಡೆನ್ ಚಲನವಲನ ಗಮನಿಸುತ್ತಿದ್ದ ಆ ತನಿಖಾ ಸಂಸ್ಥೆ ಸೆಲ್ಯುಲರ್ ಫೋನಿನ ಮೂಲಕ ಅಪಹರಣಕಾರರ ಜೊತೆ ಸಂಪರ್ಕ ಹೊಂದಿದ್ದವರು ಮುಂಬಯಿಯ ಜೋಗೇಶ್ವರಿಯಲ್ಲಿ ಕುಳಿತು ಕಾರ್ಯಾಚರಣೆ ನಡೆಸುತ್ತಿದ್ದಾರೆ ಎಂದು ನಿರ್ದಿಷ್ಟವಾಗಿ ಸೂಚನೆ ನೀಡುವವರೆಗೂ ನಮ್ಮ ಪೊಲೀಸರು, ಬೇಹುಗಾರಿಕೆ ದಳಗಳು ಆರಾಮಾಗಿ ನಿದ್ದೆ ಮಾಡುತ್ತಾ ಇದ್ದವು. ಕೊನೆಗೆ ಡಿಸೆಂಬರ್ 29 ರಂದು ಜೋಗೇಶ್ವರಿಯ ಫ್ಲ್ಯಾಟಿನ ಮೇಲೆ ದಾಳಿ ಮಾಡಿ ನಾಲ್ಕು ಜನ ಪಿ.ಎಸ್.ಐ ಏಜೆಂಟರನ್ನು ವಶಪಡಿಸಿಕೊಂಡಾದ ಮೇಲೆಯೇ ವಿಮಾನ ಅಪಹರಣಕಾರರು ಮಣಿದಿದ್ದು.


ಸಂಧಾನ!

ವಿಮಾನ ಅಪಹರಣ ನಡೆದಾಗ ಎರಡು ರೀತಿಯ ಕಾರ್ಯಾಚರಣೆ ನಡೆಯುತ್ತದೆ. ಒಂದು ಸಂಧಾನ. ಇನ್ನೊಂದು ಕಮ್ಯಾಂಡೋ ದಾಳಿ. ಬಹಳಷ್ಟು ಸಂದರ್ಭಗಳಲ್ಲಿ ಸಂಧಾನಕಾರರು ಅಪಹರಣಕಾರರು ಪ್ರಯಾಣಿಕರನ್ನು ಕೊಲ್ಲದಂತೆ ತಡೆಯುತ್ತಲೇ, ಕಮ್ಯಾಂಡೋ ದಾಳಿಗೆ ರಂಗ ಸಜ್ಜುಗೊಳಿಸುತ್ತಾರೆ.

ಕಂದಹಾರ್‌ನ ನೀರು ಹೆಪ್ಪುಗಟ್ಟಿಸುವ ಚಳಿಯಲ್ಲಿ ವಿಮಾನ ನಿಂತಿತ್ತು. ಅಲ್ಲಿ ವಾರದಷ್ಟು ಕಾಲ ಸಂಧಾನ. ಮೊದಲ ಸುತ್ತು, ಎರಡನೇ ಸುತ್ತು, ಹೀಗೆ ಮಾತುಕತೆಯ ಸುತ್ತುಗಳಿಗೆ ಲೆಕ್ಕವೇ ಇಲ್ಲ. ಹೇಗೆ ಸಂಧಾನಕಾರರು ಮಾತುಕತೆ ಮಾಡಬಾರದೆಂಬುದಕ್ಕೆ ಇವರೊಂದು ಸ್ಪಷ್ಟ ಉದಾಹರಣೆ.

ಕಂದಹಾರ್ ತಾಲಿಬಾನ್‌ಗಳ ಜಾಗ. ಅಪಹರಣ ಮಾಡಿದ್ದವರು ಪಾಕ್ ಮುಸ್ಲಿಮರು. ಅಲ್ಲಿ ಕಮ್ಯಾಂಡೋ ದಾಳಿ ಸಾಧ್ಯವಿರಲಿಲ್ಲ. ಏನಿದ್ದರೂ ಸಂಧಾನದಿಂದ ವ್ಯವಹಾರ ಬಗೆಹರಿಸಬೇಕಿತ್ತು. ವಿಮಾನ ಕಂದಹಾರ್‌ಗೆ ಬಂದಿಳಿದ 68 ಗಂಟೆಗಳ ನಂತರ ಈ ಮಹಾನ್ ಸಂಧಾನಕಾರರು ಅಲ್ಲಿ ಹೋಗಿದ್ದು.

ಬಿಡುಗಡೆಗೊಂಡ ಉಗ್ರಗಾಮಿಗಳು


ಉಮರ್ ಸಯೀದ್ ಶೇಖ್


ಮುಸ್ತಾಕ್ ಅಹ್ಮದ್ ಝರ್ಗರ್


ಮೌಲಾನಾ ಮಸೂದ್ ಅಝರ್

ಇಂಥ ಸಂದರ್ಭಗಳಲ್ಲಿ ಸಂಧಾನಕಾರರು ಹೇಗೆ ವರ್ತಿಸಬೇಕು ಎಂಬ ತಂತ್ರವೇ ರೂಪಿತವಾಗಿದೆ. ಮುಖ್ಯ ಅಪಹರಣಕಾರರು ಅಸಹನೆಗೊಳ್ಳಲು ಬಿಡಬಾರದು. ಮೊದಲು ರಚನಾ ಕಟ್ಯಾಲ್‌ಳ ಬಿಡುಗಡೆಗೆ ಸಂಧಾನ ಶುರುವಿಟ್ಟುಕೊಂಡರು. ಈ ಬಗ್ಗೆ ನಿರ್ಧರಿಸಲು ಅವರು ಸಮಯ ಕೇಳಿದರು. ಅದರರ್ಥ ದೂರ ಎಲ್ಲೋ ಇರುವ ಮೂರನೆಯ ಪಾರ್ಟಿ ಜೊತೆ ಅಪಹರಣಕಾರರು ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತಾರೆ ಎಂದು. ಆ ಮೂರನೇ ಪಾರ್ಟಿ ಯಾರೆಂದು ಪತ್ತೆ ಹಚ್ಚುವುದು,

ಹೆಚ್ಚು ವಿವೇಕದಿಂದ ವರ್ತಿಸುವುದು ಯಾವುದೇ ಜಾಣ ಸಂಧಾನಕಾರನ ಕೆಲಸ. ಅರ್ಧ ಗಂಟೆಯ ನಂತರ ಅಪಹರಣಕಾರರು ರಚನಾ ಕಟ್ಯಾಲ್‌ಳನ್ನು ಬಿಡುವುದು ಸಾಧ್ಯವಿಲ್ಲ ಎಂದಾಗ ಈ ಮಹಾನುಭಾವರು 'ಮುಗ್ಧರಿಗೆ, ನಿರಪರಾಧಿಗಳಿಗೆ ತೊಂದರೆ ಕೊಡುವುದು ಇಸ್ಲಾಂ ಧರ್ಮಕ್ಕೆ ವಿರುದ್ಧ' ಎಂದು ಕತೆಗೆ ಶುರುವಿಟ್ಟುಕೊಂಡರು. ಕಟುಕನ ಮುಂದೆ ಬಸವ ಪುರಾಣ ಹೇಳಿದಂತೆ! ಇವರು ಅದು ಮಾಡಿದರು. ಅದಕ್ಕೆ ತಕ್ಕ ಉತ್ತರ ಬಂತು.

'ಇಸ್ಲಾಂ ಏನು ಅಂತ ನೀವು ನಮಗೆ ಹೇಳಬೇಕಾಗಿಲ್ಲ...'

ಸಾಕಲ್ಲವೇ ನಮ್ಮ ಸಂಧಾನಕಾರರ ಚತುರತೆಗೆ ಸಾಕ್ಷಿ.

ಈಗ ನೀವೇ ನಿರ್ಧರಿಸಿ ತಪ್ಪು ಯಾರದು?

ವಿಚಿತ್ರ ಮಾನದಂಡ

ಅಪಹೃತ ವಿಮಾನದಲ್ಲಿದ್ದ ಅನಿಲ್ ಖುರಾನಾ ಡಯಾಬಿಟಿಸ್ ರೋಗಿ. ಆತನ ಚಿಕಿತ್ಸೆಗಾದರೂ ಅವಕಾಶ ನೀಡುವಂತೆ ಅಪಹರಣಕಾರರ ಮನ ಒಲಿಸಿದ್ದು ತಾಲಿಬಾನ್‌ನ ವಿದೇಶಾಂಗ ವ್ಯವಹಾರಗಳನ್ನು ನೋಡಿಕೊಳ್ಳುವ ಮುತ ವಕೀಲ್. ಅನಿಲ್ ಖುರಾನಾ ಸುಸ್ತೆದ್ದು ಹೋಗಿದ್ದರು. ಆತನ ಚಿಕಿತ್ಸೆಗಾಗಿ, ಮಾನವೀಯತೆಯಿಂದ ಬಿಡುಗಡೆ ಮಾಡಿದಾಗ, ಕರೆದೊಯ್ಯಲು ಬಂದ ಮುತ ವಕೀಲ್ ಹೆಗಲ ಮೇಲೆ ಮುಖವಿಟ್ಟು ಅನಿಲ್ ಖುರಾನಾ ಅಳುತ್ತಾ ಹೇಳಿದ.

'ನಾನು ಮಂತ್ರಿಯೊಬ್ಬನ ಮಗ ಆಗಿದ್ದರೆ, ಇಂಡಿಯಾದ ಸಚಿವರಲ್ಲಿ ಅರ್ಧದಷ್ಟು ಜನ ಇಲ್ಲಿ ಬಂದಿಳಿದಿರುತ್ತಾ ಇದ್ದರು...'

ಅದು ನಿಜ ಕೂಡ. ಅಪಹರಣಕಾರರು ಭಯೋತ್ಪಾದಕರ ಬೇಡಿಕೆ ಮುಂದಿಟ್ಟಾಗೆಲ್ಲ ಸಂಧಾನಕಾರರು ನಾನಾ ಕಾರಣ ಒಡ್ಡಿ ಅದು ಸಾಧ್ಯ ಇಲ್ಲ ಎಂದು ಹೇಳಲೆತ್ನಿಸಿದಾಗೆಲ್ಲ

'ಅವತ್ತು ರುಬೈಯಾ ಅಪಹರಣ ಆದಾಗ ಅದು ಹೇಗೆ ಬಿಟ್ಟಿರಿ?' ಎಂದು ಬಾಯಿ ಬಡಿಯುತ್ತಾ ಇದ್ದರು.

ಕುಂಟು ನೆಪ

ಕಂದಹಾರ್‌ನಲ್ಲಿ ಅಪಹೃತ ವಿಮಾನ ಇದೆ. ಆಫಘಾನಿಸ್ಥಾನ ಮಿತ್ರರಾಷ್ಟ್ರ ಅಲ್ಲ. ಅಲ್ಲಿ ಕಮ್ಯಾಂಡೋ ದಾಳಿ ಸಾಧ್ಯವಿಲ್ಲ. ಇದು ನಮ್ಮವರ ವಿವರಣೆ. 1976ರ ಜುಲೈನಲ್ಲಿ ಇಸ್ರೇಲಿ ವಿಮಾನ ಒಂದು ಅಪಹರಣಕ್ಕೆ ಈಡಾಯಿತು. ಅದು ಬಂದು ಇಳಿದಿದ್ದು ಯುಗಾಂಡಾದ ಎಂಟೆಬ್ಬೆಯಲ್ಲಿ. ಹಾಗೆ ನೋಡಿದರೆ ಅದು ಶತ್ರು ರಾಷ್ಟ್ರ. ಸಂಧಾನದ ನೆಪದಲ್ಲಿ ಇಸ್ರೇಲಿ ತಂಡ ಅಲ್ಲಿಗೆ ತೆರಳಿತು. ಸಂಧಾನಕಾರರ ತಂಡದ ನೇತೃತ್ವ ವಹಿಸಿದ್ದು ಈಗ ಇಸ್ರೇಲಿನ ಪ್ರಧಾನಿ ಆಗಿರುವ ಬರಾಕ್. ಎಂಬತ್ತು ನಿಮಿಷದಲ್ಲಿ ಇಸ್ರೇಲಿ ಕಮ್ಯಾಂಡೋಗಳು ಇಡೀ ವಿಮಾನ ನಿಲ್ದಾಣ ಚಿಂದಿ ಉಡಾಯಿಸಿದರಲ್ಲದೇ, ಅಪಹರಣಕಾರರನ್ನೆಲ್ಲ ಕೊಂದುಮುಗಿಸಿ, ಇಸ್ರೇಲಿಗಳೇ ತುಂಬಿದ್ದ ಆ ವಿಮಾನದ ಪ್ರಯಾಣಿಕರನ್ನೆಲ್ಲ ಸುರಕ್ಷಿತವಾಗಿ ಸ್ವದೇಶಕ್ಕೆ ವಾಪಸು ಕರೆದು ತಂದರು. ಈ ಹೋರಾಟದಲ್ಲಿ ಎಂಬತ್ತು ವರ್ಷದ ಮುದುಕಿಯೊಬ್ಬಳು ಓಡಿ ಬಂದು 'ರಕ್ಷಣೆಗೆಂದು ತಂದಿದ್ದ ವಿಮಾನ ಹತ್ತಲಾರದೇ ಗುಂಡಿಗೆ ಬಲಿಯಾದದ್ದು ಬಿಟ್ಟರೆ, ಸಾವು ನೋವು ಇಲ್ಲವೇ ಇಲ್ಲ ಎಂದು ಹೇಳಬೇಕು.

ಈಗ ಹೇಳಿ ' ಕುಣಿಯಲಾರದವಳು ನೆಲ ಡೊಂಕು' ಎಂದು ಹೇಳುವ ಗಾದೆ ಎಷ್ಟು ನಿಜ ಅಂತ!

ನಾಲಾಯಕರ ಉಸ್ತುವಾರಿ

ಇಸ್ರೇಲಿನ ವಿಮಾನಯಾನ ಸಂಸ್ಥೆಯ ಹೆಸರು ಎಲ್ ಅಲ್ (ELAL) ಬಹಳಷ್ಟು ಜನ 'ಪ್ರತಿಸಲ ವಿಮಾನ ಮುಟ್ಟುವುದು ತೀರಾ ತಡ' (Every landing always late) ಎಂದು ತಮಾಷೆಯಾಗಿ ಹೇಳುತ್ತಾರೆ. ವಿಮಾನ ಹೊರಡುವ ತಾಸುಗಟ್ಟಲೆ ಮುಂಚೆ ಪ್ರಯಾಣಿಕರು ತಪಾಸಣೆಗೆ


ಶರಣಾಗತಿಯ ಇತಿಹಾಸ

ಅಪಹರಣಕಾರರಿಗೆ ಶರಣಾಗುವುದಿಲ್ಲ ಎಂದ ಕೇಂದ್ರ ಸರ್ಕಾರ ಕೊನೆಗೂ ಅವರ ಬೇಡಿಕೆಗೆ ಮಣಿದು ಮೂವರು ಉಗ್ರಗಾಮಿಗಳನ್ನು ಬಿಡುಗಡೆ ಮಾಡಿತು. ಆನಂತರವೇ ಅಪಹೃತ ಪ್ರಯಾಣಿಕರು ಬಿಡುಗಡೆಗೊಂಡಿದ್ದು.

ಹಿಂದೆಯೂ ಇಂಥದ್ದು ನಡೆದಿದೆ.

ಡಿಸಂಬರ್ 1989.

ವಿ.ಪಿ.ಸಿಂಗ್ ಆಗ ಪ್ರಧಾನಿ. ಅವರ ಸಂಪುಟದ ಗೃಹ ಸಚಿವ ಮುಫ್ತಿ ಮೊಹಮ್ಮದ್ ಸಯೀದ್ ಅವರ ಪುತ್ರಿ ರುಬೈಯಾಳನ್ನು ಜೆ.ಕೆ.ಎಲ್.ಎಫ್. ಅಪಹರಿಸಿತು. ಆರು ದಿನಗಳ ನಂತರ ಅಪಹರಣಕಾರರ ಬೇಡಿಕೆಯಂತೆ ಎಂಟು ಜನ ಪ್ರತ್ಯೇಕವಾದಿಗಳನ್ನು ಬಿಡುಗಡೆ ಮಾಡಲಾಯಿತು. ನಿರ್ಧಾರ ಕೈಗೊಂಡವರು ಪ್ರಧಾನಿ ವಿ.ಪಿ. ಸಿಂಗ್.




ತಂದೆಯ ಜೊತೆ ರುಬೈಯಾ

ಮಾರ್ಚ್ 1991

ಜೆ.ಕೆ.ಎಲ್.ಎಫ್ ಕಾರ್ಯಕರ್ತರು ನ್ಯಾಷನಲ್ ಕಾನ್‌ಫರೆನ್ಸ್‌ನ ಸಂಸದ್ ಸದಸ್ಯ ಸೈಫುದ್ದೀನ್ ಸೋಜ್ ಅವರ ಪುತ್ರಿ ನಹೀದಾ ಇಮ್ತಿಯಾಜ್‌ಳನ್ನು ಅಪಹರಿಸಿದರು. ಅವರ ಬೇಡಿಕೆಯಂತೆ ಪಾಕಿಸ್ತಾನದಲ್ಲಿ ತರಬೇತಿ ಪಡೆದ ಪ್ರತ್ಯೇಕತಾವಾದಿ ಮುಸ್ತಾಕ್ ಅಹ್ಮದ್‌ನನ್ನು ಬಿಟ್ಟುಕೊಡಲಾಯಿತು. ಆಗ ನಿರ್ಧಾರ ಕೈಗೊಂಡವರು ಪ್ರಧಾನಿ ಚಂದ್ರಶೇಖರ್.

ಆಗಸ್ಟ್ 1991 :

ಇಂಡಿಯನ್ ಆಯಿಲ್‌ನ ಎಕ್ಸಿಕ್ಯೂಟಿವ್ ಡೈರೆಕ್ಟರ್, ಮೈಸೂರಿನವರಾದ ಕೆ. ದೊರೆಸ್ವಾಮಿ ಅವರನ್ನು ಶ್ರೀನಗರದಿಂದ ಇಕ್ವಾನ್ - ಉಲ್ - ಮುಸ್ಲಿಮೀನ್ ಸಂಘಟನೆ ಅಪಹರಿಸಿತು. ಅವರ ಬಿಡುಗಡೆಗಾಗಿ ಒಂಬತ್ತು ಉಗ್ರಗಾಮಿಗಳನ್ನು ಬಿಡಬೇಕಾಯಿತು. ಅವರಲ್ಲಿ ಕಾಶ್ಮೀರ ವಿಶ್ವವಿದ್ಯಾಲಯದ ಕುಲಪತಿ ಮುಷೀರ್ ಉಲ್ ಹಕ್ ಹಾಗೂ ಎಚ್.ಎಂ.ಟಿ.ಯ ಜನರಲ್ ಮ್ಯಾನೇಜರ್ ಎಚ್.ಎಲ್. ಖೇರಾ ಅವರ ಕೊಲೆಗೈದಿದ್ದ ಜಾವಿದ್ ಶೈಲಾ ಕೂಡ ಒಬ್ಬ.



ಪತ್ನಿಯೊಂದಿಗೆ ದೊರೆಸ್ವಾಮಿ

ಒಳಗಾಗಬೇಕು. ನೀವು ಹಿಡಿದ ಸೂಟ್‌ಕೇಸ್ ನೀವೇ ಪ್ಯಾಕ್ ಮಾಡಿದಿರಾ? ಎಂಬಲ್ಲಿಂದ ಇದು ಶುರುವಾಗುತ್ತದೆ. ಒಂದಷ್ಟು ಅನುಮಾನ ಬಂದರೂ ಪ್ರಯಾಣಿಕನ ಕತೆ ಮುಗಿಯಿತು. ಇಂಥ ಕಟ್ಟುನಿಟ್ಟು ಕ್ರಮದಿಂದಾಗಿಯೇ, ಯಂತ್ರಗಳು ಕೂಡ ಪತ್ತೆ ಹಚ್ಚಲಾಗದ ಸ್ಫೋಟಕಗಳನ್ನು ಇಸ್ರೇಲಿ ಸಿಬ್ಬಂದಿ ಪತ್ತೆ ಹಚ್ಚಿದ್ದಾರೆ. ನೂರಾರು ಅಮಾಯಕರ ಪ್ರಾಣ ಉಳಿಸಿದ್ದಾರೆ. ಅಷ್ಟೇಕೆ ಪ್ರತಿ ಇಸ್ರೇಲಿ ವಿಮಾನದಲ್ಲೂ ಯಾರಿಗೂ ಗೊತ್ತಿಲ್ಲದಂತೆ ಸಂಪೂರ್ಣ ತರಬೇತುಗೊಂಡ ಕಮ್ಯಾಂಡೋಗಳು ಪ್ರಯಾಣಿಸುತ್ತಾರೆ.

ನಮ್ಮವರು ಇದೀಗ ಊರೇ ಸೂರೆಯಾದ ಮೇಲೆ ಕೋಟೆ ಬಾಗಿಲು ಹಾಕಿದರು ಎಂಬಂತೆ ಇಂಥ ತಂತ್ರ ಅನುಸರಿಸುವ ಘೋಷಣೆ ಮಾಡಿದ್ದಾರೆ. ಆದರೆ ಅದು ಅನುಷ್ಠಾನಗೊಳ್ಳುತ್ತದೆ ಎಂದು ನಂಬಿಕೆ ಮಾತ್ರ ಇರಿಸಿಕೊಳ್ಳಬೇಡಿ. ನಮ್ಮ ಏರ್ ಇಂಡಿಯಾ ಎಂಥ ನಾಲಾಯಕರ ಉಸ್ತುವಾರಿಯಲ್ಲಿ ನಡೆಯುತ್ತಿದೆ ಎಂಬುದಕ್ಕೆ, ಅಪಹೃತ ವಿಮಾನದ ಪ್ರಯಾಣಿಕರ ಪಟ್ಟಿ ಬಹುದೊಡ್ಡ ಸಾಕ್ಷಿ. ಪ್ರತಿ ವಿಮಾನ ಸಂಚಾರಕ್ಕೆ ಮುನ್ನ ಪ್ರಯಾಣಿಕರ ಪಟ್ಟಿ ಸಿದ್ಧವಾಗಿರುತ್ತದೆ. ಅದರಲ್ಲಿ ಪ್ರತಿ ಪ್ರಯಾಣಿಕನ ವಿವರ ಇರುತ್ತದೆ, ಇರಬೇಕು.

ಮೊನ್ನೆ ಅಪಹರಣಕ್ಕೀಡಾದ ವಿಮಾನದ ಪ್ರಯಾಣಿಕರ ಪಟ್ಟಿಯಲ್ಲಿ, ಅಪಹರಣಕಾರ ಸನ್ನಿ ಅಹ್ಮದ್ ಖಾಜಿ ಎಂಬಾತನ ಹೆಸರು ನಮೂದಾಗಿರುವುದು ಎಸ್.ಎ. ಖಾಜಿ ಎಂದಷ್ಟೇ. ಆತ ಎಲ್ಲಿಯವನು? ಏನು? ಎಂಬ ವಿವರ ಇಲ್ಲ. ಅಷ್ಟೇ ಅಲ್ಲ ಆತನ ಜೊತೆ ನಾಲ್ಕು ಜನ ಇತರ ಪ್ರಯಾಣಿಕರು ಇದ್ದಾರೆ ಎಂದಿದೆ. ಅವರು ಯಾರು? ಎಲ್ಲಿಯವರು? ದೇವರಿಗೇ ಗೊತ್ತು!



ಗಾಯಗೊಂಡರೂ ಬದುಕಿ ಬಂದ ಸತ್ನಾಂ ಸಿಂಗ್

ಇಂಥ ಏರ್ ಇಂಡಿಯಾದ ಸಿಬ್ಬಂದಿಯನ್ನು ನೆಚ್ಚಿ ನಮ್ಮ ಜನ ಪ್ರಯಾಣಿಸಬೇಕು. ಹೇಗಿದೆ ಅಲ್ಲವೇ ನಮ್ಮ ವ್ಯವಸ್ಥೆ?

ಹೇಡಿತನ, ಬರ್ಬರ ಕೃತ್ಯ

ಅಪಹರಣದ ವಿಷಯ ತಿಳಿಯುತ್ತಾ ಇದ್ದಂತೆ ಪ್ರಧಾನಿ ವಾಜಪೇಯಿ ಹೇಳಿದರು. 'ಇದೊಂದು ಹೇಡಿತನದ ಬರ್ಬರ ಕೃತ್ಯ. ಇಂಥ ತಂತ್ರಗಳಿಗೆ ನಾವು ಮಣಿಯುವುದಿಲ್ಲ.' ಈ ಹಿನ್ನೆಲೆಯಲ್ಲಿ ಕೆಳಗಿನ ಘಟನೆ ಗಮನಿಸಿ.

1993ರ ಜನವರಿ 23 ರಂದು ಲಖನೌದಿಂದ ದೆಹಲಿಗೆ ಹೊರಟಿದ್ದ ವಿಮಾನ ಅಪಹರಿಸಲಾಯಿತು. ಅಪಹರಣಕಾರನ ಹೆಸರು ಸತೀಶಚಂದ್ರ ಪಾಂಡೆ. ಅಯೋಧ್ಯೆಯಲ್ಲಿ ಮಸೀದಿ ಬೀಳಿಸಿದ ಮೇಲೆ, ಅದನ್ನು ಮರಳಿ ಕಟ್ಟಲಾಗುವುದೆಂದು ಆಗಿನ ಪ್ರಧಾನಿ ಪಿ.ವಿ. ನರಸಿಂಹರಾವ್ ಹೇಳಿದ್ದು ಆತನ ಸಿಟ್ಟಿಗೇ ಕಾರಣ. ಪಾಂಡೆ ವಿಮಾನ ಅಪಹರಿಸಿದ ನಂತರ ವಾಜಪೇಯಿ ಜೊತೆ ಮಾತಾಡಲು ಬಯಸಿದ. ಅವರೆದುರೇ ಶರಣಾದ.

ಬಂಧಿತನಾದ ಪಾಂಡೆ ನಾಲ್ಕು ವರ್ಷ ಜೈಲಲ್ಲಿದ್ದ. ಲಖನೌದ ಸರೋಜಿನಿನಗರ ಪೊಲೀಸು ಠಾಣೆಗೆ ಹಾಜರಾಗುವ ಷರತ್ತಿನ ಮೇಲೆ ಜಾಮೀನು ಪಡೆದ. ಆದರೆ ಅವನೆತ್ತ ಹೋದ ಎಂದು ಪೊಲೀಸರಿಗೆ ತಿಳಿಯದು. ಆದರೆ ವಾಜಪೇಯಿ ಆತನ ಸತತ ಸಂಪರ್ಕ ಇರಿಸಿಕೊಂಡಿದ್ದಾರೆ. ಆತನ ತಂದೆ ಸತ್ತಾಗ ಜೂನ್, 27, 1996ರಲ್ಲಿ ವಾಜಪೇಯಿ ತಮ್ಮ ಅಧಿಕೃತ ಲೆಟರ್‌ಹೆಡ್‌ನಲ್ಲಿ ಶೋಕ ಸಂದೇಶ ಕಳಿಸಿದ್ದರು.

ಹಾಗಾದರೆ, ರಾಮಮಂದಿರ ನಿರ್ಮಾಣಕ್ಕೆ ಒತ್ತಾಯಿಸಿ ವಿಮಾನ ಅಪಹರಣ ಮಾಡಿದರೆ ಅದು ಹೇಡಿತನ, ಬರ್ಬರ ಕೃತ್ಯ ಅನಿಸುವುದಿಲ್ಲವೇ?

ಕಾಂಗ್ರೆಸ್ಸಿಗರು ಇಂಥ ವಿಚಾರದಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ. ಇಂದಿರಾಗಾಂಧಿ ಬಂಧನ ಪ್ರತಿಭಟಿಸಿ ವಿಮಾನ ಅಪಹರಣ ನಡೆಸಿದ್ದ ಬೋಲಾನಾಥ್ ಪಾಂಡೆ ಮತ್ತು ದೇವೇಂದ್ರ ಪಾಂಡೆಗೆ ಪಕ್ಷದ ಟಿಕೆಟ್ ನೀಡಿ ಪುರಸ್ಕರಿಸಿದ್ದಾರೆ 1978ರ ಡಿಸೆಂಬರ್ 20 ರಂದು ಈ ಅಪಹರಣ ನಡೆಯಿತು. ಕೆಲವು ಗಂಟೆಯ ನಂತರ 132 ಪ್ರಯಾಣಿಕರ ಬಿಡುಗಡೆ ಆಯಿತು. ಆನಂತರ ಇಬ್ಬರೂ ಸಕ್ರಿಯ ಕಾಂಗ್ರೆಸ್ ಸದಸ್ಯರಾದರು. 1980ರಲ್ಲಿ ಇಬ್ಬರಿಗೂ ವಿಧಾನಸಭೆಗೆ ಕಾಂಗ್ರೆಸ್ ಟಿಕೆಟ್ ದೊರೆಯಿತು. ದೇವೇಂದ್ರ ಪಾಂಡೆ ಆಗಿಂದ ಎರಡು ಅವಧಿಗೆ ವಿಧಾನಸಭಾ ಸದಸ್ಯನಾಗಿದ್ದ. ಬೋಲಾನಾಥ ಪಾಂಡೆ 1980ರಿಂದ ಒಂದು ಅವಧಿಗೆ ಶಾಸಕನಾಗಿದ್ದ. ಇತ್ತೀಚೆಗೆ 1999ರಲ್ಲಿ ಸೇಲಂಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಭೋಲಾನಾಥ ಪಾಂಡೆ ಸೋತಿದ್ದಾನೆ.



ವಾಜಪೇಯಿಗೆ ಪ್ರಿಯವೆನಿಸಿದ ಅಪಹರಣಕಾರ ಸತೀಶ್ ಪಾಂಡೆ

ಸ್ಟಾಕ್‌ಹೋಂ ಸಿಂಡ್ರೋಮ್

ಅಪಹರಣಕ್ಕೀಡಾಗಿ ಪಾರಾಗಿ ಬಂದವರನ್ನು ವಿಚಾರಿಸಿ. ಅವರೆಲ್ಲ ಅಪಹರಣಕಾರರ ಬಗ್ಗೆ ಒಳ್ಳೆಯ ಮಾತಾಡುತ್ತಾರೆ. ಮುಂದೆಯೂ ಅವರ ಜೊತೆ ಸಂಪರ್ಕ ಇರಿಸಿಕೊಳ್ಳಲು ಹಾತೊರೆಯುತ್ತಾರೆ. ಇದಕ್ಕೆ ಸ್ಟಾಕ್‌ಹೋಂ ಸಿಂಡ್ರೋಮ್ ಎನ್ನುತ್ತಾರೆ.

ಸ್ಟಾಕ್ ಹೋಂನಲ್ಲಿ ಹುಡುಗಿಯೊಬ್ಬಳು ' ಅಪಹರಣಕ್ಕೀಡಾಗಿ ಹಲವು ದಿನ ಯಾತನೆ, ಆತಂಕಕ್ಕೆ ಕಾರಣ ಎನಿಸಿದ್ದ ಘಟನೆ ನಡೆಯಿತು. ಬಂಧನದಲ್ಲಿದ್ದ ಹುಡುಗಿ ಅಪಹರಣಕಾರನನ್ನು ಎಷ್ಟು ಇಷ್ಟಪಟ್ಟಿದ್ದಳೆಂದರೆ, ಮುಂದೆ ಅವನನ್ನೇ ಆಕೆ ಮದುವೆಯಾದಳು. ಆಗಿಂದ ಈ ಲಕ್ಷಣವನ್ನು 'ಸ್ಟಾಕ್‌ಹೋಂ ಸಿಂಡ್ರೋಮ್' ಎಂದೇ ಕರೆಯುತ್ತಾರೆ.

■ ಮುರಳೀಧರ.

ಹೀಗೆ ಈ ಬದುಕು....

ಕೆಲಸ ಮುಗಿಸಿ ಚರ್ಚ್‌ಗೇಟ್‌ನಲ್ಲಿ ಟ್ರೈನು ಹಿಡಿದದ್ದೇ ಒಂದು ಸಾಹಸ. ಪುಣ್ಯಕ್ಕೆ ಸೀಟೂ ಸಿಕ್ಕಿತು. ಕಿಟಕಿಯ ಬಳಿ ಒಬ್ಬರು ವಯಸ್ಸಾದ ವ್ಯಕ್ತಿ ಕುಳಿತಿದ್ದರು. ನಾನು ಮತ್ತು ನನ್ನ ಗೆಳೆಯರಿಬ್ಬರು ಸೀಟಲ್ಲಿ ಕುಳಿತೆವು. ಮಾಮೂಲಿನ ಹಾಗೆ ಎದುರು ಕುಳಿತಿದ್ದವರು ಇಸ್ಪೀಟು ಆರಂಭಿಸಿದರು.



ನಮ್ಮ ನಡುವೆ ಕುಳಿತಿದ್ದ ಪಾಠಣಕರ್ ಅವತ್ತು ಆಫೀಸಿನಲ್ಲಿ ಯಾವುದೋ ಸಂಗತಿ ಹೇಳಲಾರಂಭಿಸಿದ. ಅವನು ಯಾವುದೋ ವಿಷಯ ಹೇಳಲಿ ಬಹಳ ಕುತೂಹಲಕಾರಿಯಾಗಿ ಹೇಳುತ್ತಾನೆ. ನಮಗೆ ಅವನ ಆಫೀಸಿನ ಬಹುಪಾಲು ಎಲ್ಲರೂ ಗೊತ್ತಿರುವುದರಿಂದ, ಆಗಾಗ್ಗೆ ಏನೇನೋ ಪ್ರಶ್ನೆ ಕೇಳುತ್ತಾ ಇದ್ದೆವು. ಆಗ ಪಾಠಣಕರ್ ತನ್ನ ಕತೆ ಹೇಳುವುದು ಬಿಟ್ಟು ವಿವರಣೆ ನೀಡಬೇಕಾಗುತ್ತಿತ್ತು.

ಟ್ರೈನು ಸೆಂಟ್ರಲ್ ಬಿಟ್ಟು, ದಾದರ್ ಹತ್ತಿರ ಹತ್ತಿರ ಬರುತ್ತಾ ಇತ್ತು. ನಾವು ಪಾಠಣಕರ್‌ನ ಘಟನೆ ಕೇಳುತ್ತಾ, ಕುತೂಹಲಕಾರಿ ಘಟ್ಟಕ್ಕೆ ಬಂದಿದ್ದೆವು. ಮಧ್ಯೆ ಏನೋ ವಿವರಣೆ ಕೋರಿದ್ದೇ, ಕಿಟಕಿ ಬಳಿ ಕುಳಿತು ಮಾತೆಲ್ಲ ಕೇಳಿಸಿಕೊಳ್ಳುತ್ತಾ ಇದ್ದ ಅಪರಿಚಿತ ವ್ಯಕ್ತಿಗೆ ರೇಗಿತು.

'ಅವರು ವಿಷಯ ಹೇಳಲಿ ಬಿಡರಪ್ಪ, ನಾನು ದಾದರ್‌ನಲ್ಲಿ ಇಳೀತಾ ಇದೀನಿ' ಅನ್ನಬೇಕೆ ?

-ಕೇಶವ, ದಹೀಸರ್

ಈಗ ಸೆಲ್ಯುಲರ್ ಫೋನುಗಳ ಭರಾಟೆ. ಹಲವರ ಒತ್ತಾಯಕ್ಕೋ, ಪ್ರೆಸ್ಟೀಜಗೆಂದೋ ನಮ್ಮವರೂ ಒಂದು ಫೋನ್ ಖರೀದಿಸಿದ್ದರು. ಮನೆ ಬಿಟ್ಟರೆ ಆಫೀಸು, ಆಫೀಸು ಬಿಟ್ಟರೆ ಮನೆ. ನಮ್ಮವರು ಅಲ್ಲಲ್ಲಿ ಹೋಗುವ ಆಸಾಮಿ ಅಲ್ಲವೇ ಅಲ್ಲ. ಆಫೀಸು, ಮನೆ ಎರಡೂ ಕಡೆ ಫೋನು ಇದ್ದುದರಿಂದ ಸೆಲ್ಯುಲರ್ ಫೋನ್‌ನ ಅಗತ್ಯವೂ ಇರಲಿಲ್ಲ.

ನಾನು ಶಾಲೆಯಲ್ಲಿ ಟೀಚರ್. ಸ್ಕೂಲೂ ಬೇಗ ಬಿಡುತ್ತಾ ಇತ್ತು. ಬರುವಾಗ ಮನೆಗೆ ಬೇಕಾದ ತರಕಾರಿ ಮತ್ತಿತರೆ ವಸ್ತು ಖರೀದಿಸಿ ತರುವುದು ರೂಢಿ. ಅವತ್ತು ಸಹೋದ್ಯೋಗಿ ಒಬ್ಬರು ಮನೆಗೆ ಬಂದಿದ್ದರಿಂದ ಮಾತಿನಲ್ಲಿ ಅದು ಮರೆಯಿತು. ಬಂದ ಅತಿಥಿಯನ್ನು ಸನ್ಮಾನಿಸಿ ಕಳಿಸಿದ ಮೇಲೆ ತರಕಾರಿ ತರದೇ ಇದ್ದುದು ನೆನಪಾಯಿತು.

ಮನೆಯವರು ಆಫೀಸು ಬಿಡುವ ಸಮಯ ಗೊತ್ತು. ಅವರ ಸೆಲ್ಯುಲರ್ ಫೋನಿಗೆ ಕಾಲ್ ಮಾಡಿ ಹೇಳಿದರೆ, ಬರುತ್ತಾ ದಾರಿಯಲ್ಲಿ ತರಕಾರಿ ತರುತ್ತಾರೆ. ಮನೆಗೆ ಬಂದ ಮೇಲೆ ಮತ್ತೆ ಹೋಗಬೇಕಾದ ಅಗತ್ಯ ಇಲ್ಲ. ಬಹಳ ದಿನದಿಂದ ಉಪಯೋಗವೇ ಮಾಡಿರದ ಸೆಲ್ಯುಲರ್ ಫೋನ್ ನಿಜಕ್ಕೂ ಉಪಯೋಗಕ್ಕೆ ಬಂತು ಅಂದುಕೊಂಡೆ.

ಅವರು ಆಫೀಸು ಬಿಡಬಹುದಾದ ಸಮಯ ಊಹಿಸಿ ಮನೆಯಿಂದ ಕಾಲ್ ಮಾಡಿದೆ. ಅತ್ತಲಿಂದ ಅವರ ದನಿ. ನನ್ನ ಧ್ವನಿ ಕೇಳಿಯೋ ಗಾಬರಿಯಾಗಿ 'ಏನೇ? ಏನಾಯಿತು?' ಎಂದರು.

'ಏನೂ ಇಲ್ಲಾರೀ! ಇವತ್ತು ತರಕಾರಿ ತರೋದು ಮರೆತೆ. ನೀವು ಆಫೀಸು ಇನ್ನೂ ಬಿಟ್ಟಿಲ್ಲ ಅಂತ ಕಾಣುತ್ತೆ. ಬರ್ತಾ ಹಾಗೇ... ''.

'ನಿನ್ನ ತಲೆ ! ನಾನೀಗ ಮನೆ ಗೇಟ್ ಹತ್ತಿರ ಬಂದಾಗಿದೆ..'' ಎಂದು ರೇಗಿದರು ಕಿಟಕಿಯಿಂದ ನೋಡಿದರೆ ಅವರು ಗೇಟಿನ ಮುಂದೆ ಕಾರು ನಿಲ್ಲಿಸಿರೋದು ಫೋನಲ್ಲಿ ಮಾತಾಡುತ್ತ ಇದ್ದುದು ಕಾಣಿಸಿತು.

ತುಂಬಾ ಅಮೂಲ್ಯ ಉಪಯುಕ್ತ ಎನ್ನಿಸಿದ್ದ ಒಂದು ಫೋನ್ ಕರೆ ಕೂಡ ಹೀಗೆ ವ್ಯರ್ಥವಾಗಬೇಕೆ?

-ಸುಜಾತಾ, ಬೆಂಗಳೂರು.

ನನ್ನ ಅಣ್ಣ ಸೈನ್ಯದಲ್ಲಿ ಇದ್ದವನು. ಅವನು ನಾನಾ ರೀತಿಯ ಅನುಭವಗಳನ್ನು ಕತೆಯಾಗಿ ಹೇಳುತ್ತಿದ್ದ. ಅವರಲ್ಲಿ ಬಂಕಟ್‌ಸಿಂಗ್ ಎಂಬ ಮೇಜರ್ ಇದ್ದನಂತೆ. ತುಂಬಾ ಹಳೇಕಾಲದ ಮನುಷ್ಯ. ಬ್ರಿಟಿಷರು ಎಂದರೆ ಮಹಾ ಅಭಿಮಾನ.

ನನ್ನ ಅಣ್ಣನ ಜೊತೆಯವರು ಯಾವುದಕ್ಕೂ ಬಂಕಟ್‌ಸಿಂಗನ ಅನುಮತಿ ಪಡೆಯಬೇಕು. ಅವರಿದ್ದ ಟ್ರೈನಿಂಗ್ ಕ್ಯಾಂಪ್‌ನಿಂದ ಭಾನುವಾರ ಸಿಟಿಗೆ ಹೋಗಬೇಕು ಅಂದರೆ 'ನೀವೇನು ಅಲ್ಲಿ ಹೋಗಿ ಕಡಿದು ಗುಡ್ಡೆ ಹಾಕೋದು. ಎಂಜಾಯ್ ಮಾಡೋದು ಅಂದರೆ ಇಂಗ್ಲಿಷ್ ಸಿಪಾಯಿಗಳು. ನಿಮಗೇನು ಬರುತ್ತೆ ಕುಂಬಳಕಾಯಿ' ಎಂದು ರೇಗಿ ಬಿಡುತ್ತಿದ್ದ.

ಆದರೆ ಬಂಕಟ್‌ಸಿಂಗ್ ತುಂಬಾ ಒಳ್ಳೆಯವನೇ. ಒಂದು ಸಲ ಪಾರ್ಟಿ ನಡೆಯುವಾಗ ಅವನನ್ನು ಇವರೆಲ್ಲ ಪುಸಲಾಯಿಸಿ, ಅವನ ಬ್ರಿಟಿಷ್ ಅಭಿಮಾನ ಮತ್ತು ಭಾರತೀಯರನ್ನು ಕಂಡರೆ ಹೀಯಾಳಿಸುವ ಪ್ರವೃತ್ತಿಯ ಕಾರಣ ತಿಳಿದರಂತೆ.

ಆಗ ಬಂಕಟ್‌ಸಿಂಗ್ ಹೇಳಿದ್ದು :

ನಾವೆಲ್ಲ ಆಗ ಬೆಂಗಳೂರು ಕಂಟೋನ್ಮೆಂಟ್‌ನಲ್ಲಿ ಇದ್ದುದು. ಭಾನುವಾರ ಸೈನಿಕರಿಗೆ ಬಿಡುವು. ಅವತ್ತು ಸಿಪಾಯಿಗಳು ತಿರುಗಾಡಿ ಖುಷಿಯಾಗಿ ಇರಲೆಂದು ವಿಶೇಷ ಭತ್ಯೆ ಕೊಡುತ್ತಾ ಇದ್ದರಂತೆ. ಬ್ರಿಟಿಷ್ ಸೈನಿಕರಿಗೆ ಹತ್ತು ರೂಪಾಯಿ. ದೇಶೀ ಸಿಪಾಯಿಗಳಿಗೆ ಒಂದು ರೂಪಾಯಿ. ಸ್ವಲ್ಪ ದಿನದ ಮೇಲೆ ದೇಶೀಯರಲ್ಲಿ ಅಸಮಾಧಾನ. ಅವರು ತಮ್ಮ ಕಮ್ಯಾಂಡರ್ ಮುಂದೆ ದೂರು ಹೇಳಿದರಂತೆ. 'ಆಗಲಿ ನೀವೂ ಹತ್ತು ರೂಪಾಯಿ ತಗೊಳ್ಳಿ' ಎಲ್ಲರಿಗೂ ಖುಷಿ. ಭಾನುವಾರದ ತಿರುಗಾಟ ಮುಗಿಸಿ ಎಲ್ಲರೂ ಕ್ಯಾಂಪ್‌ಗೆ ಹಿಂದಿರುಗಿದ್ದರು. ಕಮ್ಯಾಂಡರ್ ಎಲ್ಲರನ್ನೂ ಕರೆದು, ಯಾರ್‍ಯಾರು ಏನೇನು ಮಾಡಿದರು, ಎಷ್ಟೆಷ್ಟು ಖರ್ಚು ಮಾಡಿದರು ಎಂದು ವಿಚಾರಿಸಿದನಂತೆ.



ಬ್ರಿಟಿಷ್ ಸೈನಿಕರು ಕೊಟ್ಟ ಹತ್ತು ರೂಪಾಯಿ ಖರ್ಚು ಮಾಡುವುದು ಇರಲಿ, ಬಹಳಷ್ಟು ಜನ ಸಾಲ ಕೂಡ ಮಾಡಿದ್ದು, 'ಬ್ರಿಗೇಡ್ ರಸ್ತೆಯಲ್ಲಿ ಸಿನಿಮಾ, ಸಂಗೀತ, ಡ್ರಿಂಕ್ಸ್, ಡಾನ್ಸ್ ಎಂದು ಖುಷಿ ಪಟ್ಟಿದ್ದು ಹೇಳಿದರು.

ಭಾರತೀಯ ಸೈನಿಕರ ಕತೆಯೇ ಬೇರೆ. ಯಾರೂ ಕೊಟ್ಟ ಹತ್ತು ರೂಪಾಯಿಯಲ್ಲಿ ನಾಲ್ಕಾಣೆ ಕೂಡ ಖರ್ಚು ಮಾಡಿರಲಿಲ್ಲ. ಇನ್ನು ಅವರ ಹಾಗೆ ಡ್ರಿಂಕ್ಸ್, ಡಾನ್ಸ್, ಸಂಗೀತ ಎಂಬ ಸುದ್ದಿಯೇ ಇಲ್ಲ. ಹೇಗೋ ಕಾಲ ಕಳೆದು, ಸಮಯ ಆಗುತ್ತಲೇ ಗೂಡು ಸೇರಿದ್ದರು.


'ನಿಮಗೆ ಖರ್ಚು ಮಾಡೋದೂ ಗೊತ್ತಿಲ್ಲ. ಎಂಜಾಯ್ ಮಾಡೋದೂ ಗೊತ್ತಿಲ್ಲ. ಅದಕ್ಕೆ ಅವರಿಗೆ ಹತ್ತು. ನಿಮಗೆ ಒಂದು ರೂಪಾಯಿ' ಎಂದು ಕಮ್ಯಾಂಡರ್ ಹೇಳಿದನಂತೆ.

'ಇಷ್ಟರಿಂದಲೇ ಅರ್ಥ ಮಾಡಿಕೊಳ್ಳಿ'

ಎಂದು ಮೀಸೆ ತಿರುಗಿಸುತ್ತಾ ಎದ್ದು ಹೋದನಂತೆ ಬಂಕಟ್‌ಸಿಂಗ್

-ಸುರೇಂದ್ರ ವಡಗಾಂವ್‌ಕರ್, ಬೆಳಗಾಂ

ಜೇಡ ಪುರಾಣ



ಕೀಟಗಳನ್ನು ನುಂಗಿ ನೊಣೆಯುವ ಜೇಡ ಪ್ರಕೃತಿಯ ಬಹುದೊಡ್ಡ ಸಮತೋಲ ನಿಯಂತ್ರಕ. ಫುಕುವೋಕಾ ಸಹಜ ಕೃಷಿಯ ರೂವಾರಿ. ಅವರನ್ನು ಒಮ್ಮೆ ಸಂದರ್ಶಿಸಿದ ವಿಜ್ಞಾನಿಗಳು 'ನಿಮ್ಮ ಬೆಳೆಗೆ ಕೀಟ ನಿಯಂತ್ರಣ ಹೇಗೆ?' ಎಂದು ಕೇಳಿದ್ದರು.

ಬೆಳೆಯ ನಡುವೆ ಬಲೆ ಕಟ್ಟಿಕೊಂಡಿದ್ದ ಜೇಡಗಳನ್ನು ತೋರಿಸುತ್ತಾ,

'ಅಲ್ಲಿದೆ ನೋಡಿ ನನ್ನ ಕೀಟ ನಿಯಂತ್ರಕ' ಎಂದಿದ್ದರು.

ಬಲೆ ನೇಯುವ ಜೇಡ ಮನೇಲಿ ಕಂಡರೆ ಕಿರಿಕಿರಿ. ಅದನ್ನು ಬಡಿದು, ಬಲೆ ಸಮೇತ ಹೊರಗೆ ಎತ್ತಿ ಹಾಕುವವರೆಗೂ ಸಮಾಧಾನವಿಲ್ಲ. ಆದರೆ, ಹೀಗೆ ಬಲೆ ಕಟ್ಟಿದ ಜೇಡ ಒಂದು ಪ್ರವಾದಿ ಮಹಮ್ಮದರ ಜೀವ ಉಳಿಸಿತ್ತು.

ಮೆಕ್ಕಾದಲ್ಲಿದ್ದ ಪ್ರವಾದಿ ಮಹಮ್ಮದರ ವಿಚಾರ, ಜನಪ್ರಿಯತೆ ಹಲವರಿಗೆ ನುಂಗಲಾರದ ತುತ್ತಾಯಿತು. ಇದನ್ನು ತಡೆಯಲು ಒಂದೇ ಉಪಾಯ. ಅವರನ್ನು ಹತ್ಯೆಗೈಯುವುದು. ಮಹಮ್ಮದರಿಗೆ ಈ ವಿಚಾರ ತಿಳಿದರೂ ಶಾಂತಚಿತ್ತರಾಗಿ ಇದ್ದರು. ಅವರ ಅನುಯಾಯಿಗಳಿಗೆ ಆತಂಕ. ಅವರಂಥವರ ಒತ್ತಾಯದಿಂದಲೇ ಅವರು ಹತ್ಯೆಯ ಸಂಚಿನಿಂದ ಪಾರಾಗಲು, ಕೆಲವೇ ಕೆಲವು ಅನುಯಾಯಿಗಳ ಜೊತೆ ಮದೀನಾದತ್ತ ಹೊರಟರು.

ಇದು ಸಂಚುಕಾರರಿಗೆ ತಿಳಿದುಬಿಟ್ಟಿತು. ಮದೀನಾದತ್ತ ಹೊರಟಿದ್ದ ಪ್ರವಾದಿ ಹಾಗೂ ಅವರ ಅನುಯಾಯಿಗಳ ಬೆನ್ನು ಹತ್ತಿದರು. ಹಂತಕರಿಂದ ಪಾರಾಗಲು, ದಾರಿಯಲ್ಲಿ ಸಿಕ್ಕಿದ ಗವಿಯೊಂದರಲ್ಲಿ ಅವರೆಲ್ಲ ಆಶ್ರಯ ಪಡೆದರು.

ಗುಹೆಯ ಬಾಗಿಲಲ್ಲಿ ಒಂದು ಜೇಡ ತನ್ನ ಪಾಡಿಗೆ ತಾನು ಬಲೆ ನೇಯಿತು. ಹಂತಕರು ಹುಡುಕಿ ಅದೇ ಗುಹೆಯ ಬಳಿ ಬಂದಾಗ, ಅಲ್ಲಿದ್ದ ದಟ್ಟವಾದ ಜೇಡರ ಬಲೆ ಕಂಡೇ, ಇಲ್ಲಿ ಅವರಿರುವುದು ಸಾಧ್ಯವೇ ಇಲ್ಲ ಎಂದು ಮುಂದಿನ ದಾರಿ ಹಿಡಿದರು. ಮಹಮ್ಮದರು ಪ್ರಾಣಾಪಾಯದಿಂದ ಪಾರಾದದ್ದು ಜೇಡ ನೇಯ್ದ ಬಲೆಯಿಂದ. ಹಾಗಾಗಿ ಮಹಮ್ಮದರ ಅನುಯಾಯಿಗಳಿಗೆ, ತಮ್ಮ ಪ್ರವಾದಿಯ ಜೀವ ಕಾಯ್ದ ಜೇಡರ ಬಗ್ಗೆ ಅಪಾರ ಗೌರವ.

ಗ್ರೀಕ್ ಪುರಾಣದಲ್ಲಿಯೂ ಜೇಡದ ಹುಟ್ಟಿಗೆ ಕಾರಣವಾದ ಘಟನೆಯ ಪ್ರಸ್ತಾಪವಿದೆ.

ಆರ್ಯಾಕ್ನೆ ಚೆಲುವಾದ ಹುಡುಗಿ. ಅಷ್ಟೇ ಗರ್ವಿಷ್ಠೆ. ಅದಕ್ಕೆ ಕಾರಣ ಆಕೆಯ ಹಾಗೆ ನೇಯುವವರು ಪ್ರಪಂಚದಲ್ಲಿಯೇ ಇರಲಿಲ್ಲ. ಇನ್ನು ದೇವಲೋಕದಲ್ಲಿಯೂ ತನಗೆ ಸಮಾನರು ಇರಲಾರರು ಎಂದೇ ನಂಬಿಕೆ. ದೇವರುಗಳಿಗೂ ಆಕೆ ಸವಾಲೆಸೆದಳು. ನೇಯ್ಗೆಯ ದೇವತೆ ಭೂಮಿಗಿಳಿದು ಬಂದು ಆರ್ಯಾಕ್ನೆಯ ಸವಾಲು ಸ್ವೀಕರಿಸಬೇಕಾಯಿತು. ಆದರೆ ಆಕೆ ತನ್ನ ನಿಜರೂಪದಲ್ಲಿ ಬಾರದೇ, ಮುದುಕಿಯಾಗಿ ಕಾಣಿಸಿ ಆರ್ಯಾಕ್ನೆಯನ್ನು ನೇಯ್ಗೆಯಲ್ಲಿ ಸೋಲಿಸಿದಳು. ಆ ನಂತರ ತನ್ನ ನಿಜರೂಪದಲ್ಲಿ ಕಾಣಿಸಿಕೊಂಡು

'ನೇಯ್ಗೆಯ ನಿನ್ನ ಕುಶಲತೆಯ ಬಗ್ಗೆಯೇ ಗರ್ವ ಪಡುತ್ತಿದ್ದ ನೀನು ಇನ್ನು ಯಾವಾಗಲೂ ನೇಯುತ್ತಲೇ ಮೂಲೆಯಲ್ಲಿ ಬಿದ್ದಿರು' ಎಂದು ಶಾಪವಿತ್ತಳು. ಹಾಗಾಗಿ ಆರ್ಯಾಕ್ನೆ ಜೇಡವಾಗಿ ಇವತ್ತಿಗೂ ನೂಲುತ್ತಾ ಇದ್ದಾಳೆ.

ಇಂಥ ಕಥೆಯ ಪರಿಣಾಮವಾಗಿಯೇ, ಜೇಡಗಳನ್ನು 'ಆರ್ಯಾಕ್ನೀಡಾ' ವರ್ಗಕ್ಕೆ ಸೇರಿಸಲಾಗಿದೆ.

ಹೆಸರಾಂತ ಚಿಂತಕ ಜಿಡ್ಡು ಕೃಷ್ಣಮೂರ್ತಿ ತೀರಾ ಸಹೃದಯ ಮನುಷ್ಯ. ಪ್ರಾಣಿ, ಪಕ್ಷಿಗಳಿಗೆ ಇರಲಿ, ಸಣ್ಣದೊಂದು ಕೀಟಕ್ಕೆ ನೋವುಂಟು ಮಾಡುವುದೂ ಅವರಿಗೆ ಸಾಧ್ಯವಿರಲಿಲ್ಲ. ಓಹಾಯ್‌ನಲ್ಲಿ ಅವರು 'ಆರ್ಯವಿಹಾರ' ಎಂಬಲ್ಲಿ ವಾಸಿಸುತ್ತಾ ಇದ್ದರು. ಆ ಮನೇಲಿ ಅವರು ಕುಳಿತು ಬರೆಯುವ ಟೇಬಲಿನ ಹತ್ತಿರ ಒಂದು ಜೇಡ ಬಲೆ ನೇಯ್ದಿತ್ತು. ಅದನ್ನು ಕಂಡು ಒಂದು ದಿನ ಅವರು ಹಗುರಾಗಿ ಅದನ್ನು ಎತ್ತಿ ತಂದು ಹೊರಗೆ ಗಿಡದ ಮೇಲೆ ಬಿಟ್ಟರು.

ಮರುದಿನ ನೋಡಿದರೆ ಅದೇ ಜೇಡ, ಅದೇ ಜಾಗದಲ್ಲಿ ಬಲೆ ನೇಯುತ್ತಿದೆ. ಅದ್ಯಾವ ಮಾಯದಲ್ಲಿ ಅದು ಹಿಂದಿರುಗಿ ಅದೇ ಜಾಗಕ್ಕೆ ಬಂದಿತ್ತೋ! ಮತ್ತೊಂದು ಸಲ ಅದನ್ನು ಎತ್ತಿ ಹೊರಗೊಯ್ದು ಬಿಟ್ಟು ಬಂದರು. ಮರುದಿನ ನೋಡಿದರೆ ಅದೇ ಕಥೆ. ಕೊನೆಗೆ ಅವರು ಹೇಳಿದರಂತೆ 'ಹೋಗಲಿ ಬಿಡು. ನಾನೂ ನೀನೂ ಗೆಳೆಯರಾಗಿ ಇದ್ದು ಬಿಡೋಣ'.

ಅವರು ಆರ್ಯವಿಹಾರದಲ್ಲಿ ಇರುವವರೆಗೂ ಆ ಜೇಡದ ಗೆಳೆತನ ಮುಂದುವರಿಸಿಕೊಂಡೇ ಬಂದರು. ಜೆ.ಬಿ.ಎಸ್. ಹಾಲ್ಡೇನ್ ಕೂಡ ಇದೇ ಥರದ ಮನುಷ್ಯ. ಅವರ ಮನೆಯ ರೂಮುಗಳಲ್ಲಿ ಕಟ್ಟಿದ ಜೇಡ, ಜೇಡರ ಬಲೆಗಳನ್ನು ಕೂಡ ಅವರು ತೆಗೆಯಲು ಅಥವಾ ಕೀಟನಾಶಕ ಸಿಂಪಡಿಸಿ ಕೊಲ್ಲಲು ಬಿಡುತ್ತಾ ಇರಲಿಲ್ಲ.

'ಜೇಡಗಳ ಶಾಂತಿಗೆ ಭಂಗ ತರುವುದು ನನಗಿಷ್ಟವಿಲ್ಲ' ಎಂದು ಅವರು ಹೇಳುತ್ತಾ ಇದ್ದರು.

■ ಶೇಷಗಿರಿ ಜೋಡಿದಾರ್

ಏಡ್ಸ್ ಭಯದಿಂದ ಕಾಂಡಂ ಬೆಲೆ ಸಿಕ್ಕಾಪಟ್ಟೆ ಏರಿದೆ. ಒಂದೊಂದು ಕಾಂಡಂಗೂ ಇಪ್ಪತ್ತೈದರಿಂದ ನಲವತ್ತು ರೂಪಾಯಿ ಬೆಲೆ. ಗಾಬರಿಯಾಗಬೇಡಿ. ಉಚಿತವಾಗಿ ಸಿಗುವ ನಿರೋಧ್‌ಗೆ ಇಂಥ ಡಿಮ್ಯಾಂಡು ಬಂತೇ! ಎಂದು ಚಿಂತಿಸಬೇಕಿಲ್ಲ.

ಇದು ದೆಹಲಿಯ ಪ್ರತಿಷ್ಠಿತ ತಿಹಾರ್ ಜೈಲಿನ ಕಥೆ. ಒಳಗಿರುವ ಕೈದಿಗಳಿಗೆ ಒಳ್ಳೆಯ ಊಟ, ಉಪಹಾರ, ಮೊಬೈಲ್ ಫೋನು ಒದಗಿಸುವುದು ಹಳೇ ಕಥೆ. ಈಗ ನಿರೋಧ್ ಸರದಿ. ಅದನ್ನು ಪೂರೈಸುವವರು ಅಲ್ಲೇ ಕಾವಲಿರುವ ಪೊಲೀಸರು.

ಇತ್ತೀಚೆಗೆ ಇಂಥ ಪೊಲೀಸನೊಬ್ಬ ಕೈದಿಯೊಂದಿಗೆ ಚೌಕಾಸಿ ನಡೆಸಿ ಇಪ್ಪತ್ತೈದು ರೂಪಾಯಿಗೆ ಒಂದು ನಿರೋಧ್ ಮಾರುತ್ತಿರುವಾಗ ಸಿಕ್ಕಿಬಿದ್ದ. ಆಗ ದುಬಾರಿ ಆಗಿರುವ ಕಾಂಡಂ ಸಮಾಚಾರ ಗೊತ್ತಾಯಿತು.

★

ಅವರೊಬ್ಬ ಪ್ರಸಿದ್ಧ ಕತೆಗಾರರು. ಒಂದು ದಿನ ಮಾಸಿಕದಲ್ಲಿ ಕವನ ಒಂದು ಕಂಡರು. ಬರೆದದ್ದು ಯಾರೋ ಹುಡುಗಿಯ ಹಾಗಿತ್ತು. ಮೆಚ್ಚಿ ಪತ್ರ ಬರೆದರು. ಅದಕ್ಕೆ ಕವಿಯಿಂದ ಪೂರಕ ಪ್ರತಿಕ್ರಿಯೆ ಬಂತು. ಅದಾದ ಮೇಲೆ ಪತ್ರಗಳು ಸಾಲುಗಟ್ಟಿ ಇಬ್ಬರ ನಡುವೆ ವಿನಿಮಯವಾದವು.

ಒಮ್ಮೆ ರವೀಂದ್ರ ಕಲಾ ಕ್ಷೇತ್ರದ ಬಳಿ ಕತೆಗಾರರು ಗುಂಪು ಗೂಡಿಸಿಕೊಂಡು ಹರಟುತ್ತಾ ಇದ್ದಾಗ, ಯಾರೋ ಕವಿಯ ಹೆಸರು ಹೇಳಿ 'ಬಂದರು' ಎಂದದ್ದೇ ಕತೆಗಾರರು ರೋಮಾಂಚನಗೊಂಡು ಅತ್ತ ತಿರುಗಿದರು. ಬರುತ್ತಿದ್ದ ವಿಕಾರ ಗಡ್ಡದ ವ್ಯಕ್ತಿಯನ್ನು ನೋಡಿದ್ದೇ, ಅರ್ಜೆಂಟ್ ಕೆಲಸದ ನೆಪ ಹೇಳಿ 'ಸಾವು' ಬೆನ್ನಟ್ಟಿದವರಂತೆ ಸ್ಕೂಟರ್ ಏರಿ ಪರಾರಿಯಾದರು. ನಿಮಗೆ ಗೊತ್ತೇ? ಕಾಗದ ಬರೆದಿದ್ದವರು ನಾಗತಿಹಳ್ಳಿ ಚಂದ್ರಶೇಖರ್, ಪತ್ರ ಬರೆದಿದ್ದು ಎಲ್ಸಿ ನಾಗರಾಜ್‌ಗೆ.

■

ಮಕ್ಕಳು ಎದುರಾಡಿದರೆ!

ಮಗು ತೀರಾ ಎಳೆಯದಿರಬಹುದು. ಕಾಲೇಜು ಮೆಟ್ಟಿಲು ಹತ್ತಿದ ಮಗನೋ, ಮಗಳೋ ಇರಬಹುದು. ಇದ್ದಕ್ಕಿದ್ದಂತೆ ಅವರು ಎದುರಾಡಿದರೆ! ಹೇಳಿದ ಮಾತೇ ಕಿವಿಗೆ ಬೀಳದಂತೆ ವರ್ತಿಸಿದರೆ. ಏನೋ ಹೇಳಿದಾಗ 'ಭುಜ ಕುಣಿಸಿ' ಇಂಥದ್ದೂ ಹೇಳುತ್ತೀರಲ್ಲ! ಅದೇನು ದೊಡ್ಡವರೋ! ಎಂಬಂತೆ ವರ್ತಿಸಿದರೆ



ಮಕ್ಕಳು ಚಿಕ್ಕವರಿರಲಿ, ದೊಡ್ಡವರಿರಲಿ ಎದುರಾಡಿದಾಗ ಜಗಳಕ್ಕೆ ಇಳಿದರೆ, ವಾಗ್ವಾದ ಮಾಡಿದರೆ, ಅದನ್ನೂ ಮೀರಿ ದಂಡನೆಗೆ ಗುರಿ ಮಾಡಿದರೆ ಸಮಸ್ಯೆ ಪರಿಹಾರವಾಗದು. ಬದಲಿಗೆ ಅದು ಉಲ್ಬಣಿಸುತ್ತದೆ. ಮಕ್ಕಳ ಮನಸ್ಸಿನಲ್ಲಿ ಹಿರಿಯರ ಬಗ್ಗೆ ಕಹಿ ಭಾವನೆ ಮೊಳೆಯುತ್ತದೆ.

ಮಕ್ಕಳು ಎದುರಾಡಲು ನಾನಾ ಕಾರಣ. ಮುಖ್ಯವಾಗಿ ಹಿರಿಯರ ಗಮನ ಸೆಳೆಯಬೇಕು. ತನ್ನನ್ನು ಅವರು ಸರಿಯಾಗಿ ಗಮನಿಸುತ್ತಿಲ್ಲ, ಪ್ರೀತಿಸುತ್ತಿಲ್ಲ, ಅದೆಲ್ಲ ಪಡೆಯಬೇಕೆಂಬುದು ಪ್ರಮುಖ ಕಾರಣ. ತಾನೇಕೆ ಇವರ ಮಾತು ಕೇಳಬೇಕು? ದೊಡ್ಡವರೇ ಏಕೆ ನನ್ನ ಮಾತು ಕೇಳುವಂತಾಗಬಾರದು? ಎಂಬ ಪ್ರೇರಣೆ ಇನ್ನೊಂದು ಕಾರಣ. ತಾನು ಸುಮ್ಮನಿದ್ದರೆ ಇವರ ಪ್ರಭುತ್ವ ಹೀಗೇ ಮುಂದುವರಿಯುತ್ತದೆ. ದಬಾಯಿಸಿ, ವಾದಕ್ಕಿಳಿದರೆ ಹಿರಿಯರು ತನ್ನ ಮಾತು ಕೇಳುತ್ತಾರೆ ಎಂಬ ಯೋಚನೆಯಿಂದಲೂ ಎದುರಾಡುವ, ತಿರುಗಿ ಬೀಳುವ ಕ್ರಿಯೆ ನಡೆಯಬಹುದು.

ಯಾರಿಗಾದರೂ ಇನ್ನೊಬ್ಬರು ಹೇಳಿದಂತೆಯೇ ನಡೆಯುವುದು ಇಷ್ಟವಿರದು. ತಂದೆ, ತಾಯಿ ಏನೋ ಕೆಲಸ ಹೇಳಿದಾಗ ಚಿಕ್ಕವರು ಸ್ವಲ್ಪ ಗೊಣಗಬಹುದು. 'ನಾನೊಬ್ಬನೇನಾ? ಅಕ್ಕ ಇಲ್ಲವಾ? ಅಣ್ಣ ಇಲ್ಲವಾ? ಅವರು ಮಾಡಲಿ' ಎಂಬಂಥ ಮಾತುಗಳಿಗೆ ರಿಯಾಯಿತಿ ಇರಬೇಕು. ಇಲ್ಲವಾದರೆ ತೀರಾ ದಬ್ಬಾಳಿಕೆ ಆಗಿಬಿಡುತ್ತದೆ.

ಆದರೆ ಮಗು ಅಥವಾ ಮಕ್ಕಳ ವರ್ತನೆ ಅತಿಯಾದಾಗಲೂ ಸುಮ್ಮನಿರುವುದು ಸರಿಯಲ್ಲ. 'ನಿನಗೆ ತಲೆ ಇಲ್ಲ' 'ನಿನಗೆ ಬುದ್ಧಿಗಿದ್ದಿ ಇದೆಯೋ ಇಲ್ಲವೋ!' ಎಂಬಂತಹ ಒರಟು ಮಾತು ಬರುವುದು ಅಪಾಯಕಾರಿ.

ಅನುಕರಣೆ : ಮಕ್ಕಳು ಹಿರಿಯರನ್ನು ಅನುಕರಿಸುತ್ತವೆ. ಸದಾ ಹೀಯಾಳಿಸುತ್ತಾ ಇರುವ ತಂದೆಯೋ, ತಾಯಿಯೋ ಇದ್ದರೆ, ಅವರದೇ ವರ್ತನೆಯನ್ನು ಮಕ್ಕಳು ಅನುಸರಿಸುವುದು ತೀರಾ ಸಹಜ. ಯಾರ ಬಗ್ಗೆಯೋ ಕೀಳಾಗಿ, ನೋವಾಗುವಂತೆ ಮಾತಾಡುವುದು ಮನೆಯಲ್ಲಿ ನಡೆದಾಗ, ಅದೇ ಸರಿಯಾದ ರೀತಿ ಎಂದು ಮಕ್ಕಳು ಭಾವಿಸಿ, ಅದರಂತೇ ನಡೆಯುತ್ತವೆ.

ಮಕ್ಕಳು ಚಿಕ್ಕವರಿರುವಾಗಲೇ ವಿನಯದಿಂದ, ಇನ್ನೊಬ್ಬರಿಗೆ ನೋವು ಮಾಡದಂತೆ ವರ್ತಿಸುವುದು ಅಭ್ಯಾಸವಾಗಬೇಕು. ಇದನ್ನು ತಂದೆ, ತಾಯಿಯೇ ಮಾಡಬೇಕು. ತಪ್ಪು ಮಾಡಿದಾಗ 'ಸಾರಿ' ಹೇಳುವುದು, ಯಾರಿಂದಾದರೂ ಉಪಕಾರ ಪಡೆದಾಗ 'ಥ್ಯಾಂಕ್ಸ್' ಹೇಳುವುದು ರೂಢಿ ಆಗಬೇಕು. ಅದೂ ಕೇವಲ ಬೇಕಾಬಿಟ್ಟಿಯಾಗಿ ಆ ಪದಗಳನ್ನು ಉಚ್ಚರಿಸಿ ತಮ್ಮ ಕರ್ತವ್ಯ ಪೂರೈಸಿದಂತೆ ಅಲ್ಲ. ತಪ್ಪು ಮಾಡಿ 'ಸಾರಿ' ಎನ್ನುವಾಗ ನಿಜಕ್ಕೂ ಪಶ್ಚಾತ್ತಾಪ. 'ಥ್ಯಾಂಕ್ಸ್' ಎಂದು ಬೇಕಾಬಿಟ್ಟಿಯಾಗಿ ಹೇಳುವುದಕ್ಕೆ ಬದಲು 'ಥ್ಯಾಂಕ್ ಯೂ' ಎಂದು ಆತ್ಮೀಯತೆ ಹಾಗೂ ಕೃತಜ್ಞತೆಯಿಂದ ಹೇಳುವುದೂ ಮಕ್ಕಳಿಗೆ ಪಾಠವಾಗಬೇಕು.

ಸರಿಯಾದ ರೀತಿಯಲ್ಲಿ ಮಗು ವರ್ತಿಸಿದಾಗ, ಅದರ ಗುಣ ಮೆಚ್ಚುವುದೂ ಇಲ್ಲಿ ಮುಖ್ಯ. ಇದರಿಂದ ಮಗುವಿನ ಮನಸ್ಸಿನಲ್ಲಿ ತಾನು ತಪ್ಪು ಮಾಡಿದಾಗ ದಂಡಿಸಿದ ಹಾಗೇ, ಒಳ್ಳೆಯದು ಮಾಡಿದಾಗ ಗುರುತಿಸಿ ಮೆಚ್ಚುತ್ತಾರೆ ಎಂಬ ಅರಿವೂ ಮೂಡಬೇಕು.

ಅಭಿವ್ಯಕ್ತಿಗೆ ಅವಕಾಶ : ತಾನು ಹೇಳಿದ್ದಕ್ಕೆ ಮಗು ಒಂದೇ ಇದ್ದರೆ ಅದು ಉದ್ಧಟತನ ಎಂದು ಎಲ್ಲ ಸಂದರ್ಭಗಳಲ್ಲೂ ಭಾವಿಸುವಂತಿಲ್ಲ. ಮಕ್ಕಳು ಹೇಳುವ ದನಿಯ ಶೈಲಿಯಿಂದಲೇ, ಅವರು ಮನಸ್ಸಿನ ಭಾವನೆ ಹೇಳುತ್ತಿದ್ದಾರೋ, ಕೇವಲ ವಿರೋಧಿಸಲೆಂದೇ ಉದ್ಧಟತನದ ಮಾತಾಡುತ್ತಿದ್ದಾರೋ ಎಂದು ತಿಳಿಯುತ್ತದೆ. ಯಾವುದೋ ತಿಂಡಿ, ಬಟ್ಟೆ ಬೇಡ ಎಂದು ಮಗು ಹಟ ಮಾಡಲು ತನ್ನದೇ ಕಾರಣ ಇರುತ್ತದೆ. ಅದನ್ನು ತಿಳಿಯುವ ಯತ್ನ ಮುಖ್ಯ. ಮಗು ಹಾಲು ಬೇಡ ಎಂದು ಹಟ ಹಿಡಿದರೆ, ಹಾಲಿನಿಂದಾಗುವ ಉಪಯೋಗ ಮನವರಿಕೆ ಮಾಡಿಕೊಡಬೇಕಾಗುತ್ತದೆ.

ಸಹವಾಸ : ಮಕ್ಕಳು ಎಂಥವರ ಜೊತೆ ಸೇರುತ್ತಾರೆ ಎಂಬುದೂ ಮುಖ್ಯ ಜಗಳಗಂಟರು, ಉಢಾಯಿಸಿ ಮಾತಾಡುವವರ ಜೊತೆ ಇದ್ದರೆ ಅವರ ಹಾದಿಯೇ ಹಿಡಿಯುತ್ತಾರೆ. ಈಚಿನ ದಿನಗಳಲ್ಲಿ ಟಿವಿಯಲ್ಲಿ ವಿಚಿತ್ರ ಚೇಷ್ಟೆಯಲ್ಲಿ, ಬೈದಾಟದಲ್ಲಿ ತೊಡಗುವ ಮಕ್ಕಳು ರೌಡಿತನ ಪ್ರದರ್ಶಿಸುವ ಮಕ್ಕಳನ್ನು ಕಂಡು ಪ್ರಭಾವಿತರಾಗುವವರೂ ಹೆಚ್ಚಿದ್ದಾರೆ. ಚರ್ಚೆಯೊಂದು ನಡೆಯುವಾಗ ಎಲ್ಲರ ಬಾಯಿ ಮುಚ್ಚಿಸುವ ವ್ಯಕ್ತಿ ಮೆಚ್ಚುಗೆ ಆಗಿಬಿಡುತ್ತಾನೆ. ಅವನ ಹಾಗೇ ತಾವೂ ದಬಾಯಿಸಿದರೆ ತನಗೆ ಬೇಕಾದ್ದು ಪಡೆಯಬಹುದು ಎಂಬ ಭಾವನೆ ಹುಟ್ಟುತ್ತದೆ ಮಕ್ಕಳಲ್ಲಿ.

ಮಕ್ಕಳು ಎಂಥ ಕಾರ್ಯಕ್ರಮ ನೋಡಬೇಕೆಂದು ತಂದೆ ತಾಯಿ ನಿರ್ಧರಿಸಬೇಕು. ಸಾಧ್ಯವಾದಲ್ಲಿ ತಾವೂ ಆ ಸಮಯದಲ್ಲಿ ಜೊತೆ ಇರಬೇಕು. ಅದಾಗದೇ ಇದ್ದಲ್ಲಿ, ಆಗಾಗ ಅತ್ತ ಕಣ್ಣು ಹಾಯಿಸಿ ಎಂಥ ಕಾರ್ಯಕ್ರಮ ಬರುತ್ತಿದೆ ಎಂಬುದರ ಬಗ್ಗೆ ನಿಗಾ ಇರಿಸುವುದಾದರೂ ಮಾಡಬೇಕು.

ಪ್ರತಿಕ್ರಿಯೆ : ಮಕ್ಕಳು ಉದ್ಧಟತನದಿಂದ ವರ್ತಿಸಿದರೆ, ಕಾರಣ ಇಲ್ಲದೆ ಎದುರಾಡಿದರೆ ತಕ್ಷಣ ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸುವುದು ಮುಖ್ಯ. 'ಇನ್ನೊಂದು ಸಲ ಹೀಗೆ ಮಾಡಿದರೆ ಗ್ರಾಚಾರ ಬಿಡಿಸ್ತೀನಿ' ಎಂದು ಎಚ್ಚರಿಸುವುದರಿಂದ ಉಪಯೋಗವಿಲ್ಲ. ಹಾಗೆಂದು ತಕ್ಷಣ ಮನಸಾರೆ ದಂಡಿಸುವುದು, ಹೊಡೆಯುವುದು ಸರಿಯಲ್ಲ. ಮಗುವಿಗೆ ತಾನು ಮಾಡಿದ್ದು ತಪ್ಪೆಂದು ತಕ್ಷಣ ಮನವರಿಕೆ ಮಾಡಿಕೊಡಬೇಕು.

ಶಿಕ್ಷೆಗಳೂ ಮೃದುವಾಗಿರಬೇಕು. ಈ ತಪ್ಪಿಗಾಗಿ ನೀನಿವತ್ತು ಟೀವಿ ನೋಡುವಂತಿಲ್ಲ, ಇವತ್ತು ನಿನ್ನ ಸ್ನೇಹಿತರ ಜೊತೆ ಆಟಕ್ಕೆ ಹೋಗುವಂತಿಲ್ಲ, ಎಂಬಂಥ ಸಣ್ಣ ಪುಟ್ಟ ದಂಡನೆಗಳು ಮಕ್ಕಳನ್ನು ಮತ್ತೆ ಅಂಥ ತಪ್ಪು ಮಾಡದಂತೆ ನಿಯಂತ್ರಿಸಬಲ್ಲವು.

ಕೆಲವು ಸಲ ಮಕ್ಕಳು ಹಾಗೆ ವರ್ತಿಸಿದಾಗ, ತನಗೆ ಅದು ಇಷ್ಟ ಆಗಲಿಲ್ಲಎಂದು ತೋರಿ, ಯಾವುದೇ ಮಾತು ಆಡದೇ ಇದ್ದಾಗಲೂ ನಿರೀಕ್ಷಿತ ಪರಿಣಾಮ ಬೀರುತ್ತದೆ. ತಂದೆಗೋ, ತಾಯಿಗೋ ತಾನು ಮನಸ್ಸು ನೋಯಿಸಿದೆ ಎಂಬುದು ಮಕ್ಕಳಿಗೆ ಮನವರಿಕೆ ಆಗುತ್ತದೆ. ಅವರು ತಾವಾಗಿಯೇ ಬಂದು ತಾವು ಮಾಡಿದ್ದು ತಪ್ಪಾಯಿತು' ಎಂದು ತಮ್ಮದೇ ರೀತಿಯಲ್ಲಿ ಅಭಿವ್ಯಕ್ತಿಸಬಹುದು. ಆಗ ಸರಿಯಾದ ವಿಚಾರ ತಿಳಿಸುವುದೂ ಒಳ್ಳೆಯದು.

■ ರಾಜನ್



ಸರಳುಗಳ ಹಿಂದಿನ ನಿಟ್ಟುಸಿರು

ಹೆಂಗಸು ಕ್ಷಮಯಾಧರಿತ್ರಿ. ಭೂಮಿಯಂತೆ ಸಹನೆ ಉಳ್ಳವಳು. ಅಂಥ ಹೆಣ್ಣು ಕೂಡ ಸಹನೆ ಮೀರುವುದುಂಟು. ಅಂಥ ಎಷ್ಟೋ ಪ್ರಕರಣಗಳಲ್ಲಿ ಸಿಕ್ಕು ಸೆರೆವಾಸಿಯಾದ ಅರವತ್ಮೂರು ಜನ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿಯೇ ಇದ್ದಾರೆ. ಪಶ್ಚಾತ್ತಾಪದ ನಿಟ್ಟುಸಿರಿನ ನಡುವೆಯೇ ಮತ್ತೊಂದು ಬದುಕು ಕಟ್ಟಿಕೊಳ್ಳುವುದು ಅವರಿಗೆ ಅನಿವಾರ್ಯ. ಆದರೆ ಅದೂ ಒಂದು ಬದುಕೇ!

ಬೆಂಗಳೂರಿನ ಕೇಂದ್ರ ಕಾರಾಗೃಹದ ದೊಡ್ಡ ಬಾಗಿಲು ನಡುವಿನ ಕಿಂಡಿ ಬಾಗಿಲು ತೆರೆದು ಒಳಗೆ ಹೋಗುವಾಗ ಒಂದು ರೀತಿಯ ಆತಂಕ, ಮುಜುಗರ. ಏನೆಲ್ಲ ಕಾಣಬೇಕಾಗಬಹುದೋ ಎಂಬ ಕಾರಣಕ್ಕೇ ಇಂಥ ಆತಂಕ.

ದೊಡ್ಡ ಮೀಸೆಯ ಸೂಪರಿಂಟೆಂಡೆಂಟ್ ಬಿ.ಎಸ್. ಅಬ್ಬಾಯಿ ಚಕಚಕನೆ ಮಾಹಿತಿ ನೀಡುತ್ತಾ ಹೋಗುತ್ತಾರೆ. ಒಳಗಿರುವ 2393 ಕೈದಿಗಳಲ್ಲಿ 63 ಜನ ಮಹಿಳೆಯರು. ಕೊಲೆ ಕೇಸಿನ ವಿಚಾರಣಾಧೀನ ಮಹಿಳಾ ಕೈದಿಗಳ ಸಂಖ್ಯೆಯೇ ಹದಿನೆಂಟು. ಹೀಗೇ ಅವರು ಹೇಳುತ್ತಾ ಏಳು ಜನ ಜೀವಾವಧಿ ಶಿಕ್ಷೆಗೊಳಗಾದ ಮಹಿಳೆಯರು ಇಲ್ಲಿದ್ದಾರೆ ಎಂದೆಲ್ಲ ಹೇಳುವಾಗ, ಕ್ಷಣ ಉಸಿರು ನಿಲ್ಲುತ್ತದೆ.

ಈ ಏಳೂ ಜನ ಸುದೀರ್ಘ ಸೆರೆವಾಸ ಅನುಭವಿಸುತ್ತಾ ಇರುವುದರ ಬಗ್ಗೆಯೇ ಅನುತಾಪ. ಮುಂದೇನು? ಎಂಬ ಪ್ರಶ್ನೆಯೂ ಏಳುತ್ತದೆ. ಹದಿನಾಲ್ಕು ವರ್ಷಗಳ ಸುದೀರ್ಘ ಬಂಧನದ ನಂತರ ಜೀವನವೆಲ್ಲ ಚೆಲ್ಲಾಡಿ ಹೋಗಿರುತ್ತದೆ.

ಕೆಲವರಿಗೆ ಮರಳಿ ಹೋಗಲು ಮನೆ ಕೂಡ ಇಲ್ಲ. ಎಷ್ಟೋ ಜನಕ್ಕೆ ಮನೆಯವರು ತಮ್ಮನ್ನು ಸ್ವೀಕರಿಸಬಹುದೆಂಬ ನಂಬಿಕೆಯೂ ಇಲ್ಲ.

ಮಹಿಳಾ ಕೈದಿಗಳಿರುವ ಕಡೆ ಹೀಗೇ, ಜೈಲು ಸಿಬ್ಬಂದಿಯೊಡನೆ ನಡೆದು ಹೋದಾಗ, ಒಂದು ಕ್ಷಣ ನಂಬಿಕೆಯಾಗದ ಸ್ಥಿತಿ. ಅವರಿರುವ ಜಾಗ ನೀಟಾಗಿದೆ. ಸಾರಿಸಿ ಕಣ್ಣು ತುಂಬುವ ರಂಗೋಲಿ ಬಿಡಿಸಿದ್ದಾರೆ.

ತಾನಿರುವುದು ಜೈಲಿನಲ್ಲೋ! ಯಾವುದೋ ಮನೆಯ ಅಂಗಳದಲ್ಲೋ! ಎಂದು ಒಂದು ಕ್ಷಣ ಗಲಿಬಿಲಿ. ಹೆಂಗಸರು ಹಾಗೇ ಅಲ್ಲವೇ! ಎಲ್ಲಿ ಇದ್ದರೂ, ಇಡೀ ವಾತಾವರಣಕ್ಕೆ ತಮ್ಮ ಕುಶಲತೆಯಿಂದ ಶೋಭೆ ತಂದುಬಿಡುತ್ತಾರೆ.

ಅಲ್ಲೇ ಒಂದು ಕೆಲವು ದಿನಗಳ ಕೂಸು. ಕ್ರಿಸ್ಮಸ್‌ಗೆ ಎರಡು ದಿನಕ್ಕೆ ಮುಂಚೆ ಜೈಲಿನಲ್ಲೇ ಹುಟ್ಟಿದ್ದು. ಪಿಳಿಪಿಳಿ ಕಣ್ಣು ಬಿಡುತ್ತಿದ್ದ ಕೂಸನ್ನು ಹೆತ್ತಿದ್ದು ಶಿವಮೊಗ್ಗಾ ಲಲಿತಾ ಎಂಬುವವರು. ದಣಿವಾರಿಸಿಕೊಳ್ಳುತ್ತಾ ಮಲಗಿದ್ದ ಆಕೆಯ ಬದಲು, ಉಳಿದ ಮಹಿಳೆಯರೆಲ್ಲ ಅದಕ್ಕೆ ತಾಯಂದಿರೇನೋ ಎಂಬಂತೆ ಮುತುವರ್ಜಿ. ಅಲ್ಲೇ ಇರುವ ವೈದ್ಯಕೀಯ ಸಿಬ್ಬಂದಿ ಮಗುವನ್ನು ನೋಡಿಕೊಳ್ಳುತ್ತಾ ಇತ್ತು.

ಜೈಲಿನಲ್ಲೇ ಹುಟ್ಟಿದ ಕೂಸು ಇದಾದರೆ, ಮಾಡದ ತಪ್ಪಿಗೆ, ತಪ್ಪು ಮಾಡಿದ ತಾಯಂದಿರ ಕೈಹಿಡಿದು ಜೈಲಿನೊಳಕ್ಕೆ ನಡೆದು ಬಂದ ಎಷ್ಟೋ ಹಸು ಕಂದಗಳು ಅಲ್ಲಿ ಆಡಿಕೊಂಡಿವೆ. ಅವಕ್ಕೆ ಹೊರ ಜಗತ್ತು ಒಂದಿದೆ ಎಂಬ ಪರಿವೆ ಕೂಡ ಇಲ್ಲ. ಎತ್ತರಕ್ಕೆ ನಿಂತ ನಾಲ್ಕು ಗೋಡೆಗಳ ನಡುವೆಯೇ ಅವುಗಳ ಪ್ರಪಂಚ. ತಾಯಿಯಿಂದ ದೂರ ಇರಲಾಗದ ಇಂಥ ಹಸುಳೆಗಳ ಪಾಡು ನೋಡಿದಾಗ ಸಹಜವಾಗಿಯೇ 'ಯಾವ ತಪ್ಪಿಗೆ ಈ ಶಿಕ್ಷೆ ಇವಕ್ಕೆ?' ಎಂಬ ಪ್ರಶ್ನೆ ಏಳುತ್ತದೆ.

ಒಂದೇ ಮನೆಯವರ ಹಾಗೆ ಹೊಂದಿಕೊಂಡಿರುವ ಈ ಜನ, ಕಾರಾಗೃಹದ ಬಂಧನದ ನಡುವೆಯೂ ಪ್ರೀತಿ, ಮಮತೆಗಳ ಸೆಲೆ ಆರದಂತೆ ನೋಡಿಕೊಂಡಿದ್ದಾರೆ.

ಒಬ್ಬೊಬ್ಬರನ್ನೂ ಮಾತಾಡಿಸಲು ತೊಡಗಿದ್ದೇ, ಅವರ ಆನಂದದ ತೆರೆಯ ಹಿಂದಿನ ದುಃಖ, ವಿಷಾದಗಳೆಲ್ಲ ಬಯಲಾಗುತ್ತಾ ಹೋಗುತ್ತವೆ. ಒಡಹುಟ್ಟಿದ ಅಕ್ಕನನ್ನೇ ಕೊಂದು ಮೂರು ವರ್ಷಗಳ ಹಿಂದೆ ಇಲ್ಲಿಗೆ ಬಂದ ಜಯಮ್ಮನಿಗೆ ಶಿಕ್ಷೆ ಎದುರು ನೋಡುತ್ತಾ ಕುಳಿತಿರುವುದು ಕಾಯಕ. ಚಿಕ್ಕಮಗಳೂರಿನ ಮೂವತ್ತೆರಡು ವಯಸ್ಸಿನ ಈ ಹೆಂಗಸಿಗೆ, ತಾನು ಮಾಡಿದ ಕೃತ್ಯದ ಬಗ್ಗೆ ಪಶ್ಚಾತ್ತಾಪವಿದೆ. ಆದರೆ ಎಲ್ಲ ಕೈಮೀರಿ ಹೋಗಿದೆ. ಪಾಲಿಗೆ ಬಂದದ್ದು ಪಂಚಾಮೃತ ಎಂಬ ನಿರಾಸೆಯಿಂದ ಮೂಡಿದ ಮಾತು ಹೊರ ಹಾಕುತ್ತಾಳೆ.

ಶಿವಮೊಗ್ಗಾ ಜಿಲ್ಲೆಯಿಂದ ಬಂದ 28 ವರ್ಷದ ಅಮೀನಾ ಒಂದು ಅಮಾನವೀಯ ಕೊಲೆಯ ಮೂಕ ಪ್ರೇಕ್ಷಕಳು. ಗಂಡನೇ

ರಾಜ್ಯದ ಇಪ್ಪತ್ತು ಕೇಂದ್ರ ಕಾರಾಗೃಹದಲ್ಲಿ 244 ಮಹಿಳಾ ಕೈದಿಗಳು, ಅವರ ಇಪ್ಪತ್ಮೂರು ಜನ ಎಳೆಯ ಮಕ್ಕಳು ಇದ್ದರೆಂಬುದು ನವೆಂಬರ್ 30 ರಂದು ದೊರಕಿದ ಅಂಕಿ ಅಂಶ. ಬೆಂಗಳೂರು ಕೇಂದ್ರ ಕಾರಾಗೃಹ ಒಂದರಲ್ಲೇ 265 ಮಹಿಳಾ ಕೈದಿಗಳಿದ್ದರು.

ಮಹಿಳಾ ಕೈದಿಗಳದೇ ವಿಚಿತ್ರ ಸಮಸ್ಯೆ. ಬಸಿರು, ಹೆರಿಗೆ, ಬಾಣಂತನ ಮುಂತಾದವು ಬಾಧಿಸಿದಾಗ ಕಾನೂನಿನಲ್ಲಿ ರಿಯಾಯಿತಿ ಇರಬೇಕೆಂಬುದು ಅವರ ಮೊರೆ.

ಮಾನವೀಯ ದೃಷ್ಟಿಯಿಂದ ಮಹಿಳಾ ಕೈದಿಗಳ ಬಂಧನದ ಅವಧಿ ಕಡಿಮೆ ಮಾಡಿದರೆ, ತಾವು ಉತ್ತಮ ಬಾಳ್ವೆ ನಡೆಸಲು ಸಾಧ್ಯವಿದೆ ಎಂದೂ ಅವರು ಹೇಳುತ್ತಾರೆ.

ಕೊಲೆಗಾರ. ಆದರೆ, ಕೊಲೆ ಮಾಡಿದ. ಗಂಡನೇ ಹೆಂಡತಿಯನ್ನು ಬಲಿಯಾಗಿಸಿ ತಾನು ಪಾರಾಗಲು ನೀಡಿದ ಸುಳ್ಳು ಹೇಳಿಕೆ ಅವಳ ಪಾಲಿಗೆ ಶಾಪವಾಗಿದೆ. 'ಪಕ್ಕದ ಮನೆಯವನ ಜೊತೆ ಆಕೆಗೆ ಸಂಬಂಧವಿತ್ತು. ಅದನ್ನು ಆಕ್ಷೇಪಿಸಿ ನಿತ್ಯ ಜಗಳವಾಗುತ್ತಿತ್ತು. ಒಂದು ದಿನ ಸಿಟ್ಟಿಗೆದ್ದ ಅಮೀನಾ ಪಕ್ಕದ ಮನೆಯವನನ್ನು ಕೊಂದು ಹಾಕಿದಳು' ಎಂದು ಗಂಡನೇ ನ್ಯಾಯಾಲಯದಲ್ಲಿ ಹೇಳಿಕೆ ನೀಡಿದ. ಈಗ ಹೆಂಡತಿ ಒಂದು ಕಡೆ. ಅದೇ ಜೈಲಿನ ಇನ್ನೊಂದು ಕಡೆ ಗಂಡ. ಕಳೆದ ಐದು ವರ್ಷಗಳಿಂದ ಒಂದೇ ಜೈಲಿನಲ್ಲಿ ಇದ್ದರೂ ಅವರು ಗಂಡ ಹೆಂಡತಿಯರಲ್ಲ. ಕೊಲೆ ಮಾಡಿದ ಗಂಡ ನಿಜ ಹೇಳುವವರೆಗೆ ಅಮೀನಾಗೆ ಮುಕ್ತಿ ಇಲ್ಲ.

ಜೈಲುವಾಸ ಕೇವಲ ಬಡವರು, ದಿಕ್ಕಿಲ್ಲದವರ ಪಾಡಲ್ಲ. ಶ್ರೀಮಂತ ಜನ ಕೂಡ ಇಲ್ಲಿ ದಿಕ್ಕಿಲ್ಲದವರಾಗಿ ಬಿಡುತ್ತಾರೆ. ಗುರುತರ ಆರೋಪ ಬಂದೊಡನೆ, ಹೆಂಗಸಿಂದ ಎಲ್ಲ ಸಂಬಂಧ ಕಳಚಿಕೊಂಡು ಬಿಡುತ್ತಾರೆ. ಅಂಥ ನತದೃಷ್ಟ ಹೆಣ್ಣು ಶಾಹೀನಾ. ಸಾಗರದ ಮುನಿಸಿಪಲ್ ಕೌನ್ಸಿಲರ್ ಸಾಬ್ ಜಾನ್‌ಸಾಬ್ ಅವರ ಎರಡನೇ ಪತ್ನಿ. ಮೊದಲ ಹೆಂಡತಿಯ ಮಗಳು ಕೊಲೆಯಾದದ್ದೇ ಈಕೆಯ ಗ್ರಹಚಾರ ಬಿಗಡಾಯಿಸಿತು.




ಕಾರ್ಯಕ್ರಮದಲ್ಲಿ ಮಹಿಳಾ ಕೈದಿಗಳು

ರಾಜ್ಯದ ಇಪ್ಪತ್ತು ಕಾರಾಗೃಹಗಳಲ್ಲಿ ಕೊಲೆ ಆಪಾದನೆಯ ಮೇಲೆ ವಿಚಾರಣೆ ಎದುರಿಸುತ್ತಿರುವ 94 ಮಹಿಳಾ ಕೈದಿಗಳಿದ್ದಾರೆ. ಇತರ ಪ್ರಕರಣಗಳಲ್ಲಿ ವಿಚಾರಣೆ ಎದುರಿಸುತ್ತಾ ಇರುವವರು 96 ಜನ. ಇದಲ್ಲದೇ ಶಿಕ್ಷೆಗೆ ಗುರಿಯಾಗಿರುವ 54 ಜನ ಮಹಿಳೆಯರಿದ್ದಾರೆ.

ಇಂಥ ಮಹಿಳೆಯರ ಜೊತೆಯೇ ರಾಜ್ಯಾದ್ಯಂತ 14 ಗಂಡು ಮಕ್ಕಳು, ಒಂಬತ್ತು ಹೆಣ್ಣುಮಕ್ಕಳು ಜೈಲುಗಳಲ್ಲಿ ಇದ್ದಾರೆ. ಬೆಂಗಳೂರು ಜೈಲಲ್ಲಿ ನಾಲ್ಕು ಗಂಡು ಹುಡುಗರು, ಇಬ್ಬರು ಹುಡುಗಿಯರು ತಮ್ಮ ತಾಯಂದಿರೊಂದಿಗೆ ಇದ್ದಾರೆ.

ನಿಮಗೆ ಆಶ್ಚರ್ಯ ಎನಿಸಬಹುದು ರಾಜ್ಯದಲ್ಲಿ ಟಾಡಾ ಕಾಯಿದೆಯಡಿ ಬಂಧಿತರಾದ ಹನ್ನೆರಡು ಜನ ಮಹಿಳೆಯರಿದ್ದಾರೆ.

ಮಲಮಗಳು ಬಕ್ಲೀಸ್ ಸಣ್ಣ ಹುಡುಗಿಯಲ್ಲ. ಎಂ.ಬಿ.ಬಿ.ಎಸ್. ಓದಿ ವೈದ್ಯಳಾಗಿದ್ದವಳು. ಸಾಗರದ ಪ್ರಖ್ಯಾತ ನರ್ಸಿಂಗ್ ಹೋಂ ಒಂದರಲ್ಲಿ ದುಡಿಯುತ್ತಿದ್ದಳು. ಸಹೋದ್ಯೋಗಿ ಡಾ. ಸುಜಾ ಉದ್ದೀನ್ ಎಂಬಾತನನ್ನು ಪ್ರೀತಿಸುತ್ತಿದ್ದಳು. ಇವರ ಪ್ರೀತಿಗಿದ್ದ ಒಂದೇ ಅಡ್ಡಿ ಎಂದರೆ ಡಾ. ಸುಜಾ ಉದ್ದೀನ್‌ಗೆ ಮೊದಲೇ ಮದುವೆಯಾಗಿ ಎರಡು ಮಕ್ಕಳೂ ಇದ್ದುದು.



ಅಧ್ಯಯನ ಶಿಬಿರದಲ್ಲಿ ಪಾಲ್ಗೊಂಡ ಮಹಿಳಾ ಕೈದಿಗಳು

ಡಾ. ಬಕ್ಲೀಸ್ ಒಂದು ದಿನ ಮನೆಯಲ್ಲಿ ಮಲಗಿದ್ದಾಗಲೇ ಕೊಲೆಯಾದಳು. ಆರೋಪ ಮಲತಾಯಿಯ ಮೇಲೆ ಬಂತು. ಆಕೆಯ ವಿರುದ್ಧ ಇಪ್ಪತ್ತೆರಡು ಸಾಕ್ಷಿಗಳಿವೆ. ಶಾಹೀನಾ ಬಂಧಿತಳಾಗಿ, ವಿಚಾರಣಾಧೀನ ಕೈದಿಯಾಗುತ್ತಿದ್ದಂತೆ ಪತಿ ಸಾಬ್‌ಜಾನ್‌ಸಾಬ್ ಆಕೆಯಿಂದ ದೂರವಾದ. ವಿವಾಹ ವಿಚ್ಛೇದನ ಪಡೆದುಕೊಂಡ. ಆರು ವರ್ಷದ ಹಿಂದೆ ಕಾರಾಗೃಹ ಸೇರಿದ ಶಾಹೀನಾಗೆ ಮಕ್ಕಳಿಲ್ಲ. ವಿಚಾರಣೆ ಮುಗಿದು, ಆಕೆ ಏನಾದರೂ ಪಡೆದರೆ ಮರಳಿ ಹೋಗಲು ತನ್ನದೆಂಬ ಮನೆ ಇಲ್ಲ.

''ಬಿಡುಗಡೆ ಆದ ಮೇಲೆ ಏನು ಮಾಡ್ತೀಯಾ?''

''ನನಗ್ಯಾರೂ ಇಲ್ಲ. ನನ್ನ ಮನೆ, ಮಕ್ಕಳಿಲ್ಲ. ಎಲ್ಲಾದರೂ ಯಾರಾದರೂ ಆಶ್ರಯ ಕೊಡ್ತಾರಾದರೆ ಅಲ್ಲಿಗೆ ಹೋಗಬೇಕು..''

ಶೂನ್ಯದಲ್ಲಿ ದೃಷ್ಟಿ ನೆಟ್ಟು ಶಾಹೀನಾ ಉತ್ತರಿಸುತ್ತಾಳೆ.

ನೆಲಮಂಗಲದ ವೆಂಕಟಲಕ್ಷ್ಮಿಯದು ಇನ್ನೊಂದೇ ಕತೆ. ಗಂಡ ಕುಡುಕ. ಬೇರೆ ಒಬ್ಬಳ ಜೊತೆ ಸಂಬಂಧ ಬೇರೆ. ಇದು ಸಾಲದೆಂಬಂತೆ ನಿತ್ಯ ಹೆಂಡತಿಯನ್ನು ಆತ ಬಡಿಯುತ್ತಿದ್ದ. ಇದನ್ನು ಸಹಿಸಲಾರದೆ ಒಂದು ದಿನ ಆಕೆ ಗಂಡನನ್ನೇ ಮುಗಿಸಿದಳು. ಅದೊಂದು ಆವೇಶದ ಕ್ಷಣ. ನಾಲ್ಕು ವರ್ಷದಿಂದ ವಿಚಾರಣಾಧೀನ ಕೈದಿಯಾಗಿರುವ ಆಕೆಗೆ ನಿಧಾನವಾಗಿ ಅರಿವು ಮೂಡಿದೆ,. ಆದರೆ ಮಿಂಚಿ ಹೋದ ಕೆಲಸಕ್ಕೆ ಈಗ ಚಿಂತಿಸಿ ಫಲವಿಲ್ಲ.

ಎಷ್ಟೋ ಜನ ಇಂಥ ಆವೇಗ, ಉದ್ವೇಗಕ್ಕೆ ಬಲಿಯಾಗಿ ಏನೋ ತಪ್ಪು ಮಾಡಿದವರು. ಒಂಟಿಯಾಗಿ ಜೈಲಿನ ಕೋಣೆಯಲ್ಲಿ ಮುದುಡಿ ಕುಳಿತಾಗ ಗಂಡ,ಮಕ್ಕಳು ಎಲ್ಲ ನೆನಪಾಗುತ್ತಾರೆ. ಆಗ ಮನಸ್ಸಿಗೆ ತೀರದ ಬೇಸರ. ಕೆಲವರಿಗೆ ಬೇಗ ಬಿಡುಗಡೆಯಾಗಿ ಮರಳಿ ತಮ್ಮ ಮನೆಯ ಬೆಚ್ಚನೆಯ ಗೂಡು ಸೇರುವ ತವಕ. ಇನ್ನು ಕೆಲವರಿಗೆ ಇಲ್ಲಿಂದ ಹೋದರೆ ಮುಂದೇನು? ಎಂಬ ಚಿಂತೆ.

ಇಂಥವರ ಬಾಳಿನಲ್ಲೂ ಬೆಳಕು, ತಿಳುವಳಿಕೆ ಮೂಡಿಸುವ ಯತ್ನ ಸರ್ಕಾರ, ಹಲವಾರು ಸ್ವಯಂ ಸೇವಾ ಸಂಘಟನೆಗಳು ಕೈಗೆತ್ತಿಕೊಂಡಿವೆ. ಕಸೂತಿ, ಹೆಣಿಗೆಯಂಥ ಕೆಲಸ ಕಲಿಸುವುದರಿಂದ ಹಿಡಿದು ತಿಳುವಳಿಕೆ ಮೂಡಿಸುವ ಕೆಲಸ ನಿರಂತರ ನಡೆಯುತ್ತದೆ.

ಬಡ, ಅವಿದ್ಯಾವಂತ ಮಹಿಳೆಯರಿಗೆ ಕಾನೂನು ಮರ್ಮ ತಿಳಿಯದು. ಶ್ರೀಮಂತರಾದರೆ ವಕೀಲರನ್ನಿಟ್ಟು, ಜಾಮೀನು ಪಡೆಯುತ್ತಾರೆ. ಬಡ ಮಹಿಳೆಯರಿಗೆ ಇಂಥ ಸವಲತ್ತು ಇಲ್ಲ.

ಉಚಿತ ಕಾನೂನು ನೆರವು ಯೋಜನೆ ಎಂಬುದು ರಾಜ್ಯದಲ್ಲಿ ಇದೆಯಾದರೂ, ಇವರ್‍ಯಾರೂ ನೆರವು ನೀಡಲೆಂದು ಬಡ ಮಹಿಳಾ ಕೈದಿಗಳನ್ನು ಹುಡುಕಿ ಬರುವುದಿಲ್ಲ. ಜೈಲಿನಲ್ಲಿ ಬಂಧಿತರಾದ ಈ ಜನಕ್ಕೆ, ಇಂಥದೊಂದು ವ್ಯವಸ್ಥೆ ಇದೆ ಎಂಬುದೂ ತಿಳಿಯದು.

ಇದೇ ಹಲವರ ಪಾಲಿಗೆ ಬಾಳಿನ ಕತ್ತಲ ನಡುವೆ ಕಾಣುವ ಬೆಳಕಿನ ಕುಡಿ.

■ ಕೆ.ಜಿ.ನಾಗಲಕ್ಷ್ಮೀಬಾಯಿ

ಬಡವರನ್ನೇ ಕಾಡುವ ದೇವರುಗಳು

ಬಡತನ, ಅಜ್ಞಾನ ತುಂಬಿದ ಈ ದೇಶದಲ್ಲಿ ದೇವರ ಹೆಸರಲ್ಲಿ ಆಗುವಷ್ಟು ಶೋಷಣೆ, ಹಿಂಸೆ ಎಲ್ಲೂ ಆಗುವುದಿಲ್ಲ. ವಿಚಾರವಂತರು, ಶ್ರೀಮಂತರನ್ನು ಅಷ್ಟಾಗಿ ಕಾಡದ ಈ ದೇವರುಗಳಿಗೂ ಅದೇಕೋ ಅವಿದ್ಯಾವಂತರು, ಬಡವರ ಮೇಲೆಯೇ ಸಿಟ್ಟು. ಇವು ವಿಚಿತ್ರ ಆಚರಣೆಗಳಿಗೆ ದಾರಿ. ಅಂಥ ಒಂದು ಆಚರಣೆ 'ಸಿಡಿ'. ಕಲ್ಬುರ್ಗಿ ಜಿಲ್ಲೆಯ ಘತ್ತರಗಿಯಲ್ಲಿ ನಡೆಯುವ ಆಚರಣೆಯ ವಿವರ ಇಲ್ಲಿದೆ.



'ಸಿಡಿಯ ಉಡುಗೆ' ತೊಟ್ಟು ಸಿಡಿ ಆಡಲು ಸಜ್ಜಾಗಿ ಕುಳಿತ ಮಹಿಳೆ

ಘತ್ತರಗಿ ಭಾಗಮ್ಮನ ಹೆಸರಲ್ಲಿ ಸಿಡಿ

ಕಲಬುರ್ಗಿ ಜಿಲ್ಲೆಯ ಜೇವರ್ಗಿ-ಅಫಜಲ್‌ಪುರ ತಾಲೂಕಿನ ಕಟ್ಟ ಕಡೆಯ ಹಳ್ಳಿ ಘತ್ತರಗಿಯ ಭಾಗಮ್ಮ ಉತ್ತರ ಕರ್ನಾಟಕದ ಹಳ್ಳಿಗಳಲ್ಲೆಲ ಪ್ರಸಿದ್ಧ. ಈ ದೇವತೆಗೆ ಹರಕೆ ಹೊತ್ತು ಆಡುವ 'ಸಿಡಿ'ಯಂತೂ ಇನ್ನೂ ಸುಪ್ರಸಿದ್ಧ. ಸಿಡಿಯನ್ನು ಆಡಲೆಂದೇ ಕಲ್ಬುರ್ಗಿ, ರಾಯಚೂರು, ಬೀದರ, ಬಿಜಾಪುರ ಗಳಲ್ಲದೆ ಗಡಿ ರಾಜ್ಯವಾದ ಮಹಾರಾಷ್ಟ್ರದ ಸೊಲ್ಲಾಪುರ ಮುಂತಾದ ಊರುಗಳಿಂದಲೂ ಜನ ಇಂದಿಗೂ ಬರುತ್ತಾರೆ. ಅಫಜಲ್ ಪುರ-ಜೇವರ್ಗಿಯ ಸೀಮಾರೇಖೆಯಾಗಿ ಹರಿಯುವ ಭೀಮಾನದಿಯ ದಂಡೆಯ ಮೇಲೆ ಪ್ರಕೃತಿ ಸೊಬಗಿನ ಮೂಲೆಯೊಂದರಲ್ಲಿ ನೆಲೆಸಿರುವ ಭಾಗಮ್ಮನದು ಮೂಲತಃ ಹಂಪಿ. ಈಕೆ ಆನೆಗುಂದಿಯ ಅರಸನ ಅಥವಾ ವಿಜಯನಗರ ಸಾಮ್ರಾಜ್ಯದ ಕುಲದೇವತೆ. ಅಲ್ಲಿಯ ಅರಸನೊಬ್ಬ(ಯಾರೆಂಬುದು ಗೊತ್ತಿಲ್ಲ) ಐಶ್ವರ್ಯದ ಮದದಿಂದ ಬಂಗಾರದ ಚಪ್ಪಲಿಗಳನ್ನೇ ಧರಿಸುತ್ತಿದ್ದ. ಇದರಿಂದ ಬೇಸರಗೊಂಡ ಭಾಗಮ್ಮ ಇನ್ನು ತನಗೆ ಅಲ್ಲಿ ಇರೋದು ಅವಮಾನಕರ ಎಂದು ಬಗೆದು ಅಲ್ಲಿಂದ ಯಾರಿಗೂ ಗೊತ್ತಾಗದಂತೆ ಹಾವಾಗಿ ಹರಿದುಕೊಂಡು ದಾರಿಗಡ್ಡ ಬಂದ ಕೃಷ್ಣೆ ಭದ್ರೆಯರನ್ನು ಸೀಳಿ ಈಜಿಕೊಂಡು ಸಿಂದಗಿ ತಾಲೂಕಿನ ಹೆಬ್ಬಾಳ ಹಳ್ಳದಲ್ಲಿ ಬಂದು ಭೀಮೆಯನ್ನು ಸೇರಿಕೊಂಡಳು. ಅಲ್ಲಿಂದ ಮುಂದೆ ಎಲ್ಲಿಗೆ ಹೋಗಬೇಕೆಂದು ದಿಕ್ಕು ತೋಚದಾದಾಗ, ಅಲ್ಲೇ ಜಬ್ಬಲ ಬೆಳೆದ (ಗೌಡಪ್ಪಗೌಡರ ಹೊಲದ) ಹೊಂಡದಲ್ಲೇ ನೆಲೆ ನಿಂತಳು.

ಅಲ್ಲಿ ಈಕೆಯನ್ನು ಯಾರೂ ಗುರುತಿಸಲಿಲ್ಲ. ಕರೆದು ಮಾತಾಡಿಸಲಿಲ್ಲ. ಯಾರಾದರೂ ತನ್ನತ್ತ ಬಂದರೆ, ಅವರಿಗೆ ತಾನು ಯಾರು? ಎಲ್ಲಿಂದ ಬಂದೆ? ಈಗ ಜಬ್ಬಲದಲ್ಲಿ ಕಂಬವಾಗಿ ನಿಂತದ್ದೇಕೆ? ಎಂದು ಹೇಳಬೇಂಕೆಂದು ಕೊಂಡಳು. ಆದರೆ ಬಹು ದಿನಗಳವರೆಗೆ ಯಾರೂ ಈಕೆಯನ್ನು ಗಮನಿಸಲಿಲ್ಲ. ಆಕಸ್ಮಿಕವಾಗಿ ದನ ಕಾಯಲು ಬಂದ ಹುಡುಗನೊಬ್ಬ ಭಾಗಮ್ಮನ ವೃತ್ತಾಂತವನ್ನೆಲ್ಲ ಕೇಳಿ ಊರಿಗೆ ಹೋಗಿ ಊರಿಗೆ ಹಿರಿಯರೆಲ್ಲರ ಮುಂದೆ ಹೇಳಿದ. ಊರಿನ ಮುಖಂಡರೆಲ್ಲ ಜಮೆಯಾಗಿ ಬಂದು ಈ ಕಂಬದ ಆಕಾರದಲ್ಲಿದ್ದ ಭಾಗಮ್ಮನನ್ನು ತಮ್ಮ ಊರಾದ ಘತ್ತರಗಿಗೆ ಕೊಂಡೊಯ್ದು, ಅಲ್ಲಿಯೇ ಒಂದು ಗುಡಿ ಕಟ್ಟಿಸಿಕೊಂಡರಂತೆ. ಗುಡಿಯ ಬಾಗಿಲು ಉತ್ತರಕ್ಕಿದ್ದರೂ, ಭಾಗಮ್ಮನ ಕಂಬದ ಮುಖ ಮಾತ್ರ ದಕ್ಷಿಣಕ್ಕಿದೆ. ಗುಡಿಯ ಹಿಂದೆ ಒಂದು ಸಣ್ಣ ಕಿಂಡಿ ಇದೆ. ಈ ಕಿಂಡಿಯ ಮೂಲಕ ಭಾಗಮ್ಮ ತನ್ನ ತವರೂರ ಕಡೆಗೆ ನಿತ್ಯ ನೋಡುತ್ತ ನಿಂತಿದ್ದಾಳೆ ಎಂದು ಹೇಳುತ್ತಾರೆ. ಇದಿಷ್ಟು ಈ ದೇವತೆಯ ಐತಿಹ್ಯ.

ಈಗ್ಗೆ 70-80 ವರ್ಷಗಳ ಹಿಂದೆ ಘತ್ತರಗಿ ಗ್ರಾಮದ ತಲೆ ದಿಂಬಿಗೆ ಇರುವ 'ಭೀಮೆ' ಉಕ್ಕಿ ಹರಿದಳು. ಇಡೀ ಊರಿಗೆ ಊರೇ ಜಲಾವೃತವಾಯಿತು. ಊರಿನ ಕೂಸು-ಕುನ್ನಿ, ದನ-ಕರ ಭೀಮೆಯ ಪಾಲಾದವು. ಮಣ್ಣಿನ

ಮನೆಗಳೆಲ್ಲ ನೀರಿನಲ್ಲಿ ಕೂಡಿ ಕರಗಿ ಹೋದವು. ಆಗ ಸಾಕಷ್ಟು ಪ್ರಾಣಗಳು ಹೋದವು. ಇಂಥ ಬೀಭತ್ಸ ಪ್ರಸಂಗದಲ್ಲಿ ಊರಿನ ಭಕ್ತಿವಂತ (?) ಸಿದ್ದಪ್ಪ ಪೂಜಾರಿ ಭಾಗಮ್ಮನಲ್ಲಿ ಒಂದು ವಿಚಿತ್ರ ಬೇಡಿಕೆ ಮಾಡಿಕೊಂಡ. ''ಭೋರ್ಗರೆಯುತ್ತ ಹರಿಯುತ್ತಿರುವ ಭೀಮೆ ಈಗಿಂದೀಗ್ಗೆ ಜರ್‍ರನೆ ಇಳಿದರೆ, ಭಾಗಮ್ಮನ ಎದುರು ಕಬ್ಬಿಣದ ಕೊಂಡಿಯನ್ನು ಬೆನ್ನಿಗೆ ಸಿಕ್ಕಿಸಿಕೊಂಡು ಊರ ಮಧ್ಯದ (ನಡೂರ ಲಕ್ಷ್ಮಿ) ಗುಡಿಯಿಂದ ಭಾಗಮ್ಮನ ಗುಡಿಯತನಕ 'ಸಿಡಿ' ಆಡುವುದಾಗಿ ಬೇಡಿಕೊಂಡನಂತೆ!'' ಆಶ್ಚರ್ಯವೆನ್ನುವಂತೆ ಆರ್ಭಟಿಸುತ್ತ ಹರಿಯುತ್ತಿದ್ದ ಭೀಮೆ ತಕ್ಷಣ ಶಾಂತವಾಗಿ ಸಣ್ಣದಾಗಿ ಹರಿಯ ತೊಡಗಿದಳಂತೆ!



ಘತ್ತರಗಿ ಭಾಗಮ್ಮನ ಗುಡಿ

ಈ ಮೇಲಿನ ಕತೆಯ ಅಂತೆ-ಕಂತೆಗಳೆಲ್ಲ ಪುಂಖಾನುಪುಂಖವಾಗಿ ಬೆಳೆದು ಈಗ ದೀಪಾವಳಿಯ ನೀರು ತುಂಬುವ ಹಬ್ಬದಂದು ಶುರುವಾದ 'ಸಿಡಿ' ಆಡುವ ಕಾರ್‍ತಿಕ ಹುಣ್ಣಿಮೆಯ ಹೊನ್ನುಗ್ಗಿಯ ದಿನಗಳವರೆಗೆ ಸಾಂಗೋಪಾಂಗವಾಗಿ ಜರುಗುತ್ತಿದೆ. ವಾರದ ಪ್ರತಿ ಶುಕ್ರವಾರ ಇಲ್ಲಿ ಸಣ್ಣ ಜಾತ್ರೆಯೇ ನೆರೆಯುತ್ತದೆ. ಹತ್ತೆಂಟು ಸಾವಿರ ಜನರು ಇಲ್ಲಿ ಸೇರುತ್ತಾರೆ. ಹೋಟೆಲುಗಳು, ಅಂಗಡಿ ಮುಂಗಟ್ಟು ಮುಂತಾದವರ ವ್ಯಾಪಾರದ ಭರಾಟೆಯಂತೂ ದಿನ ದಿನಕ್ಕೆ ಹೆಚ್ಚುತ್ತಲೇ ಇದೆ. ಹೀಗಾಗಿ ಹಿಂದೊಮ್ಮೆ ದಿಕ್ಕೇಡಿಯಾಗಿದ್ದ ಭಾಗಮ್ಮ ಇಂದು ಸಾವಿರಾರು ಜನ ಭಕ್ತರ ಪ್ರೀತಿಗೆ ಪಾತ್ರಳಾಗಿದ್ದಾಳೆ. ಸರ್ಕಾರವೇ ಎಂಡೋಮೆಂಟ್ ಕಮೀಟಿಯೊಂದನ್ನು ರಚಿಸಿ ಭಾಗಮ್ಮನನ್ನು ಭಾಗ್ಯಲಕ್ಷ್ಮಿ ಎಂಬ ಹೊಸ ಹೆಸರಿನಿಂದ ಕರೆಯುತ್ತಿದೆ. ಚಿನ್ನದ ಮೊಟ್ಟೆಯನ್ನೆ ಇಡುವ ಈ ಕೋಳಿಯ ಸುತ್ತ ಸರ್ಕಾರಿ ಮತ್ತು ಅರೆ ಸರ್ಕಾರಿ ಕಾಕ ಪೋಕರೆಲ್ಲ ತುಂಬಿ ಜನ ಸಾಮಾನ್ಯನ ಜೇಬು ಕತ್ತರಿಸುತ್ತಿದ್ದಾರೆ. ಜೊತೆ ಜೊತೆಗೆ ಅವಿಚಾರ ಅಂಧಶ್ರದ್ದೆಗಳನ್ನು ಬೆಳೆಸುತ್ತಿದ್ದಾರೆ.

ಘತ್ತರಗಿಯ ಭಾಗಮ್ಮನ ಗುಡಿಯ ಸಮೀಪ ಸಾವಿರಾರು ಸಂಖ್ಯೆಯಲ್ಲಿ ಜನ ಗುಡಿಯ ಸುತ್ತ ಮುತ್ತ ಭಾಗ್ಯವಂತಿಯ ಕಥೆ (ಕಟ್ಟುಕತೆ)ಯನ್ನು ಹೇಳುವ ನಾನಾ ಬಗೆಯ ಕ್ಯಾಸೆಟ್ಟುಗಳು, ಸಾವಿರಾರು ಸುಳ್ಳಿನ ಕಂತೆಗಳಿಂದ ಕೂಡಿದ ಪುಸ್ತಕಗಳು, ಬಂಡಾರ, ಕುಂಕುಮ, ಕರಿದಾರ, ಕಾಯಿ, ಕರ್ಪೂರ, ಊದುಬತ್ತಿ ಎಣ್ಣೆ ಮಾರುವವರು ಸಜ್ಜಾಗಿ ಬಕರಾಗಳನ್ನೆ ಇದಿರು ನೋಡುತ್ತ ನಿಂತಿದ್ದರು. ಮೇಲ್ನೋಟಕ್ಕೆ ಸುಶಿಕ್ಷಿತರಂತೆ ಕಾಣುವ ಹಲವಾರು ಜನ ಗಂಡು ಮಕ್ಕಳು-ಹೆಣ್ಣು ಮಕ್ಕಳು ಭಾವ ಪರವಶರಾಗಿ 'ಸಿಡಿ'ಗಾಗಿ ಕಾಯ್ದುಕೊಂಡಿದ್ದಂತೆ ಕಾಣುತ್ತಿತ್ತು.

ಸಿಡಿ ಆಡಬೇಕೆಂದು ಬಯಸುವವರು ಒಂದು ವಾರ ಮುಂಚಿತವಾಗಿಯೇ ಬಂದು ಎಂಡೋಮೆಂಟ್ ಕಮೀಟಿ ನೇಮಿಸಿದ ಅಧಿಕಾರಿಗಳನ್ನು ಸಂಪರ್ಕಿಸಬೇಕು. ಮೊದಲನೆಯ 'ಸಿಡಿ' ಆಡಬೇಕೆಂದು ಬಯಸುವವರು ಅಂದು ನಡೆಯುವ ಭಾಗ್ಯವಂತಿಯ 'ಸಿಡಿ' ಹರಾಜಿನಲ್ಲಿ ಪಾಲ್ಗೊಳ್ಳಬೇಕು. ಯಾರು ಹೆಚ್ಚು ಹಣ ನೀಡಲು ಒಪ್ಪಿಕೊಳ್ಳುತ್ತಾರೋ ಅವರು ಆ ದಿನ ಮೊದಲ ಸಿಡಿ ಆಡಲು ಅರ್ಹರಾಗುತ್ತಾರಂತೆ!

ಹಿಂದಿನ ವಾರದ ಶುಕ್ರವಾರದಂದು ಸಿಡಿಯನ್ನು ಮೊದಲಿಗೆ ಆಢಲು ಉತ್ಸುಕರಾಗಿದ್ದ ಕುಟುಂಬದವರೆಲ್ಲ ಗುಡಿಯ ಪೌಳಿಯೊಂದರಲ್ಲಿ ಸಜ್ಜಾಗಿದ್ದರು. ಅವರಿಗೆ 'ಸಿಡಿಯ ಉಡುಗೆ'ಯನ್ನು ಗುಡಿಯ ಪೂಜಾರಿಗಳೇ ತೊಡಿಸುತ್ತಿದ್ದರು. ಹಣೆಗೆ, ಕೈಯಿಗೆ, ಕಾಲಿಗೆ ಹಸಿ ಕುಂಕುಮ ಹಚ್ಚಿ ಹಣೆ ತುಂಬ ಅಕ್ಕಿಯನ್ನು ಸವರಿ, ತಲೆಯ ತುಂಬ ಮಲ್ಲಿಗೆ ಹೂ ಮುಡಿಸಿದರು. ಕೈ ತುಂಬ ಹಸಿರುಬಳೆ ತೊಡಿಸಿದರು. ಅವರು ತಾವು ತಮ್ಮ ಮನೆಯಿಂದ ತಂದ ಬಂಗಾರದ ಒಡವೆಗಳನ್ನು ಕೊರಳ ತುಂಬ ಮೈ-ಕೈ ತುಂಬ ಧರಿಸಿದರು. ಕಣಕದಲ್ಲಿ ಮಾಡಿದ ಪಣತಿಯಲ್ಲಿ ಎಣ್ಣೆ ಹಾಕಿ, ಬತ್ತಿ ಹಚ್ಚಿ ತಲೆಯ ಮೇಲೆ ಹೊತ್ತು ಭಾಗಮ್ಮನ ಗುಡಿಯ ಮುಂದಿನ ಕಂಬಕ್ಕೆ ಮೊದಲು ಎರಗಬೇಕು. ನಂತರ ಗುಡಿಯ ಹಿಂಭಾಗದ ಕಿಂಡಿಯಲ್ಲಿ ಕಾಣುವ ಭಾಗಮ್ಮನ ಕಂಬವನ್ನು ನೋಡಬೇಕು.

ಹಿತ್ತಲ ಶಿರೂರ ಗ್ರಾಮದ ಮಾಣಿಕಮ್ಮಳಿಗೆ ಭಾಗಮ್ಮಳ ಕಿಂಡಿಯ ಮುಂದೆ ನಿಂತಿರುವ ಡೊಳ್ಳು ಬಡಿಯುವವನ ಡೊಳ್ಳಿಗೆ ಕೈಯ್ಯಾನಿಸಿ ನಡು ಬಾಗಿ ನಿಲ್ಲಲು ಹೇಳಿದರು. ಈಕೆಗೆ ನಾಲ್ಕಾರು ವರ್ಷಗಳ ಹಿಂದೆ ತಲೆಶೂಲೆ ಇತ್ತಂತೆ. ಮೈ ಕೈ ನೋವು ಜಾಸ್ತಿಯಾಗಿ ಮನಸ್ಸೇ ಒಂಥರಾ ಆಗಿತ್ತಂತೆ. ಯಾವ ಡಾಕ್ಟರುಗಳ ಹತ್ತಿರ ಹೋದರೂ ಅದು ಕಡಿಮೆ ಆಗಿದ್ದಿಲ್ಲವಂತೆ. ಒಂದು ಸಲ ಭಾಗಮ್ಮಳ ಘತ್ತರಗಿಗೆ ಬಂದು ನನ್ನ ಅನಾರೋಗ್ಯ ವಾಸಿಯಾದರೆ ಸಿಡಿ ಆಡುವುದಾಗಿ ಬೇಡಿಕೊಂಡಳಂತೆ. ಹೀಗೆ ಬೇಡಿಕೊಂಡ ಕೆಲವೇ ದಿನಗಳಲ್ಲಿ ತನ್ನ ಆರೋಗ್ಯ ಸುಧಾರಿಸಿತಂತೆ. ಹಾಗಾಗಿ ಮಾಣಿಕಮ್ಮ ಈಗ ಇಲ್ಲಿ ಸಿಡಿ ಆಡಲು ಬಂದಿದ್ದಾಳೆ. ನಡು ಬಾಗಿ ನಿಂತ ಮಾಣಿಕಮ್ಮನ ಬೆನ್ನ ಹುರಿಗುಂಟ ಹಬ್ಬಿದ ಚರ್ಮವನ್ನು ಪೂಜಾರಿ ತನ್ನ ಶಕ್ತಿಯನ್ನೆಲ್ಲ ಉಪಯೋಗಿಸಿ ಜಗ್ಗಿ ಹಿಡಿಯುತ್ತಿದ್ದಂತೆಯೇ ಪೂಜಾರಿಗಳು, ವಾಲಗ ಊದುವವರು, ಡೊಳ್ಳು ಬಾರಿಸುವವರು ವಾತಾವರಣದಲ್ಲಿ ಒಂದು ಬಗೆಯ ಆವೇಶವನ್ನು ತುಂಬತೊಡಗಿದರು. ಕಿವಿ ಪಟಲ ಹರಿಯುವಂತೆ ಬಾರಿಸಿದರು. ಮರು ಯೋಚನೆಗೆ ಅವಕಾಶವಿಲ್ಲದಂತೆ, ಅವಸರ ಅವಸರವಾಗಿ, ಡೊಳ್ಳಿಗೆ ಇನ್ನಷ್ಟು ತಲೆ ಆನಿಸಿ, ಮಾಣಿಕಮ್ಮನನ್ನು ಬೆನ್ನು ಬಾಗಿಸಿ ನಿಲ್ಲಿಸಿದರು. ಬಾಗಿನಿಂತ ವ್ಯಕ್ತಿಗೆ ಇತ್ತ ಏನಾಗುತ್ತದೆಂದು ಕಾಣಿಸುವುದಿಲ್ಲ ಕೂಡ. ಬೆನ್ನ ಹುರಿಯ ಪಕ್ಕದ ನೆಣದ ಭಾಗಕ್ಕೆ ಬೂದಿ ಸವರಿದ ಪೂಜಾರಿಗಳು ಅದೇ ವೇಗದಿಂದ ಉಕ್ಕಿನ ಕೊಂಡಿಗಳಿಗೆ ಇನ್ನಷ್ಟು ಚೂಪಾದ ಇಂಗ್ಲೀಷ್ ಟಿ'

ಹರಿಜನರನ್ನು ಸೇರಿಸಿಕೊಳ್ಳದ ಭಾಗಮ್ಮ!

ಸಾಮಾನ್ಯವಾಗಿ ದೇವರುಗಳು ಯಾವ ಜನ ವರ್ಗದವರನ್ನೂ ತಾರತಮ್ಯ ದೃಷ್ಟಿಯಿಂದ ನೋಡಲಾರವು. ಆದರೆ ನಮ್ಮ ದೇಶದಲ್ಲಿಯ ಬಹಳಷ್ಟು ದೇವರುಗಳು ಹರಿಜನ-ಗಿರಿಜನ ಜನಾಂಗದ ವ್ಯಕ್ತಿಗಳ ನೆರಳನ್ನು ಕಂಡರೆ ಕೋಪವನ್ನು ಪ್ರಕಟಿಸುತ್ತವೆ. ಇದನ್ನು ಉಲ್ಲಂಘಿಸಿ ಹೋದವರಿಗೆ ತಕ್ಕ ಶಾಸ್ತಿಯೇ ಕಾದಿದೆ ಎಂಬ ಹುಸಿ ಭಯವನ್ನು ಈಗಾಗಲೇ ಎಲ್ಲಾ ಕಡೆ ಹಬ್ಬಿಸಿದ್ದಾಗಿದೆ.

ಅಂದಂತೆ ಭಾಗಮ್ಮ ದೇವತೆಯ ಸುತ್ತಲೂ ಇಂಥ ಅನೇಕ ಕಟ್ಟು ಕಥೆಗಳು ಹಬ್ಬಿವೆ. ಹಾಗಾಗಿ ಇಲ್ಲಿಯೂ ಆ ಜನಾಂಗದ ಯಾವುದೇ ವ್ಯಕ್ತಿ ಸಿಡಿ ಆಡುವಂತಿಲ್ಲ. ಹಾಗೊಮ್ಮೆ ಆಡಲೇಬೇಕೆಂದಿದ್ದರೆ ಅಂಥವರ ಬೆನ್ನಿಗೆ ಕಬ್ಬಿಣದ ಕೊಂಡಿಯನ್ನು ಸಿಕ್ಕಿಸಿ, ನಡು ಊರ ಲಕ್ಷ್ಮಿಯ ಗುಡಿಯತನಕ ನಡೆಸಿಕೊಂಡೇ ಬರುತ್ತಾರೆ. ಇದನ್ನು ನೆಲ ಸಿಡಿ ಎಂಬ ಬೇರೆ ಹೆಸರಿನಿಂದ ಕರೆಯುತ್ತಾರೆ.

ಯಾಕೆ ಈ ಭಾಗಮ್ಮಳಿಗೆ ಹರಿಜನರೆಂದರೆ ಹಿಡಿಸುವುದಿಲ್ಲವೆ?



ಟೊಂಕದ ಕೆಳಭಾಗಕ್ಕೆ ಕಬ್ಬಿಣದ ಕೊಂಡಿ ಸಿಕ್ಕಿಸಿಕೊಂಡ ಮಹಿಳೆ

ಆಕಾರದ ಇನ್ನೊಂದು ಟೋಪನ್ (ಉಕ್ಕಿನ) ಸಿಕ್ಕಿಸಿ ಸಜ್ಜಾದರು. ಆಗ ಮತ್ತಷ್ಟು ವಾಲಗಗಳು ಹೊಡಕೊಂಡವು. ಎಲ್ಲರೂ ನೋಡ ನೋಡುತ್ತಿರುವಂತೆಯೇ ಆ ಪೂಜಾರಿ ಎತ್ತಿ ಹಿಡಿದ ಬೆನ್ನ ತೊಗಲಿನ ಭಾಗಕ್ಕೆ ಜೋರಾಗಿ ಕೊಂಡಿ ಚುಚ್ಚಿದರು. ಚುಚ್ಚಿದ ಭಾಗಕ್ಕೆ ರಕ್ತಬಾರದಿರಲೆಂದು ಕೂಡಲೇ, ಬೂದಿ ಬಳಿದರು. ಸ್ನಾಯು-ನೆಣದಿಂದ ಭರಿತವಾದ ಆ ಭಾಗದಲ್ಲಿ ರಕ್ತನಾಳಗಳೂ ಇರದ್ದರಿಂದ ಹೆಚ್ಚು ರಕ್ತವೂ ಆಗ ಕಾಣಿಸುವುದಿಲ್ಲ.

ಕೊಂಡಿ ಹಾಕಿಸಿಕೊಂಡು ಬಂದವರನ್ನು ಗುಡಿಯಿಂದ 400 ಅಡಿ ದೂರ ಇರುವ ನಡು ಊರ ಲಕ್ಷ್ಮೀ ಗುಡಿಯ ಹತ್ತಿರದಲ್ಲಿರುವ 'ಸಿಡಿ' ಆಡಲಿರುವ ಕ್ರೇನ್ ರೀತಿಯ ಬಂಡಿಗೆ ಹಗ್ಗದಿಂದ ಕಟ್ಟುತ್ತಾರೆ. ಹೀಗೆ ಕ್ರೇನ್‌ಗೆ ಕಟ್ಟುವಾಗ ಜೋತಾಡಿಕೊಂಡು ಹೋಗುವಾಗ, ಹೆಚ್ಚು ತೊಂದರೆ ಆಗದಿರಲೆಂದು ಕಾಲುಗಳನ್ನು ಸಮಗೊಳಿಸಿ, ಎರಡೂ ಹೆಬ್ಬೆರಳುಗಳನ್ನು ಹಗ್ಗದಿಂದ ಕಟ್ಟುತ್ತಾರೆ. ಕ್ರೇನ್ ಬಾಗಿಸಿ, ಬೆನ್ನಿಗೆ ಹಾಕಿದ ಕೊಂಡಿಗಳಿಗೆ, ತೊಗಲಿನ ಪಟ್ಟಿಗಳನ್ನು ಹಾಕಿ, ಅದನ್ನು ಕ್ರೇನ್ ತುದಿಗೆ ಬಲವಾಗಿ ಬಿಗಿಯುತ್ತಾರೆ. ಕ್ರೇನ್ ಮೇಲಕ್ಕೇರಲು ಆರಂಭಿಸಿದೊಡನೆ ಜೋಲಿ ಹಿಡಕೊಳ್ಳಲು ತೂಗು ಹಾಕಿರುವ ಹಗ್ಗವನ್ನು ಹಿಡಕೊಳ್ಳಲು ತಿಳಿಸುತ್ತಾರೆ. ನಡು ಬೆನ್ನಿನ ಭಾಗಕ್ಕೆ ಕೊಂಡಿ ಹಾಕಿ ತೂಗು ಸಿಕ್ಕಿಸಿದ್ದರಿಂದ ದೇಹದ ತೂಕವೂ ಸಮಭಾಗವಾಗಿ ಕೈಯ ಹಗ್ಗದ ಮೇಲೆ ಅರ್ಧ ಭಾರ ಬೀಳುತ್ತದೆ. ಯಾರಾದರೂ ಐವತ್ತು ಕೇಜಿ ತೂಕ ಇದ್ದರೆ, ಅದರಲ್ಲಿ 20-30 ಕೇಜಿ ತೂಕ ಕೈಯ ಹಗ್ಗಕ್ಕೆ ಹೋದರೆ 15-20 ಕೇಜಿ ತೂಕ ಬೆನ್ನಿಗೆ ಬೀಳುತ್ತದೆ. ಲಕ್ಷ್ಮೀ ಗುಡಿಯಿಂದ ಭಾಗ್ಯವಂತಿ ಲಕ್ಷ್ಮೀ ಗುಡಿಯವರೆಗಿನ ದಾರಿ ಸ್ವಲ್ಪ ಇಳಿಜಾರಾಗಿರುವುದರಿಂದ, ಬಂಡಿ ಎಳೆದೊಯ್ಯುವಾಗ, ಸಿಡಿಯಲ್ಲಿ ತೂಗಾಡುವವರಿಗೆ ಹೆಚ್ಚು ತೊಂದರೆ ಆಗುವುದಿಲ್ಲ. ಜೋತಾಟ ಸಾಧ್ಯವಾಗುವುದಿಲ್ಲ.

'ಸಿಡಿ' ಎಂಬ ಕ್ರೇನ್‌ಗೆ ಮಹಿಳೆಯನ್ನು ಸಿಕ್ಕಿಸಿ ಮೇಲೆ ಎತ್ತುತ್ತಿರುವುದು



ಗುಡಿಯವರೆಗೆ ಕ್ರೇನ್ ಬಂಡಿ ಹೋದೊಡನೆಯೇ ಮೆಲ್ಲಗೆ ಕ್ರೇನ್ ಇಳಿಸಿದಂತೆ, ಬಂಡಿಗೆ ಜೋಡಿಸಿದ ಮುವ್ವತ್ತು ಅಡಿ ಉದ್ದದ ಮರದ ತುಂಡನ್ನು ಇಳಿಸುತ್ತಾರೆ. ಕೊಂಡಿಗೆ ಹಾಕಿ ಕಟ್ಟಿದ ತೊಗಲ ಪಟ್ಟಿಯನ್ನು ಬಿಚ್ಚಿ ಅವರನ್ನು ಗುಡಿಯ ಒಳಕ್ಕೆ ಕರೆದೊಯ್ದು, ಬೋರಲು ಮಲಗಿಸಿ ಕೊಂಡಿಗಳನ್ನು ಕಳಚಿ, ಕೊಂಡಿ ಸಿಕ್ಕಿಸಿದ ಜಾಗಕ್ಕೆ ಪಂಚಲೋಹದ ಪಾತ್ರೆಯೊಂದರಲ್ಲಿ ಸಜ್ಜುಗೊಳಿಸಿದ ಬೂದಿ ಮುಲಾಮನ್ನು ಹಚ್ಚಿ, ವೀಳ್ಯದ ಎಲೆಗೆ ಎಣ್ಣೆ ಹಚ್ಚಿ ಕಾಸಿ, ಅದರ ಮೇಲೆ ಮುಚ್ಚಿ, ಎರಡು ಪದರಿನ ಪಟ್ಟಿಯನ್ನು ಕಟ್ಟುತ್ತಾರೆ. ದೇವತೆಗೆ ನಮಸ್ಕಾರ ಮಾಡಿ ಹೊರ ಬರುತ್ತಿದ್ದಂತೆ ಬಾಗಿಲಲ್ಲಿ ಕುಳಿತುಕೊಂಡ ವ್ಯವಸ್ಥಾಪಕರು ಅವರನ್ನು ತರುಬಿ, ಅವರ ಹೆಸರು, ವಿಳಾಸ, ಸಿಡಿ ಆಡಿದ ಕಾರಣ, ಜಾತಿ, ದಿನಾಂಕ ಇತ್ಯಾದಿಗಳನ್ನು ಬರೆದುಕೊಳ್ಳುತ್ತಾರೆ. ಮನಸ್ಸಿನಲ್ಲಿ ತಾವು ಬೇಡಿಕೊಂಡದ್ದನ್ನು ಬಿಟ್ಟು ಬೇರೆ ಸುಳ್ಳು ಹೇಳಿದರೆ, ದೇವತೆಯ ಎದುರು ನಡೆಯುವುದಿಲ್ಲವೆಂದೂ, ಅಂಥವರಿಗೆ ಕೇಡು ತಪ್ಪದೆಂದೂ, ಅಲ್ಲದೆ ಕೊಂಡಿಗಳೇ ಬೆನ್ನಿಗೆ ನೆಡುವುದಿಲ್ಲವೆಂದೂ, ಬಲವಾದ ನಂಬಿಕೆ

ಎಚ್ಚರಿಕೆ!

ನಮ್ಮ ದೇಶದಲ್ಲಿಯೇ ಅತ್ಯಂತ ಶ್ರೀಮಂತ ದೇವರು ಎಂದು ಹೆಸರಾದ ತಿರುಪತಿ ತಿಮ್ಮಪ್ಪ ಈಗಾಗಲೇ ಸಾಕಷ್ಟು ಹೆಸರುವಾಸಿ. ಅಲ್ಲಿ ಸಿಗುವ ಲಾಡು (ಪ್ರಸಾದ)ಗಳನ್ನು ಸೇವಿಸುವುದು ಒಂದು ಪುಣ್ಯವಾದರೆ, ಅಲ್ಲಿ ನುಣ್ಣಗೆ ತಲೆ ಬೋಳಿಸಿಕೊಳ್ಳುವುದು ಇನ್ನೊಂದು ಮಹಾ ಪುಣ್ಯದ ಕೆಲಸವೆಂದೇ ಎಲ್ಲರ ನಂಬುಗೆ.

ಇತ್ತೀಚೆಗೆ ಇಲ್ಲಿ ತಲೆಬೋಳಿಸಿಕೊಂಡ ಅನೇಕ ಮಹಾತ್ಮರು ಏಡ್ಸ್‌ಗೆ ಬಲಿಯಾದ ಸಮಾಚಾರಗಳಿವೆ. ಇವನಿಗೆ ತಲೆ ಬೋಳಿಸಿದ ಕತ್ತಿಯೇ ಇನ್ನೊಬ್ಬರಿಗೆ, ಮತ್ತೊಬ್ಬರಿಗೆ ಉಪಯೋಗಿಸಿದ್ದರಿಂದ ಅವರೂ ಏಡ್ಸ್ ರೋಗಕ್ಕೆ ತುತ್ತಾಗಿ ಗೊಟಕ್ ಅಂದ ಅನೇಕ ಸಮಾಚಾರಗಳು ಇಂದು ಕೇಳಿಬರುತ್ತಿವೆ.

ಆದರೆ ಘತ್ತರಗಿಯಲ್ಲಿ ಮಾತ್ರ ದಿನಕ್ಕೆ ಕನಿಷ್ಠ 30-40 ಜನರಿಗೆ ಒಂದೇ ಹರಿತವಾದ ಕಬ್ಬಿಣದ ಕೊಂಡಿಗಳಿಂದ ದನಕ್ಕೆ ಚುಚ್ಚಿದಂತೆ ಬೆನ್ನಿನ ಕೆಳಭಾಗದಲ್ಲಿ ಚುಚ್ಚಲಾಗುತ್ತದೆ ಅದು ನೆಣದ ಭಾಗ ಆಗಿದ್ದರೂ ಅಲ್ಪ ಪ್ರಮಾಣದಲ್ಲಿ ರಕ್ತ ಬಂದೇ ಬರುತ್ತದೆ. ಹೀಗೆ ಬಂದ ರಕ್ತದ ಕೊಂಡಿಯನ್ನೇ ಮತ್ತೊಬ್ಬರಿಗೆ ಉಪಯೋಗಿಸುವುದರಿಂದ ಅವರು ಹೊಂದಿದ ರೋಗ ಅನಾಯಾಸವಾಗಿ ಇನ್ನೊಬ್ಬರಿಗೆ ಹರಡುವುದರಲ್ಲಿ ಸಂಶಯವಿಲ್ಲ.

ಹೀಗಾಗಿ ಏಡ್ಸ್ ಎಂಬ ಮಾರಕ ರೋಗ ಹರಡುವ ಸಾಧ್ಯತೆ ಇದೆ. ಆದ್ದರಿಂದ ಸಾರ್ವಜನಿಕರು ಇದನ್ನು ಗಮನಿಸಲಿ.

ಈ ಹಜಾಮತಿ ತಪ್ಪಿಸುವ ಹೊಣೆ ಯಾರದು?

ಮೇಲು ನೋಟಕ್ಕೆ ಹಿಂದುಳಿದ ಜಾತಿ ಜನಾಂಗದ ದೇವತೆ ಎಂಬಂತೆ ಕಾಣಿಸಿದರೂ ಈ ಭಾಗಮ್ಮ ಉಳ್ಳವರಿಗೆ ಮಾತ್ರ ಎಟುಕುವ ದೇವತೆ ಆಗಿದ್ದಾಳೆ. ಏಕೆಂದರೆ ಒಂದು ಸಲ ಸಿಡಿ ಆಡುವುದಕ್ಕೆ ಕನಿಷ್ಠ ಏನಿಲ್ಲೆಂದರೂ ಹತ್ತೆಂಟು ಸಾವಿರ ಖರ್ಚು ಬರುತ್ತದೆ.

ಮರ ನೋಡಿ ಚೆಕ್ಕೆ ಬಿಡಿಸುವಂತೆ, ಸಿಡಿ ಆಡುವುದಕ್ಕೂ ಟೆಂಡರ್ ಕರೆಯುತ್ತಾರೆ. ಯಾರು ಹೆಚ್ಚು ಹಣ ಕೊಡುತ್ತಾರೋ ಅವರಿಗೆ ಸಿಡಿ ಆಡುವುದಕ್ಕೆ ಅವಕಾಶ ಸಿಗುತ್ತದೆ. ಐದು ಸಾವಿರದಿಂದ ಹತ್ತು ಸಾವಿರದವರೆಗೆ ಟೆಂಡರ್ ಹಿಡಿಯುವವರೇ ಹೆಚ್ಚು ಸಂಖ್ಯೆಯಲ್ಲಿದ್ದಾರೆ.

ಇರೋದರಿಂದ, ಎಲ್ಲರೂ ನಿಜವಾದ ಕಾರಣಗಳನ್ನೇ ಹೇಳುತ್ತಾರೆ. ಎಲ್ಲೆಲ್ಲೋ ಸುಳ್ಳು ಹೇಳಿ ದಾಟಿಕೊಂಡವರೂ ಇಲ್ಲಿ ನಿಜ ಹೇಳಿದ ಪ್ರಸಂಗಗಳು ಇಲ್ಲಿಯ ದಾಖಲೆಯಲ್ಲಿ ಇವೆ.

ಇಷ್ಟೆಲ್ಲ ಖರೆ ಆಡುವವರೂ, ಇದೇ ಸಮಯದಲ್ಲಿ ಸಿಡಿ ಆಡೋದರಿಂದ ತಮಗೆ ಆದ ದೈಹಿಕ ನೋವು, ಭಯ, ಮಾನಸಿಕ ಯಾತನೆ ಇತ್ಯಾದಿಗಳನ್ನು ಮುಚ್ಚಿಟ್ಟು, "ಏನೂ ಆಗೋದಿಲ್ಲ" ಎಂದು ಸುಳ್ಳು ಹೇಳೋದು ಅಷ್ಟೇ ತಮಾಷೆ. ಬೆನ್ನಿಗೆ ಕೊಂಡಿ ಚುಚ್ಚಿದಾಗೊಮ್ಮೆ, ನೋವಿನಿಂದ ಮುಖ ಕಿವುಚಿಕೊಂಡದ್ದನ್ನು ಅದೇ ಥರ ಕೊಂಡಿ ಕಳುಚುವಾಗಲೂ ಚೋರಲು ಮಲಗಿಸಿದವರ, ಮುಖಭಾವಚರ್ಯೆಯನ್ನು ಗಮನಿದ್ದೇವೆ. ಕೊಂಡಿ ಯಾವಾಗ ಕಳಚಿಯಾರು? ಯಾವಾಗ ಈ ಹಿಂಸೆಯಿಂದ ಪಾರಾದೇವೆಂದು ಅವರು ಮುಖ ಬಿಳಚಿಕೊಂಡಿರುತ್ತಾರೆ. ಕೆಲವರು ಆ ನೋವಿನಿಂದ ಮುಲುಗುವುದನ್ನು ಕಿವಿಯಾರೆ ಕೇಳಿದ್ದೇವೆ. ನೋವೇ ಆಗದಿದ್ದವರು ಹೀಗೇಕೆ ಮಾಡುತ್ತಾರೆ? ಒಮ್ಮೊಮ್ಮೆ ರಕ್ತವೂ ಬರುವುದುಂಟು. ನೋವೇ ಆಗದಂತೆ ಮಾಡುವ ಈ ದೇವತೆ ರಕ್ತ ಬರುವಂತೆ ಏಕೆ ಮಾಡುತ್ತಾಳೆ? ರಕ್ತ ಬಂದರೂ, ತೊಗಲು ಪಟ್ಟಿ ಕಟ್ಟಿ, ಕೊಂಡಿ ತೂಗು ಹಾಕಿದರೂ ಕಿಂಚಿತ್ತೂ ನೋವಾಗುವುದಿಲ್ಲವೆಂದು ಹಸೀ ಸುಳ್ಳು ಹೇಳಿದರೆ ನಂಬಬಹುದೆ? 60 ವರ್ಷ ವಯಸ್ಸಿನವರು ಸಿಡಿ ಆಡಲು ಬೇಡಿಕೊಂಡು ಬಂದರೆ ಹೇಗೆ ಎಂದು ಕೇಳಿದ್ದಕ್ಕೆ ಅಲ್ಲಿನ. ಕೊಂಡಿ ತೊಡಿಸುವ ಪೂಜಾರಿ (ಶ್ರೀಮಂತ ಕಂಬಾರ) ಅಂಥವರಿಗೆ ಕೊಂಡಿ ಮಾತ್ರ ಹಾಕಿ ನಡು ಊರ ಲಕ್ಷ್ಮೀಯ ಗುಡಿಯತನಕ ನಡೆಸಿಕೊಂಡು ಹೋಗಿ ಮತ್ತೆ ಕರೆದುಕೊಂಡು ಭಾಗಮ್ಮನ ಗುಡಿಗೆ ಬರುತ್ತೇವೆ ಎಂದು ಹೇಳಿದ. ಅವರಿಗೆ ಹೀಗೇಕೆ? ಎಂದು ಕೇಳಿದರೆ, ಇದು ನೆಲ ಸಿಡಿ ಎಂದು ಬೇರೆ ಹೆಸರಿಟ್ಟು ಹೇಳಿದ. ಒಂದು ವೇಳೆ 55-60 ವರ್ಷದ ವಯಸ್ಸಿನವರನ್ನು ಎಲ್ಲರಂತೆ ಕ್ರೇನ್‌ಗೆ ತೂಗು ಹಾಕಿ ಸಿಡಿ ಆಡಿಸಿದರೆ ಅವರ ಹಣ್ಣು ದೊಗಲು ಕಿತ್ತು ಬಂದು, ಎಲ್ಲರ ಎದುರೇ ಅಮಂಗಳವಾಗುವ ಸಾಧ್ಯತೆ ಇರುತ್ತದೆಂದು ತಿಳಿದ ಇಲ್ಲಿನ ಪೂಜಾರಿಗಳು ಅಂಥವರನ್ನು ಸಾಧ್ಯವಾದಷ್ಟು ಸಿಡಿ ಆಡುವುದರಿಂದ ದೂರವೇ ಇಡುತ್ತಾರೆ. ಅಂದರೆ ಹಣ್ಣು ದೊಗಲಿನ ವಯೋವೃದ್ಧರ ಮೇಲೆ ಭಾಗ್ಯವಂತಿ ದೇವಿಯ ಶಕ್ತಿ ಕೆಲಸ ಮಾಡುವುದಿಲ್ಲವೆ?

ಭಾರಿ ಮೋಸದ ಸಂಗತಿಯೆಂದರೆ, ಈ ಸಿಡಿ ಕಾರ್ಯಕ್ರಮ ಕಾಲಾನುಕಾಲದಿಂದ ಇಲ್ಲಿ ನಡೆಯುತ್ತ ಬಂದಿದ್ದರೂ, ಬ್ರಾಹ್ಮಣರು ಮಾತ್ರ ಇದರಲ್ಲಿ ಭಾಗವಹಿಸಿಲ್ಲ. ಇಡೀ ದಾಖಲೆಗಳನ್ನು ತಿರುವಿ ಹಾಕಿದರೆ, ಎಲ್ಲೋ ಒಬ್ಬರು, ಇಬ್ಬರು ಮಾತ್ರ ಸಿಕ್ಕುತ್ತಾರೆ. ವಿಶೇಷವಾಗಿ ಹಿಂದುಳಿದ ಜನಗಳೇ ಇದರಲ್ಲಿ ಭಾಗವಹಿಸಿದ್ದಾರೆ, ಲಿಂಗಾಯತರೂ ಕಡಿಮೆ ಸಂಖ್ಯೆಯೇನಿಲ್ಲ. ಕುರುಬರು, ಕಬ್ಬಲಿಗರು, ಬೇಡರು, ಕಮ್ಮಾರರು, ಬಣಗಾರರು, ಕುಂಬಾರರು, ಸಾಳೇರು, ಸೋವಿಂದ ಸಮಾಜದವರು ಮುಂತಾದವರೆಲ್ಲ ವರ್ಷ ತಪ್ಪಿದರೆ ಮರುವರ್ಷ ಬಂದು ಆಡಿ ಹೋಗುತ್ತಾರೆ. ಮುಸಲ್ಮಾನರಂತೂ ಈ ಸಿಡಿಯ ಹತ್ತಿರ ಹಣಕಿ ಹಾಕಿ ನೋಡಿಲ್ಲ. ಹರಿಜನರು ಸಿಡಿ ಆಡುವಂತಿಲ್ಲ. ಅವರನ್ನು ತೂಗು ಹಾಕಿ ಆಡಿಸುವುದಿಲ್ಲ. ಸುಮ್ಮನೆ ಕೊಂಡಿ ಹಾಕಿ ನೆಲದ ಮೇಲೆ ನಡೆಸುತ್ತಾರೆ. ಏಕೆ? ಹಾಗಾದರೆ, ಭಾಗಮ್ಮ ದೇವತೆ ಕೇವಲ ಹಿಂದುಳಿದ ಜನ ಜಾತಿಗಳಿಗೆ ಮಾತ್ರ ಸಹಾಯ ಮಾಡುವ, ತಪ್ಪಿದರೆ ಅವರನ್ನೇ ಕಾಡುವ ದೇವರೇನು?

ಮನಸ್ಸುಗಳಿಗೆ ಅಂಟಿದ ಮೌಢ್ಯ

21ನೆಯ ಶತಮಾನದ ಕಂಪ್ಯೂಟರ್ ಯುಗದಲ್ಲಿ ನಾವೆಲ್ಲ ಪಾಸಿಸುತ್ತಿದ್ದರೂ ನಮ್ಮ ಮನಸ್ಸುಗಳಿಗೆ ಅಂಟಿದ ಮೌಢ್ಯದ ಜಿಡ್ಡು ಇನ್ನೂ ಹೋಗಿಲ್ಲ. ಸಾಮಾನ್ಯವಾಗಿ ಚಿಕ್ಕ ಮಕ್ಕಳಿಗೆ ಬರುವ ಕಾಯಿಲೆಗಳಾದ ಒಟ್ಟತಟ್ಟು, ಸಾಯಿಕೆಮ್ಮು, ಧಡಾರ, ಪೋಲಿಯೋ, ಮುಂತಾದವುಗಳಿಗೆ ದೇವತೆಗಳು ಮುನಿಸಿಕೊಂಡಿರುವುದೇ ಕಾರಣ ಎಂದು ತಿಳಿಯುತ್ತೇವೆ. ಇವುಗಳಿಗೆ ಕಾರಣವಾದ ಮಾರಮ್ಮ, ದ್ಯಾಮವ್ವಾ , ಮರಗಮ್ಮ, ದುರುಗಮ್ಮ ಮುಂತಾದ ದೇವತೆಗಳಿಗೆ ಹರಕೆ ಹೊತ್ತು ನೈವೇದ್ಯ ನೀಡಿ ಬಂದಾಗ ಮಾತ್ರ ಅವರು ಸಂತುಷ್ಟಿಗೊಳ್ಳುತ್ತಾರೆ ಎಂದು ಭ್ರಮಿಸಿದ್ದೇವೆ. ಇಂಥ ದೇವರುಗಳಲ್ಲಿ ಕೆಲವು ಪ್ಯೂರ್ ವೆಜಿಟೇರಿಯನ್ ಆದರೆ ಇನ್ನೂ ಹಲವು 'ನಾನ್ ವೆಜ್'. ಹಲವು ದೇವತೆಗಳಿಗೆ ನಿಮ್ಮ ತಲೆಗೂದಲೇ ಸಾಕು. ಕೆಲವಕ್ಕೆ ನೀವು ಕ್ಯಾಕರಿಸಿ ಉಗುಳಿದರೂ ಅದೇ ನೈವೇದ್ಯವೆಂದು ಅವು ಸಂಭ್ರಮಿಸುತ್ತವೆ!

ಹೀಗೆ ನಾವು ಹುಟ್ಟಿಸಿದ ದೇವಾನುದೇವತೆಗಳೆಲ್ಲ 'ಭಯ'ದಿಂದಲೋ ಅಥವಾ ಇನ್ನಾರದೋ ತೆವಲು ತೀರಿಸಲು ಹುಟ್ಟಿದವುಗಳೇ ಆಗಿವೆ. ಇದಕ್ಕೆ ತಾಜಾ ಉದಾಹರಣೆಯಾಗಿ ತೀರಾ ಇತ್ತೀಚೆಗೆ "ಏಡ್ಸಮ್ಮ" ಎಂಬ ದೇವತೆಯನ್ನು ಹೆಸರಿಸಬಹುದು. 'ಏಡ್ಸ್' ಎಂಬ ಮಾರಕ ರೋಗ ಇಂದು ಜಗತ್ತಿನಾದ್ಯಂತ ಬೆಳೆಯುತ್ತಿದೆ. ಇದನ್ನು ಹತೋಟಿಗೆ ತರಲು ಆಗುತ್ತಿಲ್ಲ. ಈ ರೋಗಕ್ಕೆ ಯಾವ ಮದ್ದೂ ಇಲ್ಲ. ಏಡ್ಸ್‌ಗೆ ತುತ್ತಾದ ವ್ಯಕ್ತಿಯ ಜೀವ ಉಳಿಸುವುದಕ್ಕಂತೂ ಸಾಧ್ಯವೇ ಇಲ್ಲ. ಇಂಥ ಸಂದರ್ಭದಲ್ಲಿ ತೀರಾ ಅಸಹಾಯಕವಾದ ಮನಸ್ಸು ದಿಕ್ಕು ತೋಚದೆ ಕಂಗಾಲಾಗಿ "ಏಡ್ಸಮ್ಮ" ಎಂಬ ದೇವರನ್ನೇ ಸೃಷ್ಟಿಸಿದೆ. ಮಾತ್ರವಲ್ಲ ಎಲ್ಲ ದೇವತೆಗಳಂತೆ ಈ ಆಧುನಿಕ ದೇವತೆ ಏಡ್ಸಮ್ಮನಿಗೂ ಕಾಯಿ, ಕರ್ಪೂರ ಮುಂತಾದ್ದೆಲ್ಲ ಶುರುವಾಗಿದೆ. ಹರಕೆ ಹೊರೋದಕ್ಕೆ ದಿಂಡು ಉರುಳೋದಕ್ಕೆ ಆಗಲೇ ಅನೇಕರು ಸಜ್ಜಾಗಿ ನಿಂತಿದ್ದಾರೆ. ಇಂಥದೇ ಯಾವುದೋ ಒಂದು ಭಯಾನಕ ರೋಗ ಅಥವಾ ಪ್ರಕೃತಿ ವಿಕೋಪಗಳ ಹಿನ್ನೆಲೆಯಲ್ಲಿಯೇ ಈ ಘತ್ತರಗಿ ಭಾಗಮ್ಮನ ಜನನ ಆಗಿರಬಹುದು. ಈ ದೇವತೆ ಮೊದಲು ಬಂದು ನಿಂತ ನೆಲೆ ಜಬ್ಬಲ. ಇದು ಏನನ್ನೋ ಸಂಕೇತಿಸುತ್ತಿರುವಂತಿದೆ. ಆಮೇಲೆ ಉಕ್ಕಿ ಬಂದ ಭೀಮಾನದಿ ಜಬ್ಬಲನೆ ಇಳಿದದ್ದು ಇತ್ಯಾದಿಗಳನ್ನೆಲ್ಲ ಅರ್ಥೈಸುವುದು ನಮಗೆ ಸಾಧ್ಯವಾಗುವುದಾದರೆ ಸತ್ಯ ಕಾಣಿಸಿಕೊಂಡೀತು!

ಬೌದ್ಧಿಕ ದಾರಿದ್ರ್ಯವನ್ನು ಬೆಳೆಸುವ ಸರ್ಕಾರ

ಘತ್ತರಗಿ ಭಾಗ್ಯವಂತಿ ದೇವಿಗೆ ಹರಕೆ ಹತ್ತು 'ಸಿಡಿ' ಆಡಲು ಬರುವವರಲ್ಲಿ ಬಹುತೇಕರು ಹೆಣ್ಣು ಮಕ್ಕಳೇ ಆಗಿರುತ್ತಾರೆ. ಅವರಿಗೆ ಆಗಾಗ ದೈಹಿಕವಾಗಿ ಕಾಡುವ ತಲೆ ನೋವು, ಹೊಟ್ಟೆನೋವು, ವಾಂತಿ ಮುಂತಾದ ಸಣ್ಣ ಪುಟ್ಟ ಅನಾರೋಗ್ಯವನ್ನು ಗುಣಪಡಿಸಬೇಕೆಂದು ಭಾಗಮ್ಮನಲ್ಲಿ ಹರಕೆ ಹೊರುತ್ತಾರೆ. ಕೆಲವರು ತಮ್ಮ ಟ್ರಾನ್ಸ್‌ಫರ್‌ಗಳಿಗಾಗಿಯೋ, ಇಲ್ಲದ ಮಕ್ಕಳಿಗಾಗಿಯೋ ಅಥವಾ ಒಳ್ಳೆಯ ಮನೆತನದ ಗಂಡ ಸಿಗಲೆಂದೋ ಹರಕೆ ಹೊತ್ತಿರುತ್ತಾರೆ.

ಕೆಲವು ಜನ ಮಹಾತ್ಮರಂತೂ ತಾವೇ ತಮ್ಮ ಕೈಯಾರೇ ಮಾಡಿದ 'ಖೂನಿ'ಯಿಂದ ಪಾರಾಗಿ, ಯಾವ ಜೈಲು ಕಂಬಿಗಳನ್ನು ಎಣಿಸದೆ ಸಲೀಸಾಗಿ ಹೊರ ಬಂದರೆ 'ಸಿಡಿ' ಆಡುವುದಾಗಿ ವಾಗ್ದಾನ ಮಾಡಿರುತ್ತಾರೆ.

'ಕಾಗೆ ಕುಳಿತುಕೊಳ್ಳುವುದಕ್ಕೂ ಟೊಂಗೆ ಬೀಳುವುದಕ್ಕೂ ಸಮನಾಯ್ತು' ಎಂಬಂತೆ ತಮ್ಮ ಹಿಂದಿನ ಬೇಡಿಕೆ ಈಡೇರುತ್ತಲೇ ಇಂಥವರು 'ಸಿಡಿ' ಆಡಲು ಘತ್ತರಗಿ ಭಾಗಮ್ಮನಲ್ಲಿಗೆ ಬಂದೇ ಬರುತ್ತಾರೆ. ಒಂದು ವೇಳೆ ಹರಕೆ ಹೊತ್ತವರು ತಮ್ಮ ಇಷ್ಟಾರ್ಥ ಸಿದ್ಧಿಯಾಗಿದ್ದರೂ, 'ಸಿಡಿ' ಆಡಲು ಬಾರದಿದ್ದರೆ ಇಂಥವರಿಗೆ ಭಾಗಮ್ಮ ಕಾಟ ಕೊಡಲು ಶುರು ಮಾಡುತ್ತಾಳಂತೆ! ಎಂಬ ವದಂತಿಗಳು ಸಾಕಷ್ಟು ಹಬ್ಬಿವೆ.


ಇಂಥ ಕಟ್ಟು ಕತೆಗಳಿಂದ ಸುಪ್ರಸಿದ್ಧಳಾದ ಭಾಗಮ್ಮಳ ವರ್ಷದ 8 ತಿಂಗಳ ಗಳಿಕೆಯೇ ಕೇವಲ 5-6 ಲಕ್ಷವಂತೆ! ಇದು ಎಂಡೋಮೆಂಟ್ ಕಮಿಟಿಯವರು ತೋರಿಸುವ ಲೆಕ್ಕ. ತೋರಿಸದ ಲೆಕ್ಕ ಎಷ್ಟಿದೆಯೋ ಬಹುಶಃ ಭಾಗಮ್ಮನಿಗೂ ಗೊತ್ತಾಗುವುದಿಲ್ಲ.

ಮತ ಮೌಢ್ಯ, ಕುರುಡು ನಂಬಿಕೆ ಇತ್ಯಾದಿಗಳನ್ನು ಪೋಷಿಸುವುದು ಘೋರ ಅಪರಾಧವೆಂದು ನಮ್ಮ ಸಂವಿಧಾನದ 51/ಎ ಎಂಬ ಪರಿಚ್ಛೇದ ಹೇಳುತ್ತದೆ. ಆದರೆ ಸರಕಾರವೇ ಖುದ್ದಾಗಿ ನಿಂತು ಇಲ್ಲಿ ಇದನ್ನು ನಡೆಸುತ್ತದೆ.

ಇದು ಏನನ್ನು ತೋರಿಸುತ್ತದೆ? ಎಂಬುದು ಪ್ರಜ್ಞಾವಂತರೇ ಅರಿಯಬೇಕು.

■ ವಿಶ್ವಾರಾಧ್ಯ ಸತ್ಯಂಪೇಟೆ

ನಮ್ಮ ಕ್ರೀಡೆಗಳಿಗೇನು ಬಂದಿದೆ ಕೇಡು !



ಪರಿಪೂರ್ಣತೆ ಸಾಧಿಸಿದ ನಾಡಿಯಾ ಕೊಮೆನೆಸಿ

ನಮಗೆ ಎಲ್ಲಾ ನೆಮ್ಮದಿಯಾಗೇ ಇದೆ. ಅಪಮಾನಗಳಿಗೂ ನಾವು ಜಡರಾಗಿದ್ದೇವೆ. ಹೀಗಾಗಿಯೇ ನಮಗೆ ಕ್ರೀಡೆಯಂಥ ರಂಗದಲ್ಲಿ ವಿಶ್ವಮಟ್ಟದಲ್ಲಿ ಏನಾದರೂ ಮಾಡಬಹುದು, ಮಾಡಬೇಕು ಎಂದು ಕೂಡ ಅನ್ನಿಸುವುದಿಲ್ಲ. ಆದರೆ ಕ್ರೀಡಾ ಜಗತ್ತು ಎಷ್ಟು ಫಾಸ್ಟಾಗಿದೆ ಎಂದರೆ ಹೆಂಗಸರು, ಗಂಡಸರು ಅಂತ ಭೇದ ಏಕೆ? ನಾವೇನು ಅವರಿಗಿಂತ ಕಡಿಮೆ ಎಂದು ಕೇಳುತ್ತಿದ್ದಾರೆ ಹೆಂಗಸರು.

ಈಚಿನ ದಿನಗಳಲ್ಲಿ ಕ್ರೀಡಾ ಜಗತ್ತಿನಲ್ಲಿ ಏನೆಲ್ಲ ಬದಲಾಗಿದೆ. ನಿಮಗೆ ನೆನಪಿರಬೇಕು. ಇತ್ತೀಚಿನ ವಿಶ್ವಕಪ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾರತದ ವಿರುದ್ಧ ಆಡುತ್ತಿದ್ದ ದಕ್ಷಿಣ ಆಫ್ರಿಕಾ ಆಟಗಾರರೆಲ್ಲ ಕಿವಿಗೆ ಇಯರ್‌ಫೋನ್ ಧರಿಸಿದ್ದರು. ಕೋಚ್ ಬಾಬ್ ವುಲ್ಮರ್ ಸ್ಟೇಡಿಯಂನಲ್ಲಿ ಕುಳಿತು ಆಟಗಾರರಿಗೆ ಸೂಚನೆಗಳನ್ನು ಕೊಡುತ್ತಿದ್ದ. ಇದನ್ನು ಕೇಳಿಸಿಕೊಂಡ ಕ್ಯಾಪ್ಟನ್ ಹ್ಯಾನ್ಸಿ ಕ್ರೋನಿಯೇ ಅದಕ್ಕೆ ತಕ್ಕಂತೆ ನಿರ್ಧಾರ ಕೈಗೊಳ್ಳುತ್ತಾ ಇದ್ದ.

ಈ ಬಗ್ಗೆ ಭಾರೀ ವಿವಾದವೇ ಆಯಿತು. ಕೊನೆಗೆ ದಕ್ಷಿಣ ಆಫ್ರಿಕನ್ನರು ಅತ್ಯಾಧುನಿಕ ಸಲಕರಣೆಗಳನ್ನು ತೆಗೆದಿಟ್ಟು ಆಡಬೇಕಾಯಿತು. ಇಂಥದೊಂದು ತಪ್ಪು ಮಾಡಿದ ತಂಡಕ್ಕೆ ಶಿಕ್ಷೆ ವಿಧಿಸುವುದಿರಲಿ ದಂಡ ಹಾಕಲೂ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಗೆ ಸಾಧ್ಯ ಇರಲಿಲ್ಲ. ಯಾಕೆಂದರೆ ಮಂಡಳಿ ನಿಯಮದಲ್ಲಿ ಎಲ್ಲೂ ಇಂಥ ಸಂಗತಿಯ ಪ್ರಸ್ತಾಪವೇ ಇರಲಿಲ್ಲ.


ಬಹುಶಃ ಇನ್ನು ಮುಂದೆ ಈ ವಿಚಾರ ನಿಯಮಗಳಲ್ಲಿ ಸೇರ್ಪಡೆ ಆಗಲೂ ಬಹುದು. ಆಧುನಿಕ ತಂತ್ರಜ್ಞಾನ ಬೆಳೆದ ಹಾಗೆ ಆಟದ ರೀತಿ ನೀತಿ, ನಿಯಮಗಳೂ ಬದಲಾಗಬೇಕಾಗುತ್ತದೆ. ವಿಶ್ವ ಕ್ರೀಡಾ ರಂಗದಲ್ಲಿ ಆಧುನಿಕತೆ, ತಂತ್ರಜ್ಞಾನ, ತೀರಾ ಈಚೆಗೆ ತನ್ನ ತಲೆ ತೂರಿಸತೊಡಗಿದೆ. ಏನೆಲ್ಲ ಬದಲಾವಣೆ ಆಗುತ್ತಾ ಇದ್ದರೂ ಭಾರತದ್ದು ಮಾತ್ರ ಯಾವುದಕ್ಕೂ ಕೇರ್ ಮಾಡದಂಥ ಸ್ಥಿತಿ. ನಮಗೆ ಭ್ರಷ್ಟತೆ, ಸಣ್ಣತನ, ಪರಸ್ಪರ ಮತ್ಸರ ಇಷ್ಟವಾಗುವ ಹಾಗೆ, ಏನಾದರೂ ಸಾಧನೆ ಮಾಡಬೇಕೆಂಬುದು ಕಾಡುವುದೇ ಇಲ್ಲ. ಅಕಸ್ಮಾತ್ ಅಂಥವನೊಬ್ಬನ ಯತ್ನ ನಡೆದರೆ ಕಾಲೆಳೆಯಲು ಜನ ಹಿಂಡುಗಟ್ಟಿ ನಿಲ್ಲುತ್ತಾರೆ.

'ಸ್ಪೋರ್ಟ್ಸ್ ಸ್ಟಾರ್' ಎಂಬ ಕ್ರೀಡಾ ಪತ್ರಿಕೆ ಕಳೆದ ವರ್ಷದ ಕೊನೆಯಲ್ಲಿ ಜನಪ್ರಿಯ ಕ್ರೀಡೆಗಳಲ್ಲಿ ಜಗತ್ತಿನ ಹತ್ತು ಶ್ರೇಷ್ಠರನ್ನು ಗುರುತಿಸಿತ್ತು. ಹಾಕಿಯಲ್ಲಿ ಮಾಂತ್ರಿಕ ಧ್ಯಾನಚಂದ್‌ದು ಮೊದಲ ಸ್ಥಾನ. ನಂತರದ ಎರಡು ಸ್ಥಾನ ನಮ್ಮವರೇ ಆದ ಪೃಥ್ವಿಪಾಲ್ ಸಿಂಗ್ ಮತ್ತು ಅಜಿತ್‌ಪಾಲ್ ಸಿಂಗ್ ಅವರದು. ಇವರೆಲ್ಲ ಹಳಬರು. ಇರಲಿ. ಕ್ರಿಕೆಟ್‌ನಂಥ ಕ್ರೀಡೆಯಲ್ಲಿ ಜಗತ್ತಿನಲ್ಲಿ ಅತ್ಯುತ್ತಮ ಹತ್ತರ ಸಾಲಿನಲ್ಲಿ ನಿಂತಿರುವುದು ಸುನೀಲ್ ಗವಾಸ್ಕರ್. ಅದೂ ಒಂಭತ್ತನೇ ಸ್ಥಾನದಲ್ಲಿ. ಉಳಿದ ಯಾವುದೇ ಕ್ರೀಡೆಯಲ್ಲೂ ಭಾರತೀಯರ ಹೆಸರಿಲ್ಲ. ತೀರಾ ಅನ್ಯಾಯವಾಗಿದೆ. ಆಯ್ಕೆದಾರರು 'ಪಾರ್ಷಿಯಾಲಿಟಿ' ಮಾಡಿದ್ದಾರೆ ಎಂದು ಗೊಣಗಬೇಡಿ. ಸತ್ಯ ಏನೆಂದು ಒಪ್ಪಿಕೊಳ್ಳಿ.

ಫುಟ್‌ಬಾಲ್, ಟೆನಿಸ್, ಅಥ್ಲೆಟಿಕ್ಸ್‌ಗಳಲ್ಲಿ ನಮ್ಮವರ ಹೆಸರೂ ಇಲ್ಲ. ರುಮೇನಿಯಾದಂಥ ಸಣ್ಣ ದೇಶದಿಂದ ಬಂದ ನಾಡಿಯಾ ಕೊಮೆನೇಸಿ ಜಿಮ್ನಾಸ್ಟಿಕ್ಸ್‌ನಲ್ಲಿ ಜಗತ್ತೇ ನಿಬ್ಬೆರಗಾಗುವಂಥ ಸಾಧನೆ ಮಾಡಿದ್ದಾಳೆ. ಇನ್ನು ಎಲ್ಲ ರೀತಿಯ ದೌರ್ಜನ್ಯಕ್ಕೆ ಗುರಿಯಾಗಿದ್ದು, ಅದರ ವಿರುದ್ಧ ಸೆಣಸುತ್ತಲೇ ಬಂದ ಕರಿಯರು ಏನೆಲ್ಲ ಸಾಧನೆ ಮಾಡಿದ್ದಾರೆ. ಫುಟ್‌ಬಾಲ್‌ನಲ್ಲಿ ಪೀಲೆ, ಕ್ರಿಕೆಟ್‌ನಲ್ಲಿ ವಿವಿಯನ್ ರಿಚರ್ಡ್ಸ್, ಗ್ಯಾರಿ ಸೇಟರ್ಸ್, ಅಥ್ಲೆಟಿಕ್ಸ್‌ನಲ್ಲಂತೂ ಕಾರ್ಲ್ ಲೂಯಿಸ್, ಜೆಸ್ಸಿ ಓವೆನ್ಸ್, ಜಾಕಿ ಜಾಯ್ನರ್ ಕೆರ್ಸೀ ಮುಂತಾದವರ ದಂಡೇ ಇದೆ.



ಹಾಕಿ ಮಾಂತ್ರಿಕ ಧ್ಯಾನ್‌ಚಂದ್



ವಿಶ್ವದ ಗಮನ ಸೆಳೆದ ಸುನೀಲ್ ಗವಾಸ್ಕರ್

ನಮಗೆ ಎಲ್ಲಾ ನೆಮ್ಮದಿಯಾಗೇ ಇದೆ. ಅಪಮಾನಗಳಿಗೂ ನಾವು ಜಡರಾಗಿದ್ದೇವೆ. ಹೀಗಾಗಿಯೇ ನಮಗೆ ಕ್ರೀಡೆಯಂಥ ರಂಗದಲ್ಲಿ ವಿಶ್ವಮಟ್ಟದಲ್ಲಿ ಏನಾದರೂ ಮಾಡಬಹುದು, ಮಾಡಬೇಕು ಎಂದು ಕೂಡ ಅನ್ನಿಸುವುದಿಲ್ಲ.

ಕ್ರೀಡಾ ಜಗತ್ತು ಎಷ್ಟು ಫಾಸ್ಟಾಗಿದೆ ಎಂದರೆ ಹೆಂಗಸರು, ಗಂಡಸರು ಅಂತ ಭೇದ ಏಕೆ? ನಾವೇನು ಅವರಿಗಿಂತ ಕಡಿಮೆ ಎಂದು ಕೇಳುತ್ತಿದ್ದಾರೆ ಹೆಂಗಸರು.

ಕೆಲವೇ ತಿಂಗಳ ಮುಂಚೆ. ಮಾರ್ಗರೆಟ್ ಮ್ಯಾಕ್ ಗ್ರೀಗೋರ್ ಎಂಬ ಮೂವತ್ತಾರರ ಮಹಿಳೆ ತಾನು ಯಾರಾದರೂ ಗಂಡಸರ ವಿರುದ್ಧವೂ ಬಾಕ್ಸಿಂಗ್ ಮಾಡಿ ಗೆಲ್ಲಬಲ್ಲೆ ಎಂದು ಘರ್ಜಿಸಿದಳು. ಯಾಕೆಂದರೆ ಅವಳನ್ನು 'ಟೈಗರ್' ಎಂದೇ ಕರೆಯಲಾಗುತ್ತಿತ್ತು. ಅವಳ ಆಸೆ ಈಡೇರಿತು. ಕೆನಡಾದ ಜಾಕಿ ಲೋಯ್ ಚಾ ಆಕೆಯ ವಿರುದ್ಧ ಸೆಣಸಿ ನಾಲ್ಕನೇ ರೌಂಡಿನಲ್ಲಿ ಸೋತ.

ಅದೇ ಸಮಯಕ್ಕೆ ಇತ್ತೀಚಿನ ಖ್ಯಾತ ಟೆನಿಸ್ ಪಟು ಸೆರೀನಾ ವಿಲಿಯಂಸ್ ವಿಶ್ವ ವಿಟಿಪಿ ಪಂದ್ಯಾವಳಿಗಳಲ್ಲಿ ಆಡಲು ಬಯಸಿದ್ದಳಾದರೂ, ಬರೀ ಪುರುಷ ಸ್ಪರ್ಧಿಗಳೇ ಇರುವ ಟೂರ್ನಿಯಲ್ಲಿ ಆಡುವುದೆಂದರೆ ತಮಾಷೆಯೇ? ಎಂದು ಸಂಘಟಕರು ತಳ್ಳಿ ಹಾಕಿದರು.


1902ರಲ್ಲಿ ಆಧುನಿಕ ಒಲಿಂಪಿಕ್ಸ್ ರೂಪುಗೊಂಡಿತು. ಅದರ ರೂವಾರಿ ಬ್ಯಾರನ್ ಪಿಯರ್ ಡಿ ಕೊಬರ್ಟಿನ್. ಆ ಹೊತ್ತಿಗೆ ಮಹಿಳೆಯರು ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳಬಹುದೆಂಬ ವಿಚಾರವೇ ಅವನಿಗೆ ವಿಚಿತ್ರವಾಗಿ ಕಂಡಿತ್ತು. ಎಲ್ಲ ಪುರುಷಮಯ. ಯಾರೋ ಮಹಿಳೆಯರದೇನು ಪಾತ್ರ? ಎಂದು ಕೇಳಿದ್ದಕ್ಕೆ 'ಅವರೂ ಇರುತ್ತಾರೆ. ಗೆದ್ದವರಿಗೆ ಹಾರ ಹಾಕಲು' ಎಂದು ತಾತ್ಸಾರವಾಗಿ ಹೇಳಿದ್ದ.

ಅದಾಗಿ ಮೂವತ್ತು ವರ್ಷದ ಮೇಲೆ ಒಲಿಂಪಿಕ್ಸ್‌ನ ಮೊದಲ ಹಿರೋಯಿನ್ ಹುಟ್ಟಿಕೊಂಡಳು. ಆಕೆಯೇ ಮಿಲ್‌ಡ್ರೆಟ್ ಡಿಡ್ರಿಕ್‌ಸನ್ ಜಹರಿಯಾ. ಆಗ ಹೆಂಗಸರು ಮೂರಕ್ಕಿಂತ ಹೆಚ್ಚು ವಿಭಾಗಗಳಲ್ಲಿ ಸ್ಪರ್ಧಿಸುವಂತಿರಲಿಲ್ಲ. ಮಿಲ್‌ಡ್ರೆಟ್ ಲಾಸೇಂಜಲ್ಸ್ ಒಲಿಂಪಿಕ್ಸ್‌ನಲ್ಲಿ ಮೂರು ವಿಭಾಗಗಳಲ್ಲಿ ಪಾಲ್ಗೊಂಡು ಮೂರರಲ್ಲೂ ಚಿನ್ನ ಗಳಿಸಿದಳು. ಆದರೆ ಜಂಪ್ ಮಾಡಿದ ಅವಳ ರೀತಿ ಸರಿ ಇರಲಿಲ್ಲ ಎಂದು ಮೂರನೇ ಚಿನ್ನದ ಪದಕ ರದ್ದುಗೊಳಿಸಲಾಯಿತು.

ಇವತ್ತು ಮಹಿಳೆಯರಿಲ್ಲದ ಒಲಿಂಪಿಕ್ಸ್ ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಗಂಡಸರಿಗಿಂತ ತಾವೇನು ಕಡಿಮೆ ಎಂದು ಅವರು ಬೀಗುತ್ತಾ ಇದ್ದರೂ ದಾಖಲೆಗಳು ಬೇರೆಯೇ ಹೇಳುತ್ತಿವೆ. ಇವತ್ತಿಗೂ ನೂರು ಮೀಟರ್ ಓಟದಲ್ಲಿ ಪುರುಷರ ದಾಖಲೆ 9.79 ಸೆಕೆಂಡ್‌ಗಳಾದರೆ, ಮಹಿಳೆಯರ ವಿಶ್ವ ದಾಖಲೆ 10.49 ಸೆಕೆಂಡ್‌ಗಳು.

ಇವತ್ತು ಈ ಮಹಿಳೆಯರ ಜೊತೆ ಸ್ಪರ್ಧಿಸಿ ಪುರುಷರು ಗೆಲ್ಲುವುದು ಸುಲಭವಲ್ಲ ಎಂಬಂಥ ವಾತಾವರಣ ನಿರ್ಮಾಣವಾಗುತ್ತಿರುವಾಗ ನಾವಿನ್ನೂ ಒಲಿಂಪಿಕ್ಸ್ ಮಟ್ಟದಲ್ಲಿ ಏನಾದರೂ ಸಾಧನೆ ಮಾಡಬೇಕಾದ್ದು ಉಳಿದುಕೊಂಡಿದೆ.

ಇನ್ನೇನು ಅಲ್ಲದಿದ್ದರೂ ಚದುರಂಗದಂಥ ಆಟದಲ್ಲಿ ಆದರೂ ಭಾರತ ಜಾಗತಿಕ ಮಟ್ಟ ಸಾಧಿಸಬಹುದಾಗಿದೆ. ಜಗತ್ತಿನ ಅತಿ ಶ್ರೇಷ್ಠ ಆಟಗಾರರಲ್ಲಿ 9ನೇ ಸ್ಥಾನ ಪಡೆದಿರುವ ವಿಶ್ವನಾಥನ್ ಆನಂದ್ ಈ ನಿಟ್ಟಿನಲ್ಲಿ ಸಾಗಬಹುದಾದ ಹಾದಿ ತಯಾರಿಸಿದ್ದಾನೆ. ವಿಜಯವಾಡದ ಕೋನೇರು ಹಂಪಿ ಹನ್ನೆರಡು ವರ್ಷದಲ್ಲೇ




ವಿಶ್ವ ಛಾಂಪಿಯನ್ ಆಗಲು ಕಾಯುತ್ತಿರುವ ವಿಶ್ವನಾಥನ್ ಆನಂದ್

ತೋರಿರುವ ಜಾಗತಿಕ ಪ್ರತಿಭೆ ನೋಡಿದರೆ, ಆಕೆ ಹದಿನೈದು ತುಂಬುವುದರೊಳಗೆ ಪ್ರಥಮ ಮಹಿಳಾ ಗ್ರ್ಯಾಂಡ್ ಮಾಸ್ಟರ್ ಆಗುವುದು ಖಚಿತವಾಗಿದೆ. ಇಂಥ ಪ್ರತಿಭೆಗಳನ್ನು ಗುರುತಿಸಿ ಬೆಳೆಸುವ ಕೆಲಸವಾದರೂ ನಾವೀಗ ಮಾಡಬೇಕು. ಇಲ್ಲವಾದಲ್ಲಿ ನೂರು ಕೋಟಿ ಜನರ ಈ ದೇಶದ ಶೂನ್ಯ ಸಂಪಾದನೆ ಮುಂದುವರಿಯುವುದು ಖಚಿತ.

■ ಸುಹಾಸ

ಎದೆಯುರಿ, ಅಸಿಡಿಟಿ, ಅಲ್ಸರ್

ಅಸಿಡಿಟಿ ಮೊದಲ ಹಂತದ ಸೂಚನೆ. ಅತಿವೇಗದ ಜೀವನ ಶೈಲಿ, ನಾನಾ ಆತಂಕಗಳ ನಡುವೆ ಬದುಕುವ ಆಧುನಿಕ ಮನುಷ್ಯನನ್ನು ಕಾಡುತ್ತಿರುವ ವ್ಯಾಪಕ ರೋಗ. ಮೊದಲು ಮೊದಲು ಅಷ್ಟೇನೂ ಹಾನಿ ಇರದು. ನಿರ್ಲಕ್ಷಿಸಿದರೆ ಮಾತ್ರ ತೀರಾ ಅಪಾಯಕಾರಿ.



ಆಸಿಡ್ ತುಂಬಿದ ಜಠರ

ಎದೆಯುರಿ ಅಥವಾ ಅಸಿಡಿಟಿ ಈಗ ಎಲ್ಲೆಡೆ ಸಾಮಾನ್ಯ. ಏನಾದರೂ ತಿಂದಾಗ ಹೊಟ್ಟೆಯಲ್ಲಿ ಗ್ಯಾಸ್, ಎದೆಯುರಿ, ಉಸಿರು ಕಟ್ಟಿದಂತೆ ಆಗುತ್ತದೆ. ಒಂದು ರೀತಿಯಲ್ಲಿ ಇದು ರೋಗವಲ್ಲದ ರೋಗ. ನಿರ್ಲಕ್ಷಿಸಿದರೆ ಹುಣ್ಣು ಅಥವಾ ಅಲ್ಸರ್‌ಗೆ ಕಾರಣವಾಗಬಹುದು. ಮುಖ್ಯ; ಇದು ಬರದಂತೆ ನೋಡಿಕೊಳ್ಳುವುದೇ ಜಾಣತನ.

ಲಕ್ಷಣಗಳು : ಹೊಟ್ಟೆಯ ಮೇಲು ಮಧ್ಯಭಾಗದಲ್ಲಿ ಉರಿ, ಎದೆ ಉರಿದಂತೆ ಭಾಸ. ಊಟ ಮಾಡಿದಾಗ ಹೊಟ್ಟೆ ಉಬ್ಬರಿಸಿದಂತಾಗುತ್ತದೆ. ಹೊಟ್ಟೆಭಾರ. ಅಸಿಡಿಟಿ ಜಾಸ್ತಿ ಆಗಿದ್ದರೆ ಗ್ಯಾಸ್ ಕೂಡ ಉತ್ಪತ್ತಿ ಆಗಬಹುದು. ಉಸಿರಾಡುವುದು ಕಷ್ಟ ಎನಿಸುತ್ತದೆ. ದಪ್ಪದವರಾದರೆ ವಾಕರಿಕೆ ಕೂಡ ಬರುತ್ತದೆ.

ಕಾರಣಗಳು : ಮಸಾಲೆ, ಕರಿದ ತಿಂಡಿ ತಿನ್ನುವುದು, ಊಟ, ತಿಂಡಿಯನ್ನು ನಿಯಮಿತ ವೇಳೆಗೆ ಮಾಡದಿರುವುದು, ಮದ್ಯ ಸೇವನೆ, ಧೂಮಪಾನ ಅಥವಾ ತಂಬಾಕು ಸೇವನೆ, ಚಾಕೋಲೇಟ್ ಸೇವನೆ, ಕಾಫೀ, ಟೀ, ಸಾಫ್ಟ್ ಡ್ರಿಂಕ್‌ಗಳ ಅತಿ ಸೇವನೆ. ಮಿತಿಮೀರಿ ತಿನ್ನುವುದು, ಕೆಲಸದ ಒತ್ತಡ ಅಥವಾ ಆತಂಕ ಕೂಡ ಅಸಿಡಿಟಿಗೆ ಕಾರಣವಾಗಬಹುದು.

ಚಿಕಿತ್ಸೆ : ಒಂದು ಲೋಟ ತಣ್ಣನೆಯ ಹಾಲು, ಕುಡಿಯುವುದು ಅತ್ಯುತ್ತಮ. ಔಷಧಿ ಅಂಗಡಿಗಳಲ್ಲಿ ದೊರೆಯುವ ಜೀರ್ಣಕಾರಕ ಹಾಗೂ ಅಂಟಾಸಿಡ್ ಅತಿಕಡಿಮೆ ಬಳಸುವುದೂ ಒಳ್ಳೆಯದೇ. ಸತತವಾಗಿ ಇಂಥ ಔಷಧ ಬಳಸಬೇಕಾಗಿ ಬಂದಲ್ಲಿ ವೈದ್ಯರ ಸಲಹೆ ಪಡೆಯುವುದು ಒಳ್ಳೆಯದು. ಅಂಟಾಸಿಡ್‌ಗಳು ಹೊಟ್ಟೆಯಲ್ಲಿ ಹೆಚ್ಚಾಗಿ ಉತ್ಪತ್ತಿಯಾದ ಆಮ್ಲದ (ಆಸಿಡ್) ಜೊತೆ ಬೆರೆತು ಅವುಗಳನ್ನು ನಿಯಂತ್ರಣಕ್ಕೆ ತಂದು ಪರಿಣಾಮ ಬೀರದಂತೆ ತಡೆಯುತ್ತವೆ.

ಗರ್ಭಿಣಿ ಸ್ತ್ರೀಯರು, ಬೇರೆ ಔಷಧಿಗಳನ್ನು ಬಳಸುತ್ತಾ ಇರುವವರು ಅಂಟಾಸಿಡ್‌ಗಳನ್ನು ಉಪಯೋಗಿಸುವ ಮುನ್ನ ಡಾಕ್ಟರ್ ಸಲಹೆ ಪಡೆಯುವುದು ಉತ್ತಮ. ಕೆಲವು ಔಷಧಿಗಳ ಪ್ರಭಾವವನ್ನು ಅಂಟಾಸಿಡ್‌ಗಳು ತಡೆಯುತ್ತವೆ. ಆದ್ದರಿಂದ ಈ ಮುನ್ನೆಚ್ಚರಿಕೆ ಅಗತ್ಯ.

ಗಮನಿಸಬೇಕಾದ್ದು : ಹೊಟ್ಟೆಯಲ್ಲಿ ಅಧಿಕ ಆಮ್ಲ ಉತ್ಪತ್ತಿ ಮೊದಲ ಹಂತ. ಅಲ್ಲಿ ಉತ್ಪನ್ನವಾಗುವ ಗ್ಯಾಸ್ ಮೇಲೆದ್ದು ಗಂಟಲನಾಳಕ್ಕೂ ವ್ಯಾಪಿಸುತ್ತದೆ. ಆಗ ಎದೆಯುರಿ ಆರಂಭವಾಗುತ್ತದೆ. ಇಂಥ ಎದೆಯುರಿ ಅಥವಾ ಎದೆಯೊತ್ತಿದಂತೆ ಆಗುವುದು ಹೃದಯಾಘಾತದ ಮುನ್ಸೂಚನೆ. ಅಂಥ ಸಂದರ್ಭಗಳಲ್ಲಿ ಎದೆ ಉರಿಗಿಂತ ಎದೆ ಒತ್ತಿದಂತೆ ಆಗುವುದೇ ಹೆಚ್ಚು; ಕೆಲವೊಮ್ಮೆ ಇದು ಗಂಟಲು, ಕುತ್ತಿಗೆವರೆಗೂ ವ್ಯಾಪಿಸಬಹುದು.

ಎದೆಯುರಿ ಆಗಾಗ ಕಾಣಿಸುತ್ತಿದ್ದರೆ, ಅಲ್ಸರ್ ಆಗಿರುವ ಸಾಧ್ಯತೆ ಹೆಚ್ಚು. ಅಲ್ಸರ್ ಆಗಿದ್ದರೆ ನೋವು ಕಾಣಿಸಿಕೊಳ್ಳುತ್ತದೆ. ಬರಿ ಹೊಟ್ಟೆಯಲ್ಲಿ ಇದ್ದಾಗ,

ಅಸಿಡಿಟಿ, ಎದೆಯುರಿ ತಡೆಗೆ ಉಪಾಯಗಳು

- ತೂಕ ಹೆಚ್ಚಾಗದಂತೆ ತಡೆಯಿರಿ. ಭಾರೀ ಭೋಜನ ಬೇಡ. ಆಗಾಗ ಬಾಯಿ ಚಪಲಕ್ಕಾಗಿ ತಿನ್ನುವುದು ಒಳ್ಳೆಯದಲ್ಲ.
- ಮಸಾಲೆ ಪದಾರ್ಥಗಳು, ಪೆಪ್ಪರಮಿಂಟ್, ಚಾಕೋಲೇಟ್, ತಂಬಾಕು ಅತಿಯಾಗಿ ಬಳಸುವುದರಿಂದ ಎದೆಯುರಿ, ಅಸಿಡಿಟಿ ಬರುತ್ತದೆ. ಇವನ್ನು ಬಳಸದಿರುವುದು, ಹಿತಮಿತವಾಗಿ ಬಳಸುವುದು ಉತ್ತಮ. ಸರಿ ಸಮಯಕ್ಕೆ ಊಟ, ತಿಂಡಿಯ ನಿಯಮವಿರಲಿ. ದಿನಕ್ಕೆ ಆರರಿಂದ ಎಂಟು ದೊಡ್ಡ ಲೋಟಾ ನೀರು ಕುಡಿಯಬೇಕು.
- ಊಟ ಮಾಡಿದ ತಕ್ಷಣ ಮಲಗಬೇಡಿ.
- ಮುಕ್ಕಾಲು ಅಡಿಯಷ್ಟು ಎತ್ತರದ ದಿಂಬು ಬಳಸಿ, ದೇಹಕ್ಕಿಂತ ತಲೆ ಕೊಂಚ ಮೇಲೆ ಇರುವಂತೆ ಮಲಗಬೇಕು. ಎತ್ತರದ ದಿಂಬುಗಳಿಗಿಂತ ಹಾಸಿಗೆ ಅಡಿಯಲ್ಲಿ ಇಟ್ಟಿಗೆ ಅಥವಾ ಅದೇ ಗಾತ್ರದ ಮರದ ತುಂಡು ಇರಿಸುವುದು ಹೆಚ್ಚು ಪರಿಣಾಮಕಾರಿ. ಇದರಿಂದ ಹೊಟ್ಟೆಯಲ್ಲಿ ಉತ್ಪತ್ತಿಯಾದ ಅನಿಲ ಮುಂತಾದವು ಗಂಟಲಿನತ್ತ ಧಾವಿಸುವುದು ತಪ್ಪುತ್ತದೆ.
- ಸೊಂಟ ಬಿಗಿಯಾಗಿ ಬಂಧಿಸುವ ಪ್ಯಾಂಟ್, ಒಳ ಉಡುಪು, ಬೆಲ್ಟ್ ಬಳಸಬೇಡಿ. ವೈದ್ಯರ ಸಲಹೆಗೆ ವಿಳಂಬ ಬೇಡ.
- ನಲವತ್ತೈದು ದಾಟಿದ್ದು, ಎದೆಯುರಿ, ಅಲ್ಸರ್, ಅಸಿಡಿಟಿಯ ಲಕ್ಷಣ ತೋರಿದಾಗ ತಕ್ಷಣ ವೈದ್ಯರಲ್ಲಿಗೆ ಹೋಗಿ ಸಲಹೆ ಪಡೆಯಿರಿ.
- ರೋಗದ ಲಕ್ಷಣಗಳು ನಿರಂತರವಾಗಿದ್ದು, ಅಂಗಡಿಗಳಲ್ಲಿ ದೊರೆಯುವ ಔಷಧಿಗಳಿಂದ ಪರಿಣಾಮ ಕಾಣದಿದ್ದರೆ ವೈದ್ಯರ ಸಲಹೆಗೆ ಧಾವಿಸಿರಿ.
- ಹೃದಯ ಅಥವಾ ಮೂತ್ರಪಿಂಡದ ತೊಂದರೆಗಳಿದ್ದಲ್ಲಿ ಅಸಿಡಿಟಿ ಕಾಣಿಸಿಕೊಂಡ ಕೂಡಲೇ ವೈದ್ಯರಲ್ಲಿಗೆ ಹೋಗಬೇಕು.
- ಬೇರೆ ಔಷಧಿಗಳನ್ನು ಸೇವಿಸುತ್ತಾ ಇರುವವರು, ಗರ್ಭಿಣಿಯರು ವೈದ್ಯರ ಸಲಹೆ ಪಡೆದ ನಂತರವೇ ಅಂಟಾಸಿಡ್ ಮುಂತಾದವು ಬಳಸಬೇಕು.

ಅದರಲ್ಲೂ ರಾತ್ರಿ ವೇಳೆ ಈ ನೋವು ಕಾಣಿಸುತ್ತದೆ. ಎದೆಯುರಿ ಎದೆಯ ಮೂಳೆ ಒತ್ತಿದಂತೆ ಮಾಡಿದರೆ, ಅಲ್ಸರ್‌ನಿಂದ ಉಂಟಾಗುವ ಉರಿ ಎದೆ ಮೂಳೆಯ ಕೆಳಗೆ ಕಾಣಿಸಿಕೊಳ್ಳುತ್ತದೆ. ಹೀಗಾಗಿ ಅಲ್ಸರ್ ಮತ್ತು ಕೇವಲ ಎದೆಯುರಿಯ ಅಂತರ ಗುರುತಿಸುವುದು ಸುಲಭ.

ಇಂಥ ಪ್ರಸಂಗಗಳಲ್ಲಿ ತಣ್ಣಗಾದ ಹಾಲು ಸೇವಿಸುವುದು ಉತ್ತಮ ಪರಿಹಾರ. ಇಲ್ಲಿ ಅಂಟಾಸಿಡ್ ಬಳಸಿದರೆ ಎದೆಯುರಿ, ಅಲ್ಸರ್‌ನ ನೋವು ಕಡಿಮೆಯಾಗಬಹುದು. ಆದರೆ ಹುಣ್ಣು ನಿವಾರಣೆ ಆಗುವುದಿಲ್ಲ.

ಎದೆಯುರಿಗೆ ಕಾರಣ

ನಾವು ಸೇವಿಸುವ ಆಹಾರ ಜಠರದಲ್ಲಿ ಹೈಡ್ರೋಕ್ಲೋರಿಕ್ ಆಮ್ಲದೊಡನೆ ಬೆರೆತು ಪಚನವಾಗುತ್ತದೆ. ಈ ಆಮ್ಲ ಜಠರದ ಪದರಿಗೆ ಹಾನಿಯಾಗದಂತೆ ಮ್ಯೂಕಸ್ ಪದರ ತಡೆಯುತ್ತದೆ. ಗಂಟಲುನಾಳಕ್ಕೆ ಇಂಥ ರಕ್ಷಣೆ ಇಲ್ಲ. ಜಠರದ ಆಹಾರ ಮತ್ತು ಗ್ಯಾಸ್ಟ್ರಿಕ್ ಆಸಿಡ್ ಗಂಟಲನಾಳಕ್ಕೆ ಹೋಗದಂತೆ ತಡೆಯುವ ಮಾಂಸ ಪೇಶಿ ಇರುತ್ತದೆ. ಕೆಲವೊಮ್ಮೆ ಇದು ಸರಿಯಾಗಿ ಮುಚ್ಚಿಕೊಳ್ಳುವುದಿಲ್ಲ. ಹಾಗಾದಾಗ ಜಠರದಿಂದ ಮೇಲಕ್ಕೇರಿದ ಆಮ್ಲ ಬೆರೆತ ಅನಿಲ ಗಂಟಲನಾಳದಲ್ಲಿ ಉರಿಗೆ ಕಾರಣವಾಗುತ್ತದೆ.

ಅಲ್ಸರ್ (ಹುಣ್ಣು) : ಅಲ್ಸರ್ ಅಥವಾ ಹೊಟ್ಟೆ ಹುಣ್ಣು ಎಂದರೆ ಕರುಳಿನ ಮ್ಯೂಕಸ್ ಪದರದಲ್ಲಿ ಗಾಯದಂತೆ ಆಗುವುದು. ಹೆಚ್ಚಾಗಿ ಬರುವುದು ಪೆಪ್ಟಿಕ್ ಅಲ್ಸರ್. ಇದು ಜೀರ್ಣಕೋಶದಲ್ಲಿ ಆಗುತ್ತದೆ. ಇನ್ನೊಂದು ಡ್ಯುಯೇಡಿನಲ್ ಅಲ್ಸರ್. ಇದು ಸಣ್ಣ ಕರುಳಿನ ಮೇಲುಭಾಗದಲ್ಲಿ ಆಗುತ್ತದೆ.

ಅಲ್ಸರ್‌ಗಳ ಪತ್ತೆ ಸುಲಭ. ಹೊಟ್ಟೆಯ ಮೇಲುಭಾಗದಲ್ಲಿ ನೋವು ಇರುತ್ತದೆ.

ಊಟದ ನಡುವೆ, ಅದರಲ್ಲೂ ರಾತ್ರಿಯಲ್ಲಿ ಈ ನೋವು ಜಾಸ್ತಿ.

ಹೆಚ್ಚಾದ ಆಮ್ಲ ಉತ್ಪತ್ತಿಯಿಂದ ಕರುಳಿನ ಒಳಪದರನ್ನು ಹಾನಿ ಮಾಡಿದಾಗ ಹುಣ್ಣು ಉಂಟಾಗುತ್ತದೆ. ಒತ್ತಡ, ತಂಬಾಕು ಸೇವನೆಯಿಂದ ಆಮ್ಲ ಉತ್ಪತ್ತಿ ಜಾಸ್ತಿ ಆಗುತ್ತದೆ. ಕೆಲವೊಮ್ಮೆ ಆಸ್ಪರೀನ್ ವಿಪರೀತ ಬಳಕೆಯಿಂದಲೂ ಕರುಳಿನ ಒಳಪದರು ಹಾನಿಗೊಳಗಾಗುವುದುಂಟು.

ಪೆಪ್ಟಿಕ್ ಅಲ್ಸರ್ ಮತ್ತು ಡ್ಯುಯೋಡಿನಲ್ ಅಲ್ಸರ್ ಅಪಾಯಕಾರಿ. ಇದರಿಂದ ಕರುಳಿಗೆ ಆಹಾರ ಒಯ್ಯುವ ಭಾಗ ಸಂಕುಚಿತಗೊಳ್ಳುತ್ತದೆ. ಇದು ಜಾಸ್ತಿ ಆದಾಗ ಕರುಳು ಮತ್ತು ಜಠರದಲ್ಲಿ ತೂತಾಗಬಹುದು.

■ 'ಇನ್‌ಸೈಟ್' ನಿಂದ

ಅಮೆರಿಕಾದ ಪ್ರತಿಷ್ಠಿತ 'ಪಿಜಾ' ಕಂಪೆನಿ ಡಾಮಿನೋ ಸಿಖ್ ಒಬ್ಬರಿಗೆ ಕೆಲಸ ನೀಡಲು ನಿರಾಕರಿಸಿ ದಂಡ ತೆತ್ತಿದೆ. ಉದ್ಯೋಗಾರ್ಥಿ ಗಡ್ಡ ಬಿಟ್ಟಿದ್ದಾರೆಂಬ ಕಾರಣಕ್ಕೆ ಕೆಲಸ ನಿರಾಕರಿಸಿದ್ದು ತಪ್ಪು ಎಂದು ಮೇರಿಲ್ಯಾಂಡನ್ ಮಾನವ ಸಂಬಂಧಿಗಳ ಆಯ್ಕೋ ತೀರ್ಪಿತ್ತಿದೆ. ಡಾಮಿನ್ಸೋ ಈಗ ತನ್ನ ನಿಲುವು ಬದಲಾಯಿಸಲು ಒಪ್ಪಿದೆಯಲ್ಲದೇ ಮೊಕದ್ದಮೆಯ ಖರ್ಚು ಐದು ಸಾವಿರ ಡಾಲರ್ ನೀಡಬೇಕಿದೆ.

ಪ್ರಭಜೋತ್ ಕೊಹ್ಲಿ ಎಂಬ ಸಿಖ್ ಒಬ್ಬರು 1988ರಲ್ಲಿ ಡಾಮಿನೋ ವಿರುದ್ಧ ಖಟ್ಲೆ ಹೂಡಿದ್ದರು. ಗಡ್ಡ ಬಿಟ್ಟಿದ್ದ ಕಾರಣ ಅವರಿಗೆ ಉದ್ಯೋಗ ನಿರಾಕರಿಸಲಾಯಿತು. ತಾವು ಸಿಖ್ ಧರ್ಮೀಯರಾಗಿದ್ದು, ಗಡ್ಡ ತೆಗೆಯುವಂತಿಲ್ಲ ಎಂಬ ಕಾರಣ ನೀಡಿ ಕೊಹ್ಲಿ ಆಯೋಗಕ್ಕೆ ದೂರಿತ್ತರು ಪಿಜಾ ತಯಾರಿಕಾ ಕಂಪೆನಿ ಧರ್ಮಗಳ ನಡುವೆ ತಾರತಮ್ಯ ತೋರುತ್ತಿದೆ ಎಂದು ನಿರ್ಧರಿಸಿದ ಆಯೋಗ ತೀರ್ಪಿತ್ತಿದೆ. ಖಟ್ಲೆಯ ಖರ್ಚು ವೆಚ್ಚ ಐದು ಸಾವಿರ ಡಾಲರ್ ನೀಡಲು ಕಂಪೆನಿ ಒಪ್ಪಿರುವ ಕಾರಣ ದೂರು ಹಿಂತೆಗೆದುಕೊಳ್ಳಲಾಗಿದೆ. ಹೀಗಾಗಿ ಇದನ್ನು ಅಮೆರಿಕಾದಲ್ಲಿ ಗಡ್ಡದ ವಿಜಯ ಎಂದು ಬಣ್ಣಿಸಬಹುದೇನೋ! ■

ಟಾಲ್‌ಸ್ಟಾಯ್ ಹೇಳಿದ

ಮಕ್ಕಳ ಕತೆಗಳು

ಅನುವಾದ : ಚಂದ್ರಾ ನಾಗಭೂಷಣಸ್ವಾಮಿ

ಟಾಲ್‌ಸ್ಟಾಯ್ ರಶಿಯಾ ದೇಶದ ಲೇಖಕ, ಜಗತ್ತಿನ ಅತ್ಯುತ್ತಮ ಸಾಹಿತಿಗಳಲ್ಲಿ ಒಬ್ಬನು ಎಂದು ಪ್ರಸಿದ್ಧನಾಗಿದ್ದಾನೆ. ಆತ ತನ್ನ ರೈತರ ಮಕ್ಕಳಿಗೆಂದು ಕೆಲವು ಮಕ್ಕಳ ಕಥೆಗಳನ್ನು ಬರೆದಿದ್ದಾನೆ. ಬಹಳ ಹಿಂದಿನ ಕಾಲದಲ್ಲಿ ಈಸೋಪ್ ಎಂಬಾತ ಹೇಳಿದ ಕಥೆಗಳನ್ನು ಟಾಲ್‌ಸ್ಟಾಯ್ ಹೊಸ ರೀತಿಯಲ್ಲಿ ಹೇಳಿದ್ದಾನೆ. ಕಥೆಯ ಅರ್ಥ ಏನು, ನೀತಿ ಏನು ಎಂದು ಟಾಲ್‌ಸ್ಟಾಯ್ ಬಿಡಿಸಿ ಹೇಳುವುದಿಲ್ಲ. ಮಕ್ಕಳು ಜಾಣರು, ಕಥೆ ಅವರಿಗೆ ತಿಳಿಯುತ್ತದೆ ಎಂದು ಹೇಳುತ್ತಿದ್ದ. ಅವನು ಹೇಳಿದ ಕಥೆಗಳಲ್ಲಿ ಕೆಲವನ್ನು ಇಲ್ಲಿ ಪ್ರತಿ ತಿಂಗಳು ನೀಡುತ್ತೇವೆ.
ನಿಮಗೂ ಇಷ್ಟ ಆದರೆ ಬೇರೆ ಮಕ್ಕಳಿಗೂ ಹೇಳಿ.

ಹೆಂಗಸು ಮತ್ತು ಕೋಳಿ

ಒಬ್ಬ ಹೆಂಗಸು ಒಂದು ಕೋಳಿ ಸಾಕಿದ್ದಳು. ಅದು ದಿನಕ್ಕೆ ಒಂದು ಮೊಟ್ಟೆ ಇಡುತ್ತಿತ್ತು. ಕೋಳಿಗೆ ಜಾಸ್ತಿ ಊಟ ಕೊಟ್ಟರೆ ಎರಡು ಮೊಟ್ಟೆ ಸಿಕ್ಕೀತು ಎಂದು ಆ ಹೆಂಗಸು ಯೋಚಿಸಿದಳು. ಅವತ್ತಿನಿಂದ ಕಾಳು ಹೆಚ್ಚಾಗಿ ಹಾಕತೊಡಗಿದಳು. ಜಾಸ್ತಿ ತಿಂದೂ ತಿಂದೂ ಕೋಳಿ ದಪ್ಪಗಾಯಿತು. ಮೊಟ್ಟೆ ಇಡುವುದನ್ನೇ ನಿಲ್ಲಿಸಿಬಿಟ್ಟಿತು.

ಪುಟ್ಟ ಹಕ್ಕಿ



ಒಂದು ಮರದ ಮೇಲೆ ಪುಟ್ಟ ಹಕ್ಕಿಯೊಂದು ಕುಳಿತಿತ್ತು. ನೆಲದಲ್ಲಿ ಬಿದ್ದಿದ್ದ ಒಂದು ಕಾಳು ಅದಕ್ಕೆ ಕಾಣಿಸಿತು. ಹಕ್ಕಿಗೆ ಅದನ್ನು ಹೆಕ್ಕಿಕೊಳ್ಳಬೇಕು ಅನ್ನಿಸಿತು. ಕೊಂಬೆಯಿಂದ ಹಾರಿ ನೆಲಕ್ಕೆ ಇಳಿಯಿತು. ನೆಲದ ಮೇಲೆ ಹರಡಿದ್ದ ಬಲೆಯಲ್ಲಿ ಸಿಕ್ಕಿಬಿತ್ತು.

''ಕಾಳಿಗೆ ಆಸೆ ಪಟ್ಟಿದ್ದೇ ತಪ್ಪಾಯಿತೇ? ಹದ್ದುಗಳು ಜೀವಂತವಾಗಿರುವ ಹಕ್ಕಿಗಳನ್ನೆ ಬೇಟೆಯಾಡಿ ತಿಂದರೂ ಅವಕ್ಕೆ ಏನೂ ಆಗುವುದಿಲ್ಲ. ನಾನು ಒಂದು ಸಣ್ಣ ಕಾಳು ತಿನ್ನಲು ಹೋಗಿ ಸಿಕ್ಕಿಬಿದ್ದೆ'' ಅಂತ ಯೋಚನೆ ಮಾಡಿತು.




ಹಿಮಾಲಯದ ಮಹಾತ್ಮರ

ಸ್ವಾಮಿ ರಾಮ ಅವರ ಮೂಲಕೃತಿ 'ಲಿವಿಂಗ್ ವಿಥ್ ದ ಹಿಮಾಲಯನ್ ಮಾಸ್ಟರ್ಸ್, ಅದನ್ನು ಕನ್ನಡಕ್ಕೆ ತಂದವರು ಡಿ.ಕೆ. ಶ್ಯಾಮಸುಂದರರಾವ್. 1991ರಲ್ಲಿ-ಮೊದಲು ಕೃತಿ ಪ್ರಕಟವಾಯಿತು. ಐದೇ ತಿಂಗಳಲ್ಲಿ ಮರು ಮುದ್ರಣ ಕಂಡಿತು. ಬರುವ ತಿಂಗಳಲ್ಲಿ 'ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ' ನಾಲ್ಕನೇ ಮುದ್ರಣ ಕಾಣುತ್ತಿದೆ.

ಇದು ಕೃತಿಯ ಜನಪ್ರಿಯತೆಯ ಧ್ಯೋತಕ. ಕೆಲವು ಕಾಲ ಸ್ವಾಮಿ ರಾಮ ಕರವೀರಪೀಠದ ಶಂಕರಾಚಾರ್ಯ ಆಗಿದ್ದವರು. ಅವರ ಬದುಕಿನ ಬಹುಪಾಲು ಹಿಮಾಲಯದ ಮಡಿಲಲ್ಲಿ ಕಳೆದಿದೆ. ಅಲ್ಲಿ ಕಂಡ ಹಿರಿಮೆ, ಗರಿಮೆ, ಸೌಂದರ್ಯ ಎಲ್ಲ ತಮ್ಮ ಆತ್ಮಕಥೆಯಲ್ಲಿ ಅವರು ಬರೆದಿಟ್ಟಿದ್ದಾರೆ. ಈ ಕೃತಿಯ ಕನ್ನಡ ಅನುವಾದದ ಆಯ್ದ ಭಾಗಗಳನ್ನು ಇಲ್ಲಿ ನಮ್ಮ ಓದುಗರಿಗಾಗಿ ಆರಿಸಿಕೊಡುತ್ತಿದ್ದೇವೆ. ಹಿಮಾಲಯದ ಆಧ್ಯಾತ್ಮ, ಬದುಕಿನ ಒಂದು ನೋಟ ಇದು ಕಟ್ಟಿಕೊಡುತ್ತದೆ. ಇದರಿಂದ ಪ್ರೇರಣೆಗೊಂಡು ಮೂಲ ಕೃತಿಯತ್ತ ಕೈ ಚಾಚುವುದಾದರೆ ಇನ್ನೂ ಸಂತೋಷ.

ಗುರುದೇವ ಮತ್ತು ತಂದೆತಾಯಿಗಳು



ನನ್ನ ತಂದೆ ಪ್ರಸಿದ್ಧ ಸಂಸ್ಕೃತ ಪಂಡಿತರೂ ಉನ್ನತ ಆಧ್ಯಾತ್ಮಜೀವಿಯೂ ಆಗಿದ್ದರು. ನನ್ನ ತಂದೆತಾಯಿಗಳು ಸಾಧಾರಣ ಸ್ಥಿತಿವಂತರು, ಉದಾರಿಗಳಾದ ಭೂಮಾಲೀಕರು. ತಂದೆ ಸ್ವತಃ ಕೃಷಿಕರಲ್ಲ. ಬೇಸಾಯ ಮಾಡಿದ ರೈತರೊಡನೆ ಬೆಳೆಯನ್ನು ಹಂಚಿಕೊಳ್ಳುತ್ತಿದ್ದರು.

ಒಮ್ಮೆ, ಆರು ತಿಂಗಳಕಾಲ ನನ್ನ ತಂದೆ ಎಲ್ಲಿದ್ದಾರೆಂದು ಯಾರಿಗೂ ಗೊತ್ತಾಗಲಿಲ್ಲ. ಅವರು ಸತ್ತಿರಬೇಕು ಇಲ್ಲವೇ ಸನ್ಯಾಸದೀಕ್ಷೆ ಪಡೆದಿರಬೇಕು ಎಂದು ಕುಟುಂಬದವರು ನಿರ್ಧರಿಸಿದ್ದರು. ವಾಸ್ತವವಾಗಿ, ತಮ್ಮ ಆಧ್ಯಾತ್ಮಿಕ ಸಾಧನೆಯಲ್ಲಿ ಸಮಸ್ಯೆಗಳು ಬಂದ ಕಾರಣ ಅವರು ದೀರ್ಘ ಏಕಾಂತವಾಸಕ್ಕೆ ಹೋಗಿ ಬಿಟ್ಟಿದ್ದರು. ಹರಿದ್ವಾರಕ್ಕೆ ಅನತಿದೂರದ ಮಾನಸದೇವಿ ಅರಣ್ಯಪ್ರದೇಶದಲ್ಲಿ ಗಾಢವಾದ ಧ್ಯಾನದಲ್ಲಿ ತೊಡಗಿದ್ದರು. ನನ್ನ ಗುರುಗಳು ಪ್ರವಾಸ ಮಾಡುತ್ತಾ ಒಂದು ಸಂಜೆ ತಂದೆಯಿದ್ದ ಸ್ಥಳಕ್ಕೆ ಆಗಮಿಸಿದರು. ನೋಡಿದ ಕೂಡಲೇ ಇವರೇ ತಮ್ಮ ಗುರುದೇವ ಎಂದು ನನ್ನ ತಂದೆ ಅರಿತರು. ಗುರುದೇವರು ಒಂದು ವಾರ ಅಲ್ಲಿದ್ದು ನನ್ನ ತಂದೆಯವರಿಗೆ ಮಾರ್ಗದರ್ಶನ ನೀಡಿ, ಕೊನೆಗೆ ಉತ್ತರ ಪ್ರದೇಶದ 5,500 ಅಡಿಗಳೆತ್ತರದ ಬೆಟ್ಟ ಪ್ರದೇಶದಲ್ಲಿರುವ ಅವರ ಮನೆಗೆ ಹಿಂತಿರುಗಲು ಸೂಚಿಸಿದರು.

ಎರಡು ವರ್ಷಗಳ ನಂತರ, ನನ್ನ ಗುರುದೇವರು ಹಿಮಾಲಯದಿಂದ ಇಳಿದು ನನ್ನ ತಂದೆತಾಯಿಗಳ ಊರಿಗೆ ಮತ್ತು ಅವರ ಮನೆಗೆ ಆಗಮಿಸಿದರು. ಗುರುದೇವರು ಬಂದ ಹೊತ್ತಿನಲ್ಲಿ ನನ್ನ ತಂದೆ ಊಟ ಮಾಡುತ್ತಿದ್ದ ಪ್ರಯುಕ್ತ ನನ್ನ ತಾಯಿ ಬಾಗಿಲು ತೆರೆದರು. ಪತಿಗೆ ಬಡಿಸುವ ಕೆಲಸ ನಿರ್ವಹಿಸಬೇಕಿದ್ದ ಕಾರಣ ನನ್ನ ತಾಯಿ ಬಂದ ವ್ಯಕ್ತಿ ಯಾರೆಂಬುದನ್ನೂ ತಿಳಿಯದೆ ಸ್ವಲ್ಪಕಾಲ ನಿರೀಕ್ಷಣೆ ಮಾಡುವಂತೆ ತಿಳಿಸಿದರು. ಅತಿಥಿಯ ಆಗಮನದ ಸೂಚನೆಯನ್ನು ಹೇಗೋ ತಿಳಿದ ನನ್ನ ತಂದೆ ಊಟ ಮಾಡುವುದನ್ನು ಬಿಟ್ಟು ಬಾಗಿಲಿನತ್ತ ಧಾವಿಸಿದರು. ಕೂಡಲೇ ನನ್ನ ಗುರುದೇವರು ''ಊಟ ಮಾಡುವುದಕ್ಕಾಗಲಿ ಅಥವಾ ಆತಿಥ್ಯವನ್ನು ಸ್ವೀಕರಿಸುವುದಕ್ಕಾಗಲೀ ನಾನಿಲ್ಲಿಗೆ ಬಂದಿಲ್ಲ. ಬೇರೇನನ್ನೊ ನೀನು ನನಗೆ ಕೊಡಬೇಕು'' ಎಂದು ಹೇಳಿದರು.

''ನನ್ನದೆನ್ನುವುದು ಏನಿದ್ದರೂ ಅದು ನಿಮ್ಮದೇ'' ಎಂದು ತಂದೆ ಉತ್ತರಿಸಿದರು.

''ನನಗೆ ನಿನ್ನ ಮಗ ಬೇಕು'' ಎಂದು ಗುರುಗಳು ಹೇಳಿದರು. ''ಈ ವಯಸ್ಸಿನಲ್ಲಿ ನಾವು ಮಗನನ್ನು ಪಡೆಯುವುದೆಂದರೆ, ಅದೊಂದು ಪವಾಡವೇ, ಒಂದು ವೇಳೆ ನಾವು ಮಗನನ್ನು ಪಡೆದೆವಾದರೆ, ಆತ ನಿಮ್ಮವನು'' ಎಂದು ನನ್ನ ತಂದೆ ತಾಯಿಗಳು ಉತ್ತರಿಸಿದರು. ಈ ಘಟನೆ ನಡೆದ ಹದಿನೆಂಟು ತಿಂಗಳುಗಳ ನಂತರ, ನಾನು ಹುಟ್ಟಿದೆ.

ನಾನು ಹುಟ್ಟಿದ ದಿನವೇ ನಮ್ಮ ಮನೆಗೆ ಗುರುದೇವರು ಆಗಮಿಸಿ ಮಗುವನ್ನು ತನಗೆ ಕೊಡುವಂತೆ ನನ್ನ ತಾಯಿಯನ್ನು ಕೇಳಿದರು. ಹೆತ್ತೊಡಲು ಈ ಕೋರಿಕೆಯನ್ನು ಪೂರೈಸಲು ಇಷ್ಟಪಡಲಿಲ್ಲ. ಆದರೆ ನನ್ನ ತಂದೆ ಮಗುವನ್ನು

ಕೊಡುವಂತೆ ಹೇಳಿದರು. ಕೆಲವು ನಿಮಿಷಗಳವರೆಗೆ ತೋಳುಗಳಲ್ಲಿ ನನ್ನನ್ನ ಎತ್ತಿಕೊಂಡಿದ್ದ ಗುರುದೇವರು ಮತ್ತೆ ಹಿಂದಕ್ಕೆ ಕೊಟ್ಟು ''ಸಂರಕ್ಷಣೆ ಮಾಡಿ, ಆಮೇಲೆ ಬಂದು ಕರೆದೊಯ್ಯುತ್ತೇನೆ'' ಎಂದು ಸೂಚನೆ ನೀಡಿದರು.

ಕೆಲವರ್ಷಗಳಲ್ಲಿ ನನ್ನ ತಂದೆತಾಯಿಗಳು ಕಾಲವಾದರು. ನಾನು ನನ್ನ ಗುರುದೇವರಲ್ಲಿಗೆ ಹೋದೆ. ಅವರು ನನ್ನನ್ನು ಶಿಸ್ತುಸಂಯಮಗಳ ಹದ್ದುಬಸ್ತಿಗೆ ಅದು ಅವರಿಗೆ ಕಷ್ಟಕರವಾದ ಸಂಗತಿಯಾದರೂ-ಒಳಪಡಿಸತೊಡಗಿದರು. 'ಅಪ್ಪಾ' ಎಂದು ಬಾಯ್ತುಂಬಾ ಕರೆಯಬೇಕಾದ ಸಂದರ್ಭದಿಂದ ವಂಚಿತನಾದೆನೆಂದು ನನಗೆ ಅನಿಸಲೇ ಇಲ್ಲ. ತಂದೆಯೊಡನೆ ಅಷ್ಟೊಂದು ಆತ್ಮೀಯತೆಯನ್ನು ಇಟ್ಟುಕೊಂಡಿರಲೇ ಇಲ್ಲ. ಯಾವತ್ತೂ, ನನಗೆ, ತಂದೆಯನ್ನು ಕಳೆದುಕೊಂಡಂತೆ ಭಾಸವಾಗಲೇ ಇಲ್ಲ. ಯಾಕೆಂದರೆ ಯಾವ ತಂದೆಯೂ ತನ್ನ ಮಗುವಿಗೆ ನೀಡಲಾಗದಂಥ ವಿಶೇಷವನ್ನು ನನ್ನ ಗುರುದೇವರಿಂದ ಪಡೆದಿದ್ದೇನೆ. ನನ್ನ ಗುರುದೇವರು ನನಗೆ ತಂದೆ ಮಾತ್ರವಲ್ಲ ಅದಕ್ಕಿಂತಲೂ ಮಿಗಿಲಾದವರು.


ನನ್ನ ಮನಸ್ಸಿನಲ್ಲಿ ಮೂಡಿದ ಯಾವುದೇ ಆಲೋಚನೆ ಅವರಿಗೆ ಗೊತ್ತಾಗಿ ಬಿಡುತ್ತಿತ್ತು. ನಾನೇನಾದರೂ ಧ್ಯಾನ ಮಾಡುವುದು ಬೇಡ ಎಂದು ಆಲೋಚಿಸಿದರೆ, ಅವರು ನನ್ನತ್ತ ನೋಡಿ ಮುಗುಳುನಗುತ್ತಿದ್ದರು.

''ಯಾಕೆ ನಗ್ತಿದ್ದೀರಿ?'' ಎಂದು ಕೇಳುತ್ತಿದ್ದೆ.

ಅವರು ''ಧ್ಯಾನ ಮಾಡುವುದು ನಿನಗೆ ಇಷ್ಟವಿಲ್ಲ'' ಎನ್ನುತ್ತಿದ್ದರು.

ಇದರಿಂದ ನನಗೆ ಬಹಳ ಸಹಾಯ ಆಯ್ತು.

ಅನುಗ್ರಹ ಪರಿಣಾಮದ ಕಟುಸತ್ಯ



ಗುರುಗಳ ಜೊತೆ ಪ್ರವಾಸ ಮಾಡುತ್ತಿದ್ದಾಗಿನ ಒಂದು ಸನ್ನಿವೇಶ ನೆನಪಾಗುತ್ತಿದೆ. ನಾವು ಸಾಗುತ್ತಿದ್ದ ಹಾದಿಯಲ್ಲಿದ್ದ ಒಂದು ಪಟ್ಟಣದ ಸ್ಟೇಷನ್ ಮಾಸ್ಟರ್ ನನ್ನ ಹತ್ತಿರ ಬಂದು ಕೇಳಿದ, ''ಸ್ವಾಮೀಜಿ, ಏನಾದರೂ ಸಾಧನೆ ಮಾಡೋ ದೀಕ್ಷೆ ನೀಡಿರಿ, ಪ್ರಮಾಣ ಮಾಡಿ ಹೇಳ್ತೇನೆ, ನಾನು ಕಟ್ಟುನಿಟ್ಟಾಗಿ ಅದನ್ನು ಅನುಸರಿಸುತ್ತೇನೆ''.

''ಸಾಧನೆ ಮಾಡೋದಕ್ಕೆ ನಿರ್ದಿಷ್ಟವಾದ ಸೂಚನೆಯನ್ನು ಕೊಡು ಅವನಿಗೆ'' ಗುರುಗಳು ನನ್ನನ್ನು ಕುರಿತು ಹೇಳಿದರು.

ಅದಕ್ಕೆ ನಾನು ಕೂಡಲೇ ''ಒಬ್ಬ ಮೂರ್ಖ ಮತ್ತೊಬ್ಬನನ್ನು ದಾರಿ ತಪ್ಪಿಸೋದು ಯಾಕೆ? ತಾವೇ ಏನಾದರೂ ಸೂಚನೆ ಕೊಡೋದು ಉತ್ತಮ ಎಂದು ತೋರುತ್ತದೆ'' ಎಂದು ಹೇಳಿದೆ.

ಆಗ ಗುರುಗಳು ಸ್ಟೇಷನ್ ಮಾಸ್ತರನಿಗೆ ಹೇಳಿದರು ''ಇವತ್ತಿನಿಂದ ಸುಳ್ಳು ಹೇಳಬೇಡ. ಈ ನಿಯಮವನ್ನು ಮುಂದಿನ ಮೂರು ತಿಂಗಳವರೆಗೆ ತಪ್ಪದ ಹಾಗೆ ಪಾಲಿಸು''.

ಆ ಭಾಗದ ಬಹುತೇಕ ರೈಲ್ವೆ ನೌಕರರು ಅಪ್ರಾಮಾಣಿಕರು ಹಾಗೂ ಲಂಚಗುಳಿಗಳು. ಈತ ಮಾತ್ರ ಲಂಚ ತಗೋಬಾರದು ಮತ್ತು ಸುಳ್ಳು ಹೇಳಬಾರದು ಅನ್ನೋ ನಿರ್ಧಾರ ಮಾಡಿದ.

ಅದೇ ವಾರ ಕೇಂದ್ರ ಕಛೇರಿಯಿಂದ ಒಬ್ಬ ಸೂಪರ್‌ವೈಸರ್ ಇವನನ್ನು ಮತ್ತು ಇವನ ಅಧೀನ ನೌಕರರನ್ನು ತಪಾಸಣೆ ಮಾಡಲು ಆಗಮಿಸಿದ. ತಪಾಸಣಾ ಅಧಿಕಾರಿಯ ಸವಾಲುಗಳಿಗೆಲ್ಲ ಸ್ಟೇಷನ್ ಮಾಸ್ತರ ಪ್ರಾಮಾಣಿಕ ಉತ್ತರಗಳನ್ನು ನೀಡಿದ. ಈ ವಿಚಾರಣೆಯಿಂದಾಗಿ ಅಧೀನ ನೌಕರರೆಲ್ಲರೂ ತೀವ್ರವಾದ ತೊಂದರೆಗೆ ಈಡಾಗುವ ಪರಿಸ್ಥಿತಿ ಬಂತು. ಲಂಚಗುಳಿಗಳಾಗಿದ್ದ ಎಲ್ಲ ನೌಕರರಿಗೂ - ಸ್ಟೇಷನ್ ಮಾಸ್ತರನನ್ನೂ ಒಳಗೊಂಡ ಹಾಗೆ - ಶಿಕ್ಷೆಯನ್ನು ವಿಧಿಸಲಾಯಿತು. ''ಈಗಿನ್ನೂ ಹದಿಮೂರು ದಿನಗಳ ಅವಧಿ ಮಾತ್ರ ಮುಗಿದಿದೆ, ಇಷ್ಟರೊಳಗೇ ಎಂಥ ಸಂಕಷ್ಟವನ್ನು ಅನುಭವಿಸುತ್ತಿದ್ದೇನೆ. ಮೂರು ತಿಂಗಳ ಅವಧಿಯಲ್ಲಿ ಇನ್ನೇನೇನು ಆಗಲಿದೆಯೋ?'' ಸ್ಟೇಷನ್ ಮಾಸ್ಟರ್ ಮನಸ್ಸಿನಲ್ಲಿ ಅಂದುಕೊಂಡ.

ಅವನ ಹೆಂಡತಿ ಮಕ್ಕಳು ಆ ಕೂಡಲೇ ಅವನನ್ನು ಬಿಟ್ಟುಹೋದರು. ಒಂದು ತಿಂಗಳೊಳಗೇ ಅವನ ಜೀವನವು ಸ್ಪರ್ಶಮಾತ್ರದಿಂದಲೇ ಉರುಳಿ ಬೀಳುವ ಕಾಗದದ ಮನೆಯಂತೆ ನೆಲೆಯನ್ನು ಕಳೆದುಕೊಂಡಿತು.

ಆ ದಿನ ಸ್ಟೇಷನ್ ಮಾಸ್ಟರ್ ತೀವ್ರ ನೋವನ್ನು ಅನುಭವಿಸುತ್ತಿದ್ದ. ಆ ದಿನ ನಾವು ಮುನ್ನೂರು ಮೈಲಿಗಳ ದೂರದಲ್ಲಿ ನರ್ಮದಾ ನದಿಯ ದಂಡೆಯ ಮೇಲಿದ್ದೆವು. ಒಂದು ಮರದ ನೆರಳಿನಲ್ಲಿ ಅಡ್ಡಾಗಿದ್ದ ನನ್ನ ಗುರುಗಳು ಇದ್ದಕ್ಕಿದ್ದ ಹಾಗೆ ನಗತೊಡಗಿದರು. ''ಏನಾಗ್ತಿದೆ ಅನ್ನೋದು ನಿನಗೆ ಗೊತ್ತಾ? ಸುಳ್ಳು ಹೇಳಬೇಡ ಅಂತಾ ಒಬ್ಬನಿಗೆ ಸೂಚನೆ ಕೊಟ್ಟಿದ್ದೆನಲ್ಲ ಅವನು ಈಗ ಜೈಲಿನಲ್ಲಿದ್ದಾನೆ'' ಎಂದು ಹೇಳಿದರು.

''ಹಾಗಾದ್ರೆ ನೀವು ನಗೋದಾದ್ರೂ ಯಾಕೆ?'' ಎಂದು ನಾನು ಪ್ರಶ್ನೆ ಮಾಡಿದೆ.

''ಅವನಿಗೆ ಒದಗಿದ ಸ್ಥಿತಿ ಬಗ್ಗೆ ನಗ್ತಾ ಇಲ್ಲ, ಮೂರ್ಖಲೋಕದ ನಡಾವಳಿ ನೋಡಿ ನಗ್ತಿದ್ದೇನೆ'' ಗುರುಗಳ ಉತ್ತರ.

ಸ್ಟೇಷನ್ ಮಾಸ್ತರನ ಕಛೇರಿಯಲ್ಲಿದ್ದ ಹನ್ನೆರಡು ಮಂದಿ ಒಟ್ಟಾಗಿ ಸೇರಿಕೊಂಡು (ಅವನು ಸತ್ಯವನ್ನೇ ಹೇಳುತ್ತಿದ್ದರೂ) ಅವನೇ ಸುಳ್ಳುಗಾರ ಎಂದು ಹೇಳಿದರು. ಲಂಚ ತೆಗೆದುಕೊಳ್ಳುತ್ತಿದ್ದ ಏಕೈಕ ಅಪರಾಧಿ ಅವನೇ ಎಂದು ವಾದಿಸಿದರು. ಅವನನ್ನು ಜೈಲಿಗೆ ಹಾಕಿಸಿದರು, ಉಳಿದವರೆಲ್ಲರೂ ಬಿಡುಗಡೆಯನ್ನು ಪಡೆದರು.

ಸ್ಟೇಷನ್ ಮಾಸ್ತರ್ ನ್ಯಾಯಾಲಯಕ್ಕೆ ಹೋದಾಗ, ನ್ಯಾಯಾಧೀಶರು ಇವನತ್ತ ನೋಡುತ್ತಾ ಕೇಳಿದರು ''ನಿನ್ನ ಪರ ವಾದಿಸುವ ವಕೀಲರು ಎಲ್ಲಿ, ಇಲ್ಲವೇನು?''

''ನನಗೆ ಅವರ ಅಗತ್ಯ ಇಲ್ಲ''

''ಆದರೆ ನಿಮಗೆ ನೆರವಾಗುವ ಒಬ್ಬರು ಬೇಕು ಎಂಬುದು ನನ್ನ ಅಪೇಕ್ಷೆ'' ನ್ಯಾಯಾಧೀಶರು ಹೇಳಿದರು.

''ಬೇಡ'' ಎಂದ ಸ್ಟೇಷನ್ ಮಾಸ್ತರು, ''ನ್ಯಾಯವಾದಿಗಳ ಅಗತ್ಯ ನನಗಿಲ್ಲ, ನಾನು ಸತ್ಯವನ್ನು ಹೇಳಬೇಕಾಗಿದೆ ಅಷ್ಟೆ. ನೀವು ಎಷ್ಟು ವರ್ಷಕಾಲ ನನ್ನನ್ನು ಜೈಲಿಗೆ ಹಾಕಿದರೂ ನಾನು ಸುಳ್ಳನ್ನು ಮಾತ್ರ ಆಡುವುದಿಲ್ಲ. ಲಂಚದಲ್ಲಿ ನಾನೂ ಪಾಲುದಾರನಾಗಿದ್ದದ್ದು ಉಂಟು. ನಂತರ ಒಂದು ದಿನ ಸಾಧುವೊಬ್ಬರ ದರ್ಶನ ಲಭಿಸಿ ಏನು ಬಂದರೂ ಸುಳ್ಳಾಡದ ವ್ರತವನ್ನು ಅವರಿಂದ ಪಡೆದಿದ್ದೇನೆ. ಹೆಂಡತಿ ಮಕ್ಕಳು ತೊರೆದು ಹೋದರು, ಉದ್ಯೋಗವನ್ನು ಕಳೆದುಕೊಂಡೆ, ಹಣವಿಲ್ಲದ, ಗೆಳೆಯರಿಲ್ಲದ, ನಿರ್ಗತಿಕನಾಗಿ ಜೈಲಿನಲ್ಲಿದ್ದೇನೆ. ಇವೆಲ್ಲಾ ಘಟಿಸಿದ್ದು ಒಂದೇ ತಿಂಗಳ ಅವಧಿಯಲ್ಲಿ. ಏನಾದರೂ ಸರಿ ಇನ್ನೂ ಎರಡು ತಿಂಗಳು ಸತ್ಯಶೋಧನೆಯನ್ನು ಮಾಡಿಯೇ ತೀರುತ್ತೇನೆ. ಸ್ವಾಮಿ, ನನ್ನನ್ನು ಜೈಲಿಗೆ ದೂಡಿರಿ. ಅದರ ಪರಿವೆ ನನಗಿಲ್ಲ'' ಹೀಗೆ ವಿಶದವಾಗಿ ಹೇಳಿದ.

ವಿರಾಮದ ಸಮಯದಲ್ಲಿ ನ್ಯಾಯಾಧೀಶರು ಈತನನ್ನು ಕರೆಸಿ, ''ನಿನಗೆ

ಸತ್ಯವ್ರತದೀಕ್ಷೆ ನೀಡಿದ ಸಾಧು ಯಾರು?'' ಎಂದು ವಿಚಾರಿಸಿದರು.

ಈತ ವಿವರಿಸಿ ಹೇಳಿದ. ಸುದೈವವಶಾತ್ ಈ ನ್ಯಾಯಾಧೀಶರು ನನ್ನ ಗುರುಗಳ ಭಕ್ತರೇ ಆಗಿದ್ದರು. ಸ್ಟೇಷನ್ ಮಾಸ್ತರವನ್ನು ಬಿಡುಗಡೆ ಮಾಡಿ ಹೇಳಿದರು ''ನೀನು ಸರಿಯಾದ ಮಾರ್ಗದಲ್ಲಿ ಸಾಗುತ್ತಿದ್ದೀಯ. ಮುಂದೆ ಸಾಗು. ನಾನಾದರೂ ಹಾಗೇ ಮಾಡುತ್ತಿದ್ದೆ''.

ಆತ ನಿರ್ಗತಿಕನಾಗಿದ್ದ. ಮೂರು ತಿಂಗಳ ಅವಧಿ ಮುಗಿಯಿತು. ಅವಧಿ ಮುಗಿದ ದಿನ ಆತ ಒಂದು ಮರದ ಕೆಳಗೆ ತೆಪ್ಪಗೆ ಕುಳಿತಿದ್ದಾನೆ. ಆಗ ''ಬಹಳ ಹಿಂದೆ ನಿನ್ನ ತಂದೆಯವರ ಅಪಾರವಾದ ಜಮೀನನ್ನು ಸರ್ಕಾರ ಸ್ವಾಧೀನಕ್ಕೆ ಪಡೆದಿತ್ತು. ಸರ್ಕಾರ ಈಗ ನಿನಗೆ ಪರಿಹಾರವನ್ನು ಕೊಡಬಯಸಿದೆ'' ಎಂದು ಬರೆದಿದ್ದ ಒಂದು ಟೆಲಿಗ್ರಾಂ ಆತನಿಗೆ ತಲುಪಿತು. ಸರ್ಕಾರ ಪರಿಹಾರ ಮೊತ್ತವಾಗಿ ಒಂದು ಮಿಲಿಯ ರೂಪಾಯಿಗಳನ್ನು ನೀಡಿತು. ಬೇರೆ ಪ್ರಾಂತದಲ್ಲಿದ್ದ ಆ ಜಮೀನಿನ ಸಂಗತಿ ಈತನಿಗೆ ಗೊತ್ತೇ ಇರಲಿಲ್ಲ. ''ಇವತ್ತು ಸುಳ್ಳು ಹೇಳದಿರುವ ವ್ರತದ ಮೂರು ತಿಂಗಳ ಅವಧಿಯನ್ನು ಮುಗಿಸಿದ್ದೇನೆ, ಅದಕ್ಕೆ ಎಷ್ಟೊಂದು ಪ್ರತಿಫಲವನ್ನು ಪಡೆಯುತ್ತಿದ್ದೇನಲ್ಲ'' ಈ ಭಾವನೆ ಅವನಲ್ಲಿ ಸುಳಿಯಿತು.

ಪರಿಹಾರ ಮೊತ್ತವನ್ನೆಲ್ಲ ತನ್ನ ಹೆಂಡತಿ ಮಕ್ಕಳಿಗೆ ನೀಡಿದ. ಅವರೂ ಸಂತೋಷದಿಂದ ''ಮತ್ತೆ ನಾವು ನಿಮ್ಮ ಜೊತೆ ಇರುತ್ತೇವೆ'' ಎಂದು ಹೇಳಿದರು.

''ಬೇಡ, ಇದುವರೆಗೆ ಮೂರು ತಿಂಗಳು ಸುಳ್ಳು ಹೇಳದೇ ಇದ್ದಿದ್ದಕ್ಕೆ ಏನು ದೊರೆಯಿತು ಎಂಬುದನ್ನಷ್ಟೇ ನಾನು ಕಂಡಿದ್ದೇನೆ. ಈಗ ಆಜೀವಪರ್ಯಂತ ಸುಳ್ಳಾಡದೇ ಇದ್ದು ಆಗ ಏನು ದೊರೆಯುತ್ತದೆ ಎಂಬುದನ್ನು ಕಂಡು ಹಿಡಿಯಬಯಸುತ್ತೇನೆ'' ಎಂದು ಹೇಳಿದ.

ಮಂತ್ರದ ದುರುಪಯೋಗ



ಗುರುಕುಲದಲ್ಲಿ ಕೆಲವು ಹಸ್ತಪ್ರತಿಗಳಿದ್ದವು. ಅವುಗಳ ಬಳಕೆಯನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿತ್ತು. ಗುರುಕುಲದ ಮುಖ್ಯಸ್ಥರ ವಿನಾ ಅದನ್ನು ಓದಲು ಯಾರಿಗೂ ಅವಕಾಶವಿರಲಿಲ್ಲ. ಅವನ್ನು ಪ್ರಯೋಗಶಾಸ್ತ್ರಗಳು ಎಂದು ಕರೆಯುತ್ತಾರೆ. ಉನ್ನತ ಸಾಧನೆಗಳ ವಿವರಗಳನ್ನು ಒಳಗೊಂಡ ಗ್ರಂಥಗಳು ಅವು.

''ನೀನೇನಾದರೂ ಆ ಹಸ್ತಪ್ರತಿಗಳ ತಂಟೆಗೆ ಹೋದೀಯ'' ಎಂದು ನನ್ನ ಗುರುಗಳು ಹೇಳುತ್ತಿದ್ದುದುಂಟು. ಆದರೆ ಹಟಮಾರಿತನ ಹಾಗೂ ಅವುಗಳಲ್ಲಿ ಏನಿರಬಹುದೆಂದು ತಿಳಿಯುವ ಕೆಟ್ಟ ಕುತೂಹಲ ನನ್ನದು. ನಾನು ಆಗ ಹದಿನೆಂಟು ವರ್ಷ ಪ್ರಾಯದ ನಿರ್ಭೀತ ಹಾಗೂ ಒಂದು ರೀತಿಯ ಬೇಜವಾಬ್ದಾರಿ ವ್ಯಕ್ತಿ 'ನಾನೂ ಸಾಕಷ್ಟು ಪ್ರೌಢನೇ. ಒಂದು ವೇಳೆ ಇವುಗಳನ್ನು ಬಳಸದೆ ಹಾಗೇ ಬಿಡಬೇಕು ಅನ್ನೋಹಾಗಿದ್ದರೆ, ಯಾವ ಸಂಪತ್ತಿಗೆ ಅವರು ಈ ಹಸ್ತಪ್ರತಿಗಳನ್ನು ಬರೀಬೇಕಾಗಿತ್ತು? ಈ ಹಸ್ತಪ್ರತಿಗಳಲ್ಲಿ ಹೇಳಿರೋ ಸಾಧನೆಗಳ ಬಗ್ಗೆ ನಾನು ಪ್ರಯೋಗಗಳನ್ನು ಮಾಡಿಯೇ ತೀರಬೇಕು. ನನ್ನ ಗುರುಗಳು ತುಂಬಾ ಸಮರ್ಥರು, ಏನಾದರೂ ಹೆಚ್ಚುಕಮ್ಮಿ ಆದರೆ ಅವರು ನನ್ನನ್ನು ಕಾಪಾಡುತ್ತಾರೆ' ಈ ಆಲೋಚನೆ ನನ್ನದು.

ಗುರುಗಳೇ ಒಂದು ಪ್ರವಾಸದ ಸಂದರ್ಭದಲ್ಲಿ ಇವುಗಳ ಪೈಕಿ ಒಂದು ಹಸ್ತಪ್ರತಿಯನ್ನು ಜೋಪಾನವಾಗಿಟ್ಟುಕೊಂಡು ಬರಲು ಕೊಟ್ಟರು. ''ಇದನ್ನು ತೆರೆಯಬೇಡ'' ಎಂದು ಎಚ್ಚರಿಸಿದರು. ಅತಿ ಕುತೂಹಲಿಯಾಗಿದ್ದ ನಾನು ''ಒಂದು ವೇಳೆ ಗುರುಗಳು ಈ ಹಸ್ತಪ್ರತಿಯನ್ನು ನನ್ನಲ್ಲಿಯೇ ಬಿಟ್ಟು ಇಂಥ ಸಂದರ್ಭದಲ್ಲಿ ನಾನೊಬ್ಬನೇ ಇರೋ ಅವಕಾಶವೂ ಸಿಕ್ಕಿಬಿಟ್ಟರೆ, ನಾನು ಇದನ್ನು ಓದಿಬಿಡೋದೇ'' ಎಂದು ನಿರ್ಧರಿಸಿದೆ.

ಒಂದು ಸಂಜೆ ಗಂಗೆಯ ತಡಿಯಲ್ಲಿದ್ದ ಒಂದು ಪುಟ್ಟ ಆಶ್ರಯಧಾಮಕ್ಕೆ ಬಂದೆವು. ಗುರುಗಳು ವಿಶ್ರಾಂತಿಗಾಗಿ ಗುಡಿಸಲೊಳಕ್ಕೆ ಹೋದರು. ''ಹಸ್ತಪ್ರತಿಯನ್ನು ತೆಗೆದು ಓದೋದಕ್ಕೆ ಇದು ಒಳ್ಳೆ ಅವಕಾಶ'' ಎಂದು ಆಲೋಚಿಸಿದೆ. ಆ ಗುಡಿಸಲಿಗೆ ಕಿಟಕಿಗಳಿರಲಿಲ್ಲ. ಒಂದೇ ಒಂದು ಬಾಗಿಲು. ಬಾಗಿಲನ್ನು ಹೊರಗಿನಿಂದ ಭದ್ರಪಡಿಸಿದೆ. ಈ ಹಸ್ತಪ್ರತಿಯಲ್ಲಿ ಏನಿದೆ ಅನ್ನೋದನ್ನು ಇಡೀ ರಾತ್ರಿ ಪರಿಶೀಲನೆ ಮಾಡಬಹುದು ಅನ್ನೋ ಆಲೋಚನೆ ನನ್ನದು. ಸ್ಪಷ್ಟವಾಗಿ ಓದಬಹುದಾದ ತಿಂಗಳ ಬೆಳಕಿನ ರಾತ್ರಿ. ಹಸ್ತಪ್ರತಿಯನ್ನು ಬಟ್ಟೆಯಲ್ಲಿ ಸುತ್ತಿ ದಾರದಿಂದ ಕಟ್ಟಲಾಗಿತ್ತು. ನಿಧಾನವಾಗಿ ಬಿಚ್ಚಿ ಓದತೊಡಗಿದೆ. ಕೆಲವು ಸಾಧನೆಗಳು ಹಾಗೂ ಅದರಿಂದ ಉಂಟಾಗುವ ಪರಿಣಾಮಗಳನ್ನು ಅಲ್ಲಿ ವಿವರಿಸಲಾಗಿತ್ತು.

ಒಂದು ಗಂಟೆಯಷ್ಟು ಸಮಯದವರೆಗೆ ಓದಿದ ನಾನು ''ಯಾಕೆ ಪ್ರಯೋಗಮಾಡಿ ನೋಡಿಬಿಡಬಾರದು?'' ಅಂದುಕೊಂಡೆ. ಹಾಗಾಗಿ ಹಸ್ತಪ್ರತಿಯನ್ನು ಪಕ್ಕಕ್ಕಿಟ್ಟೆ. ತುಂಬಾ ನುರಿತ ಯೋಗಿಗಳು ಮಾತ್ರ ಇದನ್ನು ಪ್ರಯೋಗ ಮಾಡತಕ್ಕದ್ದು ಹಾಗೂ ಒಂದುವೇಳೆ ಪ್ರಯೋಗವನ್ನು ಸಮರ್ಪಕವಾಗಿ ಮಾಡದೇ ಹೋದಲ್ಲಿ ತುಂಬಾ ಅಪಾಯಕಾರಿ ಎಂದು ಇದರಲ್ಲಿ ಹೇಳಲಾಗಿತ್ತು. ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ತುಂಬಾ ನುರಿತವನೆಂದು ಭಾವಿಸಿದ ನಾನು ಪ್ರಯೋಗವನ್ನು ಪ್ರಾರಂಭಿಸಿದೆ. ಒಂದು ವಿಶೇಷ ಮಂತ್ರವನ್ನು ಒಂದು ವಿಶಿಷ್ಟ ಶೈಲಿಯಲ್ಲಿ ಕೆಲವು ಪೂಜಾವಿಧಿಗಳೊಡನೆ ಪುನರಾವರ್ತಿಸುವ ಕ್ರಮವನ್ನು ಅದು ಒಳಗೊಂಡಿತ್ತು. ಆ ಮಂತ್ರವು ವ್ಯಕ್ತಿಯ ಒಳಗೆ ಮತ್ತು ಹೊರಗೆ ಒಂದು ಶಕ್ತಿಯನ್ನು ಉದ್ದೀಪನಗೊಳಿಸುತ್ತದೆ.

ಮಂತ್ರವನ್ನು ಒಂದು ಸಾವಿರದ ಒಂದು ಬಾರಿ ಪುನರಾವರ್ತಿಸಬೇಕು ಎಂದು ಗ್ರಂಥ ಹೇಳುತ್ತದೆ. ಒಂಬೈನೂರು ಬಾರಿ ಮಂತ್ರಪಠಿಸಿದೆ. ಏನೂ ಆದ ಹಾಗೆ ಕಾಣಲಿಲ್ಲ. ಪರಿಣಾಮ ಸೊನ್ನೆ ಎಂಬ ತೀರ್ಮಾನಕ್ಕೆ ಬಂದೆ. ಆದರೆ ಒಂಬೈನೂರಾ ನಲವತ್ತನ್ನು ತಲುಪಿದಾಗ, ಹತ್ತಿರದಲ್ಲಿ ಬೃಹದಾಕಾರಾದ ಹೆಣ್ಣೊಬ್ಬಳನ್ನು ಕಂಡೆ. ಆಕೆ ಒಂದಷ್ಟು ಮರದ ಚೆಕ್ಕೆಗಳನ್ನು ಕೂಡಿಹಾಕಿ ಉರಿಹೊತ್ತಿಸತೊಡಗಿದಳು. ಆಮೇಲೆ ಒಂದು ದೊಡ್ಡ ಪಾತ್ರೆಯಲ್ಲಿ ನೀರು ತುಂಬಿ ಕುದಿಸುವ ಸಲುವಾಗಿ ಬೆಂಕಿಯ ಮೇಲಿಟ್ಟಳು. ಅಷ್ಟು ಹೊತ್ತಿಗೆ ನಾನು ಒಂಬೈನೂರಾ ಅರವತ್ಮೂರನೇ ಸಂಖ್ಯೆಯನ್ನು ಎಣಿಸುತ್ತಿದ್ದೆ. ಮಂತ್ರ ಜಪಿಸುತ್ತಾ ಕೊನೆಯದಾಗಿ ನಾನು ಎಣಿಕೆ ಮಾಡಿದ್ದು ಒಂಬೈನೂರಾ ಎಪ್ಪತ್ತನ್ನು. ಆಮೇಲೆ ಅದೇ ದಿಕ್ಕಿನಿಂದ ಒಬ್ಬ ಬೃಹದಾಕಾರದ ವ್ಯಕ್ತಿ ಬರುತ್ತಿದ್ದುದನ್ನು ನೋಡಿದ್ದರಿಂದಾಗಿ ಜಪ ಜಾರಿಹೋಯಿತು. ಮೊದಲಿಗೆ ''ಮಂತ್ರದ ಪರಿಣಾಮ ಇದೇ ಇರಬೇಕು. ಅವನ ಕಡೆಗೆ ನೋಡುವುದು ಬೇಡ. ಸಾವಿರದ ಒಂದು ಸಂಖ್ಯೆಯ ಜಪವನ್ನು ಪೂರೈಸಿಬಿಡಬೇಕು'' ಎಂದು ಆಲೋಚಿಸಿದೆ. ಆದರೆ ಅವನು ನನ್ನ ಕಡೆಗೇ ಬರತೊಡಗಿದ. ಇಂಥ ರಾಕ್ಷಸಾಕಾರದ ಮನುಷ್ಯನನ್ನು ನಾನು ಹಿಂದೆಂದೂ ನೋಡಿರಲಿಲ್ಲ ಮಾತ್ರವಲ್ಲ ಕಲ್ಪಿಸಿಕೊಳ್ಳುವುದೂ ಸಾಧ್ಯವಿರಲಿಲ್ಲ. ಅವನು ಪೂರ್ಣ ಬೆತ್ತಲೆಯಿದ್ದ.

''ನನ್ನ ಸಲುವಾಗಿ ಏನು ಅಡಿಗೆ ಸಿದ್ಧಮಾಡಿದ್ದೀಯ?'' ಅವ ಆ ಹೆಂಗಸನ್ನು ಕೇಳಿದ.

''ಏನೂ ಇರಲಿಲ್ಲ. ಏನಾದ್ರೂ ತಂದುಕೊಟ್ಟರೆ ಅಡಿಗೆ ಬೇಯಿಸಿ

ಸಿದ್ಧಮಾಡಿಕೊಡ್ತೀನಿ'' ಆಕೆ ಹೇಳಿದಳು. ಆತ ನನ್ನ ಕಡೆ ಬೆರಳುಮಾಡಿ ತೋರಿಸಿ ''ಅಲ್ಲಿ ಕೂತಿದ್ದಾನಲ್ಲ, ಅವ್ನನ್ನ ನೋಡು. ಅವನನ್ನು ಚೂರುಚೂರಾಗಿ ಕತ್ತರಿಸಿ ಯಾಕೆ ಅಡಿಗೆ ಮಾಡಬಾರದು?'' ಎಂದು ಕೇಳಿದ.

ಅವನು ಮಾತುಗಳು ನನ್ನ ಕಿವಿಗೆ ಬಿದ್ದಿದ್ದೇ ತಡ, ಹಲ್ಲುಗಳು ಪದ ಹೇಳತೊಡಗಿದವು. ಜಪಸರ ಜಾರಿ ಬಿತ್ತು. ಮೂರ್ಛೆಬಿದ್ದೆ. ಅಪ್ರಜ್ಞಾವಸ್ಥೆಯಲ್ಲಿ ಎಷ್ಟು ಹೊತ್ತು ಬಿದ್ದಿದ್ದೆನೋ ತಿಳಿಯದು. ನನಗೆ ಎಚ್ಚರವುಂಟಾದಾಗ ಗುರುಗಳು ನನ್ನ ಮುಂದೆ ನಿಂತಿದ್ದರು. ಕೆನ್ನೆಯನ್ನು ತಟ್ಟಿ ''ಏಯ್, ಏಳು'' ಅಂದರು. ಒಂದು ಕ್ಷಣ ಎಚ್ಚರವಾಗೋದು, ''ಅಯ್ಯೋ, ಆ ರಾಕ್ಷಸ ನನ್ನನ್ನು ಸಿಗಿದು ಹಾಕಿಬಿಡ್ತಾನೆ'' ಎಂದು ದಿಗ್ಭ್ರಾಂತನಾಗಿ ಮತ್ತೆ ಪ್ರಜ್ಞೆ ಕಳೆದುಕೊಳ್ಳುವುದು. ಹೀಗೆ ಮೂರು ನಾಲ್ಕು ಸಲ ಆಯ್ತು. ಕೊನೆಗೆ ಗುರುಗಳು ಒಂದ್ಸಲ ಜೋರಾಗಿ ಝಾಡಿಸಿ ಒದ್ದು ''ಏಳು ಮೇಲೆ, ಯಾಕೆ ಹೀಗೆ ಮಾಡಿದೆ? ಈ ಮಂತ್ರಗಳನ್ನು ಪ್ರಯೋಗ ಮಾಡ್ಬೇಡಾ ಅಂತ ನಾನು ಹೇಳಲಿಲ್ವಾ ನಿನಗೆ? ನನ್ನನ್ನು ಒಳಗೆ ಬೇರೆ ಕೂಡಿಹಾಕಿದ್ದೆ, ಮೂರ್ಖ, ಮೂರ್ಖ'' ಎಂದು ಬಯ್ದರು.

ಈ ಅನುಭವದಿಂದ ನನಗೆ ಮಂತ್ರಶಕ್ತಿಯ ಮನವರಿಕೆಯಾಯಿತು. ನನ್ನ ಗುರುಗಳು ನೀಡಿದ ಮಂತ್ರದ ಪ್ರಯೋಗವನ್ನು ಮಾಡತೊಡಗಿದೆ. ಸಣ್ಣಪುಟ್ಟ ಸಂಗತಿಗಳ ಸಲುವಾಗಿ ಕೂಡ ನಾನು ಇದರ ಮೇಲೆ ಅವಲಂಬಿತನಾದೆ. ಯುವಕನಾಗಿದ್ದಾಗ ಅನೇಕ ತಿಳಿಗೇಡಿತನದ ಮತ್ತು ಹುಡುಗಾಟಿಕೆಯ ಕಾರ್ಯಗಳನ್ನು ಮಾಡಿದ್ದೇನೆ. ಆದರೆ ಇಂಥ ಎಲ್ಲ ಸಂದರ್ಭಗಳಿಂದಲೂ ಪಾರಾಗಲು ಹಾಗೂ ನನ್ನಲ್ಲಿ ಅರಿವನ್ನು ಮೂಡಿಸಲು ಮಂತ್ರವನ್ನು ಸದಾ ನೆರವಾಗಿದೆ.

ಆಧ್ಯಾತ್ಮಿಕ ಕಟ್ಟುನಿಟ್ಟುಗಳಿಗನುಸಾರವಾಗಿ ಮಂತ್ರವನ್ನು ಉಚಿತವಾಗಿ ಬಳಸದೇ ಹೋದ ಪಕ್ಷದಲ್ಲಿ, ನನಗೆ ಉಂಟು ಮಾಡಿದ ರೀತಿಯಲ್ಲಿ ಅದು ಭ್ರಾಂತಿಯನ್ನುಂಟು ಮಾಡಬಲ್ಲುದು. ಭ್ರಮೆಗಳೇನಿದ್ದರೂ ಅಶುದ್ಧ ಹಾಗೂ ಅಪಕ್ವ ಮನಸ್ಸಿನ ಉತ್ಪನ್ನಗಳು. ಮನಸ್ಸು ಶುದ್ಧವಾಗಿದ್ದಾಗ ಮತ್ತು ಅಂತರ್ಮುಖಿಯಾದಾಗ ಮಂತ್ರ ಸಹಕಾರಿಯಾಗುತ್ತದೆ. ಮಂತ್ರದ ಅರ್ಥವನ್ನು ತಿಳಿಯದ ಹೊರತು, ಉಚಿತವಾದ ಭಾವ ಮೂಡುವುದಿಲ್ಲ. ತೀವ್ರವಾದ ಭಾವ ಇಲ್ಲದೆ ಹೋದಲ್ಲಿ ಮಂತ್ರ ಹಾಗೂ ಅದರ ಯಾಂತ್ರಿಕ ಪಠಣ ಹೆಚ್ಚು ಪರಿಣಾಮಕಾರಿ ಅಲ್ಲ.

ಕಳ್ಳತನಗಳ ಖದೀಮ

ನಾನು ಯುವಕನಾಗಿದ್ದಾಗ ಪವಾಡಗಳಿಗಾಗಿ ಪರಿತಪಿಸುತ್ತಿದ್ದೆ. ಒಮ್ಮೆ ಚೂಪಾದ ಮೊಳೆಗಳ ಹಾಸಿನ ಮೇಲೆ ಮಲಗಿದ್ದ ವ್ಯಕ್ತಿಯನ್ನು ಕಂಡಾಗ ''ನನಗೂ ಹೀಗೆ ಮಾಡುವ ಆಶೆ ಇದೆ. ಹೇಳ್ಕೊಡ್ತೀಯಾ?'' ಎಂದು ಅವನನ್ನು ಕೇಳಿದೆ.

''ಯಾಕಾಗಬಾರದು? ಆದರೆ ಮೊದಲು ನೀನು ಭಿಕ್ಷೆ ಬೇಡಿ ನನಗೆ ಹಣ ತಂದು ಕೊಡಬೇಕು. ಇರೋ ಎಲ್ಲಾ ಹಣಾನೂ ಕೊಡೋದಾಗಿ ಪ್ರಮಾಣ ಮಾಡಿದರೆ, ಇದನ್ನು ಕಲಿಸಿಕೊಡ್ತೇನೆ'' ಎಂದು ಅವನು ಹೇಳಿದ.

ಒಬ್ಬರ ನಂತರ ಒಬ್ಬರು ಇಂಥ ಎಷ್ಟೋ ಮಂದಿಯನ್ನು ಭೇಟಿ ಮಾಡಿದೆ. ಅವರೆಲ್ಲಾ ಪರಸ್ಪರರನ್ನು ಹೀನಾಯವಾಗಿ ಭಾವಿಸುವವರಾಗಿರುತ್ತಿದ್ದರು. ಅವರು ಸಾಮಾನ್ಯವಾಗಿ ಹೇಳುವ ಮಾತು; ''ಅವನೇನು ಮಹಾ. ನಾನು ಇನ್ನೂ ಉತ್ತಮವಾದದ್ದನ್ನು ಹೇಳಿಕೊಡಬಲ್ಲೆ''. ಇಂಥವರಲ್ಲಿ ಒಬ್ಬನ ಬಳಿ ಒಂದು ಉಕ್ಕಿನ ದಬ್ಬಳ ಇತ್ತು. ಅವನು ಅದನ್ನು ತನ್ನ ತೋಳಿನೊಳಕ್ಕೆ ಚುಚ್ಚಿ ಹೇಳಿದ ''ನೋಡು, ರಕ್ತ ಗಿಕ್ತ ಏನಿಲ್ಲ. ಇದನ್ನು ನಿನಗೂ ಕಲಿಸ್ತೀನಿ. ಮಾಡಿ ತೋರಿಸಿ ಬೇಕಾದಷ್ಟು ದುಡ್ಡು ಸಂಪಾದನೆ ಮಾಡಬಹುದು. ಆದರೆ ನೀನು ನನ್ನ ಶಿಷ್ಯ ಆಗಬೇಕು ಹಾಗೂ ನಿನ್ನ ಸಂಪಾದನೆಯಲ್ಲಿ ಪಾಲು ಕೊಡಬೇಕು''.

ಅವನನ್ನು ಬಿಟ್ಟು ಇನ್ನೊಬ್ಬನ ಬಳಿಗೆ ಹೋದೆ. ಅನೇಕ ಜನ ಈ ವ್ಯಕ್ತಿಯನ್ನು ಗೌರವದಿಂದ ಕಾಣ್ತಾ ಇದ್ದರು. ಇದು ಯಾಕೆ ಎಂದು ತಿಳಿಯೋ ಆಸಕ್ತಿ ನನಗೆ ಬಂತು. ''ಯಾವ ವಿಶಿಷ್ಟವಾದ ಜ್ಞಾನ ಇವನಲ್ಲಿದೆ? ಅವನು ಬುದ್ಧಿಶಾಲಿಯೇನು? ಮಹಾನ್ ಯೋಗಿಯಾ?'' ಎಂದು ಆಶ್ಚರ್ಯಪಟ್ಟೆ.



ಎಲ್ಲರೂ ಹೊರಟುಹೋಗೋ ತನಕ ಕಾದಿದ್ದೆ. ನಾನೊಬ್ಬನೇ ಆದಾಗ ಅವನು ಕೇಳಿದ ''ನಿನಗೆ ಗೊತ್ತಿರೋ ತುಂಬಾ ಐಷಾರಾಮದ ಹೋಟೆಲು ಯಾವುದು?''

''ಲಂಡನ್ನಿನಲ್ಲಿರುವ ಸವಾಯ್ ಹೋಟೇಲ್'' ನಾನು ಹೇಳಿದೆ.

ಅದಕ್ಕೆ ಅವನು ಹೇಳಿದ ''ನನಗೆ ನೂರು ರೂಪಾಯಿ ಕೊಡು. ಆ ಹೋಟೆಲಿನ ಉಪಹಾರಗೃಹದಿಂದ ರುಚಿಕರವಾದ ತಿನಿಸುಗಳನ್ನು ನಿನಗೆ ಬರಿಸಿ ಕೊಡ್ತೀನಿ''. ನೂರು ರೂಪಾಯಿ ಕೊಟ್ಟೆ. ಕೂಡಲೇ ಕೆಲವು ತಿನಿಸುಗಳು ನನ್ನ ಮುಂದೆ ಕಾಣಿಸಿಕೊಂಡವು. ಯಥಾವತ್ತಾಗಿ ಅದೇ ಹೋಟೆಲಿನಲ್ಲಿ ತಯಾರಿಸಿದ ಹಾಗೇ ಇದ್ದವು. ನಂತರ ಜರ್ಮನಿಯ ಹ್ಯಾಂಬರ್ಗ್‌ನಿಂದ ಒಂದಷ್ಟು ತಿನಿಸನ್ನು ಬರಿಸಲು ಕೇಳಿದೆ. ಎಪ್ಪತ್ತು ರೂಪಾಯಿ ಕೊಟ್ಟು ಬೇಕಾದ ತಿನಿಸನ್ನು ಪಡೆದೆ. ಅದೇ ತಿನಿಸು ಬಿಲ್ಲಿನ ಸಮೇತ ಪ್ರತ್ಯಕ್ಷವಾಯಿತು.

ನಾನು ಆಲೋಚಿಸಿದೆ ''ಗುರುಗಳ ಹತ್ತಿರಕ್ಕೆ ಯಾಕೆ ವಾಪಸು ಹೋಗಲಿ? ಈ ಮನುಷ್ಯನ ಜೊತೆಗಿದ್ದರೆ ಬೇಕಾದ್ದೆಲ್ಲಾ ಸಿಗುತ್ತದೆ. ಆಮೇಲೆ ಯಾವ ತೊಂದರೆಯೂ ಇಲ್ಲದೆ ಧ್ಯಾನ ಮಾಡಬಹುದು, ಅಭ್ಯಾಸ ಮಾಡಬಹುದು.''

''ಯಾವ ರೀತಿ ಗಡಿಯಾರ ಬೇಕು ನಿನಗೆ?'' ಆತ ಪ್ರಶ್ನಿಸಿದ.

''ಈಗಾಗ್ಲೇ ಒಳ್ಳೆ ಗಡಿಯಾರ ನನ್ನಲ್ಲಿದೆ'' ಹೇಳಿದೆ.

ಆದರೂ ಅವನು ''ಇನ್ನೂ ಒಳ್ಳೇದನ್ನ ಕೊಡ್ತೀನಿ'' ಎಂದು ಹೇಳಿದವನು ಹಾಗೇ ಮಾಡಿದ.

ಆ ಗಡಿಯಾರವನ್ನು ನೋಡಿದಾಗ ನನಗೆ ಅನ್ನಿಸಿದ್ದು: ''ಈ ಗಡಿಯಾರವನ್ನು ಸ್ವಿಟ್ಜರ್‌ಲೆಂಡ್‌ನಲ್ಲಿ ತಯಾರಿಸಲಾಗಿದೆ. ಇವನೇನೂ ಇದನ್ನು ಸೃಷ್ಟಿ ಮಾಡಿಲ್ಲ, ಈತ ಕೇವಲ ಜಾದೂ ಮಾಡ್ತಿದಾನೆ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸ್ಥಳಾಂತರ ಮಾಡ್ತಿದಾನೆ ಅಷ್ಟೆ''.

ಎರಡು ವಾರಗಳ ನಂತರ ಮತ್ತೆ ಅವನ ಬಳಿಗೆ ಹೋಗಿ ಬಾಗಿ ಗೌರವ ಸೂಚಿಸಿದೆ. ಅವನಿಗೆ ಮಾಲೀಷು ಮಾಡಿದೆ, ಅಡಿಗೆ ಮಾಡಲು ಸಹಾಯ ನೀಡಿದೆ. ಖುಷಿಯಾದ ಆತ ನನಗೂ ಇದನ್ನೆಲ್ಲಾ ಕಲಿಸುವುದಾಗಿ ಹೇಳಿದ. ಅಗತ್ಯವಾದ ಸೂಚನೆಗಳನ್ನು ನೀಡಿದ. ನನ್ನ ಗುರುಕುಲದಿಂದ ಸ್ವಾಮೀಜಿ ಒಬ್ಬರು ಬಂದು ನೋಡಿ ನನ್ನ ಕೆನ್ನೆಗೆ ಬಾರಿಸಿ ''ಇದೇನು ನೀನು ಮಾಡ್ತಿರೋದು?'' ಅನ್ನೋವರೆಗೆ ನಾನು ಕಲಿತ ಹೊಸವಿದ್ಯೆಯನ್ನು ಪ್ರಯೋಗ ಮಾಡುವುದರಲ್ಲಿ ತೊಡಗಿದ್ದೆ. ಬಂದಿದ್ದ ಸ್ವಾಮೀಜಿ ನನ್ನನ್ನು ನನ್ನ ಗುರುಗಳ ಬಳಿಗೆ ಕರೆದೊಯ್ದು ನಿಲ್ಲಿಸಿದಾಗ ಅವರು ''ನೀನು ಅನೇಕ ಕಳ್ಳತನಗಳ ಅಪರಾಧಿ'' ಎಂದು ಆರೋಪಿಸಿದರು.

''ಯಾವ ಕಳ್ಳತನಗಳು?''

ಗುರುಗಳು ಉತ್ತರ ನೀಡಿದರು; ''ನೀನು ಸಿಹಿತಿಂಡಿಗಳು ಬೇಕು ಅಂದರೆ

ಅವು ಯಾರದೋ ಅಂಗಡಿಯಿಂದ ಬರುತ್ತವೆ. ಅಂಗಡಿಯಿಂದ ಅವು ಕಣ್ಮರೆಯಾಗುತ್ತವೆ. ಏನಾಯ್ತು ಅನ್ನೋ ಸಂಗತಿ ಅಂಗಡಿಯವನಿಗೆ ಗೊತ್ತಾಗುವುದಿಲ್ಲ.'' ಮತ್ತೆ ಹೀಗೆ ಮಾಡುವುದಿಲ್ಲವೆಂದು ಗುರುಗಳಿಗೆ ವಚನ ನೀಡಿದೆ.

ಆಮೇಲೆ ದೆಹಲಿಯಲ್ಲಿ ಹೊಲಿಗೆಯಂತ್ರ ಮಾರಾಟ ಮಾಡುವ ಉಗ್ರಾಣವೊಂದರಲ್ಲಿ ಮಾರಾಟಗಾರನಾಗಿದ್ದ ಒಬ್ಬನನ್ನು ಭೇಟಿ ಮಾಡಿದೆ. ಅವನಿಗೆ 'ಹಾಜಿ' ಹಾಗೂ ಅವನ ಶಕ್ತಿಯ ಬಗ್ಗೆ ತಿಳಿಸಿದೆ. ಅದಕ್ಕೆ ಅವನು ''ಒಂದು ವೇಳೆ ಆ ಹಾಜಿ ದೆಹಲಿಯ ನನ್ನ ಉಗ್ರಾಣದ ಒಂದು ಸಿಂಗರ್ ಹೊಲಿಗೆಯಂತ್ರವನ್ನು ತನ್ನ ಶಕ್ತಿಪ್ರಯೋಗದಿಂದ ಬರಿಸಿಕೊಡಬಲ್ಲನಾದರೆ ಆಗ ಮಹಾನ್‌ವ್ಯಕ್ತಿ ಎಂದು ನಾನು ಅವನನ್ನು ಪರಿಗಣಿಸುವುದೇ ಅಲ್ಲದೆ ನನ್ನ ಉಳಿದ ಜೀವನವೆಲ್ಲಾ ಅವನ ಅನುಯಾಯಿಯಾಗಿರುತ್ತೇನೆ'' ಎಂದು ಹೇಳಿದ.

ಆದ್ದರಿಂದ ನಾವಿಬ್ಬರೂ ಅವನಲ್ಲಿಗೆ ಹೋಗಿ ಪವಾಡ ಮಾಡಿ ತೋರಿಸುವಂತೆ ವಿನಂತಿ ಮಾಡಿದೆವು. ಅವನು ''ಈಗಲೇ ಮಾಡಿ ತೋರಿಸ್ತೀನಿ'' ಎಂದು ಹೇಳಿದ. ಹೊಲಿಗೆಯಂತ್ರವೂ ಹಾಜರಾಯಿತು. ಹೊಲಿಗೆಯಂತ್ರ ಉಗ್ರಾಣದಿಂದ ಕಾಣೆಯಾಗಿರಬೇಕು ಹಾಗೂ ಇದನ್ನು ನಾನೇ ಕಳವು ಮಾಡಿದ್ದು ಅನ್ನೋ ಆರೋಪ ಬರುತ್ತಲ್ಲಾ ಎಂಬ ಚಿಂತೆ ಮಾರಾಟಗಾರನನ್ನು ಕಾಡತೊಡಗಿತು. ಹಾಜಿ ಅದನ್ನು ವಾಪಸು ಕಳಿಸೋ ಪ್ರಯತ್ನ ಮಾಡಿ ವಿಫಲನಾದ. ''ಅಯ್ಯೋ, ನಾನು ನನ್ನ ಶಕ್ತಿಯನ್ನು ಕಳೆದುಕೊಂಡುಬಿಟ್ಟೆ'' ಎಂದು ಚೀರಿ ಅಳತೊಡಗಿದ.

ಮಾರಾಟಗಾರ ಯಂತ್ರದ ಸಮೇತ ದೆಹಲಿಗೆ ಹೋದ. ಇಷ್ಟರಲ್ಲಿ ಉಗ್ರಾಣದಲ್ಲಿ ಯಂತ್ರ ಕಾಣೆಯಾಗಿರುವುದನ್ನು ಪತ್ತೆಹಚ್ಚಿ ಈ ಸಂಗತಿಯನ್ನು ಪೋಲಿಸರಿಗೆ ವರದಿ ಮಾಡಿದ್ದರು. ಪೋಲಿಸರು ಅದು ಮಾರಾಟಗಾರನ ವಶದಲ್ಲಿರುವುದನ್ನು ಕಂಡು ನ್ಯಾಯಾಲಯಕ್ಕೆಳೆದರು. ಇವನ ಕಥೆಯನ್ನು ಯಾರೂ ನಂಬಲಿಲ್ಲವಾಗಿ ಶಿಕ್ಷೆಗೆ ಗುರಿಯಾದ.

ಇಂಥ ಅನೇಕ ಅನುಭವಗಳನ್ನು ನಾನು ಪಡೆದೆನಲ್ಲದೆ, ಅನೇಕ ಸಲ ನನ್ನ ಗುರುಗಳಿಗೆ ''ನಿಮಗಿಂತಲೂ ಹೆಚ್ಚು ಶಕ್ತಿಸಂಪನ್ನ ಜನ ಇದ್ದಾರೆ. ಅವರ ಶಿಷ್ಯನಾಗೋದು ನನ್ನ ಬಯಕೆ'' ಎಂದು ಹೇಳಿ ಅವಹೇಳನ ಮಾಡಿದ್ದೇನೆ.

ಆಗ ಅವರು ಹೇಳುತ್ತಿದ್ದರು, ''ಹಾಗೇ ಮಾಡು, ನೀನು ಬೆಳೆದು ಮಹಾಪುರುಷನಾಗಬೇಕು ಅನ್ನೋದೇ ನನ್ನ ಬಯಕೆ. ನೀನೇನೂ ನನ್ನ ಶಿಷ್ಯನಾಗಿರಬೇಕಾಗಿಲ್ಲ''.

ಬಹುತೇಕ ಅಂಥ ಸಂಗತಿಗಳೆಲ್ಲಾ ಕೃತ್ರಿಮವಾದವುಗಳು ಎಂಬುದನ್ನು ಆಮೇಲೆ ನಾನು ಮನವರಿಕೆ ಮಾಡಿಕೊಂಡೆ. ಅವು ಸಾಚಾ ಎಂದು ಕಂಡುಬಂದಾಗಲೆಲ್ಲಾ ಅವು ಮಾಟದ ತಂತ್ರಗಳಾಗಿರುತ್ತವೆ. ಆಧ್ಯಾತ್ಮಕ್ಕೆ ಪವಾಡಗಳಿಂದ ಏನೂ ಆಗಬೇಕಾಗಿಲ್ಲ. ಯೋಗಸೂತ್ರಗಳ ಮೂರನೆಯ ಅಧ್ಯಾಯದಲ್ಲಿ ಸಿದ್ಧಿಗಳನ್ನು ಪಡೆಯುವ ಅನೇಕ ವಿಧಾನಗಳನ್ನು ಹೇಳಲಾಗಿದೆ. ಆದರೆ ಸಿದ್ಧಿಗಳೆಲ್ಲಾ ಜ್ಞಾನೋಪಾಸನೆಯ ಮಾರ್ಗದಲ್ಲಿನ ಎಡವುಗಲ್ಲುಗಳು. ಮಿಲಿಯಗಟ್ಟಲೆ ಮಂದಿಯಲ್ಲಿ ಒಬ್ಬ ನಿಜಕ್ಕೂ ಸಿದ್ಧಿಗಳನ್ನು ಹೊಂದಿರಬಹುದು. ಆದರೆ ಅವರೂ ಸಾಮಾನ್ಯವಾಗಿ, ಧನದಾಹಿ, ಅಹಂಕಾರಿ ಹಾಗೂ ಅಜ್ಞಾನಿಗಳಾಗಿರುವುದನ್ನು ಕಂಡಿದ್ದೇನೆ. ಉದ್ದೇಶಪೂರ್ವಕವಾಗಿ ಶಕ್ತಿ ಸಂಚಯನ ಮಾಡಿಕೊಳ್ಳುವಿಕೆಯಿಂದ ಜ್ಞಾನದ ಹಾದಿಯು ಭಿನ್ನವಾದುದು. ಬುದ್ಧ, ಏಸು ಮತ್ತಿತರ ಮಹಾನ್ ಸಾಧು ಪುರುಷರು ಪ್ರಯತ್ನಪೂರ್ವಕವಾಗಿ ಹಾಗೂ ಒಂದು ಒಳ್ಳೆಯ ಉದ್ದೇಶಕ್ಕಾಗಿ ಪವಾಡಗಳನ್ನು ಮಾಡಿದರು. ಅವರು ರೋಮಾಂಚನ ಅಥವಾ ಸ್ವಾರ್ಥಸಾಧನೆಯ ಉದ್ದೇಶಗಳಿಂದಾಗಿ ಪವಾಡಗಳನ್ನು ಪ್ರದರ್ಶಿಸಲಿಲ್ಲ.

ಪುಷ್ಪಕಣಿವೆಯ ಸಂತ

ಹಿಮಾಲಯದ ಪುಷ್ಪಗಳನ್ನು ಕುರಿತಂತೆ ಹಾಗೂ ಜೀವ ಪರಿಸ್ಥಿತಿ ಶಾಸ್ತ್ರದ ಬಗೆಗೆ ಅಷ್ಟೇನೂ ಹೆಚ್ಚು ಸಾಹಿತ್ಯ ಇಲ್ಲ. ಪುಷ್ಪಕಣಿವೆಯಿರುವ ಪ್ರದೇಶದಲ್ಲಿ ಯಾವಾಗಲೂ ತಿರುಗಾಡುತ್ತಿದ್ದ ಒಬ್ಬ ಸಾಧು ಇದ್ದರು. ಅವರನ್ನು ನಾನು ಚೆನ್ನಾಗಿ ಬಲ್ಲೆ. ಸುಮಾರು ಎಂಬತ್ತು ವರ್ಷ ವಯಸ್ಸಿನ ಆರೋಗದೃಢಕಾಯದ, ಆದರೆ ಒಂದು ರೀತಿಯ ಅಸಹಜ ಸ್ವಭಾವದ ವ್ಯಕ್ತಿ ಅವರು. ಸದಾಕಾಲ ಒಂದು ವಿಚಿತ್ರವಾದ ಕಂಬಳಿಯನ್ನು ಜೊತೆಯಲ್ಲಿಯೇ ಇಟ್ಟುಕೊಂಡಿರುತ್ತಿದ್ದರು. ಅದು ತುಂಬಾ ಭಾರವಾಗಿತ್ತು. ಅದರ ಭಾರ ಸುಮಾರು ಎಂಭತ್ತರಿಂದ ಒಂದು ನೂರು ಪೌಂಡುಗಳಷ್ಟಿತ್ತು. ಇಷ್ಟೊಂದು ಭಾರವಾದ ಕಂಬಳಿಯನ್ನು ಅವರು



ರೂಪಿಸಿದ್ದು ಹೇಗೆಂಬುದನ್ನು ಕೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ವ್ಯಾಪಕವಾದ ತಮ್ಮ ತಿರುಗಾಟದ ಸಮಯದಲ್ಲಿ ದಾರಿಯಲ್ಲಿ ಯಾವುದಾದರೂ ಚಿಂದಿಬಟ್ಟೆ ಸಿಕ್ಕಿದರೆ ತಕ್ಷಣ ಅದನ್ನು ಕಂಬಳಿಗೆ ಸೇರಿಸಿ ಹೊಲೆದುಬಿಡುತ್ತಿದ್ದರು. ಸಾವಿರಾರು ತೇಪೆಗಳ ಕಂಬಳಿ ಅದು. ಅವರು ಅದನ್ನು 'ಗುಡಾರಿ' ಅಂದರೆ ತೇಪೆ ಕಂಬಳಿ - ಎಂದು ಕರೆಯುತ್ತಿದ್ದರು. ಹಾಗಾಗಿ ಜನ ಅವರನ್ನು ಗುಡಾರಿಬಾಬ ಎಂದು ಕರೆಯುತ್ತಿದ್ದರು. ಗುಡಾರಿಬಾಬರಲ್ಲಿ ನಾನು ವಿನಂತಿ ಮಾಡಿಕೊಂಡಾಗ ''ನಿಜವಾಗಲೂ ನೀನು ಪುಷ್ಪಕಣಿವೆಯನ್ನು ನೋಡಬೇಕೆಂದು ಬಯಸುವುದಾದರೆ ಮತ್ತು ನನ್ನನ್ನು ಅನುಸರಿಸುವುದಾದರೆ, ಈ ಕಂಬಳಿಯನ್ನು ಹೊರಬೇಕಾಗುತ್ತದೆ'' ಎಂದು ನಿಬಂಧನೆ ಹಾಕಿದರು.

ನಾನು ಒಪ್ಪಿಕೊಂಡೆ. ಆದರೆ ಕಂಬಳಿಯನ್ನು ಹೆಗಲಮೇಲೆ ಹಾಕಿಕೊಂಡಾಗ ಅದರ ಭಾರಕ್ಕೆ ಮುಗ್ಗರಿಸಿದೆ.

ಆಗ ಅವರು ''ಎಷ್ಟೊಂದು ಆರೋಗ್ಯವಾಗಿ ಇರೋಹಾಗೆ ಕಾಣುವ ನಿನ್ನಂಥ ಯುವಕ ಇಷ್ಟೊಂದು ದುರ್ಬಲನಾಗಿರೋದು ಹೇಗೆ ಸಾಧ್ಯ?'' ಎಂದರು.

ಕಂಬಳಿಯನ್ನು ನನ್ನಿಂದ ವಾಪಸ್ಸು ತೆಗೆದುಕೊಂಡು ''ನೋಡು, ಇದು ಎಷ್ಟೊಂದು ಹಗುರವಾಗಿದೆ?'' ಎಂದು ಹೇಳಿದರು. ಆಮೇಲೆ ಮತ್ತೆ ನನ್ನ ಹೆಗಲಮೇಲೆ ಹಾಕಿದರು. ಅವರು ನನ್ನ ಗುರುಗಳನ್ನು ಬಲ್ಲವರು. ಆದ್ದರಿಂದಲೇ ಪುಷ್ಪಕಣಿವೆಗೆ ಅವರನ್ನು ಅನುಸರಿಸಿ ಹೋಗೋದಕ್ಕೆ ನನಗೆ ಅವಕಾಶವನ್ನು ಕೊಟ್ಟಿದ್ದು.

ಅವರ ಜೊತೆ ಹೋಗುತ್ತಿರುವಾಗ ಈ ಸಾಧು ನನಗೆ ಹೇಳಿದರು: ''ಹೂವುಗಳೆಲ್ಲಾ ಅರಳುವ ಋತುವಿನಲ್ಲಿ ಪುಷ್ಪಕಣಿವೆಯ ಮೂಲಕ ಹಾದು ಹೋದಾಗ ಯಾರೂ ತಮ್ಮ ನೆನಪಿನಶಕ್ತಿಯನ್ನು ಉಳಿಸಿಕೊಳ್ಳುವುದಿಲ್ಲ. ನಿನ್ನಂಥ ಹಟಮಾರಿ ಮಕ್ಕಳನ್ನೆಲ್ಲಾ ಇಲ್ಲಿಗೆ ತಂದು ರಿಪೇರಿ ಮಾಡಬೇಕು. ಬುದ್ಧಿಜೀವಿಗಳಾಗೋದು ಹೆಣಗುವವರು ಹಾಗೂ ನಮ್ಮ ಜೊತೆ ವಾದ ಮಾಡುವವರನ್ನು ಇಲ್ಲಿಗೆ ತರಬೇಕು. ಆಗ ತಮ್ಮ ಯೋಗ್ಯತೆ ಏನು ಅನ್ನೋದು ಅವರಿಗೆ ಮನವರಿಕೆಯಾಗುತ್ತದೆ''.

ತಕ್ಷಣ ನಾನು ''ನಾನಾದರೋ, ನಿಮ್ಮನ್ನು ಅನುಸರಿಸುತ್ತಾ ಇದೀನಿ'' ಎಂದು ಹೇಳಿಬಿಟ್ಟೆ.

ಆಗ ಅವರು ''ಹೌದ್ಹೌದು, ಯಾವಾಗಲೂ ವಾದಮಾಡ್ತಾನೇ ಇರ್ತೀಯ ಮತ್ತು ಗಮನವಿಟ್ಟು ಕೇಳೋದಿಲ್ಲ. ನಿನ್ನ ಬೌದ್ಧಿಕ ಜ್ಞಾನದ ಬಗ್ಗೆ ನಿನಗೆ

ಅತಿಯಾದ ಅಹಂಭಾವ ಇದೆ. ನನಗೆ ಓದೋದು, ಬರೆಯೋದು ಹೇಗೆ ಅನ್ನೋದೂ ಗೊತ್ತಿಲ್ಲ. ನೀನು ನನಗಿಂತಲೂ ಹೆಚ್ಚು ವಿದ್ಯಾವಂತ. ನಿನಗೆ ವಿದ್ಯೆ ಇದೆ, ಆದರೆ ನಾನು ಮನಸ್ಸಿನ ಮೇಲೆ ನಿಯಂತ್ರಣ ಹೊಂದಿದ್ದೇನೆ'' ಎಂದರು.

''ನಾನೂ ನಿಯಂತ್ರಣ ಹೊಂದಿದ್ದೇನೆ'' ನಾನು ಅಡ್ಡ ಮಾತಾಡಿದೆ.

ಉತ್ತರವಾಗಿ ''ನೋಡೋಣ'' ಎಂದರವರು.

''ಸ್ವಾಮೀಜಿ, ಮೊದಲು ದಯವಿಟ್ಟು ನಿಮ್ಮ ಕಂಬಳಿಯನ್ನು ನನ್ನ ಹೆಗಲಮೇಲಿನಿಂದ ವಾಪಸ್ಸು ತಗೊಳ್ಳಿ, ಯಾಕಂದರೆ ಅದನ್ನು ಹೊರೋಕೆ ನನ್ನಿಂದ ಸಾಧ್ಯವಾಗ್ತಾ ಇಲ್ಲ'' ಎಂದು ಗೊಣಗಿದೆ.

''ಅಯ್ಯೋ, ಈ ಕಾಲದ ಮಕ್ಕಳೇ'' ಅವರು ವಿಲಾಪಿಸಿದರು. ಕಂಬಳಿಯನ್ನು ನನ್ನಿಂದ ತೆಗೆದುಕೊಂಡು, ''ಎಲೈ ನನ್ನ ಒಲವಿನ ಕಂಬಳಿಯೇ, ನಿನ್ನ ಬಗ್ಗೆ ಯಾರೂ ಏನನ್ನೂ ಅರ್ಥಮಾಡ್ಕೋಳೋದಿಲ್ವಲ್ಲಾ. ನೀನು ಜೀವಂತ ಕಂಬಳಿ ಅನ್ನೋ ವಿಚಾರ ಯಾರೊಬ್ಬರಿಗೂ ತಿಳಿಯದಲ್ಲಾ'' ಇತ್ಯಾದಿಯಾಗಿ ಅದರ ಜೊತೆ ಸಂಭಾಷಣೆಗೆ ತೊಡಗಿದರು.

''ಈ ಮನುಷ್ಯ ನಿಜವಾಗ್ಲೂ ಹುಚ್ಚ'' ಅವರ ಕಡೆ ನೋಡಿ ಮನಸ್ಸಿನಲ್ಲೇ ಅಂದುಕೊಂಡೆ.

ಮಾರನೆ ಬೆಳಗ್ಗೆ, ಒಬ್ಬ ಜಪಾನೀ ಸಾಧು ನಮ್ಮ ಜೊತೆಗೆ ಸೇರಿಕೊಂಡ. ಅವನಿಗೂ ಪುಷ್ಪಕಣಿವೆಯನ್ನು ನೋಡೋ ಹಂಬಲ ತುಂಬಾ ಇತ್ತು. ಈ ಜಪಾನಿ ಸಾಧು ಕೂಡ ಗುಡಾರಿ ಬಾಬ ಹುಚ್ಚ ಅಂತಲೇ ಭಾವಿಸಿದ್ದ.

''ರಾಮ, ಅಷ್ಟೊಂದು ಭಾರದ ಹೊರೆಯನ್ನು ಈ ಮನುಷ್ಯ ಯಾತಕ್ಕೆ ಹೊತ್ತುಕೊಂಡು ಬರ್‍ತಿದಾನೆ ಹೇಳಬಲ್ಲೆಯಾ?'' ಜಪಾನಿ ನನ್ನನ್ನು ಕೇಳಿದ. ನಾವಿಬ್ಬರೂ ಪರಸ್ಪರ ಮಾತಾಡೋದಕ್ಕೆ ತೊಡಗಿದೆವು. ಈ ಅನುಭವಗಳನ್ನು ಪರಸ್ಪರ ಹಂಚಿಕೊಳ್ಳೋದು ಚೆನ್ನ ಅಂತ ಅನ್ನಿಸಿತು ನನಗೆ.

ಜಪಾನೀ ಸನ್ಯಾಸಿಗೆ ಒಬ್ಬಂಟಿಯಾಗಿ ಪುಷ್ಪಕಣಿವೆಗೆ ಹೋಗಲು ಭಯ. ಈ ಕಣಿವೆಯನ್ನು ನೋಡೋ ಸಲುವಾಗಿ ಯಾರಾದರೂ ಪ್ರವಾಸಿಗಳು ಹೋಗಿದ್ದೇ ಆದರೆ ಅವರು ಎಲ್ಲವನ್ನೂ ಮರೆತುಬಿಡುತ್ತಾರೆ ಹಾಗೂ ಅವರ ಇಂದ್ರಿಯಗಳು ಸ್ಪರ್ಶಾನುಭವ ಗ್ರಹಣಶಕ್ತಿಯನ್ನು ಕಳೆದುಕೊಳ್ಳುತ್ತವೆ ಎಂದು ಯಾರೋ ಈತನಿಗೆ ಹೇಳಿದ್ದರು. ಪ್ರವಾಸಿ ತನ್ನ ನೆನಪನ್ನು ಕಳೆದುಕೊಳ್ಳುತ್ತಾನಲ್ಲದೆ ಸದಾ ನಗತೊಡಗುತ್ತಾನೆ. ಈ ಬಾಬ ನಮಗೆ ಮಾರ್ಗದರ್ಶನ ಮಾಡೋದಕ್ಕೆ ತಕ್ಕ ವ್ಯಕ್ತಿ, ಯಾಕೆಂದರೆ ಈತ ಈ ಪರಿಸರದಲ್ಲಿ ಓಡಾಡಿದ್ದಾನೆ ಮತ್ತು ಎಲ್ಲ ಜಾಡುಗಳನ್ನೂ ಬಲ್ಲವನು ಎಂದು ಹೇಳಿದ.

ಮರುದಿನ ಈ ಜಪಾನೀ ಸನ್ಯಾಸಿ ಜ್ವರದಿಂದ ನಡುಗತೊಡಗಿದ. ಬರ್ಮಾದ ಕಾಡುಗಳಲ್ಲಿರುತ್ತಿದ್ದ ಇವನು ಮಲೇರಿಯಾದಿಂದ ಪೀಡಿತನಾಗಿದ್ದನು. 103 ರಿಂದ 104 ಡಿಗ್ರಿ ಜ್ವರ ಇದ್ದುದಲ್ಲದೆ ನಾಡಿಮಿಡಿತ ಜಾಸ್ತಿ ಇತ್ತು. ಬಾಬ ಅವನಿಗೆ ಹೇಳಿದರು ''ನಾನು ಹುಚ್ಚ ಅಂತ ನನ್ನ ಬಗ್ಗೆ ಈ ಹುಡುಗನಿಗೆ ಹೇಳಿದೆ. ನನ್ನ ಕಂಬಳಿಯ ಜೀವಂತಶಕ್ತಿಯನ್ನು ನೋಡಬೇಕೇನು? ಈ ಕಂಬಳಿ ಕೇವಲ ಕಂಬಳಿ ಅಷ್ಟೇ ಅಲ್ಲ, ಇದೊಂದು ಜೀವಂತ ಶಕ್ತಿ ಅನ್ನೋದು ನಿನಗೆ ಗೊತ್ತೇನು? ನಿನಗೆ ಗುಣಹೊಂದಬೇಕೆಂಬ ಅಪೇಕ್ಷೆ ಇದೆಯಾ? ಹಾಗಿದ್ದರೆ ಭಕ್ತಿಯಿಂದ ಮಂಡಿಯೂರಿ ಕೂತ್ಕೋ'' ಬಾಬಾರವರು ಜಪಾನೀ ಸನ್ಯಾಸಿಗೆ ಕಂಬಳಿಯನ್ನು ಪೂರ್ಣವಾಗಿ ಹೊದಿಸಿದರು.

ಸನ್ಯಾಸಿ ಹೇಳಿದ, ''ನಾನು ಅಪ್ಪಚ್ಚಿ ಆಗಿಬಿಡ್ತೀನಿ ಇದು ಇಷ್ಟೊಂದು ಭಾರ ಇದೆ, ನಾನಾದರೋ ಚಿಕ್ಕವನು''.

''ಸುಮ್ಮಿರು'' ಬಾಬ ಹೇಳಿದರು. ಕೆಲವು ನಿಮಿಷಗಳ ನಂತರ ಕಂಬಳಿಯನ್ನು ಸನ್ಯಾಸಿಯಿಂದ ತೆಗೆದುಕೊಂಡರು. ಕಂಬಳಿಯನ್ನು ತೆಗೆದಾಗ, ಅದು ನಡುಗುತ್ತಿತ್ತು. ಬಾಬಾ ಸನ್ಯಾಸಿಯನ್ನು ಕೇಳಿದರು, ''ನಿನ್ನ ಜ್ವರ ಎಲ್ಲಿ ಹೋಯ್ತು?''

''ಸ್ವಾಮೀಜಿ, ಈಗ ಜ್ವರ ಇಲ್ಲ'' ಅವನು ಹೇಳಿದ.

ಆಗ ಬಾಬ ''ಈ ಕಂಬಳಿ ಬಹಳ ಉದಾರಿ ಹಾಗೂ ದಯಾಮಯಿ. ನಿನ್ನ ಜ್ವರವನ್ನು ತಾನು ತಗೊಂಡಿದೆ'' ಎಂದವರೇ ನನ್ನ ಕಡೆ ನೋಡಿ ''ಅವರ ಜ್ವರಾನ ಎಂದೆಂದಿಗೂ ಬರದ ಹಾಗೆ ವಾಸಿ ಮಾಡ್ಬೇಕೇನು?'' ಎಂದು ಕೇಳಿದರು.

''ಹ್ಞೂಂ, ದಯವಿಟ್ಟು ಹಾಗೆ ಮಾಡಿ'' ನಾನು ಬೇಡಿದೆ.

ಅದಕ್ಕೆ ಬಾಬ ''ಆದರೆ ಏನು ಮಾಡೋದು, ಇವನು ನನ್ನನ್ನು ಹುಚ್ಚ ಅಂತಾನೆ. ಇಂಥವನು ಸಹಾಯಕ್ಕೆ ಅರ್ಹ ಅಂತ ನನಗನ್ನಿಸೋದಿಲ್ಲ'' ಎಂದು ನಿರಾಕರಿಸಿದರು.

ನಾನು ಆಗ, ''ಸಾಧುಗಳು ಕೃಪಾಳುಗಳು ಹಾಗೂ ಮಹಾತ್ಮರು. ಆದ್ದರಿಂದ ಸದಾ ಕ್ಷಮಾಶೀಲರು ಅವರು'' ಎಂದು ಅನುನಯದ ಧ್ವನಿಯಲ್ಲಿ ವಿನಂತಿಸಿದೆ.

''ಸರಿ, ಅವನಿಗೆ ಸಹಾಯ ಮಾಡ್ತೀನಿ'' ಬಾಬಾ ನಕ್ಕು ಹೇಳಿದರು.

ಹದಿನೈದು ದಿನಗಳ ಕಾಲ ನಾವು ಜೊತೆಯಲ್ಲಿ ಪ್ರಯಾಣ ಮಾಡಿದೆವು. ಜಪಾನಿ ಸನ್ಯಾಸಿ ಮತ್ತೆ ಜ್ವರದ ಬಾಧೆಗೆ ಈಡಾಗಲಿಲ್ಲ.

ಬದರಿನಾಥದ ಹೊರಗೆ ಒಂಬತ್ತು ಮೈಲಿ ದೂರದಲ್ಲಿ, ಪುಷ್ಪಕಣಿವೆಯತ್ತ ಕರೆದೊಯ್ಯುವ ಒಂದು ಕಾಲುದಾರಿ ಇದೆ. ಅಲ್ಲೊಂದು ಚಿಕ್ಕ ಗುರುದ್ವಾರ ಉಂಟು. ನಾವು ಅಲ್ಲಿ ಊಟ ಮಾಡಿದೆವು. ಈ ದೇವಸ್ಥಾನದ ಪೂಜಾರಿಗಳಿಗೆ ಗುಡಾರಿಬಾಬ ಚೆನ್ನಾಗಿ ಗೊತ್ತು. ಇಡೀ ದಿನ ದೇವಸ್ಥಾನದಲ್ಲಿ ವಿಶ್ರಾಂತಿ ಪಡೆದು ಆಮೇಲೆ ಪುಷ್ಪಕಣಿವೆಗೆ ಹೋಗಲು ಹೇಮಕುಂಡದತ್ತ ಸಾಗಿದೆವು.

ನೋಟ ಹಾಯಬಲ್ಲ ದೂರದವರೆಗೂ ನಳನಳಿಸಿ ಅರಳಿ ಚೆಲುವು ತುಂಬಿ ಬೆಳಗುವ ಹೂವುಗಳು. ಮೊದಲ ಕೆಲತಾಸಿನ ಅವಧಿ ಇಂದ್ರಿಯಗಳಿಗೆ ಅಪ್ಯಾಯಮಾನ ಹಾಗೂ ಮನಸ್ಸಿಗೆ ಚೈತನ್ಯದಾಯಕ ಅನುಭವ. ಆದರೆ ನಿಧಾನವಾಗಿ ನನ್ನ ಗಮನಕ್ಕೆ ಬರತೊಡಗಿದ್ದೆಂದರೆ, ನನ್ನ ನೆನಪು ಜಾರಿಹೋಗುತ್ತಿರುವುದು. ಐದಾರು ಗಂಟೆಗಳಾದ ಮೇಲೆ ಬಾಬ ಕೇಳಿದರು, ''ಏಯ್, ನೀನು, ನಿನ್ನ ಹೆಸರೇನು ಹೇಳಬಲ್ಲೆಯಾ?''

ನಾವಿಬ್ಬರೂ ಎಷ್ಟೊಂದು ನೆಲೆತಪ್ಪಿದ್ದೇವೆಂದರೆ ನಮ್ಮ ಹೆಸರುಗಳನ್ನು ನೆನಪು ಮಾಡಿಕೊಳ್ಳುವುದು ನಮ್ಮಿಂದಾಗಲಿಲ್ಲ. ನಾವು ಪೂರ್ಣವಾಗಿ ವಿಸ್ಮೃತಿಯಲ್ಲಿ ಮುಳುಗಿಬಿಟ್ಟದ್ದೆವು. ನನ್ನ ಅಸ್ತಿತ್ವದ ಅರಿವು ಮಾತ್ರ ನನಗೆ ಇತ್ತಲ್ಲದೆ ನಾನು ಇನ್ನೂ ಇಬ್ಬರ ಜೊತೆ ಇದ್ದೇನೆ ಎಂಬ ಮಸುಕು ಭಾವನೆ ಇತ್ತು, ಅಷ್ಟೆ. ಆ ಪುಷ್ಪಗಳ ಪರಿಮಳ ಎಷ್ಟೊಂದು ತೀಕ್ಷ್ಣವಾಗಿತ್ತೆಂದರೆ ನಾವು ಯುಕ್ತಾಯುಕ್ತ ವಿವೇಚನಾಶಕ್ತಿಯನ್ನೂ ಕಳೆದುಕೊಂಡಿದ್ದೆವು. ಕಾರ್ಯಕಾರಣ ಪರಿಜ್ಞಾನಶಕ್ತಿ ನಿಷ್ಕ್ರಿಯವಾಗಿತ್ತು. ಇಂದ್ರಿಯಗಳು ಅರಿವಳಿಕೆಗೀಡಾಗಿದ್ದುವು. ನಮ್ಮ ಅಸ್ತಿತ್ವದ ಹಾಗೂ ಸುತ್ತಮುತ್ತಲ ವಸ್ತುಪರಿಸರದ ಮಬ್ಬುಮಬ್ಬಾದ ಚಿತ್ರ ಭಾಸವಾಗುತ್ತಿತ್ತು. ನಮ್ಮ ಪರಸ್ಪರರ ಮಾತುಗಳಿಗೆ ಯಾವ ಅರ್ಥವೂ ಇರುತ್ತಿರಲಿಲ್ಲ. ಈ ಕಣಿವೆಯಲ್ಲಿ ನಾವು ಒಂದುವಾರ ಇದ್ದೆವು. ತುಂಬಾ ಆಹ್ಲಾದಕರ ಅನುಭವ ಅದು. ಬಾಬ ಸದಾ ನಮ್ಮನ್ನು ತಮಾಷೆ ಮಾಡುತ್ತಾ, ''ನಿಮ್ಮ ವಿದ್ಯೆ ಹಾಗೂ ಶಕ್ತಿಗಳಿಗೆ ಏನೂ ಬೆಲೆಯಿಲ್ಲ'' ಎನ್ನುತ್ತಿದ್ದರು. ■

ಪ್ರಧಾನಿ ವಾಜಪೇಯಿ ಮನೆ ಟೆಲಿಫೋನ್ ಕಟ್ !

ಲಖನೌದಲ್ಲಿ ಪ್ರಧಾನಿ ವಾಜಪೇಯಿ ಮನೆ ಇದೆ. ಅಲ್ಲಿದ್ದ ಟೆಲಿಫೋನ್ ಬಿಲ್ ಪಾವತಿ ಆಗಿರಲಿಲ್ಲ. ಇಲಾಖೆಯವರು ನೇರವಾಗಿ ಸಂಪರ್ಕ ಕತ್ತರಿಸಿ ಹಾಕಿದರು. ಯಾಕೆಂದರೆ ಕಲ್ಯಾಣ್‌ಸಿಂಗ್ ಆಗ ಉತ್ತರ ಪ್ರದೇಶದ ಮುಖ್ಯಮಂತ್ರಿ. ತಮ್ಮ ಆಳ್ವಿಕೆಯ ಕೊನೇ ದಿನಗಳಲ್ಲಿ, ಪ್ರಧಾನಿ ಬಗ್ಗೆ ಕೆಂಡ ಕಾರುತ್ತಾ, ಇಂಥದೊಂದು ಪ್ರಯೋಗಕ್ಕೂ ಮುಂದಾದರು. ಆದರೆ ಅವರು ಕೆಳಗಿಳಿದು ರಾಂಪ್ರಕಾಶ್ ಗುಪ್ತಾ ಗದ್ದುಗೆ ಏರಿದರು. ಇಲಾಖೆ ನೌಕರರು ಸದ್ದಿಲ್ಲದೇ ಹೋಗಿ ಸಂಪರ್ಕ ಮತ್ತೆ ಕೂಡಿಸಿದರು. ರಾಜನ ಮರ್ಜಿಯಂತೆ ವರ್ತಿಸುವುದು ಪ್ರಜೆಗಳಿಗೇ ಕ್ಷೇಮ ಅಲ್ಲವೇ?

■



Gift Packs
From the House of Mysore Sandal Soap
A Golden Gift for a Glowing Skin
Gold
Mysore Sandal
Gold
Enriched with moisturiser
Natural Sandalwood & Almond Soap
SIXER
Mysore Sandal Gold Sixer
The perfect soap for discerning users, Mysore Sandal Gold, in an attractive re-usable plastic container with six soaps, each of 125 g.
Gift pack from the house of Mysore Sandal Soap
The Six-in-One Gift Pack
A refreshing bouquet of fragrances packed in an elegant re-usable plastic container. Six-in-One contains six lovely soaps of 150 g each.
Mysore Sandal
Mysore Jasmine
Mysore Special Sandal
Mysore Rose
Mysore Sandal Classic
Mysore Lavender
What you gift - personal or Corporate - speaks volumes about you. Choose the newest theme introduced by the House of Mysore Sandal Soap... EXCLUSIVE GIFT PACKS of SPECIAL SOAPS and you'll be appreciated for your fragrant choice.
MCA / KS & DL / 083
A Great New Theme in Gifting ...
FROM THE HOUSE OF MYSORE SANDAL SOAP
KARNATAKA SOAPS & DETERGENTS LTD.
BANGALORE-560 055. INDIA
Fax : 091-80-3370498, E-Mail : sandal@giasbg01.vsnl.net.in
Internet : www.mysoresandal.com